ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಗುರುವಾರ 16 ಏಪ್ರಿಲ್ 2026

ಸಂಪುಟ: 47 | ಸಂಚಿಕೆ: 1 | ಪುಟಗಳು: 12 + XXXVI

₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅಭಿನಂದನೆ...




ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕ ಪುರಸ್ಕೃತ ವಿಜಯನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎಸ್.ಡಿ.ಸುರೇಶ್‌ಕುಮಾರ್ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಹಾಗೂ ಮುಡಾ ಮಾಜಿ ಸದಸ್ಯ ಕೆ.ಮಾದೇಶ್ ಅಭಿನಂದಿಸಿದರು. ಈ ವೇಳೆ ಶ್ರೀನಿವಾಸ್, ಸುನಿಲ್‌ಕುಮಾರ್, ಪಂಡಿತ್ ಇದ್ದರು.

ಡಾ.ಅಂಬೇಡ್ಕರ್ ಜಯಂತಿ...



ಮೈಸೂರಿನ ಎನ್.ಆರ್.ಸಂಚಾರಿ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ರೇಖಾಬಾಯಿ ನೇತೃತ್ವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತಿಯನ್ನು ಸಂಭ್ರಮದಿಂದ ಆಚರಿಸಿ, ಸಿಹಿ ಹಂಚಲಾಯಿತು. ಈ ವೇಳೆ ಠಾಣೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ...



ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎನ್.ಯೋಗಾನಂದ್ ಅವರ ಹುಟ್ಟುಹಬ್ಬಕ್ಕೆ ಸಂಸದರಾದ ಯದುವೀರ್ ಕೃಷ್ಣದತ್ತ ಒಡೆಯರ್, ಮಾಜಿ ಶಾಸಕ ಎಲ್.ನಾಗೇಂದ್ರ ಶುಭ ಕೋರಿದರು. ಈ ಸಂದರ್ಭದಲ್ಲಿ ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಡಿ.ಕುಮಾರ್, ಗೋಕುಲಂ ವಿ.ಮಧು, ಚಿಕ್ಕವೆಂಕಟು, ಪುನೀತ್, ರಾಮೇಗೌಡ ಇತರರಿದ್ದರು.

ಏ.19ಕ್ಕೆ ನಿರಂತರ ಕಲೆಮನೆ ಉತ್ಸವ

ಮೈಸೂರು: ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ ಏ.19ರಂದು ಮಧ್ಯಾಹ್ನ 3 ಗಂಟೆಗೆ 71ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೇ ವೇಳೆ ಸಾಧನೆಗೈದಿರುವ ನಾಲ್ಕು ಮಹನೀಯರಿಗೆ "ಕಲೆಮನೆ ಕಲಾಶ್ರೀ" ಪ್ರಶಸ್ತಿ ಸಮಾರಂಭ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.4.2026 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026

ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರಭಾದ್ರ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್, ಕೊಲೆಸ್ಟ್ರಾಲ್, ಮಹಿಳೆಯರಲ್ಲಿ ಯೋನಿ ಸೋಂಕು, ಸಯಾಟಿಕ, ಗೃಧ್ರಸಿ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ.
- **ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಮೈಸೂರು ವಿಶ್ವವಿದ್ಯಾನಿಲಯ, ಉಳುಮೆ ಪ್ರತಿಷ್ಠಾನ:** ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತ್ಯೋತ್ಸವ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ಸ್ವಚ್ಛತಾಕರ್ಮಿ ಶಾಂತಮ್ಮ, ತಾಯಮ್ಮ, ಕಾಂತರಾಜು, ಸಿದ್ದರಾಜು, ಮುಖ್ಯ ಅತಿಥಿಗಳು: ಸಮಾಜ ಕಲ್ಯಾಣ ಇಲಾಖೆ ಹೆಚ್ಚುವರಿ ನಿರ್ದೇಶಕ ಡಾ.ಜಿ.ಪಿ. ದೇವರಾಜು, ಉಪಸ್ಥಿತರು: ಸಾಮಾಜಿಕ ಚಿಂತಕ ಪ್ರೊ.ರಹಮತ್ ತರೀಕೆರೆ, ಪ್ರೊ.ಅಮೃತಾ ಅತ್ರಾಡಿ, ಅವಿನಾಶ್ ಟಿ.ಜಿ.ಎಸ್., ಪ್ರೊ.ಎಂ.ಎಸ್.ಶೇಖರ್, ಪ್ರೊ.ಎಸ್.ಟಿ.ರಾಮಚಂದ್ರ, ಡಾ.ಸರಸ್ವತಿ, ಅಹಿಂದ ಜವರಪ್ಪ, ಡಾ.ಮಹೇಶ್ ಸೋಸ್ಲೆ, ಡಾ.ನಟರಾಜ್ ಶಿವಣ್ಣ, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.
- **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್** : ನ್ಯೂಟ್ರಿವಿಷನ್ ಕುರಿತು ಅಂತರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಮ್, ಅಧ್ಯಕ್ಷತೆ: ಅಕಾಡೆಮಿ ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಗೌರವ ಅತಿಥಿಗಳು: ಕುಲಪತಿ ಡಾ.ಬಸವನಗೌಡಪ್ಪ, ಕುಲಸಚಿವ ಡಾ. ಬಿ.ಮಂಜುನಾಥ, ಡೀನ್ ಡಾ. ರವೀಶ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10.30ಕ್ಕೆ.
- **ಪಾಲಿ ಇನ್ಸ್‌ಟಿಟ್ಯೂಟ್**: ಪಾಲಿ-ಕನ್ನಡ ಶಬ್ದಕೋಶ ಐದನೆಯ ಸಂಪುಟದ ಲೋಕಾರ್ಪಣೆ, ಪದವಿ ಕಾಲೇಜುಗಳಿಗೆ ಪಾಲಿ-ಕನ್ನಡ ಶಬ್ದಕೋಶ ಸಂಪುಟಗಳ ಕೊಡುಗೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಟ್ ಅಧ್ಯಕ್ಷ ರಾಹುಲ್ ಎಂ.ಖರ್ಗೆ, ಲೋಕಾರ್ಪಣೆ: ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಅಘಹರಾನಂದ ಅವರಿಂದ ಭಾರತ ಪುಣ್ಯಭೂಮಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಭಗಿನಿ ಸಂಗೀತೋತ್ಸವ-2026** : ವಿದುಷಿ ಸ್ಮಿತಾ ಕಿರಣ್ ಅವರಿಂದ ಕೊಳಲು ವಾದನ, ವಿದುಷಿ ಅದಿತಿ ಕೃಷ್ಣಪ್ರಕಾಶ್-ವಯೋಲಿನ್, ವಿದ್ವಾನ್ ಅನೂರ್ ಅನಂತ ಕೃಷ್ಣ ಶರ್ಮ-ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್-ಘಟಂ, ಸ್ಥಳ: ಪದ್ಮಜಾ ಶ್ರೀನಿವಾಸ ಆಡಿಟೋರಿಯಂ, ಬಿಎಸ್‌ಎಸ್ ವಿದ್ಯೋದಯ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.
- **ಶ್ರೀಪ್ರಸನ್ನ ಸುಂದರ ರಾಮ ಮಂದಿರ ಸೇವಾ ಸಮಿತಿ ಟ್ರಸ್ಟ್** : ಶ್ರೀ ಪರಾಭವ ನಾಮಸಂವತ್ಸರ 90ನೇ ವರ್ಷದ ಶ್ರೀರಾಮೋತ್ಸವ, ಶ್ರೀ ವೇಣುಗೋಪಾಲ್ ಮತ್ತು ಶ್ರೀನಿವಾಸನ್ ಮತ್ತು ಸಮೂಹದವರಿಂದ ವೇದ ಘೋಷ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6 ರಿಂದ.
- **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್** : ಅಮೃತ ಮಹೋತ್ಸವ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ', ಮುಖ್ಯ ಅತಿಥಿಗಳು: ಮಾಜಿ ಮಿಸಸ್ ಇಂಡಿಯಾ ಡಾ. ಹೇಮಮಾಲಿನಿ ಲಕ್ಷ್ಮಣ್, ನೃತ್ಯ ಪ್ರದರ್ಶನ ಗಳು: ಡಾ.ಕೆ.ಕುಮಾರ್ ಮತ್ತು ಶಿಷ್ಯರಿಂದ, ವಿದುಷಿ ಶ್ರೀ ಲಕ್ಷ್ಮೀಕುಮಾರ್ ಮತ್ತು ವಿದುಷಿ ಶಾರಿಕ ಕೌಶಿಕ್ ಅವರ ಕಿರಿಯ ಶಿಷ್ಯರಿಂದ ಸಂಜೆ ಮಂಜರಿ, ವಿದುಷಿ ದಿವ್ಯಶ್ರೀ ಮತ್ತು ಶಿಷ್ಯರು, ಮೇಘನಾ ಎಲ್.ಎನ್. ರಾಜು ಅವರಿಂದ ನೃತ್ಯ ಪ್ರದರ್ಶನ, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಸಂಜೆ 6ರಿಂದ.

ಉದ್ಬೂರು ಹಾಡಿ, ಹೆಚ್.ಡಿ. ಕೋಟೆ ತಾ.

- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಸಮಾಜ ಕಾರ್ಯ ಶಿಬಿರ, ಡಾ.ಸುಶಾಂತ್ ಅನಿಲ್ ಸಾವಂತ್‌ರಿಂದ ವಿಶೇಷ ಉಪನ್ಯಾಸ, ಬೆಳಗ್ಗೆ 10 ರಿಂದ.

ಇಲವಾಲದಲ್ಲಿ ಅಂಬೇಡ್ಕರ್ ಥೀಮ್ ಪಾರ್ಕ್ ನಿರ್ಮಾಣ

ಮೈಸೂರು, ಏ.15- ತಾಲೂಕಿನ ಇಲವಾಲ ಹೋಬಳಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟ, ಸಾಧನೆ, ರಾಜತಾಂತ್ರಿಕತೆ ಮತ್ತು ತತ್ವಗಳನ್ನು ತಿಳಿಸಲು ಥೀಮ್ ಪಾರ್ಕ್ ನಿರ್ಮಾಣ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ತಿಳಿಸಿದರು.



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಡಾ.ಬಿ.ಆರ್.ಅಂಬೇಡ್ಕರ್ ಥೀಮ್ ಪಾರ್ಕ್ ನಿರ್ಮಾಣ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸಭೆ ನಡೆಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಥೀಮ್ ಪಾರ್ಕ್ ನಿರ್ಮಾಣ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಸಭೆ ನಡೆಸಿ ಮಾತನಾಡಿದ ಅವರು, ಥೀಮ್ ಪಾರ್ಕ್ ಅಥವಾ ಮ್ಯೂಸಿಯಂ ನಿರ್ಮಾಣ ಮಾಡಲು 10 ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿದೆ. ಡಿ.ಪಿ.ಆರ್ ತಯಾರಿಸಿ ನೀಲಿ ನಕ್ಷೆಯೊಂದಿಗೆ ಮ್ಯೂಸಿಯಂ ನಿರ್ಮಾಣಕ್ಕೆ ಬೇಕಿರುವ ಅನುದಾನದೊಂದಿಗೆ ಯೋಜನೆ ಸಿದ್ಧವಾಗಬೇಕು ಎಂದರು.

ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಲ್ಲಿ ದೇಶದ ಆರ್ಥಿಕತೆ, ನಿರುದ್ಯೋಗ, ನೀರಿನ ಸಮಸ್ಯೆ ಸೇರಿದಂತೆ ಹಲವಾರು ಜ್ವಲಂತ ಸಮಸ್ಯೆಗಳಿಗೆ ಪರಿಹಾರವಿದೆ. ಅವುಗಳನ್ನು ಸಮಾನ್ಯ ಜನರಿಗೆ ಅರ್ಥವಾಗುವ ರೀತಿ ವಿಷಯಗಳನ್ನು ತಿಳಿಸಬೇಕು ಎಂದರು. ಬಾಬಾಸಾಹೇಬರ ಹುಟ್ಟಿನಿಂದ ಪರಿನಿರ್ವಾಣದವರೆಗೆ ಅವರ ಕಾಲಘಟ್ಟದ ಮುಖ್ಯ ಸಂಗತಿಗಳು ಸೇರಿದಂತೆ ಸಾಹು ಮಹಾರಾಜರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಚಿಂತನೆಗಳನ್ನು ಇಲ್ಲಿ ಅನಾವರಣವಾಗಬೇಕು ಎಂದರು.

ಮೈಸೂರು ಐತಿಹಾಸಿಕ ಪ್ರವಾಸಿ ತಾಣವಾಗಿದ್ದು, ಥೀಮ್ ಪಾರ್ಕ್ ಹೆಚ್ಚಿನ ಜನರನ್ನು ಆಕರ್ಷಿಸುವುದರ ಜೊತೆಗೆ ಹೊಸತನದಿಂದ ಕೂಡಿರಲಿ. ಪ್ರತಿಯೊಬ್ಬ ನಾಗರಿಕರು ಮೂಲಭೂತ ಹಕ್ಕುಗಳನ್ನು ಚಲಾಯಿಸುವ ಮೊದಲು ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ನೆನೆಯಬೇಕು. ಅವರು ನೀಡಿರುವ ಸಂವಿಧಾನದಿಂದ ನಾವು ಇಂದು ಉತ್ತಮ ಜೀವನ ನಡೆಸುತ್ತಿದ್ದೇವೆ. ಮೈಸೂರಿನಲ್ಲಿ ನಿರ್ಮಾಣವಾಗುವ ಥೀಮ್ ಪಾರ್ಕ್‌ನ ನೀಲಿನಕ್ಷೆ ಮಾಡುವ ಮೊದಲು ನಿರ್ಮಾಣದ ಬಗ್ಗೆ ಮುಖ್ಯ ವ್ಯಕ್ತಿಗಳಿಂದ ಮಾಹಿತಿಗಳನ್ನು ಕ್ರೋಢೀಕರಿಸಿ ಉತ್ತಮವಾಗಿ ಮ್ಯೂಸಿಯಂ ಮೂಡಿ ಬರಲಿ ಎಂದು ತಿಳಿಸಿದರು.

ಪ್ರತಿಯೊಬ್ಬರಿಗೂ ಸಮಾಜಿಕ ನ್ಯಾಯ ನೀಡಲು ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದ ಬಗ್ಗೆ ಹಲವಾರು ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವುಗಳು ಸಹ ಮ್ಯೂಸಿಯಂನಲ್ಲಿ ಅನಾವರಣವಾಗಲಿ. ಸಾಮಾನ್ಯ ಜನರಿಗೂ ಸಹ ಪ್ರತಿಯೊಂದು ವಿಷಯ ಸುಲಭವಾಗಿ ತಲುಪುವ ರೀತಿ ಇರಲಿ ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಎಸ್.ಯುಕೇಶ್‌ಕುಮಾರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ...




ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತೋತ್ಸವದ ಅಂಗವಾಗಿ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ವಾರ್ಡ್ ನಂ.22ರ ಪಡುವಾರಹಳ್ಳಿಯಲ್ಲಿ ಬಾಬಾ ಸಾಹೇಬರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ಈ ವೇಳೆ ಚಾಮರಾಜ ದಲಿತ ಸಭಾ ಸಂಚಾಲಕ ಕೆ.ಗಿರೀಶ್, ಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಗುರುವಿನಾಯಕ, ರವೀಂದ್ರ, ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಎಂ.ಎಸ್.ಪುನೀತ್, ಮಹದೇವಣ್ಣ, ಚಂದ್ರು, ಸೋಮಶೇಖರರಾಜು, ಬಸವರಾಜು, ಕೆ.ಯೋಗೇಶ್, ಸಿ.ಡಿ.ಕುಮಾರ್, ಶ್ಯಾಮ್, ಗಿರೀಶ್, ಶಿವಕುಮಾರ್ ಮತ್ತಿತರರಿದ್ದರು.

ಉಚಿತ ಆರೋಗ್ಯ ತಪಾಸಣೆ ಶಿಬಿರ



ಮೈಸೂರು ಗೋಕುಲಂನ ಶಿವಮ್ಮ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ, ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮಕ್ಕೆ ಸಂಸದ ಯದುವೀರ್ ಒಡೆಯರ್, ಮಾಜಿ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಚಿಕ್ಕವೆಂಕಟು, ನಿವೃತ್ತ ಪ್ರಾಂಶುಪಾಲ ಚಂದ್ರೇಗೌಡ, ಎಂ.ಎಸ್.ಪುನೀತ್, ರಾಮೇಗೌಡ, ವಿ.ಮಧು ಇತರರು ಉಪಸ್ಥಿತರಿದ್ದರು.

ಸಿಡ್ನಿಯಲ್ಲಿ ಜೋಯಾಲುಕ್ಕಾಸ್ ಶಾಖೆ ಉದ್ಘಾಟನೆ...



ಬಾಲಿವುಡ್ ನಟಿ, ಬ್ರಾಂಡ್ ರಾಯಭಾರಿ ಕಾಜೋಲ್ ದೇವಗನ್ ಅವರು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಜೋಯಾಲುಕ್ಕಾಸ್ ಶೋ ರೂಂ ಅನ್ನು ಉದ್ಘಾಟಿಸಿದರು. ಈ ವೇಳೆ ಕ್ಯಾಬಿನೆಟ್ ಕಾರ್ಯದರ್ಶಿ, ವಿಜ್ಞಾನ, ತಂತ್ರಜ್ಞಾನ-ಡಿಜಿಟಲ್ ಆರ್ಥಿಕತೆಯ ಸಹಾಯಕ ಸಚಿವ ಸಂಸದ ಡಾ.ಆಂಡ್ರ್ಯೂ ಚಾರ್ಲ್ಟನ್, ಸಮೀರ್ ಪಾಂಡೆ, ಜೋಯಾಲುಕ್ಕಾಸ್ ಜ್ಯುವೆಲ್ಲರಿ ಸಿಇಒ ಜಾನ್ ಪಾಲ್ ಆಲುಕ್ಕಾಸ್, ಅಂತರಾಷ್ಟ್ರೀಯ ಕಾರ್ಯಾಚರಣೆಗಳ ನಿರ್ದೇಶಕಿ ಶ್ರೀಮತಿ ಸೋನಿಯಾ ಆಲುಕ್ಕಾಸ್ ಇತರರು ಉಪಸ್ಥಿತರಿದ್ದರು.

ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ

ಬಾಲ್ಯ ವಿವಾಹ ತಡೆಯುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ

ಮೈಸೂರು, ಏ.15-ಬಾಲ್ಯವಿವಾಹವು ಅನಾದಿ ಕಾಲದಿಂದ ನಡೆದು ಬಂದ ಅನಿಷ್ಟ ಪದ್ಧತಿಯಾಗಿದ್ದು, ಇದು 21ನೇ ಶತಮಾನದಲ್ಲೂ ಆಚರಣೆಯಲ್ಲಿರುವುದು ಶೋಚನೀಯ ಸಂಗತಿ. ಏ.20ರಂದು ಬಸವ ಜಯಂತಿ ಮತ್ತು ಅಕ್ಷಯ ತೃತೀಯ ದಿನವಾಗಿದ್ದು, ಬಾಲ್ಯವಿವಾಹ ಪ್ರಕರಣಗಳು ಹೆಚ್ಚು ನಡೆಯುವ ಸಾಧ್ಯತೆಗಳು ಹೆಚ್ಚಾಗಿದ್ದು, ಎಲ್ಲಾ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.



ಜಿ. ಲಕ್ಷ್ಮೀಕಾಂತ ರೆಡ್ಡಿ

ಬಾಲ್ಯವಿವಾಹವೆಂದರೆ 18 ವರ್ಷದೊಳಗಿನ ಹುಡುಗಿ ಹಾಗೂ 21 ವರ್ಷದೊಳಗಿನ ಹುಡುಗನ ನಡುವೆ ನಡೆಯುವ ಮದುವೆ ಅಥವಾ ಇಬ್ಬರಲ್ಲಿ ಒಬ್ಬರು ನಿಗದಿತ ವಯಸ್ಸಿನೊಳಗಿದ್ದರೆ ಇಂತಹ ಮದುವೆಯನ್ನು ಬಾಲ್ಯವಿವಾಹ ಎಂದು ಪರಿಗಣಿಸಲಾಗುತ್ತದೆ.

ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016 ಪ್ರಕಾರ ಮದುವೆಯನ್ನು ಏರ್ಪಡಿಸಿದ ಪೋಷಕರು ಅಥವಾ ಪಾಲಕರು 18 ವರ್ಷದೊಳಗಿನ ಹುಡುಗಿಯನ್ನು ಮದುವೆಯಾಗುವ ವಯಸ್ಕ ವ್ಯಕ್ತಿ ಮತ್ತು ಮದುವೆಯಲ್ಲಿ ಭಾಗವಹಿಸುವ ಎಲ್ಲಾ ರೀತಿಯಲ್ಲಿ ಸಹಕರಿಸಿದ ಕುಟುಂಬಸ್ಥರನ್ನು ಸಹ ತಪ್ಪಿತಸ್ಥರು ಎಂದು ಪರಿಗಣಿಸಿ ಇವರುಗಳ ವಿರುದ್ಧ ಮೇಲೆ ತಿಳಿಸಿದ ಕಾಯ್ದೆಯ ಪ್ರಕಾರ ಒಂದು ವರ್ಷಕ್ಕೆ ಕಡಿಮೆಯಿಲ್ಲದ ಅಂದರೆ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಅಥವಾ ಇವರೆಡರಿಂದಲೂ ಶಿಕ್ಷೆಗೆ ಒಳಪಡುತ್ತಾರೆ. ಈ ಕಾಯ್ದೆಯಡಿ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಡಿ ಬಾಲ್ಯವಿವಾಹ ಜರುಗುತ್ತಿರುವ ಮಾಹಿತಿ ಬಂದಾಗ ಸ್ವಪ್ರೇರಿತವಾಗಿ ದೂರು ದಾಖಲು ಮಾಡಲು ಅವಕಾಶವಿರುತ್ತದೆ. ಅದೇ ರೀತಿ ಇದು ಕೇವಲ ಸರ್ಕಾರಿ ಅಧಿಕಾರಿಗಳ ಜವಾಬ್ದಾರಿಯಾಗದೇ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿರುತ್ತದೆ. ಬಾಲ್ಯವಿವಾಹ ನಿಷೇಧಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗೆ ಬರುವ ಧಾರ್ಮಿಕ ಸ್ಥಳಗಳಲ್ಲಿ ಮತ್ತು ಕಲ್ಯಾಣ ಮಂಟಪಗಳಲ್ಲಿ ಸಾಮೂಹಿಕ ಅಥವಾ ವೈಯಕ್ತಿಕ ವಿವಾಹದಲ್ಲಿ ಯಾವುದೇ ಬಾಲ್ಯ ವಿವಾಹಗಳು ಜರುಗದಂತೆ ಕ್ರಮವಹಿಸಬೇಕು. ಜಿಲ್ಲೆಯಲ್ಲಿ ಬಾಲ್ಯವಿವಾಹ ನಡೆಯುತ್ತಿರುವುದು ಗಮನಕ್ಕೆ ಬಂದರೆ ತುರ್ತಾಗಿ ಮಕ್ಕಳ ಸಹಾಯವಾಣಿ 1098, ಪೊಲೀಸ್ ಸಹಾಯವಾಣಿ 112 ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ 0821-2543003 ಹಾಗೂ ಸಂಬಂಧಪಟ್ಟ ಹತ್ತಿರದ ಪೊಲೀಸ್ ಠಾಣೆಗೆ ದೂರು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಬಾಲ್ಯವಿವಾಹಗಳನ್ನು ತಡೆಗಟ್ಟಲು ಸರ್ಕಾರದಿಂದ ಗುರುತಿಸಲಾಗಿರುವ ಗ್ರಾಮ, ಪಂಚಾಯತ್, ಬ್ಲಾಕ್, ನಗರ ವಾರ್ಡ್ ಮತ್ತು ಜಿಲ್ಲಾ, ತಾಲೂಕು ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳಾದ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಬಾಲ್ಯ ವಿವಾಹ ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಗಳು (CDPOಗಳು), ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು, ಅಂಗನವಾಡಿ ಮೇಲ್ವಿಚಾರಕರು, ವಿವಾಹ ನೆರವೇರಿಸುವ ಧಾರ್ಮಿಕ ಮುಖಂಡರು ಮತ್ತು ವಿವಾಹ ಕಾರ್ಯಗಳಲ್ಲಿ ತೊಡಗಿರುವ ಸೇವಾ ಪೂರೈಕೆದಾರರು (ಮುದ್ರಣ ಯಂತ್ರಗಳು, ಟೆಂಟ್ ಪೂರೈಕೆ ದಾರರು ಮತ್ತು ಕಲ್ಯಾಣ ಮಂಟಪದ ವ್ಯವಸ್ಥಾಪಕರು) ಸೇರಿದಂತೆ ಪ್ರಮುಖ ಪಾಲುದಾರರು ಬಾಲ್ಯವಿವಾಹಗಳು ನಡೆಯದಂತೆ ಕ್ರಮವಹಿಸಬೇಕೆಂದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಕಲ್ಯಾಣ ಸಮಿತಿಯು ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತರ ಸಹಕಾರದೊಂದಿಗೆ ಬಾಲ್ಯ ವಿವಾಹ ನಡೆಯದಂತೆ ಕಟ್ಟೆಚ್ಚರ ವಹಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಏ.15- ಬಿ.ಎಂ ಶ್ರೀನಗರ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಏ.16 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಬಿ.ಎಂ ಶ್ರೀನಗರ, ಕರಕುಶಲ ನಗರ, ಐಒಸಿಎಲ್ ಗೋಡನ್ ಸುತ್ತಮುತ್ತ, ಜಿ.ಆರ್.ಎಸ್ ಮುಂಭಾಗ, ನರ್ಮ್ ಬಿಲ್ಡಿಂಗ್ ಸುತ್ತಮುತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ ಪ್ರಕಟಣೆ ತಿಳಿಸಿದೆ.

ಚಾಮುಂಡಿಬೆಟ್ಟದ ತಾವರೆಕಟ್ಟೆ ಬಳಿ ವ್ಯಕ್ತಿಯ ಭೀಕರ ಹತ್ಯೆ

ಮೈಸೂರು, ಏ.15(ಎಂಕೆ)- ಅಪರಿಚಿತ ವ್ಯಕ್ತಿಯ ತಲೆ ಮೇಲೆ ಕಲ್ಲು ಎತ್ತಿಹಾಕಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ಮೈಸೂರಿನ ಚಾಮುಂಡಿ ಬೆಟ್ಟ ರಸ್ತೆಯ ತಾವರೆಕಟ್ಟೆ ಪಕ್ಕದ ಖಾಲಿ ಜಾಗದಲ್ಲಿ ಬುಧವಾರ ನಡೆದಿದೆ.

ಸುಮಾರು 40-45 ವರ್ಷ ವಯೋಮಾನದ ವ್ಯಕ್ತಿಯ ತಲೆ ಮೇಲೆ ದುಷ್ಕರ್ಮಿಗಳು ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾರೆ. ಎಡಗೈ ತೋಳಿನಲ್ಲಿ ಹಾವಿನ ಗುರುತಿರುವ ಹಚ್ಚೆ ಮತ್ತು ಬಲ ಮೊಣಕೈ ಮೇಲೆ ಎಕ್ಸ್ ಆಕಾರದಲ್ಲಿರುವ ಎರಡು ಕತ್ತಿಯ ಹಚ್ಚೆ ಗುರುತಿದ್ದು, ಮುಖದ ಚಹರೆಯ ಗುರುತು ಸಿಗದಂತೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ನಟರಾಜ್ ಮತ್ತು ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ, ಮೃತ ದೇಹವನ್ನು ಕೆ.ಆರ್.ಆಸ್ಪತ್ರೆಗೆ ಶವಾಗಾರಕ್ಕೆ ರವಾನಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಕೊಲೆಯಾದ ವ್ಯಕ್ತಿಯ ವಾರಸುದಾರರು ಇದ್ದಲ್ಲಿ ಪೊಲೀಸ್ ಠಾಣೆ ದೂ.ಸಂ.0821-2418308 ಹಾಗೂ ಕಂಟ್ರೋಲ್ ರೂಂ ನಂ.0821-2418339/2452200 ಗೆ ಸಂಪರ್ಕಿಸುವಂತೆ ಕೋರಲಾಗಿದೆ.

ಕುಕ್ಕರಹಳ್ಳಿ ಕೆರೆ ಸಂರಕ್ಷಣೆಯ ಡಿಪಿಆರ್ ಕಥೆ-ವ್ಯಥೆ!?

ಅಂಡರ್ ಪಾಸ್ ನಿರ್ಮಾಣ ಸಂಬಂಧ ಮರಗಳ ತೆರವು ಚರ್ಚೆ ನಡುವೆ ಈ ವಿಚಾರವೂ ಮುನ್ನಲೆಗೆ

- ಒಪ್ಪಂದದಂತೆ ಮುಂಗಡ ಹಣವಾಗಿ 18.49 ಲಕ್ಷ ರೂ. ಪಾವತಿಸಿರುವ ಅಂದಿನ ಮುಡಾ
- ಮುಂಗಡ ಹಣ ಪಡೆದ ಸಂಸ್ಥೆಯಿಂದ ಆರಂಭವಾಗದ ಪ್ರಕ್ರಿಯೆ

ಮೈಸೂರು,ಏ.15(ಪಿಎಂ)- ಉದ್ದೇಶಿತ ರೈಲ್ವೆ ಅಂಡರ್ ಪಾಸ್ ಕಾಮಗಾರಿ ಕಾರಣ ಕುಕ್ಕರಹಳ್ಳಿ ಕೆರೆ ಆವರಣದ ಮರಗಳು ಸೇರಿದಂತೆ ಇಲ್ಲಿನ ಸುತ್ತಮುತ್ತಲ ಸುಮಾರು 80 ಮರಗಳ ಅಳಿವು ಉಳಿವಿನ ಚರ್ಚೆ ನಡೆಯುತ್ತಿರುವುದರ ನಡುವೆ ಇದೀಗ ಈ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಡಿಪಿಆರ್ ಸಿದ್ಧಪಡಿಸಲು ಆಗಿದ್ದ ಒಪ್ಪಂದ ಕುರಿತು ಚರ್ಚೆಯಾಗುತ್ತಿದೆ.

ಬೋಗಾದಿ ರಸ್ತೆಯ ಮೈಸೂರು ವಿವಿ ಕ್ರಾಫರ್ಡ್ ಭವನ ಸಮೀಪದ ರೈಲ್ವೆ ಲೆವೆಲ್ ಕ್ರಾಸಿಂಗ್‌ಗೆ ಪರ್ಯಾಯವಾಗಿ ಉದ್ದೇಶಿತ ಅಂಡರ್ ಪಾಸ್ ನಿರ್ಮಾಣ ಯೋಜನೆ ಅನುಷ್ಠಾನಕ್ಕಾಗಿ ಇಲ್ಲಿನ ಮರಗಳಿಗೆ ಆಪತ್ತು ಎದುರಾಗಲಿದೆ ಎಂಬ ಚರ್ಚೆ ನಡುವೆ ಈಗ 2013ರಲ್ಲಿ ಅಂದಿನ ಮುಡಾ (ಇಂದಿನ ಎಂಡಿಎ) ನವದೆಹಲಿ ಮೂಲದ ಇಂಟಾಚ್ ಸಂಸ್ಥೆ ಜೊತೆಗೆ ಮಾಡಿಕೊಂಡಿರುವ ಒಪ್ಪಂದದ ವಿಚಾರ ಮುನ್ನಲೆಗೆ ಬಂದಿದೆ.

ಅದರಂತೆ ನವ ದೆಹಲಿಯ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಇಂಟಾಚ್) ಸಂಸ್ಥೆಗೆ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಸಂಬಂಧ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸುವ ಜವಾಬ್ದಾರಿ ನೀಡಲಾಗಿದೆ. ಅದರಂತೆ ಕೆರೆ ಬಫರ್ ವಲಯ ಮತ್ತು ಅದರ ಜಲಾನಯನ ಪ್ರದೇಶ



ಮೈಸೂರಿನ ಹೃದಯಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆ.

> ಸದ್ಯಕ್ಕೆ ಎಂಡಿಎ ಕಡೆಯಿಂದ ಕುಕ್ಕರಹಳ್ಳಿ ಕೆರೆ ಅಭಿವೃದ್ಧಿಗೆ ಯಾವುದೇ ಪ್ರಸ್ತಾವನೆ ಇಲ್ಲ. ಕುಕ್ಕರಹಳ್ಳಿ ಕೆರೆ ಸಂರಕ್ಷಣೆಗೆ ಡಿಪಿಆರ್ ತಯಾರಿಸುವ ಯೋಜನೆ ಸಂಬಂಧ ಟೆಂಡರ್ ಕರೆಯದೇ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂಬ ಆರೋಪದಡಿ ನೀಡಿರುವ ದೂರಿನನ್ವಯ ಲೋಕಾಯುಕ್ತದಲ್ಲಿ ತನಿಖೆ ಕೈಗೆತ್ತಿಕೊಳ್ಳಲಾಗಿದೆ. ಹಾಗಾಗಿ ಡಿಪಿಆರ್ ಸಿದ್ಧಪಡಿಸಲು ಇಂಟಾಚ್ ಸಂಸ್ಥೆಗೆ ಅವಕಾಶವಿಲ್ಲ. ಈ ತನಿಖೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಇಂಟಾಚ್‌ಗೆ ಅಂದಿನ ಮುಡಾದಿಂದ ಪಾವತಿಸಿರುವ 18 ಲಕ್ಷ ರೂ. ವಾಪಸ್ ಪಡೆಯುವ ಸಂಬಂಧ ಕ್ರಮ ವಹಿಸಬೇಕಾಗುತ್ತದೆ.
>
> **-ಕೆ.ಆರ್.ರಕ್ಷಿತ್, ಆಯುಕ್ತರು, ಎಂಡಿಎ, ಮೈಸೂರು.**

ಕುರಿತು ಸಮಗ್ರ ಡೇಟಾಬೇಸ್ ರಚಿಸುವುದು ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಒಪ್ಪಂದದ ದಿನಾಂಕದಿಂದ 9 ತಿಂಗಳೊಳಗೆ ಕೆಲಸ ಪೂರ್ಣಗೊಳಿಸಬೇಕೆಂದೂ ಕರಾರು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

2023ರ ಡಿ.18ರಂದು ಅಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ/ ಇಂದಿನ ಎಂಡಿಎ) ಮತ್ತು ಇಂಟಾಚ್ ನಡುವೆ ಕೆರೆ ಸಂರಕ್ಷಣೆಗಾಗಿ ಡಿಪಿಆರ್ ಸಿದ್ಧಪಡಿಸುವ ಒಪ್ಪಂದ ಆಗಿದೆ. ಡಿಪಿಆರ್ ಸಿದ್ಧಪಡಿಸಲು ಇಂಟಾಚ್ ಸಂಸ್ಥೆಗೆ ಒಟ್ಟು 63.80 ಲಕ್ಷ ರೂ. ಪಾವತಿಸಲು ಒಪ್ಪಂದ ಮಾಡಿಕೊಂಡಿದ್ದು, ಒಟ್ಟು ಯೋಜನೆಯ (ಡಿಪಿಆರ್ ಸಿದ್ಧಪಡಿಸಲು) ಶೇ.25ರಷ್ಟು ಹಣವಾಗಿ 2023ರ ಡಿ.22ರಂದು 18.49 ಲಕ್ಷ ರೂ. ಅನ್ನು ಮುಂಡಗವಾಗಿ

> ಡಿಪಿಆರ್ ಸಿದ್ಧಪಡಿಸುವ ಸಂಬಂಧ ಪಾವತಿಸಿರುವ ಮುಂಗಡ 18 ಲಕ್ಷ ರೂ. ಶೀಘ್ರ ವಾಪಸ್ ಪಡೆಯಬೇಕು. ಯಾವುದೇ ಕಾರಣಕ್ಕೂ ಸಾರ್ವಜನಿಕರ ತೆರಿಗೆ ಹಣ ವ್ಯರ್ಥವಾಗಬಾರದು. ಕುಕ್ಕರಹಳ್ಳಿ ಕೆರೆ ಸ್ವಚ್ಛತೆ ಮತ್ತು ಸಂರಕ್ಷಣೆಗೆ ಕ್ರಮ ವಹಿಸಬೇಕು.
>
> **-ಬಿ.ಎನ್.ನಾಗೇಂದ್ರ, ಆರ್‌ಟಿಐ ಕಾರ್ಯಕರ್ತರು.**

ಅಂದಿನ ಮುಡಾದಿಂದ ಇಂಟಾಚ್‌ಗೆ ಪಾವತಿ ಮಾಡಲಾಗಿದೆ. ಆದರೆ ಒಪ್ಪಂದವಾಗಿ 2 ವರ್ಷಗಳೇ ಕಳೆದರೂ ಡಿಪಿಆರ್ ಸಿದ್ಧಪಡಿಸುವ ಕಾರ್ಯ ಮಾತ್ರ ಆರಂಭವೇ ಆಗಿಲ್ಲ.

ಯೋಜನೆ ಅನುಷ್ಠಾನ ಸಂಬಂಧ ಇಂಟಾಚ್ ಸಂಸ್ಥೆಗೆ 2024ರ ಮಾ.7 ರಂದು ಅಂದಿನ ಮುಡಾದ ಸೂಪರಿಂಟೆಂಡಿಂಗ್ ಇಂಜಿನಿಯರ್ ಪತ್ರ ಬರೆದು, ಫೋನ್ ಮತ್ತು ಇ-ಮೇಲ್ ಮೂಲಕ ಸಂಪರ್ಕಿಸಲು ಪದೇ ಪದೇ ಪ್ರಯತ್ನಿಸಿದರೂ ತಮ್ಮಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಬೇಸರ ಸಹ ವ್ಯಕ್ತಪಡಿಸಿದ್ದಾರೆ. ಈ ಎಲ್ಲದರ ನಡುವೆ ಸದರಿ ಡಿಪಿಆರ್ ತಯಾರಿಸುವ ಯೋಜನೆಗೆ ಗ್ರಹಣ ಹಿಡಿದಿದ್ದಾದರೂ ಹೇಗೆ... ಏಕೆ... ಇತ್ಯಾದಿ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಡಿಪಿಆರ್ ಸಿದ್ಧಪಡಿಸುವ ಕಾರ್ಯ ಒಪ್ಪಂದದಂತೆ ಏಕೆ ಆರಂಭವಾಗಿಲ್ಲ? ಈ ಸಂಬಂಧ ನಡೆಯುತ್ತಿರುವುದಾದರೂ ಏನು? ಎಂಬಿತ್ಯಾದಿಯಾಗಿ ಚರ್ಚೆ ನಡೆಯುತ್ತಿದೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 16 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 1 | ಪುಟಗಳು: 12+XXXVI
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಆದಿಚುಂಚನಗಿರಿಯಲ್ಲಿ ಪ್ರಧಾನಿ ಮೋದಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನೆ

ಒಂಭತ್ತು ಸಂಕಲ್ಪಗಳನ್ನು ಕೈಗೊಳ್ಳುವಂತೆ ಜನತೆಗೆ ಮೋದಿ ಕರೆ

ಮಂಡ್ಯ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಜನತೆಗೆ ಒಂಭತ್ತು ಸಮೂಹ ಪ್ರತಿಜ್ಞೆಗಳನ್ನು ತೆಗೆದುಕೊಳ್ಳುವಂತೆ ಮನವಿ ಮಾಡಿದರು. ನೀರಿನ ಸಂರಕ್ಷಣೆ, ನೈಸರ್ಗಿಕ ಕೃಷಿ, ಆರೋಗ್ಯ ಹಾಗೂ ಸೇವೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಈ ಪ್ರತಿಜ್ಞೆಗಳು ಇರಲಿ ಎಂದು ಕರೆ ನೀಡಿದರು.


ಮಂಡ್ಯದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಕಸಿತ ಕರ್ನಾಟಕ ಮತ್ತು ವಿಕಸಿತ ಭಾರತ ಗುರಿ ಸಾಧಿಸಲು ಇದರಿಂದ ಸಹಾಯವಾಗುತ್ತದೆ ಎಂದು ತಿಳಿಸಿದರು. ತಮ್ಮ ಆದ್ಯತೆಗಳನ್ನು ವಿವರಿಸಿದ ಪ್ರಧಾನಿ ಮೋದಿ, ಆದ್ಯತೆಯಾಗಿ ನೀರಿನ ಸಂರಕ್ಷಣೆ ಮತ್ತು ಉತ್ತಮ ನೀರು ನಿರ್ವಹಣೆ ಬಗ್ಗೆ ಮಹತ್ವ ಸಾರಿದರು. ನಂತರ 'Ek Ped Maa Ke Naam' (ತಾಯಿಯ ಹೆಸರಿನಲ್ಲಿ ಒಂದು ಮರ) ಅಭಿಯಾನದಡಿ ಮರ ನೆಡುವುದು, ಸಾರ್ವಜನಿಕ ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವುದು, 'ವೋಕಲ್ ಫಾರ್ ಲೋಕಲ್' ಮೂಲಕ ಸ್ಥಳೀಯ ಉತ್ಪನ್ನಗಳನ್ನು ಉತ್ತೇಜಿಸುವುದು, ದೇಶೀಯ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವುದು, ರಾಸಾಯನಿಕ ರಹಿತ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವುದು, ಸಿರಿಧಾನ್ಯಗಳನ್ನು ■ 10ನೇ ಪುಟಕ್ಕೆ



ಆದಿಚುಂಚನಗಿರಿಯಲ್ಲಿ ಭೈರವೈಕ್ಯ ಮಂದಿರವನ್ನು ಪ್ರಧಾನಿ ಮೋದಿ ಬುಧವಾರ ಉದ್ಘಾಟಿಸಿದರು.

ದೇವೇಗೌಡರು ರಾಗಿ ಮುದ್ದೆ ಫೇಮಸ್ ಮಾಡಿದರು!

ಮಂಡ್ಯ: ರಾಗಿ ಮುದ್ದೆ ಕೇವಲ ಆಹಾರವಲ್ಲ ಅದೊಂದು ಶಕ್ತಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಅದನ್ನು ಫೇಮಸ್ ಮಾಡಿದ್ದಾರೆ. ಯುವಕರು ರಾಗಿ ಮುದ್ದೆ ಹಾಗೂ ನವಧಾನ್ಯಗಳನ್ನು ಹೆಚ್ಚು ಸೇವಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.



ಹೆಚ್.ಡಿ.ದೇವೇಗೌಡರ ಸಮ್ಮುಖದಲ್ಲಿಯೇ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕದ ಸಂಸ್ಕೃತಿ ಮತ್ತು ಮಠದ ಸೇವೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಕರ್ನಾಟಕಕ್ಕೆ ಬರುವುದೆಂದರೆ ನನಗೆ ಖುಷಿಯ ವಿಷಯ. ಇಲ್ಲಿಗೆ ಬಂದಾಗಲೆಲ್ಲಾ ಹೊಸ ಪ್ರೇರಣೆ ಸಿಗುತ್ತದೆ. ಅದರಲ್ಲೂ ಸಕ್ಕರೆ ನಾಡು ಮಂಡ್ಯಕ್ಕೆ ಬಂದಿರುವುದು ಈ ಭೇಟಿಯನ್ನು ಇನ್ನಷ್ಟು ಮಹತ್ವಪೂರ್ಣವಾಗಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ನುಡಿದರು. ಕರ್ನಾಟಕದ ಮಣ್ಣಿನ ಗುಣವನ್ನು ಬಣ್ಣಿಸಿದ ಪ್ರಧಾನಿ, ಈ ಮಣ್ಣು ತತ್ವಜ್ಞಾನ ಮತ್ತು ತಂತ್ರಜ್ಞಾನ ಎರಡರಲ್ಲೂ ಸಮೃದ್ಧವಾಗಿದೆ. ಇಲ್ಲಿ ದರ್ಶನದ ಆಳವೂ ಇದೆ, ಟೆಕ್ನಾಲಜಿಯ ಶಕ್ತಿಯೂ ಇದೆ. ಆದಿಚುಂಚನಗಿರಿ ಮಠವು ಕಳೆದ ಎರಡು ಸಾವಿರ ವರ್ಷಗಳಿಂದ ಭಾರತದ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಜೀವಂತವಾಗಿರಿಸಿರುವ ಸಾಕ್ಷಾತ್ ರೂಪ ಎಂದರು.

ವಿಶೇಷಾಂಕದಲ್ಲಿ...

ಇಂದಿನಿಂದ ಮನೆಗಣತಿ



ಬೆಂಗಳೂರು, ಏ.15– ಕೇಂದ್ರ ಸರ್ಕಾರದ 'ಜನಗಣತಿ–2027' ಭಾಗವಾಗಿ ಕರ್ನಾಟಕದಲ್ಲಿ ಏ.1ರಿಂದ ಆರಂಭವಾದ ಸ್ವಯಂ ಗಣತಿ ಏ.15ಕ್ಕೆ ಮುಗಿಯಲಿದ್ದು, ಏ.16ರಿಂದ ಒಂದು ತಿಂಗಳ ಕಾಲ 'ಮನೆ ಗಣತಿ ಮತ್ತು ಮನೆಗಳ ಪಟ್ಟಿ ತಯಾರಿಕೆ' ನಡೆಯಲಿದೆ. ಅರ್ಥಾತ್ ಗಣತಿದಾರರು ಮನೆ ಮನೆಗೆ ತೆರಳಿ ಮನೆಯ ಸ್ಥಿತಿಗತಿ, ಮೂಲ ಸೌಕರ್ಯ, ಆಸ್ತಿಗಳು ಮತ್ತಿತರ ವಿವರಗಳನ್ನು ಕಲೆಹಾಕಲಿದ್ದಾರೆ.

16 ವರ್ಷಗಳ ಬಳಿಕ ದೇಶದಲ್ಲಿ ನಡೆಯುತ್ತಿರುವ ಜನಗಣತಿಯಲ್ಲಿ 'ಮನೆಗಳ ಪಟ್ಟಿ ತಯಾರಿಕೆ ಮತ್ತು ವಸತಿ ಗಣತಿ'ಯು ಜನಗಣತಿಯ ಮೊದಲ ಹಂತವಾಗಿದ್ದು, ವಿವಿಧ ಕೇಂದ್ರಾಡಳಿತ ಪ್ರದೇಶಗಳು ಮತ್ತು ಕರ್ನಾಟಕ ಸೇರಿ ಏಳು ರಾಜ್ಯಗಳಲ್ಲಿ ಸೆ.30ರವರೆಗೆ ಜನಗಣತಿ ನಡೆಯಲಿದೆ. ಈ ಪೈಕಿ ಕರ್ನಾಟಕದಲ್ಲಿ ಏ.16ರಿಂದ ಮೇ 15ರವರೆಗೆ ನಡೆಯುವ ಗಣತಿ ಕಾರ್ಯಕ್ಕೆ ಸುಮಾರು 2 ಲಕ್ಷಕ್ಕೂ ಹೆಚ್ಚು ಗಣತಿದಾರರನ್ನು ನಿಯೋಜಿಸಲಾಗಿದೆ. ಎಲ್ಲಾ 31 ಜಿಲ್ಲೆಗಳಲ್ಲೂ ಆಯಾ ಜಿಲ್ಲಾಡಳಿತಗಳ ಮೂಲಕ ಗಣತಿ ಕಾರ್ಯ ನಡೆಯಲಿದೆ. ಗಣತಿದಾರರು ಈ ಸಮಯದಲ್ಲಿ ಮನೆಗಳ ಸ್ಥಿತಿಗತಿಗಳು, ಆಸ್ತಿಗಳು ಮತ್ತು ಮನೆಗಳ ಸೌಕರ್ಯಗಳಿಗೆ ಸಂಬಂಧಿಸಿದ ವಿವರಗಳನ್ನು ಕಲೆ ಹಾಕಲಿದ್ದಾರೆ. ಮೊದಲ ಹಂತದ ಜನಗಣತಿಗೆ 33 ಪ್ರಶ್ನೆಗಳನ್ನು ಸೇರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಣತಿ ಸಂದರ್ಭದಲ್ಲಿ ಸಂಗ್ರಹಿಸುವ ಎಲ್ಲ ವೈಯಕ್ತಿಕ ದತ್ತಾಂಶಗಳ ಗೌಪ್ಯತೆ ಕಾಪಾಡಲಾಗುವುದು. ಇದನ್ನು ಮಾಹಿತಿ ಹಕ್ಕು ಕಾಯ್ದೆಯಡಿ ನೀಡುವುದಿಲ್ಲ. ನ್ಯಾಯಾಲಯದಲ್ಲಿ ಸಾಕ್ಷಿಯಾಗಿ ಬಳಸುವುದಿಲ್ಲ ಮತ್ತು ಯಾವುದೇ ಸಂಸ್ಥೆಯೊಂದಿಗೆ ಹಂಚಿಕೊಳ್ಳುವುದಿಲ್ಲ. ದತ್ತಾಂಶ ದುರುಪಯೋಗವಾಗುತ್ತದೆ ಎಂದು ಜನ ಭಯ ಪಡುವುದು ಬೇಡ. ಹೀಗಾಗಿ, ಜನರು ತಪ್ಪದೆ ಗಣತಿಯಲ್ಲಿ ಪಾಲ್ಗೊಂಡು ಗಣತಿದಾರರು ಕೇಳುವ ಪ್ರಶ್ನೆಗಳಿಗೆ ನಿಖರವಾದ ಮಾಹಿತಿ ಒದಗಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ. ■ 10ನೇ ಪುಟಕ್ಕೆ

ಐದು ವರ್ಷ ನಮ್ಮ ತಂದೆಯೇ ಸಿಎಂ

ಪುತ್ರ ಡಾ. ಯತೀಂದ್ರ ಮತ್ತೆ ಪ್ರತಿಪಾದನೆ

ಮೈಸೂರು, ಏ.15– ನಮ್ಮ ತಂದೆಯೇ 5 ವರ್ಷ ಸಿಎಂ. ಖುದ್ದು ಅವರೇ ಅಧಿವೇಶನದಲ್ಲಿ ಈ ವಿಚಾರ ಸ್ಪಷ್ಟಪಡಿಸಿದ್ದಾರೆ. ಅವರೇ ಹೇಳಿದ ಮೇಲೆ ಮತ್ತೆ ಆ ಬಗ್ಗೆ ಚರ್ಚೆಯೇ ಇಲ್ಲವೆಂದು ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಪುತ್ರ, ಎಂಎಲ್‌ಸಿ ಡಾ. ಯತೀಂದ್ರ ಮತ್ತೊಮ್ಮೆ ■ 10ನೇ ಪುಟಕ್ಕೆ



ಜಿಪಂ ಸದಸ್ಯ ಯೋಗೇಶ್‌ಗೌಡರ ಹತ್ಯೆ ಪ್ರಕರಣ

ಶಾಸಕ ವಿನಯ ಕುಲಕರ್ಣಿ ದೋಷಿ: ನಾಳೆ ಶಿಕ್ಷೆ ಪ್ರಕಟ



ಯೋಗೇಶ್‌ಗೌಡ



ವಿನಯ ಕುಲಕರ್ಣಿ

ಬೆಂಗಳೂರು, ಏ.15– ಧಾರವಾಡದ ಬಿಜೆಪಿ ಜಿಪಂ ಸದಸ್ಯ ಯೋಗೇಶ್‌ಗೌಡರ ಹತ್ಯೆ ಪ್ರಕರಣದ ತೀರ್ಪು ಪ್ರಕಟಿಸಿದ ಜನಪ್ರತಿನಿಧಿಗಳ ನ್ಯಾಯಾಲಯ ಮಾಜಿ ಮಂತ್ರಿ ಹಾಗೂ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರನ್ನು ದೋಷಿ ಎಂದು ಹೇಳಿದೆ. ನಾಳೆ ಶಿಕ್ಷೆ ಪ್ರಮಾಣ ಪ್ರಕಟವಾಗಲಿದೆ.

ಸುಮಾರು 10 ವರ್ಷಗಳ ಹಿಂದಿನ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದ್ದ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರಾದ ಗಜಾನನ ಭಟ್ ಇಂದು ತೀರ್ಪು ಪ್ರಕಟಿಸಿದರು. ವಿನಯ್ ಕುಲಕರ್ಣಿ ಸೇರಿದಂತೆ ಸಿಬಿಐ ಆರೋಪ ಪಟ್ಟಿಯಲ್ಲಿ ಹೆಸರಿಸಲಾದ ಎಲ್ಲಾ 21 ಆರೋಪಿಗಳನ್ನು ದೋಷಿಗಳು ಎಂದು ಘೋಷಿಸಿದ ನ್ಯಾಯಾಲಯ ನಾಳೆ ಶಿಕ್ಷೆಯ ಪ್ರಮಾಣ ಪ್ರಕಟಿಸುವುದಾಗಿ ತಿಳಿಸಿದೆ. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಇಂದು ತೀರ್ಪು ಪ್ರಕಟಿಸುವುದಾಗಿ ಕೋರ್ಟ್ ಹೇಳಿದ್ದ ಹಿನ್ನೆಲೆಯಲ್ಲಿ ವಿನಯ್ ಕುಲಕರ್ಣಿ ತಮ್ಮ ಇಬ್ಬರು ಪುತ್ರಿಯರೊಂದಿಗೆ ■ 10ನೇ ಪುಟಕ್ಕೆ

ಬಂಡೀಪುರ, ನಾಗರಹೊಳೆಯಲ್ಲಿ

ಸಫಾರಿ ನಿಷೇಧಕ್ಕೆ 'ಹೈ' ನಿರಾಕರಣೆ

ಬೆಂಗಳೂರು, ಏ.15– ವನ್ಯ ಮೃಗಗಳಿಂದ ಜನ ಮತ್ತು ಜಾನುವಾರುಗಳಿಗೆ ಪ್ರಾಣಾಪಾಯವಿದೆ ಎಂದು ಹೇಳಿ ರಾಜ್ಯದ ಬಂಡೀಪುರ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿಯನ್ನು ನಿಷೇಧಿಸಲು ಹೈಕೋರ್ಟ್ ನಿರಾಕರಿಸಿದ್ದು, ಅರಣ್ಯ ಪ್ರದೇಶದ ಯಾವ ವಲಯದಲ್ಲಿ ಸಫಾರಿಗೆ ಅವಕಾಶ ನೀಡಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಮಾಣಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿಗೆ ನೀಡಿರುವ ಅನುಮತಿಯಿಂದ ವನ್ಯ ಮೃಗಗಳು ನಾಡಿಗೆ ಲಗ್ಗೆ ಇಡುತ್ತಿವೆ. ಜನ ಮತ್ತು ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿವೆ. ಸಫಾರಿಯ ಗದ್ದಲ ಪ್ರಾಣಿಗಳಿಗೆ ಮಾರಕವಾಗಿ ಪರಿಣಮಿಸಿದೆ. ■ 10ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಡಿಕೆಗೆ ಪ್ರಧಾನಿ ಮೋದಿ ಪಿಸುದನಿಯ ಭರವಸೆ!?

ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಕುತೂಹಲಕಾರಿ ಪ್ರಸಂಗ

ಬೆಂಗಳೂರು, ಏ.15(ಕೆಎಂಶಿ)– ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿ ಅವರ ಗುರು ಮಂದಿರವನ್ನು ಲೋಕಾರ್ಪಣೆ ಮಾಡಲು ಒಂದು ದಿನದ ರಾಜ್ಯ ಪ್ರವಾಸ ಕೈಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಖುದ್ದು ಬರಮಾಡಿಕೊಂಡರು.

ಇತ್ತೀಚಿನ ದಿನಗಳಲ್ಲಿ ಪ್ರಧಾನಿ ರಾಜ್ಯ ಪ್ರವಾಸ ಕೈಗೊಂಡರೆ ಮುಖ್ಯಮಂತ್ರಿ ದೂರ ಉಳಿಯುತ್ತಿದ್ದರು. ಆದರೆ, ಇಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಜೊತೆಗೂಡಿ ಪ್ರಧಾನಿ ಮೋದಿ ಅವರನ್ನು ಬರಮಾಡಿಕೊಂಡಿದ್ದಲ್ಲದೆ, ರಾಜ್ಯಕ್ಕೆ ಸಂಬಂಧಿಸಿದ 18 ಬೇಡಿಕೆಗಳ ನಾಲ್ಕು ಪುಟಗಳ ಮನವಿಪತ್ರ ಸಲ್ಲಿಸಿದರು.

ಮನವಿಪತ್ರ ಸಲ್ಲಿಸಿದ ನಂತರ ಪ್ರಧಾನಿ ಮೋದಿ ಅವರಿಗೆ ವಿಮಾನ ನಿಲ್ದಾಣದಲ್ಲೇ, ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ವಿವರಿಸಿದರು.

ಮನವಿ ಸ್ವೀಕರಿಸಿದ ಪ್ರಧಾನಿ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಯಲ್ಲಿ ಪಿಸುಧನಿಯಲ್ಲಿ ಮಾತನಾಡಿದರು. ಇದಕ್ಕೆ ಪರಸ್ಪರ ಇಬ್ಬರೂ ನಕ್ಕು ಪ್ರತಿಕ್ರಿಯಿಸಿದರು. ಎಚ್‌ಎಎಲ್ ವಿಮಾನ ನಿಲ್ದಾಣದಿಂದಲೇ ಪ್ರಧಾನಿ ಮೋದಿ ವಿಶೇಷ ಹೆಲಿಕಾಪ್ಟರ್ ಮೂಲಕ ಆದಿಚುಂಚನಗಿರಿ ಕ್ಷೇತ್ರಕ್ಕೆ ತೆರಳಿದರು.



ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಮೋದಿ, ಸಿಎಂ ಸಿದ್ದರಾಮಯ್ಯ ಪಿಸು ಸಂಭಾಷಣೆ.

ಮುಖ್ಯಮಂತ್ರಿ, ಪ್ರಧಾನಿ ಅವರಿಗೆ ಸಲ್ಲಿಸಿದ ಪತ್ರದಲ್ಲಿ ಕರ್ನಾಟಕ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನಾವೀನ್ಯತೆಯ ಮನೋಭಾವದೊಂದಿಗೆ ರಾಷ್ಟ್ರೀಯ ಅಭಿವೃದ್ಧಿಯ ಪ್ರಮುಖ ಸ್ತಂಭವಾಗಿ ಮುಂದುವರೆದಿದೆ.

ಮಾಹಿತಿ ತಂತ್ರಜ್ಞಾನ, ಕೈಗಾರಿಕಾ ಉತ್ಪಾದನೆ, ಕೃಷಿ ಮತ್ತು ಸೇವಾ ವಲಯಗಳಲ್ಲಿ ರಾಷ್ಟ್ರಕ್ಕೆ ದೊಡ್ಡ ಪ್ರಮಾಣದಲ್ಲಿ ಕೊಡುಗೆ ನೀಡುತ್ತಿದೆ. ರಾಷ್ಟ್ರದ ಬೊಕ್ಕಸಕ್ಕೆ ಅತೀಹೆಚ್ಚು ಕೊಡುಗೆ ನೀಡುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯದ ಕೆಲವು ದೀರ್ಘ ಕಾಲದ ಬಾಕಿ ಉಳಿದಿರುವ ಯೋಜನೆಗಳಿಗೆ ಕೇಂದ್ರ ಸರ್ಕಾರ ತುರ್ತು ಗಮನ ಹರಿಸಬೇಕೆಂದು ಕೋರಿದ್ದಾರೆ.

ನನೆಗುದಿಗೆ ಬಿದ್ದಿರುವ ರಾಜ್ಯದ ಯೋಜನೆಗಳಿಗೆ ಅನುಮತಿ ನೀಡುವುದರಿಂದ ಕರ್ನಾಟಕದ ಪ್ರಗತಿ ಮತ್ತಷ್ಟು ವೇಗಗೊಂಡು ರಾಷ್ಟ್ರದ ಬೊಕ್ಕಸಕ್ಕೆ ಹೆಚ್ಚು ಹಣ ಹರಿಯಲಿದೆ. ಅನುಮೋದನೆಗಳು ಮತ್ತು ಹಣಕಾಸು ಬಿಡುಗಡೆಯಲ್ಲಿನ ವಿಳಂಬದಿಂದ ವ್ಯವಸ್ಥಿತ ಅಸಮಾನತೆ ಭಾವನೆ ಮೂಡಿಸಿದೆ.

ಈ ಸಮಸ್ಯೆಗಳನ್ನು ಪರಿಹರಿಸುವುದರಿಂದ ಸಹಕಾರಿ ಒಕ್ಕೂಟ ವ್ಯವಸ್ಥೆಯ ಸ್ಫೂರ್ತಿಯನ್ನು ಪುನರ್ ಉಚ್ಚರಿಸಿದಂತೆ ಆಗುತ್ತದೆ. ಕೇಂದ್ರ ಸಮಸ್ಯೆಗಳನ್ನು ಬಗೆಹರಿಸಿದರೆ ರಾಷ್ಟ್ರದ ಅಭಿವೃದ್ಧಿಯ ಹಂಚಿಕೆಯ ದೃಷ್ಟಿಕೋನವನ್ನು ಬಲಪಡಿಸುತ್ತದೆ. ನಮ್ಮ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿಮ್ಮ ಸಹಕಾರವನ್ನು ಕರ್ನಾಟಕದ ಜನತೆ ಭರವಸೆ ಮತ್ತು ವಿಶ್ವಾಸದಿಂದ ಎದುರು ನೋಡುತ್ತಿದ್ದಾರೆ ಎಂದಿದ್ದಾರೆ. ಮುಖ್ಯಮಂತ್ರಿ ಸಲ್ಲಿಸಿರುವ 18 ಬೇಡಿಕೆಗಳ ಪ್ರಸ್ತಾವದಲ್ಲಿ ಹೈಸ್ಪೀಡ್ ರೈಲು ಕಾರಿಡಾರ್‌ನಲ್ಲಿ ಬೆಂಗಳೂರು–ಮೈಸೂರು ■ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಸಂತ : ನಾನು ನನ್ನ ಹೆಂಡತಿಯನ್ನು ತುಂಬಾ ಪ್ರೀತಿಸ್ತೇನೆ, ನೀನು?
ಬಂಟ : ಅವಳು ನಿನ್ನ ಹೆಂಡತಿ ಕಣಪ್ಪಾ.
ನಾನು ಹೇಗೇ ಪ್ರೀತಿಸಲಿ?

ಮೈಸೂರು ಮಿತ್ರ

ಗುರುವಾರ, ಏಪ್ರಿಲ್ 16, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಮಗಾಗಿ ಯಾರೋ ಇದ್ದಾರೆ ಅನ್ನೋ ಭ್ರಮೆಗಿಂತ
ಯಾರು ಇಲ್ಲ ಅನ್ನೋದೇ ವಾಸ್ತವ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ

ಧನ್ಯೋಸ್ಮಿ

ಪ್ರೀತಿಯ ಓದುಗರೆ,

ನಿಮ್ಮ ಅಚ್ಚುಮೆಚ್ಚಿನ 'ಮೈಸೂರು ಮಿತ್ರ' ಇಂದಿಗೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಇನ್ನು ಉತ್ಸಾಹದಿಂದ 47ನೇ ವಸಂತಕ್ಕೆ ಕಾಲಿಡುತ್ತಿದ್ದಾನೆ. ಈ ಒಂದು ಸಂತಸದ ಸಂದರ್ಭದಲ್ಲಿ ನಾಲ್ಕೂವರೆ ಲಕ್ಷಕ್ಕೂ ಅಧಿಕ ಓದುಗ ದೇವರುಗಳಾದ ನಿಮಗೆ ಹೃದಯಪೂರ್ವಕ ವಂದನೆ–ಅಭಿವಂದನೆ.

ಏಪ್ರಿಲ್ 16, 1980ರಲ್ಲಿ, ಶ್ರೀಯುತ ಕೆ.ಬಿ. ಗಣಪತಿ ಅವರ ಮಹತ್ವಾಕಾಂಕ್ಷೆಯಂತೆ ಜನ್ಮ ತಳೆದ 'ಮೈಸೂರು ಮಿತ್ರ' ಆರಂಭದಲ್ಲಿ ಮೈಸೂರು ಜಿಲ್ಲೆಗೆ ಸೀಮಿತವಾಗಿತ್ತು. ನಂತರ ಓದುಗರ ಪ್ರೀತಿಪೂರ್ವಕ ಪ್ರೋತ್ಸಾಹದ ಫಲವಾಗಿ ಹಳೇ ಮೈಸೂರು ಭಾಗದ ಕೇಂದ್ರ ಸ್ಥಾನ ಮೈಸೂರು ಜೊತೆಗೆ ಚಾಮರಾಜನಗರ, ಮಂಡ್ಯ, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಪ್ರಸರಣ ವಿಸ್ತರಿಸಿಕೊಂಡಿತು.

ಈಗ ಕರ್ನಾಟಕದ ಪ್ರತಿಷ್ಠಿತ ಪ್ರಾದೇಶಿಕ ಪತ್ರಿಕೆಯಾಗಿ ವರ್ಷದಿಂದ ವರ್ಷಕ್ಕೆ ಯಶಸ್ಸಿನ ಮೆಟ್ಟಿಲೇರುತ್ತಾ ಸಾಗಿದೆ. ಮೇಲಾಗಿ ದಕ್ಷಿಣ ಕರ್ನಾಟಕದ ಅತ್ಯಧಿಕ ಪ್ರಸರಣ ಸಂಖ್ಯೆವುಳ್ಳ ಪತ್ರಿಕೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. 'ಮಿತ್ರ'ನ ಈ ಅಭ್ಯುದಯದಲ್ಲಿ ನಿಮ್ಮ ಪಾತ್ರ ಅವಿಸ್ಮರಣೀಯ.

ವಿಶ್ವಾಸಾರ್ಹತೆಯಿಂದ ಬಹುಬೇಗ ಮೈಸೂರು ಜಿಲ್ಲೆಯ ಮನೆ–ಮನಗಳನ್ನು ತಲುಪಿದ 'ಮಿತ್ರ', ಬಳಿಕ ಕೊಡಗು, ಚಾಮರಾಜನಗರ, ಮಂಡ್ಯ ಹಾಗೂ ಹಾಸನದಲ್ಲೂ ಈಗ ಮನೆ ಮಾತಾಗಿದ್ದಾನೆ ಎಂದೇಳಲು ಹೆಮ್ಮೆ ಎನ್ನಿಸುತ್ತದೆ. ಈ ಅಭೂತಪೂರ್ವ ಯಶಸ್ಸಿಗೆ ಪತ್ರಿಕೆಯ ವಿಶ್ವಾಸಾರ್ಹತೆ–ಜನಪರತೆ ಪ್ರಮುಖ ಕಾರಣವಾಗಿದೆ.

'ಮೈಸೂರು ಮಿತ್ರ' ವಿಶ್ವಾಸಾರ್ಹ ಎಂಬುದು ಓದುಗರ ಅಚಲ ನಂಬಿಕೆ. ಅದೇ ರೀತಿ 'ಮಿತ್ರ'ನಿಗೆ ಜಾಹೀರಾತು ನೀಡಿದರೆ ಹೆಚ್ಚು ಜನರನ್ನು ತಲುಪಬಹುದು ಎಂಬ ವಿಶ್ವಾಸ ನಮ್ಮ ಜಾಹೀರಾತುದಾರರದ್ದು. ಹಾಗಾಗಿಯೇ ನಿರಂತರವಾಗಿ 'ಮಿತ್ರ'ನಿಗೆ ಒತ್ತಾಸೆಯಾಗಿದ್ದಾರೆ. ಸುದ್ದಿ ವಿಚಾರದಲ್ಲಿ ಯಾವುದೇ ಪತ್ರಿಕೆಯಲ್ಲಿ ಬಂದಿದ್ದರೂ 'ಮೈಸೂರು ಮಿತ್ರ'ನಲ್ಲಿ ಬಂದಿದೆಯಾ ನೋಡಿ ಎಂದು ಖಾತರಿಪಡಿಸಿಕೊಳ್ಳುವಷ್ಟರ ಮಟ್ಟಿಗೆ ನಮ್ಮ ಓದುಗ ದೇವರುಗಳು ನಮ್ಮ ಮೇಲೆ ವಿಶ್ವಾಸ ಹೊಂದಿರುವುದು ನಮ್ಮ ಭಾಗ್ಯವೇ ಸರಿ. ಈ ಒಂದು ಬಾಂಧವ್ಯವೇ 47ನೇ ವರ್ಷದವರೆಗೂ ಬಾಡದ ಉತ್ಸಾಹವನ್ನು ನಮ್ಮಲ್ಲಿ ತಂದಿದೆ.

ಈ ಸಂದರ್ಭದಲ್ಲಿ ಅತ್ಯಂತ ವಿಷಾದದ ಸಂಗತಿಯೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇವೆ. ಕಳೆದ ಎರಡು ಮುಕ್ಕಾಲು ವರ್ಷ 'ಮೈಸೂರು ಮಿತ್ರ'ನಿಗೆ ರಾಜ್ಯ ಸರ್ಕಾರದಿಂದ ಯಾವುದೇ ಸರ್ಕಾರಿ ಜಾಹೀರಾತು ಬಿಡುಗಡೆ ಆಗಿಲ್ಲ. ಇದರ ಬಗ್ಗೆ ಆಡಳಿತ ಪಕ್ಷದ ನಾಯಕರು, ಸಂಬಂಧಿಸಿದ ಇಲಾಖೆ ಮುಖ್ಯಸ್ಥರ ಗಮನ ಸೆಳೆದರೂ, ಮನವಿ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ.

ಬಹುಶಃ ಮುಡಾ ನಿವೇಶನ ಹಗರಣ, ಚಾಮುಂಡಿಬೆಟ್ಟದ ತಪ್ಪಲಿನ ಭೂ ಕಬಳಿಕೆ, ಕೆರೆಗಳ ಒತ್ತುವರಿಯಂತಹ ವಿಚಾರಗಳನ್ನು ವಸ್ತುನಿಷ್ಠವಾಗಿ ಜನರಿಗೆ ತಲುಪಿಸಿದ್ದು ಕೆಲವು ಪ್ರಭಾವಿಗಳಿಗೆ ಸಹಿಸದಂತಾಗಿರಬಹುದು. ಏನೇ ಆಗಲಿ, ನಮ್ಮದು ಜನಪರ ಪತ್ರಿಕೆ; ರಾಜಕಾರಣಿಗಳ ಪರ ಪತ್ರಿಕೆಯಲ್ಲ. ಹಾಗಾಗಿಯೇ ನಾಲ್ಕೂವರೆ ದಶಕದಿಂದ 'ಮೈಸೂರು ಮಿತ್ರ' ಹಳೇ ಮೈಸೂರು ಭಾಗದ ಮಿತ್ರನಾಗಿ ಜನರ ವಿಶ್ವಾಸವನ್ನು ಉಳಿಸಿಕೊಂಡು ಬಂದಿದೆ.

'ಮೈಸೂರು ಮಿತ್ರ'ನ ಜನಪ್ರಿಯತೆ, ವೃತ್ತಿಶ್ರೇಷ್ಠತೆ ಅರಿತು ಜಾಹೀರಾತುದಾರರು ಆರಂಭದಿಂದಲೂ ನಮ್ಮ ಕೈ ಹಿಡಿಯುತ್ತಿದ್ದೀರಿ. ನಿಮಗೆ ನಾವು ಅಭಾರಿಯಾಗಿದ್ದೇವೆ. ಮುಂದೆಯೂ ಓದುಗರು ಹಾಗೂ ಜಾಹೀರಾತುದಾರರ ವಿಶ್ವಾಸಕ್ಕೆ ನಾವು ಕಟಿಬದ್ಧರಾಗಿರುತ್ತೇವೆ ಎಂಬುದು ಈ ಸಂದರ್ಭದಲ್ಲಿ ನಾವು ನಿಮಗೆ ನೀಡುವ ವಾಗ್ದಾನ.

ಕೊನೆಯದಾಗಿ, 'ಮಿತ್ರ'ನ 47ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ನಮ್ಮೆಲ್ಲಾ ಓದುಗರು, ಜಾಹೀರಾತುದಾರರು, ಅಭಿಮಾನಿಗಳು, ಹಿತೈಷಿಗಳು ಹಾಗೂ ಪತ್ರಿಕೆ ವಿತರಿಸುವವರಿಗೆ ನಮ್ಮ ಅನಂತಾನಂತ ವಂದನೆಗಳು. ನಿಮ್ಮ ಮಮಕಾರ– ಸಹಕಾರ ಸದಾ ನಮ್ಮೊಂದಿಗಿರಲಿ.

–ಸಂಪಾದಕ

ನಿಮ್ಮ ಪತ್ರಗಳು

ಶಾಂತಿಗೆ ಕರೆ ಕೊಟ್ಟ ಪೋಪ್ ಲಿಯೋಗೆ ಅಭಿನಂದನೆ

ಮಾನ್ಯರೇ

ಮಧ್ಯ ಪ್ರಾಚ್ಯ ದೇಶಗಳಲ್ಲಿ ದೇಶಗಳಲ್ಲಿ 40 ದಿನಗಳಿಂದ ನಡೆಯುತ್ತಿದೆ ಇದರಿಂದ ಹೆಚ್ಚು ಜನರು ಸಂಕಷ್ಟಕ್ಕೆ ಅನುಭವಿಸುತ್ತಿದ್ದಾರೆ ಶಾಂತಿ ಸಮಾಧಾನಕ್ಕೆ ಬರುವ ಲಕ್ಷಣಗಳು ಕಾಣುತ್ತಿಲ್ಲ.

ಈ ಯುದ್ಧಗಳ ಕುರಿತು ಪೋಪ್ 14ನೇ ಲಿಯೋರವರು ಯುದ್ಧಕ್ಕೆ ಅಂತಿಮ ಕಾಣಲು ರಾಷ್ಟ್ರಗಳ ನಡುವೆ ಶಾಂತಿಯ ಸಂಯಮಕ್ಕೆ ಪ್ರಯತ್ನಿಸುತ್ತೇನೆ ಧರ್ಮ ಶಾಂತಿಯ ಸಂಕೇತವಾಗಿದ್ದು ಧರ್ಮದ ಬೆಂಬಲದ ಹೆಸರಿನಲ್ಲಿ ಯುದ್ಧಗಳನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲ ಹಾಗೂ ನಾನು ಟ್ರಂಪ್ ಆಡಳಿತಕ್ಕೆ ಹೆದರುವುದಿಲ್ಲ ಎಂದು ಲಿಯೋ ಅವರು ಶಾಂತಿಗೆ ಕರೆ ಕೊಟ್ಟಿರುವುದು ಅಭಿನಂದನೆಗಳು

–ಪಿ ಸಿ ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು

ಚಿಲ್ಲರೆ ಸಿಗದ ಬ್ಯಾಂಕ್

ಮಾನ್ಯರೇ

ಇಲ್ಲಿನ ಜಯನಗರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇರುವುದು ಸರಿಯಷ್ಟೆ. ಇಲ್ಲಿ ಎಲ್ಲ ಸೇವೆಗಳು ಸರಿಯಾಗಿ ಸಿಗುತ್ತವೆ. ಆದರೆ (withdraw) ಹಣ ವಾಪಸ್ ಪಡೆದರೆ ಎಲ್ಲಾ 500 ರೂ. ನೋಟು ಕೊಡುತ್ತಾರೆ. ಕೇಳಿದರೆ ಪ್ರಯೋಜನವಾಗುವುದಿಲ್ಲ. ವಯಸ್ಸಾದವರಿಗೆ, ಹೆಂಗಸರಿಗೆ ಅದಕ್ಕೆ ಚಿಲ್ಲರೆ ಕಡಮೆ ವರ್ಗದ ಚಿಲ್ಲರೆ ನೋಟು, ನಾಣ್ಯಗಳನ್ನು ಪಡೆಯುವುದು ಕಷ್ಟವಾಗಿದೆ. ಅದಕ್ಕಾಗಿ ಇನ್ನೊಬ್ಬರನ್ನು ಆಶ್ರಯಿಸಬೇಕು. ದಯವಿಟ್ಟು ಸಂಬಂಧಪಟ್ಟವರು, ಹಣ ಪಡೆಯುವವರಿಗೆ ಬೇಕಾದ ಡಿನಾಮಿನೇಷನ್ ನೋಟು ನಾಣ್ಯಗಳನ್ನು ಕೊಟ್ಟು ಸಹಾಯ ಮಾಡುವಂತೆ ಮಾಡಬೇಕೆಂದು ವಿನಂತಿ.

– ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ.



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

16ನೇ ಏಪ್ರಿಲ್ 1980, ನಿಮ್ಮ 'ಮೈಸೂರು ಮಿತ್ರ' ಜನಿಸಿದ ದಿನ. ಆರಂಭ ದಿನದ ಸಂಚಿಕೆಯಲ್ಲಿ ಸಂಸ್ಥಾಪಕ ಸಂಪಾದಕರಾದ ಶ್ರೀಯುತ ಕೆ.ಬಿ. ಗಣಪತಿಯವರು ಪತ್ರಿಕೆ ಪ್ರಾರಂಭದ ಧ್ಯೇಯೋದ್ದೇಶವನ್ನು 'ನಿವೇದನೆ' ಮೂಲಕ ಓದುಗರ ಮುಂದಿಟ್ಟಿದ್ದರು.

ಹಾಗೆಯೇ ಆರಂಭದ ಸಂಚಿಕೆಯಲ್ಲೇ ತಮ್ಮ ಮಹತ್ವಾಕಾಂಕ್ಷಿ ಹಾಗೂ ಅಚ್ಚುಮೆಚ್ಚಿನ ಅಂಕಣ 'ಭೂಮಂತ್ರ'ದಲ್ಲಿ ಅಂದಿನ ಮುಖ್ಯಮಂತ್ರಿ ಆರ್.ಗುಂಡೂರಾವ್ ಅವರ ಕುರಿತಾಗಿ ಬರೆದಿದ್ದರು. ಆರಂಭಿಕ ಸಂಚಿಕೆಯ ಇವೆರಡೂ ಮಹತ್ವದ ವಿಷಯಗಳನ್ನು ಅಂದು ಅವು ಪತ್ರಿಕೆಯಲ್ಲಿ ಹೇಗೆ ಮುದ್ರಿತವಾಗಿದ್ದವೋ ಅದರ ಸ್ಕ್ಯಾನಿಂಗ್ ಕಾಪಿ (ಪ್ರತಿ)ಯನ್ನು ಯಥಾವತ್ತಾಗಿ ಪ್ರಕಟಿಸಿದ್ದೇವೆ.

ನಿವೇದನೆ

ಮೈಸೂರು ಜಿಲ್ಲೆಯ ಮತ್ತು ನಗರದ ಮಹಾಜನರ ಮುಂದೆ ಈ ದಿವಸದಿಂದ ' ಮೈಸೂರು ಮಿತ್ರ ' ಬೆಳಗಿನ ಪತ್ರಿಕೆಯನ್ನು ಇಡಲು ನಮಗೆ ಬಹಳ ಸಂತೋಷ, ಅಭಿಮಾನ.

ಈ ಪತ್ರಿಕೆ ನೋಡಲು ಸಣ್ಣದಾದರೂ, ಅದರ ಗುರಿ, ಧ್ಯೇಯ- ನೀತಿ, ಸೇವಾನಿಷ್ಠೆ ಸಣ್ಣದಲ್ಲವೆಂದು ನಾವು ಈ ಶುಭ ದಿನದಂದು ತಮಗೆ ಭರವಸೆ ನೀಡುತ್ತೇವೆ.

ಪತ್ರಿಕೆಯ ಬೆಲೆ ಹತ್ತು ಪೈಸೆ ಮಾತ್ರ. ಪ್ರಾಯಶಃ, ಇದು ನೀವು ಸೇದುವ ಒಂದು ಸಿಗರೇಟ್ ಬೆಲೆಗಿಂತ ಕಡಿಮೆ. ಪತ್ರಿಕೆಯ ಪ್ರಯೋಜನ ಮಾತ್ರ ಅಪಾರವಾದುದು. ಪ್ರಪಂಚದ, ದೇಶದ ಹಾಗೂ ರಾಜ್ಯದ ಪ್ರಮುಖ ಘಟನೆಗಳ ವರದಿಗಳನ್ನು ಸಂಕ್ಷಿಪ್ತವಾಗಿ ನೀಡುವುದರ ಜೊತೆಗೆ, ಈ ಜಿಲ್ಲೆಯ ಹಾಗೂ ಈ ನಗರದ ದೈನಂದಿನ ಸುದ್ದಿಗಳನ್ನು ವಿವರವಾಗಿ ಹಾಕುವ ಪ್ರಯತ್ನ ನಮ್ಮದು!

ನಮ್ಮ ಸಮಾಜದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದ ದೈನಂದಿನ ಆಗುಹೋಗುಗಳನ್ನು ಮತ್ತು ಇಲ್ಲಿ ನಡೆಯುವ ಅನ್ಯಾಯ, ಅಕ್ರಮಗಳನ್ನು ಬಯಲಿಗೆಳೆದು ನ್ಯಾಯ, ಧರ್ಮ ಮತ್ತು ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹಿಡಿಯುವುದೇ ನಮ್ಮ ಮುಖ್ಯ ಕರ್ತವ್ಯ, ಧ್ಯೇಯ.

ತಾವೆಲ್ಲ ನಮ್ಮ ಈ ಕಾರ್ಯದಲ್ಲಿ ಉತ್ತೇಜನ ಕೊಡಬೇಕಾಗಿ ನಮ್ಮ ಪ್ರಾರ್ಥನೆ.

ಕೇಬೀಜೆಯವರ ಭೂಮಂತ್ರ

ದಾರಿ ಬಿಡಿ, ರಾಯರು ಬಂದರು!

ಕಿರೀಟ ತಾನಾಗಿ ಹಾರಿಬಂದು ನಮ್ಮ ಮುಖ್ಯ ಮಂತ್ರಿ ಗುಂಡೂರಾಯರ ತಲೆಯ ಮೇಲೆ ಕೂತು ಇವತ್ತಿಗೆ ಸರಿಯಾಗಿ 94 ದಿನಗಳಾದವು. ಹರಿಜನ ನಾಯಕ ಬಸವ ಲಿಂಗಪ್ಪನವರ ತಲೆಯನ್ನಲಂಕರಿಸಲಿದ್ದ ಈ ಕಿರೀಟ ಮಾರ್ಕ ಬ್ರಾಹ್ಮಣ ಗುಂಡೂರಾಯರ ಮೇಲೆ ಬಿತ್ತು. ಈ ಮಾತು ಗುಂಡೂರಾಯರೇ ವಿಧಾನ ಸಭೆಯಲ್ಲಿ ಹೇಳಿದ್ದು. ಇದಕ್ಕೇ ಹೇಳೋದು ವಿಧಿ ಅಂತ.

ಅತ್ತ ದೆಹಲಿಯಲ್ಲಿ ಕಿರೀಟ ಇನ್ನೊಬ್ಬ ಹರಿಜನ ನಾಯಕ ಜಗಜೀವನ್ ಬಾಬು ತಲೆ ತಪ್ಪಿ ಇನ್ನೊಬ್ಬ ಬ್ರಾಹ್ಮಣಿಯ ತಲೆಯ ಮೇಲೆ ಸರಾಗವಾಗಿ ಕೂತಿದೆ. ಇದಕ್ಕೆಲ್ಲಾ ಅರ್ಥ ಕಟ್ಕೋಳೋನು ನಾನಲ್ಲ. ಆದರೆ ಜನಾ ಏನೋ ಆಡಿಕೊಳ್ಳುತ್ತಿದ್ದಾರೆ. ಇತ್ತ ಹರಿಜನ ಬಂದರೆ ದೇಶಕ್ಕೆ ದುರಾದೃಷ್ಟ; ಅತ್ತ ವಿಧವೆ ಬಂದಿದ್ದಾರೆ ದೇಶಕ್ಕೆ ಕಷ್ಟ! ಇವೆಲ್ಲಾ ನನಗೇಕಪ್ಪ ಯಾವ ರಾಜ ಬಂದರೇನು ಯಾವ ರಾಜ ಹೋದರೇನು, ರಾಗಿ ಬೀಸೋದು ತಪ್ಪೀತೆ!

ಈಗ ಈ ಗುಂಡೂರಾಯರು ಈ 94 ದಿನಗಳಲ್ಲಿ ಮಾಡಿದ್ದೇನು ಮಾರಾಯರೇ ಅಂತ ನನ್ನ ಮಂಗಳೂರು ಸ್ನೇಹಿತ ಕೇಳುತ್ತಿದ್ದಾನೆ. ಏನ್ ಹೇಳಲಿ?

ತಾನಾಗಿ ಬಂದ ಕಿರೀಟ ಯಾವಾಗ ತಾನಾಗಿಯೇ ಹೋರಟು ಹೋಗುತ್ತೋ ಎಂಬ ಸಂಕೋಚವೋ, ಹೆದರಿಕೆಯೋ ಭ್ರಮೆಯೋ ಗುಂಡೂರಾಯರು ಹೊರಟರು ರಾಜ್ಯದಾದ್ಯಂತ, 20ನೇ ಶತಮಾನದ ಅಶ್ವಮೇಧ ಯಜ್ಞಕ್ಕೆ ಅರ್ಥಾತ್ ಸನ್ಮಾನ ಸ್ವೀಕಾರಕ್ಕೆ. ಏನೇನು ಬೇಕು? ಗದೆಯೋ, ಕತ್ತಿಯೋ, ಬೆಳ್ಳಿ ಪೇಟವೋ, ಶಾಲೋ ಚಿನ್ನದ ಪದಕವೋ, ದಂತದ ಗೀತೋಪದೇಶವೋ? ಗುಂಡೂರಾಯರಿಗೆ ಮದುವೆ ಆಗದೆ ಇದ್ದಿದ್ದರೆ, ಒಂದು ಹೆಣ್ಣೂ ಕೂಡ ಕೊಟ್ಟುಬಿಡುತ್ತಿದ್ದರು ಈ ಜನ! ಅಲ್ಲಾವುದ್ದೀನನ ಅದ್ಭುತ ದೀಪ ಕೂಡ ಇಷ್ಟೆಲ್ಲ ಬೆಲೆ ಬಾಳುವ ಸಾಮಗ್ರಿಗಳನ್ನು ಉತ್ಪಾದಿಸಲಿಕ್ಕೆ ಆಗುತ್ತಿರಲಿಲ್ಲ. ಹೂವಾಡಿಗರಿಗಂತೂ ಸಂತೋಷವೇ ಸಂತೋಷ. ಹೌದು, ರಾಯರಿಗಿದು ಜೀವನದ ಮೊತ್ತ ಮೊದಲ ಚಾನ್ಸು; ಬಹುಶಃ ಕಡೇದೂ ಆಗಬಹುದೇನೋ. ಹಾಗೆಂದ ಮೇಲೆ ತಪ್ಪೇನು? ಅಮ್ಮಾವ್ರ ಪೂಜಾರಿ ಮುಖ್ಯ ಮಂತ್ರಿ ಆದ ಮೇಲೆ ಭಕ್ತ ಜನ ಮೆಚ್ಚುಗೆ ಇದೆಯೋ ಇಲ್ಲವೇ ಅಂತ ನೋಡಬೇಡವೇ? ಹೇಗೂ ಆಮೇಲೆ ಬರೋದು ಗೊತ್ತಲ್ಲ–ಚಪ್ಪಲಿ, ಮೊಟ್ಟೆ, ಟೊಮೆಟೋ ಮತ್ತು ಕಲ್ಲು!

ನೋಡಿಯಾಯಿತು. 94 ದಿನಗಳಲ್ಲಿ 34 ದಿನ ಕಳೆಯಿರಿ. ಈಗ ನೋಡುವುದಕ್ಕೆ, ಇನ್ನುಳಿದದ್ದು 60 ದಿನಗಳು. ಬೇಗ ಹೇಳಿಬಿಡತೀನಿ. ಇವರೇನು ಮಾಡಿದರು ಅಂತ ಹೇಳಿದರೆ ಆಗೋಲ್ಲ. ಏಕೆಂದರೆ ಅವರು ಹೇಳಿದ್ದು, ಮಾಡಿದ್ದಕ್ಕಿಂತ ಹೆಚ್ಚಿತ್ತೆ, ನಾಳೆ ಹೇಳಿಬಿಡ್ತೀನಿ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಕರ್ನಾಟಕದಲ್ಲಿ ಬಿಜೆಪಿ ಬಾಡಿದೆ!



ಭಾರತದಲ್ಲಿನ ಪ್ರಜಾಪ್ರಭುತ್ವದ ಒಂದು ದುರಂತ ಸಂಗತಿ ಎಂದರೆ, ಪ್ರತಿಪಕ್ಷ ಕನಿಷ್ಠ ತನ್ನ ಪ್ರಾಥಮಿಕ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು... ಸಾಂವಿಧಾನಿಕವಾಗಿ ಆಡಳಿತ ಪಕ್ಷಕ್ಕೆ ಇರುವಷ್ಟೇ ಜವಾಬ್ದಾರಿ ಹಾಗೂ ಕರ್ತವ್ಯ ತಮಗೂ ನೀಡಲ್ಪಟ್ಟಿದೆ ಎಂಬುದನ್ನು ಅದು ಅರಿಯದೆ ಇರುವುದು... ಸಮರ್ಥ ರೀತಿಯಲ್ಲಿ ತನ್ನನ್ನು ಬಿಂಬಿಸಿಕೊಳ್ಳದೇ ಇರುವುದು... ಅವಕಾಶ ಸಿಕ್ಕಾಗ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸದಿರುವುದು ಹಾಗೂ ಆಡಳಿತ ಪಕ್ಷದ ದುರಾಡಳಿತವನ್ನು ಬಯಲಿಗೆಳೆಯದೇ ಇರುವುದು.

ದುರದೃಷ್ಟಕರ ಸಂಗತಿ ಎಂದರೆ, ನಮ್ಮ ಕರ್ನಾಟಕದಲ್ಲಿಯೂ ವಿರೋಧ ಪಕ್ಷದ ವೈಫಲ್ಯ ಎದ್ದು ಕಾಣುತ್ತಿದೆ.

ರಾಜ್ಯದಲ್ಲಿ ವಿಪಕ್ಷ ಬಿಜೆಪಿ ನಿರ್ಲಿಪ್ತವಾದಂತಿದೆ. ಒಂದು ಬಲವಾದ ಪ್ರತಿಭಟನೆಗಳಿಲ್ಲ, ಪರಿಣಾಮಕಾರಿ ಸಾರ್ವಜನಿಕ ಹೋರಾಟ ಸಭೆಗಳಿಲ್ಲ, ಸಂದರ್ಭೋಚಿತ ಪತ್ರಿಕಾಗೋಷ್ಠಿಗಳಿಲ್ಲ, ಹೋಗಲಿ ಆಡಳಿತ ಪಕ್ಷದ ವೈಫಲ್ಯಗಳ ಬಗ್ಗೆ ಜನರಿಗೆ ಸರಿಯಾದ ಮಾಹಿತಿಯನ್ನು ನೀಡುವ ಸಣ್ಣ ಪ್ರಯತ್ನವನ್ನೂ ಕೂಡ ಮಾಡುತ್ತಿಲ್ಲ.

ವಿಪರ್ಯಾಸವೆಂದರೆ, ಈ ವಿಚಾರದಲ್ಲಿ ಕಾಂಗ್ರೆಸ್ಸಿನಿಂದ ಬಿಜೆಪಿ ಹಲವು ಪಾಠಗಳನ್ನು ಕಲಿಯಬೇಕಿದೆ.

ಕಾಂಗ್ರೆಸ್ ಪ್ರತಿಪಕ್ಷದಲ್ಲಿದ್ದಾಗ, ಬಿಜೆಪಿ ಸರ್ಕಾರವನ್ನು ನಿರಂತರವಾಗಿ ಒಂದಲ್ಲ ಒಂದು ವಿಷಯದಲ್ಲಿ ತೀವ್ರ ಇಕ್ಕಟ್ಟಿಗೆ ಸಿಲುಕಿಸುತ್ತಿತ್ತು. ಬಿಜೆಪಿ ಸರ್ಕಾರದ ಬುಡಕ್ಕೇ ಬಾಂಬ್ ಆದ **'40% ಕಮಿಷನ್ ಸರ್ಕಾರ'** ಅಭಿಯಾನ ನೆನಪಿದೆಯಾ?

ಕಾಂಗ್ರೆಸ್ ನಾಯಕರು ಈ ಒಂದು ವಿಷಯವನ್ನು ಮುಂದಿಟ್ಟುಕೊಂಡು ವ್ಯಾಪಕ ರೀತಿ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸಿದರು. ಅದರಲ್ಲೂ **'ಪೇ ಸಿಎಂ'** ಅಭಿಯಾನದಲ್ಲಿ ಎಲ್ಲೆಡೆ ಕ್ಯೂ ಆರ್ ಕೋಡ್ ಪೋಸ್ಟರ್‌ಗಳನ್ನು ಅಂಟಿಸುವ ಮೂಲಕ ಭ್ರಷ್ಟಾಚಾರದ ಆರೋಪಗಳನ್ನು ಸಾಂಕೇತಿಕ ರೀತಿ ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಿದ್ದರು.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅಕ್ಷರಶಃ ಬೀದಿಗಿಳಿದು, ಇಂತಹ ಆಪಾದನೆಯನ್ನೇ ರಾಜಕೀಯ ದಾಳವನ್ನಾಗಿಸಿ ಬಿಜೆಪಿ ಭ್ರಷ್ಟ ಸರ್ಕಾರ ಎಂಬುದಾಗಿ ಜನರಲ್ಲಿ ನಂಬಿಕೆ ಬರುವಂತೆ ಮಾಡಿ, ಕೊನೆಗೆ ಅದನ್ನು ಅಧಿಕಾರದಿಂದ ಕಿತ್ತೊಗೆಯುವ ಹಾಗೆ ನೋಡಿಕೊಂಡರು.

ಈಗ, ಬಿಜೆಪಿ ಅಂದಿನ ಕಾಂಗ್ರೆಸ್‌ನ ಸ್ಥಾನದಲ್ಲಿದೆ. ಆದರೆ, ವಿರೋಧ ಪಕ್ಷವಾಗಿ ಹೇಗೆ ವರ್ತಿಸಬೇಕೆಂದು ಇನ್ನೂ ನಿರ್ಧರಿಸಿದಂತಿಲ್ಲ.

ಕಾಂಗ್ರೆಸ್‌ನ ಆಡಳಿತ ವೈಫಲ್ಯ, ಗ್ಯಾರಂಟಿ ಹೆಸರಿನಲ್ಲಿ ವ್ಯಾಪಕ ಭ್ರಷ್ಟಾಚಾರ –ಹೀಗೆ ಸಾಕಷ್ಟು ಅವಕಾಶಗಳಿದ್ದರೂ ಬಿಜೆಪಿ ಇನ್ನೂ ಸರಿಯಾದ ರಾಜಕೀಯ ಕಾರ್ಯತಂತ್ರಗಳನ್ನೇ ರೂಢಿಸಿಕೊಂಡಿಲ್ಲ.

ಸಿಎಂ ಸಿದ್ದರಾಮಯ್ಯನವರ ತವರು ಜಿಲ್ಲೆ ಮೈಸೂರನ್ನೇ ತೆಗೆದುಕೊಂಡರೆ, ಇಲ್ಲಿ ನಡೆದಿರುವ ಮುಡಾ ನಿವೇಶನ ಹಗರಣ, ಚಾಮುಂಡಿಬೆಟ್ಟದ ತಪ್ಪಲಿನ ಕೆರೆ ಅತಿಕ್ರಮಣ, ನೂರಾರು ಕೋಟಿಯ ಸರ್ಕಾರಿ ಜಾಗ ಕಬಳಿಕೆ, ಮಾದಕ ವಸ್ತುಗಳ ವ್ಯಾಪಕ ಸರಬರಾಜು ಮತ್ತು ಮಾರಾಟ... ಸ್ಥಳೀಯ ಆಡಳಿತ ವೈಫಲ್ಯ ಹೀಗೆ ಒಂದೇ... ಎರಡೇ...? ಇವಾವುದನ್ನೂ ಬಿಜೆಪಿಯು ತನ್ನ ಹೋರಾಟದ ಅಸ್ತ್ರ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ.

ಇನ್ನು ಅಧಿಕಾರ ಹಂಚಿಕೆ ವಿಚಾರವಾಗಿ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯನವರ ನಡುವಿನ ಮುಸುಕಿನ ಗುದ್ದಾಟ, ಸರ್ಕಾರದ ಅಸಮರ್ಪಕ ಯೋಜನೆಗಳಿಂದ ರಾಜ್ಯದ ಆರ್ಥಿಕ ಸ್ಥಿತಿ ಹಳ್ಳ ಹಿಡಿಯುತ್ತಿರುವುದು, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು–ಹೀಗೆ ಹಲವು ಅದ್ವಾನದ ಪಟ್ಟಿಯೇ ಇದೆ. ಆದರೆ, ಬಿಜೆಪಿ ಮಾತ್ರ ಇದಾವುದರ ಅರಿವೇ ಇಲ್ಲದಂತೆ ದಿವ್ಯ ಮೌನಕ್ಕೆ ಜಾರಿದೆ.

“ ಸಿಎಂ ಸಿದ್ದರಾಮಯ್ಯನವರ ತವರು ಜಿಲ್ಲೆ ಮೈಸೂರನ್ನೇ ತೆಗೆದುಕೊಂಡರೆ, ಇಲ್ಲಿ ನಡೆದಿರುವ ಮುಡಾ ನಿವೇಶನ ಹಗರಣ, ಚಾಮುಂಡಿಬೆಟ್ಟದ ತಪ್ಪಲಿನ ಕೆರೆ ಅತಿಕ್ರಮಣ, ನೂರಾರು ಕೋಟಿಯ ಸರ್ಕಾರಿ ಜಾಗ ಕಬಳಿಕೆ, ಮಾದಕ ವಸ್ತುಗಳ ವ್ಯಾಪಕ ಸರಬರಾಜು ಮತ್ತು ಮಾರಾಟ... ಸ್ಥಳೀಯ ಆಡಳಿತ ವೈಫಲ್ಯ ಹೀಗೆ ಒಂದೇ... ಎರಡೇ...? ಇವಾವುದನ್ನೂ ಬಿಜೆಪಿಯು ತನ್ನ ಹೋರಾಟದ ಅಸ್ತ್ರ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ.

ಇನ್ನು ಅಧಿಕಾರ ಹಂಚಿಕೆ ವಿಚಾರವಾಗಿ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯನವರ ನಡುವಿನ ಮುಸುಕಿನ ಗುದ್ದಾಟ, ಸರ್ಕಾರದ ಅಸಮರ್ಪಕ ಯೋಜನೆಗಳಿಂದ ರಾಜ್ಯದ ಆರ್ಥಿಕ ಸ್ಥಿತಿ ಹಳ್ಳ ಹಿಡಿಯುತ್ತಿರುವುದು, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು–ಹೀಗೆ ಹಲವು ಅದ್ವಾನದ ಪಟ್ಟಿಯೇ ಇದೆ. ಆದರೆ, ಬಿಜೆಪಿ ಮಾತ್ರ ಇದಾವುದರ ಅರಿವೇ ಇಲ್ಲದಂತೆ ದಿವ್ಯ ಮೌನಕ್ಕೆ ಜಾರಿದೆ.

ಮೈಸೂರಿನ ಉದಾಹರಣೆಯನ್ನೇ ತೆಗೆದುಕೊಂಡರೆ, ಬಿಜೆಪಿ ಇಷ್ಟು ಹೊತ್ತಿಗಾಗಲೇ, ಪ್ರಬಲ ಜನಾಭಿಪ್ರಾಯ ರೂಪಿಸುವ ನಿಟ್ಟಿನಲ್ಲಿ 'ಮೈಸೂರು ಚಲೋ' ಹೋರಾಟ ಕೈಗೆತ್ತಿಕೊಳ್ಳಬೇಕಾಗಿತ್ತು. ”

ಮೈಸೂರಿನ ಉದಾಹರಣೆಯನ್ನೇ ತೆಗೆದುಕೊಂಡರೆ, ಬಿಜೆಪಿ ಇಷ್ಟು ಹೊತ್ತಿಗಾಗಲೇ, ಪ್ರಬಲ ಜನಾಭಿಪ್ರಾಯ ರೂಪಿಸುವ ನಿಟ್ಟಿನಲ್ಲಿ **'ಮೈಸೂರು ಚಲೋ'** ಹೋರಾಟ ಕೈಗೆತ್ತಿಕೊಳ್ಳಬೇಕಾಗಿತ್ತು.

ವಾಸ್ತವವಾಗಿ ಮೈಸೂರಲ್ಲೇ ಬಿಜೆಪಿ ಪ್ರಾಬಲ್ಯ ಮೆರೆಯಬೇಕಾಗಿತ್ತು. ಏಕೆಂದರೆ, ಮೈಸೂರು ಕೇವಲ ಒಂದು ಜಿಲ್ಲಾ ಕೇಂದ್ರ ಅಷ್ಟೇ ಅಲ್ಲ. ಇದು ಮುಖ್ಯಮಂತ್ರಿಗಳ ರಾಜಕೀಯ ತವರು. ರಾಜ್ಯದ ಸಾಂಸ್ಕೃತಿಕ ರಾಜಧಾನಿ ಹಾಗೂ ಬೆಂಗಳೂರಿನ ನಂತರ ಕರ್ನಾಟಕದ ಎರಡನೇ ಅತೀ ದೊಡ್ಡ ನಗರವೂ ಹೌದು.

ಅಷ್ಟೇ ಅಲ್ಲ, ಸ್ವತಃ ಮುಖ್ಯಮಂತ್ರಿಗಳು ಪ್ರತಿನಿಧಿಸುವ ವರುಣಾ ಕ್ಷೇತ್ರವೂ ಇಲ್ಲಿದೆ! ಅವರ ಮಗ ಕೂಡ ಈ ವಲಯದ ಓರ್ವ ಎಂಎಲ್ಸಿ!. ಅಲ್ಲದೆ, ಮೈಸೂರು ನಗರ ವ್ಯಾಪ್ತಿಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಮೂರರಲ್ಲಿ ಕಾಂಗ್ರೆಸ್ ಶಾಸಕರು ಪ್ರತಿನಿಧಿಸುತ್ತಿದ್ದಾರೆ! ಹೀಗಿರಬೇಕಾದರೆ ಬಿಜೆಪಿ ಈ ಭಾಗದಲ್ಲಿ ಅತ್ಯಂತ ಕ್ರಿಯಾತ್ಮಕವಾಗಿರಬೇಕಿತ್ತು.

ಆಯ್ತು, ತಿ.ನರಸೀಪುರದಲ್ಲಿನ ರೇಷ್ಮೆ ಕಾರ್ಖಾನೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವ ವಿವಾದ ವಿಷಯದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಮಧ್ಯೆ ಪ್ರವೇಶಿಸಿದ್ದರಿಂದಲೇ ಆ ಯೋಜನೆಯನ್ನು ಸರ್ಕಾರ ಕೈಬಿಟ್ಟಿತು.

ಆದರೆ, ಇದೊಂದೇ ಗೆಲುವು ಸಾಕಾಗದು. ಎಲ್ಲಿಯಾದರೂ ಸಮರ್ಥ ಪ್ರತಿಪಕ್ಷವಾಗಿ ಬಿಜೆಪಿ ಬಿಂಬಿತವಾಗುವ ಅವಕಾಶ ಇದೆ ಎಂದಾದರೆ ಅದು ಮೈಸೂರಲ್ಲಿ. ಅದೇಕೋ ಬಿಜೆಪಿಗೆ ಇದು ಅರ್ಥವಾದಂತಿಲ್ಲ.

ಕಳೆದ ಎರಡೂವರೆ ವರ್ಷಗಳಲ್ಲಿ, ಭೂಕಬಳಿಕೆ, ಚಾಮುಂಡಿಬೆಟ್ಟ ಹಾಗೂ ಬೆಟ್ಟದ ತಪ್ಪಲಿನ ಸೂಕ್ಷ್ಮ ಪರಿಸರ ವಲಯದಲ್ಲಿನ ಅನಪೇಕ್ಷಿತ ಬೆಳವಣಿಗೆಗಳ ಬಗ್ಗೆ ಸಾಕಷ್ಟು ಪ್ರಶ್ನೆಗಳು ಮತ್ತು ಅನುಮಾನಗಳೆದ್ದಿವೆ.

ಆದರೂ, ಬಿಜೆಪಿ ಹೇಳಿಕೊಳ್ಳುವಂತಹ ಹೋರಾಟ, ಅಭಿಯಾನಗಳನ್ನೇನು ಆಯೋಜಿಸಿಲ್ಲ ಎಂಬುದು ಸೋಜಿಗದ ವಿಷಯ.

ಕೆರೆಗಳ ಒತ್ತುವರಿಯಿಂದ, ಬೆಂಗಳೂರಿನಲ್ಲಿ ಉಂಟಾಗುತ್ತಿರುವ ಕೃತಕ ಪ್ರವಾಹದ ಭೀತಿ ಮೈಸೂರನ್ನೂ ಕಾಡುತ್ತಿದೆ. ಆದರೂ ಬಿಜೆಪಿಗೆ ಇದಾವುದರ ಅರಿವಿಲ್ಲ.

“ ಇಷ್ಟೆಲ್ಲಾ ಗಂಭೀರ ಸಮಸ್ಯೆಗಳು, ಹಗರಣಗಳು, ವಿವಾದಗಳು ಕಣ್ಣಿಗೆ ರಾಚುವಂತಿದ್ದರೂ, ಬಿಜೆಪಿಗೆ ಇವ್ಯಾವುವೂ ಮುಖ್ಯ ವಿಷಯ ಎನಿಸಿಯೇ ಇಲ್ಲ. ಸದನದಲ್ಲಿ ಇವುಗಳ ಬಗ್ಗೆ ಪ್ರಸ್ತಾಪಿಸಬೇಕು, ಚರ್ಚಿಸಬೇಕು ಎಂಬ ಆಲೋಚನೆಯೇ ಈ ಪಕ್ಷದ ಶಾಸಕರ ತಲೆಗೆ ಬಂದಂತಿಲ್ಲ!

ಆದರೆ, ಐಪಿಎಲ್ ಟಿಕೆಟ್‌ಗೆ ಆಡಳಿತ ಪಕ್ಷದವರೊಂದಿಗೆ ಸೇರಿಕೊಂಡು ಸ್ಪೀಕರ್ ಅವರಲ್ಲಿ ದುಂಬಾಲು ಬಿದ್ದು, ಪ್ರತಿ ಶಾಸಕರಿಗೆ ನಾಲ್ಕು ಟಿಕೆಟ್ ಕೊಡಿಸಿ ಎಂದು ಪಟ್ಟು ಹಿಡಿಯುವ ಮೂಲಕ ರಾಜ್ಯದ ಜನತೆಯ ಮುಂದೆ ಅಪಹಾಸ್ಯಗೀಡಾಗಿ ಕೊನೆಗೂ ಎರಡು ಟಿಕೆಟ್ ಧಕ್ಕಿಸಿಕೊಂಡದ್ದೆ ಇವರ ಮಹಾ ಸಾಧನೆ!

ಪರಿಣಾಮಕಾರಿ ವಿರೋಧ ಪಕ್ಷ ಎಂಬುದು ಅನ್ಯಾಯದ ವಿರುದ್ಧ ನಾಗರಿಕರ ದನಿಯಾಗಬೇಕು. ತನ್ಮೂಲಕ ರಾಜ್ಯದ ಹಾಗೂ ಪ್ರಜೆಗಳ ಹಿತ ಕಾಯಬೇಕು. ಆದರೆ, ನಮ್ಮಲ್ಲಿ ಈಗಿನ ವಿರೋಧಪಕ್ಷ ನಿಷ್ಕ್ರಿಯವಾಗಿದೆ. ”

ಮೈಸೂರಲ್ಲಿ ಮಾದಕ ವಸ್ತುಗಳ ಉತ್ಪಾದನೆ ಹಾಗೂ ಮಾರಾಟ ಜಾಲ ವ್ಯಾಪಕ ವಾಗಿ ಹರಡಿರುವುದು, ಒಂದರ ಹಿಂದೆ ಒಂದು ಡ್ರಗ್ಸ್ ತಯಾರಿಕಾ ಘಟಕಗಳು ಬೆಳಕಿಗೆ ಬಂದದ್ದು ಕೂಡ ಬಿಜೆಪಿಗೆ ಇದೊಂದು ಪ್ರಮುಖ ಅಸ್ತ್ರವೆನಿಸಿಯೇ ಇಲ್ಲ!

ಇನ್ನು ಗ್ರೇಟರ್ ಮೈಸೂರು ಅಭಿವೃದ್ಧಿ ಯೋಜನೆ ವಿಚಾರಕ್ಕೆ ಬರೋಣ; ನಗರದ ಸುತ್ತಲೂ ಕಡಿಮೆ ಬೆಲೆಗೆ ತಾವು ಖರೀದಿಸಿರುವ ಭೂಮಿಯನ್ನು ಗ್ರೇಟರ್ ಮೈಸೂರು ಯೋಜನೆಯ ಮೂಲಕ ಅಧಿಕಾರದಲ್ಲಿರುವಾಗಲೇ ಪರಿವರ್ತನೆ ಮಾಡಿ, ಬಡಾವಣೆಗಳನ್ನು ಅಭಿವೃದ್ಧಿಪಡಿಸಿ, ಲಾಭ ಮಾಡಿಕೊಳ್ಳುವ ಹುನ್ನಾರ ಸಾಕಷ್ಟು ರಾಜಕಾರಣಿಗಳದ್ದು.

ಮೈಸೂರು ನಗರ ಬೆಳವಣಿಗೆ ಭವಿಷ್ಯ ವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾರಿಗೆ, ನೀರು ಇತರ ಮೂಲ ಸೌಕರ್ಯಗಳ ವಿಷಯಗಳೇನು ಇಲ್ಲಿ ಚರ್ಚೆಗೊಳಪಟ್ಟಿಲ್ಲ ಎಂಬ ಅರಿವು ಬಿಜೆಪಿಗೆ ಇದ್ದಂತಿಲ್ಲ.

ಮೈಸೂರು ನಗರಪಾಲಿಕೆ, ಹಾಲಿ 89 ಚದರ ಕಿಮೀವುಳ್ಳ ಈ ನಗರವನ್ನೇ ನಿಭಾಯಿಸಲು ಹೆಣಗುತ್ತಿದೆ. ಹಾಗಿದ್ದಲ್ಲಿ ಗ್ರೇಟರ್ ಮೈಸೂರು ಜಾರಿಯಾಗಿ ಈಗಿರುವುದಕ್ಕಿಂತ ನಾಲ್ಕು ಪಟ್ಟು ದೊಡ್ಡ ನಗರವಾದರೆ ಹೇಗೆ ನಿಭಾಯಿಸುತ್ತೀರಿ?

ಇಷ್ಟೆಲ್ಲಾ ಗಂಭೀರ ಸಮಸ್ಯೆಗಳು, ಹಗರಣಗಳು, ವಿವಾದಗಳು ಕಣ್ಣಿಗೆ ರಾಚುವಂತಿದ್ದರೂ, ಬಿಜೆಪಿಗೆ ಇವ್ಯಾವುವೂ ಮುಖ್ಯ ವಿಷಯ ಎನಿಸಿಯೇ ಇಲ್ಲ.

ಸದನದಲ್ಲಿ ಇವುಗಳ ಬಗ್ಗೆ ಪ್ರಸ್ತಾಪಿಸಬೇಕು, ಚರ್ಚಿಸಬೇಕು ಎಂಬ ಆಲೋಚನೆಯೇ ಈ ಪಕ್ಷದ ಶಾಸಕರ ತಲೆಗೆ ಬಂದಂತಿಲ್ಲ!

ಆದರೆ, ಐಪಿಎಲ್ ಟಿಕೆಟ್‌ಗೆ ಆಡಳಿತ ಪಕ್ಷದವರೊಂದಿಗೆ ಸೇರಿಕೊಂಡು ಸ್ಪೀಕರ್ ಅವರಲ್ಲಿ ದುಂಬಾಲು ಬಿದ್ದು, ಪ್ರತಿ ಶಾಸಕರಿಗೆ ನಾಲ್ಕು ಟಿಕೆಟ್ ಕೊಡಿಸಿ ಎಂದು ಪಟ್ಟು ಹಿಡಿಯುವ ಮೂಲಕ ರಾಜ್ಯದ ಜನತೆಯ ಮುಂದೆ ಅಪಹಾಸ್ಯಗೀಡಾಗಿ ಕೊನೆಗೂ ಎರಡು ಟಿಕೆಟ್ ಧಕ್ಕಿಸಿ ಕೊಂಡದ್ದೆ ಇವರ ಮಹಾ ಸಾಧನೆ!

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಟುಂಬವೇ ಶಾಮೀಲಾಗಿದೆ ಎನ್ನಲಾಗಿದ್ದ ಮುಡಾ ಹಗರಣದ ಬಗ್ಗೆಯೇ ಬಿಜೆಪಿ ಅಷ್ಟೇನೂ ತಲೆಕೆಡಿಸಿಕೊಳ್ಳಲಿಲ್ಲ!

ನಂತರ ಸಾಕಷ್ಟು ಹಗರಣಗಳ ಕೇಂದ್ರ ವಾಗಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ತನ್ನನ್ನು ತಾನೇ ವಿಸರ್ಜಿಸಿಕೊಂಡು, ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಆಯಿತು!

ಬಳಿಕ, ಕೆ.ಆರ್.ಕ್ಷೇತ್ರದ ಬಿಜೆಪಿ ಶಾಸಕ ಶ್ರೀವತ್ಸ ಇದರ ಹೆಸರು ಬದಲಾಗಿದೆ ಅಷ್ಟೇ. ಆದರೆ, ಬುದ್ಧಿ ಬದಲಾಗಿಲ್ಲ. ಎಂಡಿಎ ಅಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದಿದ್ದಾರೆ. ಅವರದೇ ಶಾಸಕರು ಮುಡಾದ ವಿಚಾರದಲ್ಲಿ ಈ ಒಂದು ಗಂಭೀರ ಆರೋಪ ಮಾಡಿಯೂ ರಾಜ್ಯ ಬಿಜೆಪಿ ನಾಯಕತ್ವ ಸುಮ್ಮನಿದೆ!

ಪರಿಣಾಮಕಾರಿ ವಿರೋಧ ಪಕ್ಷ ಎಂಬುದು ಅನ್ಯಾಯದ ವಿರುದ್ಧ ನಾಗರಿಕರ ದನಿಯಾಗಬೇಕು. ತನ್ಮೂಲಕ ರಾಜ್ಯದ ಹಾಗೂ ಪ್ರಜೆಗಳ ಹಿತ ಕಾಯಬೇಕು. ಆದರೆ, ನಮ್ಮಲ್ಲಿ ಈಗಿನ ವಿರೋಧಪಕ್ಷ ನಿಷ್ಕ್ರಿಯವಾಗಿದೆ.

ಕೇಂದ್ರದಲ್ಲಿಯೂ ಯುಪಿಎ ಸರ್ಕಾರದ ಅವಧಿಯಲ್ಲಿ 10 ವರ್ಷಗಳ ಕಾಲ ವಿರೋಧ ಪಕ್ಷವಾಗಿದ್ದ ಬಿಜೆಪಿ ಏನೂ ಮಾಡಲಿಲ್ಲ. ಅದೇ ಚಾಳಿ ಈಗ ನಮ್ಮ ರಾಜ್ಯದ ಬಿಜೆಪಿಗೂ ಬಂದಂತಿದೆ.

ಯುಪಿಎ ಅಧಿಕಾರಾವಧಿಯ ಅತೀ ದೊಡ್ಡ ಹಗರಣಗಳಾದ ಜನ್‌ಲೋಕ್‌ಪಾಲ್ ಮಸೂದೆ, 2ಜಿ ಹಗರಣ, ಕಾಮನ್ ವೆಲ್ತ್ ಗೇಮ್ಸ್ ಇಲ್ಲವೇ ವಾದ್ರಾ ಭೂಕಬಳಿಕೆ ಇರಬಹುದು... ಹೀಗೆ ಎಲ್ಲವನ್ನೂ ಪತ್ರಕರ್ತರು ಬಯಲು ಮಾಡಿದರೆ ವಿನಃ ಬಿಜೆಪಿಯೇನೂ ಅಲ್ಲ.

ಯಾರೋ ಬಯಲು ಮಾಡಿದ ಹಗರಣವನ್ನು ಹಿಡಿದುಕೊಂಡು ಹಾಗೂ ಮೋದಿಯವರ ಗುಜರಾತ್ ಮಾಡೆಲ್ ಮುಂದಿಟ್ಟುಕೊಂಡು 2014ರಲ್ಲಿ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದು ಯಾರ ಅರಿವಿಗೂ ಇಲ್ಲ ಎಂದು ಬಿಜೆಪಿ ಭಾವಿಸಿದಂತಿದೆ.

ಇಂತಹ ಸಮಯದಲ್ಲಿಯೂ ರಾಜ್ಯ ಬಿಜೆಪಿ ಏನೂ ಮಾಡದೆ ನಿಷ್ಕ್ರಿಯವಾಗಿದ್ದರೆ, 2028ರ ಚುನಾವಣೆಯ ನಂತರವೂ ಅದು ವಿರೋಧ ಪಕ್ಷವಾಗಿಯೇ ಉಳಿಯುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇದೆಲ್ಲದರ ನಡುವೆ ಒಂದು ಪ್ರಶ್ನೆ ಕಾಡುತ್ತದೆ; ಈ ಮೇಲಿನ ಕಾರಣಕ್ಕಾಗಿಯೇ ಕೇಂದ್ರದಲ್ಲಿನ ಬಿಜೆಪಿ ನಾಯಕತ್ವ, ಹೆಚ್.ಡಿ. ಕುಮಾರಸ್ವಾಮಿಯವರನ್ನು ರಾಜ್ಯದಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಟಕ್ಕಿಳಿಸಿರುವುದೇ!? ಈ ಹೋರಾಟಕ್ಕೆ ರಾಜ್ಯದಲ್ಲಿ ಬಿಜೆಪಿಗೆ ಸಮರ್ಥ ನಾಯಕರೇ ಇಲ್ಲ ಎಂದು ಅವರು ಭಾವಿಸಿದಂತಿದೆ.

ಅದು ಏನೇ ಇರಲಿ, ವಿರೋಧ ಪಕ್ಷ ನಿದ್ರಾವಸ್ಥೆಗೆ ಜಾರಿದರೆ, ಪ್ರಜಾಪ್ರಭುತ್ವ ಕಪಿಮುಷ್ಠಿಗೆ ಸಿಕ್ಕಂತೆ.

ಸದ್ಯಕ್ಕಂತೂ, ಕರ್ನಾಟಕದ ದೌರ್ಭಾಗ್ಯ ಏನೆಂದರೆ ನಮ್ಮ ವಿರೋಧಪಕ್ಷ 'ಮಂಕಾಗಿದೆ...' ಏಕೆ? ಇದು ಯಕ್ಷ ಪ್ರಶ್ನೆ.

Email: vikram@starofmysore.com

ಮೈಸೂರು ಮಿತ್ರ

ಕ್ರಾಫರ್ಡ್ ಭವನದ ಬಳಿ ರೈಲ್ವೆ ಅಂಡರ್ ಪಾಸ್ ಕಾಮಗಾರಿ ಪರಿಸರ ಪೂರಕವಾಗಿರುವಂತೆ ಆಗ್ರಹ

ಮೈಸೂರು,ಏ.15(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಬಳಿ ಬೋಗಾದಿ ರಸ್ತೆಯಲ್ಲಿ ರೈಲ್ವೆ ಕ್ರಾಸಿಂಗ್‌ಗೆ ನಿರ್ಮಿಸಲು ಉದ್ದೇಶಿಸಿರುವ ಕೆಳಸೇತುವೆ(ಅಂಡರ್‌ಪಾಸ್) ಕಾಮಗಾರಿಯಿಂದಾಗಿ ಮರಗಳ ಹನನ ಹಾಗೂ ಕುಕ್ಕರಹಳ್ಳಿಕೆರೆ ಪರಿಸರಕ್ಕೆ ಹಾನಿಯಾಗದಂತೆ ಕಟ್ಟೆಚ್ಚರ ವಹಿಸಿ ವೈಜ್ಞಾನಿಕವಾಗಿ ಕಾಮಗಾರಿ ನಡೆಸುವಂತೆ ಪರಿಸರವಾದಿಗಳು ಆಗ್ರಹಿಸಿದ್ದಾರೆ.

ಸದಾ ವಾಹನ ದಟ್ಟಣೆಯಿಂದ ಕೂಡಿರುವ ಬೋಗಾದಿ ರಸ್ತೆಯಲ್ಲಿ ರೈಲ್ವೆ ಕ್ರಾಸಿಂಗ್ ಹಾದು ಹೋಗಿದ್ದು, ಹಲವು ವರ್ಷಗಳಿಂದ ಅಂಡರ್ ಪಾಸ್ ನಿರ್ಮಾಣಕ್ಕೆ ಬೇಡಿಕೆ ಕೇಳಿ ಬಂದಿತ್ತು ಈ ಹಿನ್ನೆಲೆಯಲ್ಲಿ ಕುಕ್ಕರಹಳ್ಳಿ ಕೆರೆ ಜಂಕ್ಷನ್, ಕ್ರಾಫರ್ಡ್ ಹಾಲ್ ಬಳಿ ಅಂಡರ್ ಪಾಸ್ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲಾಗಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಅಧಿಕಾರಿಗಳ ತಂಡ ಸ್ಥಳ ಪರಿಶೀಲಿಸಿದೆ.

ಈಗಾಗಲೇ ಅಂಡರ್ ಪಾಸ್ ನಿರ್ಮಾಣಕ್ಕಾಗಿ ಡಿಪಿಆರ್ ಸಿದ್ಧಪಡಿಸಲಾಗಿದ್ದು, ರೈಲ್ವೆ ಹಳಿ ಹಾದು ಹೋಗಿರುವ ರಸ್ತೆಯ ಎರಡು ಬದಿ ಸುಮಾರು 80 ಮರಗಳನ್ನು ತೆರವುಗೊಳಿಸಲು ಗುರುತಿಸಲಾಗಿದೆ. ಅದರಲ್ಲಿ ಕುಕ್ಕರಹಳ್ಳಿ ಕೆರೆ ಪಕ್ಕ ಇರುವ ದೊಡ್ಡ ಆಲದ ಮರವೂ ಸೇರಿದ್ದು, ಇದೀಗ ಕೆರೆ ಪರಿಸರಕ್ಕೆ ಹಾನಿಯಾಗದಂತೆ ಹಾಗೂ ಮರಗಳನ್ನು ತೆರವುಗೊಳಿಸದೆ ವೈಜ್ಞಾನಿಕವಾಗಿ ಡಿಪಿಆರ್ ತಯಾರಿಸಿ, ಅಂಡರ್‌ಪಾಸ್ ಕಾಮಗಾರಿ ನಡೆಸುವಂತೆ ಪರಿಸರವಾದಿಗಳು ಒತ್ತಾಯಿಸಿದ್ದಾರೆ.

ಕೆಳ ಸೇತುವೆಗೆ ಅಭ್ಯಂತರವಿಲ್ಲ: ಮೈಸೂರಿನ ಅಶೋಕಪುರಂನಲ್ಲಿರುವ ರೈಲ್ವೆ ನಿಲ್ದಾಣ ಮೇಲ್ದರ್ಜೆಗೇರಿಸಿದರೆ ಕೇಂದ್ರ ರೈಲ್ವೆ ನಿಲ್ದಾಣದಿಂದ ಅಶೋಕಪುರಂ ರೈಲು ನಿಲ್ದಾಣಕ್ಕೆ ರೈಲು ಸಂಚಾರ ಹೆಚ್ಚಾಗಲಿದೆ. ಅಲ್ಲದೆ, ಬೋಗಾದಿ ರಸ್ತೆಯಲ್ಲೂ ವಾಹನ ದಟ್ಟಣೆ ಮತ್ತಷ್ಟು ಹೆಚ್ಚಾಗುತ್ತದೆ. ಈ ಹಿನ್ನೆಲೆಯಲ್ಲಿ ರೈಲ್ವೆ ಕ್ರಾಸಿಂಗ್‌ಗೆ ಅಂಡರ್‌ಪಾಸ್ ನಿರ್ಮಾಣ ಅನಿವಾರ್ಯ. ಆದರೆ, ವೈಜ್ಞಾನಿಕವಾಗಿ ಕಾಮಗಾರಿ ನಡೆಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಇದರಿಂದ ಕುಕ್ಕರಹಳ್ಳಿ ಕೆರೆ ಪ್ರದೇಶದ ಜಲಾನಯನ ಪ್ರದೇಶ ಮತ್ತು ಕ್ರಾಫರ್ಡ್ ಹಾಲ್‌ನಂತಹ ಪಾರಂಪರಿಕ ಕಟ್ಟಡಗಳ ಪಾರಂಪರಿಕತೆಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಕುಕ್ಕರಹಳ್ಳಿ ಕೆರೆ ಉಳಿಸಿ ಸಮಿತಿ ಆಗ್ರಹಿಸಿದೆ.

ಗುದ್ದಲಿ ಪೂಜೆ ಮುಂದೂಡಬೇಕು: ಅಂಡರ್ ಪಾಸ್ ನಿರ್ಮಾಣಕ್ಕೆ ಈಗಾಗಲೇ ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ಧಪಡಿಸಲಾಗಿದೆ ಎಂಬ ಮಾಹಿತಿ ಇದೆ. ಆದರೆ, ಅದನ್ನು ಮರುಪರಿಶೀಲಿಸಬೇಕು. ಡಿಪಿಆರ್ ಅನ್ನು ಪರಿಸರ ತಜ್ಞರು, ಮೈಸೂರಿನ ಕಾಳಜಿಯುಳ್ಳ ನಾಗರಿಕರು, ಗಣ್ಯರು ಹಾಗೂ ಆಸಕ್ತ ನಾಗರಿಕರ ಸಲಹೆ ಸೂಚನೆ ಪಡೆದು ಡಿಪಿಆರ್ ಸಿದ್ದ ಮಾಡಬೇಕು. ಆ ಮೂಲಕ ಪರಿಸರದ ಮೇಲೆ ಹಾಗೂ ಪಾರಂಪರಿಕತೆಗೆ ಆಗುವ ಧಕ್ಕೆಯನ್ನು ಆದಷ್ಟು ಕಡಿಮೆ ಮಾಡಲು ಮುಂದಾಗಬೇಕು. ಆ ಕಾರಣಕ್ಕಾಗಿ ಅಂಡರ್‌ಪಾಸ್ ನಿರ್ಮಾಣಕ್ಕೆ ಉದ್ದೇಶಿಸಿರುವ ಗುದ್ದಲಿ ಪೂಜಾ ಕಾರ್ಯಕ್ರಮವನ್ನು ಮುಂದೂಡಬೇಕು. ಇದಕ್ಕೆ ಸಂಸದರು, ಈಭಾಗದ ಶಾಸಕರು ಸಹಮತ ಸೂಚಿಸಬೇಕು ಎಂದು ಪರಿಸರವಾದಿಗಳು ಮನವಿ ಮಾಡಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಪಕ್ಕ ಬೋಗಾದಿ ರಸ್ತೆಯಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್‌ಗೆ ಅಂಡರ್ ಪಾಸ್ ನಿರ್ಮಾಣ ಮಾಡಲು ಉದ್ದೇಶಿಸಿರುವ ಸ್ಥಳಕ್ಕೆ ಪರಿಸರವಾದಿಗಳ ತಂಡ ಭೇಟಿ ನೀಡಿ ಪರಿಶೀಲಿಸಿತು.



ಅಂಡರ್ ಪಾಸ್ ನಿರ್ಮಾಣಕ್ಕಾಗಿ ತೆರವುಗೊಳಿಸಲು ಮರಗಳನ್ನು ಗುರುತು ಮಾಡಿರುವುದು.

80 ಮರಗಳಿಗೆ ಗುರುತು: ಅಂಡರ್ ಪಾಸ್ ಉದ್ದ 588 ಮೀಟರ್ ಇರಲಿದ್ದು, ಅದಕ್ಕಾಗಿ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಲೆವೆಲ್ ಕ್ರಾಸಿಂಗ್‌ನ ಎರಡೂ ಬದಿಯಲ್ಲೂ 80 ಮರಗಳ ತೆರವಿಗೆ ಗುರುತಿಸಲಾಗಿದೆ. ಅಲ್ಲದೆ, ಅಂಡರ್ ಪಾಸ್‌ಗಾಗಿ ರಸ್ತೆಯನ್ನು ಎಷ್ಟು ಅಡಿ ಆಳ ಅಗೆಯಬೇಕೆಂದು ಗುರುತಿಸಿ ಪಾಯಿಂಟ್ ಮಾಡಲಾಗಿದೆ. ತಜ್ಞರ ಸಲಹೆ, ಅಭಿಪ್ರಾಯ ಪಡೆಯದೆ ಕಾಮಗಾರಿ ಆರಂಭಿಸದಂತೆ ಒತ್ತಾಯಿಸಿದ್ದಾರೆ.

ಮರಗಳ ಸ್ಥಳಾಂತರ ಸಾಧ್ಯವೇ?: ಕುಕ್ಕರಹಳ್ಳಿ ಕೆರೆ ಬಳಿ ರಸ್ತೆ ಬದಿಯಲ್ಲಿರುವ ಬೃಹತ್ ಆಲದ ಮರ ಸ್ಥಳಾಂತರಿಸುವುದಾಗಿ ಹೇಳಲಾಗಿದೆ. ಆದರೆ, ಸ್ಥಳಾಂತರ ಸಾಧ್ಯವೇ ಎಂದು ಪರಿಶೀಲಿಸಬೇಕು. ಅಲ್ಲದೆ, ಬೋಗಾದಿ ರಸ್ತೆಯಲ್ಲಿ ತೆರವು ಮಾಡಲು ಗುರುತಿಸಿರುವ ಬೇವು ಹಾಗೂ ಇನ್ನಿತರ ತಳಿಯ ಮರಗಳನ್ನು ಸ್ಥಳಾಂತರಿಸಿದರೂ, ಅವುಗಳು ಚಿಗುರೊಡೆಯುವುದಿಲ್ಲ. ಈ ನಿಟ್ಟಿನಲ್ಲಿ ಮರಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಸಲಹೆ ನೀಡಿದ್ದಾರೆ.

ತೆರವಿನ ಉದ್ದೇಶ: ಅಂಡರ್‌ಪಾಸ್ ನಿರ್ಮಾಣಕ್ಕಾಗಿ ತೆರವು ಮಾಡಿರುವ 80 ಮರಗಳನ್ನು ಎರಡು ಹಂತದಲ್ಲಿ ತೆರವುಗೊಳಿಸಲು ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಅರಣ್ಯ ಇಲಾಖೆ ಸಾರ್ವಜನಿಕರಿಂದ ಅಹವಾಲು ಸಭೆ ನಡೆಸಿ, ಮರಗಳ ತೆರವಿಗೆ ವ್ಯಕ್ತವಾಗುವ ಅಭಿಪ್ರಾಯಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳಲಿದೆ. ಮೂಲಗಳ ಪ್ರಕಾರ ಮೊದಲ ಹಂತದಲ್ಲಿ 33 ಮರ ತೆರವು ಮಾಡಿ, ಅಂಡರ್‌ಪಾಸ್ ಕಾಮಗಾರಿ ಆರಂಭಿಸಲಾಗುತ್ತದೆ. ಕಾಮಗಾರಿ ನಡೆಯುತ್ತಿದ್ದಾಗಲೆ ಎರಡನೇ ಹಂತದಲ್ಲಿ ಉಳಿದ 47 ಮರಗಳನ್ನು ತೆರವುಗೊಳಿಸುವ ಆಲೋಚನೆ ಅಧಿಕಾರಿಗಳಲ್ಲಿದೆ ಎಂದು ಸಾರ್ವಜನಿಕರು ತಿಳಿಸಿದ್ದಾರೆ.

ಸ್ಥಳ ಪರಿಶೀಲನೆ: ಅಂಡರ್‌ಪಾಸ್ ಕಾಮಗಾರಿ ನಡೆಸುವ ಸ್ಥಳಕ್ಕೆ ಕುಕ್ಕರಹಳ್ಳಿ ಕೆರೆ ಉಳಿಸಿ ಸಮಿತಿ ಪದಾಧಿಕಾರಿಗಳಾದ ಮೇ. ಜನರಲ್ ಸುಧೀರ್ ಒಂಬತ್ಕೆರೆ, ಪ್ರೊ ಎನ್.ಎಸ್.ರಂಗರಾಜು, ಪ್ರೊ.ಯು. ಎನ್.ರವಿಕುಮಾರ್, ಪರಿಸರಕ್ಕಾಗಿ ನಾವು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮಗೌಡ, ಶೈಲಜೇಶ್ ಸೇರಿದಂತೆ ಇನ್ನಿತರರ ತಂಡ ಅಂಡರ್‌ಪಾಸ್ ನಿರ್ಮಾಣದ ಕಾಮಗಾರಿ ನಡೆಸುವ ಸ್ಥಳ, ತೆರವು ಮಾಡಲು ಗುರುತು ಮಾಡಿರುವ ಮರಗಳನ್ನು ಪರಿಶೀಲಿಸಿತು.

ಅಭಿನಂದನೆ...



ಪಡುವಾರಹಳ್ಳಿಯಲ್ಲಿ ನಡೆದ ಅಂಬೇಡ್ಕರ್ ಜಯಂತಿ ಅಂಗವಾಗಿ ಅಂಬೇಡ್ಕರ್ ಫೋಟೋಗೆ ಶಾಸಕ ಕೆ.ಹರೀಶ್‌ಗೌಡ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಶಾಸಕರನ್ನು ಅಭಿನಂದಿಸಲಾಯಿತು. ಯುವ ಮುಖಂಡರಾದ ನಿತಿನ್ ಪುಟ್ಟಸ್ವಾಮಿ, ಕೌಶಿಕ್, ನಿಖಿಲ್, ವಿನೋದ್, ಕಿರಣ್, ಅನಿಲ್, ಅರ್ಜುನ್, ಲಿಖಿತ್ ಇತರರಿದ್ದರು.

ಓವೆಲ್ ಮೈದಾನದಲ್ಲಿ ಕ್ರೀಡಾ ಸಂಭ್ರಮ

ಕ್ರೀಡಾಪಟುಗಳಿಗೆ ಪದಕ ಪ್ರದಾನ ಮಾಡಿದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್



ಕ್ರೀಡಾ ಸಾಧಕ ಮಕ್ಕಳಿಗೆ ಎಚ್.ಎನ್.ವೆಂಕಟೇಶ್ ಪದಕ ಪ್ರದಾನ ಮಾಡಿದರು.

ಮೈಸೂರು,ಏ.15(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿರುವ 31ನೇ ವರ್ಷದ ಬೇಸಿಗೆ ಶಿಬಿರದ ಪ್ರಯುಕ್ತ ಕ್ರೀಡಾಪಟುಗಳಿಗೆ ಪದಕ ವಿತರಣಾ ಸಮಾರಂಭ ನಡೆಯಿತು.

ಶಿಬಿರವು ಇಂದು ಯಶಸ್ವಿ 12ನೇ ದಿನಕ್ಕೆ ಕಾಲಿಟ್ಟಿದ್ದು, ಓವೆಲ್ ಮೈದಾನದಲ್ಲಿ ನಡೆದ ಪದಕ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮೈಸೂರಿನ ಹಿರಿಯ ವಕೀಲರೂ ಆದ 'ಲಾ ಗೈಡ್' ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಎಚ್.ಎನ್.ವೆಂಕಟೇಶ್ ಪಾಲ್ಗೊಂಡಿದ್ದರು.

ಕ್ರೀಡಾ ಸಾಧಕ ಮಕ್ಕಳಿಗೆ ಪದಕ ಪ್ರದಾನ ಮಾಡುವ ಮೂಲಕ ಅವರು ಹುರಿದುಂಬಿಸಿದರು. ಯುವಜನತೆಯಲ್ಲಿ ಕ್ರೀಡಾ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಈ ಪ್ರಯತ್ನವನ್ನು ಶ್ಲಾಘಿಸಿದರು. ನೂರಾರು ಕ್ರೀಡಾಪಟುಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಲಕ್ನೋ ಮಣಿಸಿ ಅಗ್ರಸ್ಥಾನಕ್ಕೇರಿದ ಆರ್‌ಸಿಬಿ

ಬೆಂಗಳೂರು, ಏ.15– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಾಂಘಿಕ ಪ್ರದರ್ಶನ ನೀಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ 5 ಪಂದ್ಯಗಳಲ್ಲಿ 1 ಸೋಲು, 4 ಗೆಲುವಿನೊಂದಿಗೆ 8 ಅಂಕ ಗಳಿಸಿ ಅಗ್ರಸ್ಥಾನಕ್ಕೇರಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 146 ರನ್‌ಗಳಿಗೆ ಆಲೌಟಾಯಿತು. ಬಳಿಕ ಗುರಿ ಬೆನ್ನತ್ತಿದ ಆರ್‌ಸಿಬಿ 15.1 ಓವರ್‌ಗಳಲ್ಲಿ ಇನ್ನೂ 29 ಎಸೆತಗಳು ಬಾಕಿ ಇರುವಾಗಲೇ 5 ವಿಕೆಟ್ ನಷ್ಟಕ್ಕೆ 149ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಲಕ್ನೋ ಪರ ಮಿಚೆಲ್ ಮಾರ್ಷ್ 40, ಆಯುಷ್ ಬದೋನಿ 38, ಮುಕುಲ್ ಚೌಧರಿ 39, ಐಡನ್ ಮಾಕ್ರಂ 12 ರನ್ ಗಳಿಸಿದರು. ಆರ್‌ಸಿಬಿ ಪರ ರಸಿಕ್ ಸಲಂದಾರ್ 4, ಭುವನೇಶ್ವರ್ ಕುಮಾರ್ 3, ಕೃನಾಲ್ ಪಾಂಡ್ಯ 2, ಜೋಶ್ ಹ್ಯಾಜಲ್‌ವುಡ್ 1 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಆರ್‌ಸಿಬಿ ಪರ ವಿರಾಟ್ ಕೊಹ್ಲಿ 49, ದೇವದತ್ ಪಡಿಕ್ಕಲ್ 10, ನಾಯಕ ರಜತ್ ಪಾಟಿದಾರ್ 27, ಜಿತೇಶ್ ಶರ್ಮಾ 23, ಟೀಮ್ ಡೇವಿಡ್ ಹಾಗೂ ರೊಮಾರಿಯೊ ಶೇಫರ್ಡ್ ತಲಾ 14 ರನ್ ಗಳಿಸಿದರು. ಲಕ್ನೋ ಪರ ಪ್ರಿನ್ಸ್ ಯಾದವ್ 3, ಆವೇಶ್ ಖಾನ್ 2 ವಿಕೆಟ್ ಉರುಳಿಸಿದರು.

ಕುಡಿಯುವ ನೀರಿಗೆ ಅಭಾವ ಉಂಟಾಗದಂತೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಎಂಎಲ್‌ಸಿ ಯತೀಂದ್ರ ತಾಕೀತು

ಮೈಸೂರು, ಏ.15(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಅಭಾವ ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಿ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಎದುರಾಗಬಹುದು. ಆದರೆ ಅಧಿಕಾರಿಗಳು ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಈ ಸಮಸ್ಯೆ ತಲೆ ದೋರದಂತೆ ಜಾಗ್ರತೆ ವಹಿಸಬೇಕು ಎಂದು ಸಲಹೆ ನೀಡಿದರು.



ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಗ್ರಾಮಗಳನ್ನು ಈಗಾಗಲೇ ಗುರುತು ಮಾಡಿದ್ದೀರಾ. ಈ ಗ್ರಾಮಗಳಿಗೆ ನಿಗದಿತವಾಗಿ ಭೇಟಿ ನೀಡಿ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ವಹಿಸಿ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸಿ. ಖಾಸಗಿ ಬೋರ್‌ವೆಲ್ ಹಾಗೂ ಟ್ಯಾಂಕರ್‌ಗಳನ್ನು ಬಳಸಿಕೊಂಡು ಸಮಸ್ಯೆ ಪರಿಹಾರ ಮಾಡಿ ಎಂದು ಸೂಚಿಸಿದರು.

ಕುಡಿಯುವ ನೀರಿನ ಯೋಜನೆಗಳಿಗೆ ಅನುದಾನದ ಕೊರತೆ ಎದುರಾದರೆ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ಈ ಮೂಲಕ ಅಗತ್ಯ ಅನುದಾನ ಪಡೆದು ಸಮರ್ಪಕ ಕುಡಿಯುವ ನೀರಿನ ಪೂರೈಕೆ ಮಾಡಬೇಕು ಎಂದು ಯತೀಂದ್ರ ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದರು.

ಆಟೋ ಚಾಲಕರ ನೆರವಿಗೆ ಆಗ್ರಹ

ಮೈಸೂರು, ಏ.15(ಬಿಎಲ್‌ಯು)– ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಎಲ್‌ಪಿಜಿ ಸಮಸ್ಯೆ ಜಟಿಲವಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಂಕಷ್ಟದಲ್ಲಿರುವ ಆಟೋ ಚಾಲಕರ ನೆರವಿಗೆ ಬರಬೇಕು ಎಂದು ಪ್ರಬುದ್ಧ ಭಾರತ ಭೀಮ್ ಸೇನೆ ಅಧ್ಯಕ್ಷ ಸಿದ್ದರಾಜು ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್‌ಪಿಜಿ ಸಮಸ್ಯೆ ಕಾರಣ ಆಟೋಗಳನ್ನು ರಸ್ತೆಗಿಳಿಸಲು ಸಾಧ್ಯವಾಗಿಲ್ಲ. ಇದರಿಂದ ಕುಟುಂಬ ನಿರ್ವಹಣೆ, ಫೈನಾನ್ಸ್‌ಗಳಿಗೆ ಸಾಲ ಮರು ಪಾವತಿ ಸಮಸ್ಯೆ ತಲೆದೋರಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಪ್ರತಿ ಆಟೋ ಚಾಲಕರಿಗೆ ಸರ್ಕಾರ ಹತ್ತು ಸಾವಿರ ರೂಪಾಯಿ ಹಾಗೂ ಪಡಿತರ ಕಿಟ್ ನೀಡಬೇಕೆಂದು ಆಗ್ರಹಿಸಿದರು.

ಮೋದಿ ಅವರ ಬಲಿಷ್ಠ ನಾಯಕತ್ವ, ಸಮರ್ಪಣಾ ಮನೋಭಾವ ಎಲ್ಲರ ಹೃದಯದಲ್ಲಿ ಬೇರೂರಿದೆ

ಪ್ರಧಾನಿ ಮೋದಿ ಸೇವೆಯನ್ನು ಕೊಂಡಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ



ಕಾರ್ಯಕ್ರಮದಲ್ಲಿ ಸೌಂದರ್ಯ ಲಹರಿ ಮತ್ತು ಶಿವಮಹಿಮೆ ಸ್ತೋತ್ರಮ್ ಪುಸ್ತಕ ಬಿಡುಗಡೆ ಮಾಡಲಾಯಿತು.

ಆದಿಚುಂಚನಗಿರಿ, ಏ.15 (ಮೋಹನ್ ರಾಜ್)– ಪ್ರಧಾನಿ ನರೇಂದ್ರ ಮೋದಿ ಅವರ ಸದೃಢ ನಾಯಕತ್ವ ಹಾಗೂ ರಾಷ್ಟ್ರ ನಿರ್ಮಾಣದಲ್ಲಿನ ಅವರ ಸಮರ್ಪಣ ಭಾವವು ಸಮಸ್ತ ಭಾರತೀಯರ ಹೃದಯಾಂತರಾಳದಲ್ಲಿ ಆಳವಾಗಿ ನೆಲೆಸಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಪಾದಿಸಿದರು.

ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಶ್ರೀಮಠದ 71ನೇ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಶ್ರೀಗುರು ಭೈರವೈಕ್ಯ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಾರ್ಪಣೆ ಮಾಡಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವವು ಜಾಗತಿಕ ನಾಯಕತ್ವ ಆಗಿದ್ದು, ಅವರ ನೇತೃತ್ವದಲ್ಲಿ ಭಾರತ ಪರಿವರ್ತನಾತ್ಮಕ ಅಭಿವೃದ್ಧಿ ಕಾಣುತ್ತಿದೆ. ಬದಲಿಗೆ ಲಕ್ಷಾಂತರ ಭಾರತೀಯರ ಹೃದಯದಲ್ಲಿ ಅವರ ನಾಯಕತ್ವದ ಶ್ರೇಷ್ಠತೆಯು ಆಳವಾಗಿ ಬೇರೂರಿದೆ. ಪ್ರಧಾನಿಗಳ ದಣಿವರಿಯದ ಸಮರ್ಪಣೆ ಮತ್ತು ಆಡಳಿತದಲ್ಲಿ ಭಾರತೀಯರು ಶಕ್ತಿ, ಸಾಮರ್ಥ್ಯವನ್ನು ವೃದ್ಧಿಸಿಕೊಂಡು, ಎಲ್ಲಾ ಆಯಾಮಗಳಲ್ಲಿಯೂ ಭಾರತವು ಸರ್ವಶಕ್ತ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದ ಸಚಿವರು, ಶ್ರೀಮಠಕ್ಕೆ ಭೇಟಿ ನೀಡಿ ಹಿರಿಯ ಗುರುಗಳಿಗೆ ಪ್ರಧಾನಿಗಳು ಗೌರವ ಸಲ್ಲಿಸುತ್ತಿರುವುದು ನನಗೆ ಅತೀವ ಸಂತೋಷ ಉಂಟು ಮಾಡಿದೆ ಎಂದರು.

ಕರ್ನಾಟಕದ ಅಧ್ಯಾತ್ಮ ಮತ್ತು ತ್ರಿವಿಧ ದಾಸೋಹದ ಇತಿಹಾಸದಲ್ಲಿ ಪರಮ ಪೂಜ್ಯ ಜಗದ್ಗುರುಗಳಾದ ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರು ಅಜರಾಮರ ಧ್ರುವತಾರೆ ಆಗಿದ್ದಾರೆ ಎಂದು ನಾನು ಭಕ್ತಿಪೂರ್ವಕವಾಗಿ ಹೇಳಬಯಸುತ್ತೇನೆ. ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅಸಂಖ್ಯಾತ ಬಡಮಕ್ಕಳ ಪಾಲಿಗೆ ಜ್ಞಾನದ ಬೆಳಕಾಗಿ, ಅಸಂಖ್ಯಾತ ಬಡ ಕುಟುಂಬಗಳ ಪ್ರತ್ಯಕ್ಷ ದೈವವಾಗಿ ಮಹಾಸ್ವಾಮೀಜಿ ಅವರು ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಹಿರಿಯ ಶ್ರೀಗಳನ್ನು ಸ್ಮರಿಸಿದರು.

ಅಧ್ಯಾತ್ಮದ ಜೊತೆಗೆ ಶಿಕ್ಷಣ, ಆರೋಗ್ಯ, ಪರಿಸರ ಇತ್ಯಾದಿ ಕ್ಷೇತ್ರಗಳಲ್ಲಿ ತಮ್ಮ ಜೀವಿತ ಕಾಲದ ಉದ್ದಕ್ಕೂ ಅವಿರತವಾಗಿ ದುಡಿದ ಮಹಾಸ್ವಾಮಿಗಳು, ತಮ್ಮ ಸಾಧನೆ ಮತ್ತು ಸಂದೇಶಗಳ ಮೂಲಕ ನಮ್ಮೆಲ್ಲರಿಗೂ ದಾರಿದೀಪವಾಗಿದ್ದಾರೆ. ಸಣ್ಣ ಮಠವಾಗಿದ್ದ ಶ್ರೀ ಆದಿಚುಂಚನಗಿರಿ ಕ್ಷೇತ್ರವನ್ನು ಜಾಗತಿಕ ಶ್ರದ್ಧಾಕೇಂದ್ರವನ್ನಾಗಿ ಬೆಳೆಸಿ ಮಹಾವೃಕ್ಷವನ್ನಾಗಿ ರೂಪಿಸಿದ 71ನೇ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಭೈರವೈಕ್ಯ ಮಂದಿರವನ್ನು ಲೋಕಾರ್ಪಣೆ ಮಾಡುವ ಈ ಪರಮ ಪುಣ್ಯ ಕಾರ್ಯಕ್ರಮಕ್ಕೆ ಆಗಮಿಸಿರುವ ಪ್ರಧಾನಮಂತ್ರಿಗಳು ಹಾಗೂ ಜಗತ್ತಿನ ಶ್ರೇಷ್ಠ ನಾಯಕರಾದ ನರೇಂದ್ರ ಮೋದಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕರ್ನಾಟಕದಲ್ಲಿ ಶಿಕ್ಷಣ, ಪರಿಸರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮೌನ ಕ್ರಾಂತಿಯನ್ನೇ ಮಾಡಿದವರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು, ಜೋಳಿಗೆ ಹಿಡಿದು ಹಳ್ಳಿಹಳ್ಳಿಯನ್ನು ಸುತ್ತಿದ್ದ ರೈತಾಪಿ ಮಕ್ಕಳ ಜ್ಞಾನಾರ್ಜನೆಗೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ನಗರಗಳಿಗೆ ಮಾತ್ರ ಸೀಮಿತವಾಗಿದ್ದ ಗುಣಮಟ್ಟದ ಆರೋಗ್ಯ ಸೇವೆಯನ್ನು ಹಳ್ಳಿಗಳಿಗೂ, ಅದರಲ್ಲಿ ಬಡರೈತರ ಮನೆ ಬಾಗಿಲಿಗೆ ವಿಸ್ತರಿಸಿದ ಖ್ಯಾತಿ ಪರಮ ಪೂಜ್ಯರದ್ದು ಎಂದು ನಾನು ಪ್ರಧಾನಿಗಳ ಗಮನಕ್ಕೆ ತರ ಬಯಸುತ್ತೇನೆ ಎಂದು ಬಣ್ಣಿಸಿದರು.

ಪರಿಸರ ಕ್ಷೇತ್ರದಲ್ಲಿ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರದು ಅನನ್ಯ ಕೊಡುಗೆ. ಸುಮಾರು ಐದು ಕೋಟಿ ಸಸಿ ಗಳನ್ನು ಬೆಳೆಸಿದ ಮಹಾನ್ ತಪಸ್ವಿ ಅವರು. ಅವರು ನೆಟ್ಟ ಸಣ್ಣಸಣ್ಣ ಸಸಿಗಳು ಇಂದು ಮಹಾವೃಕ್ಷಗಳಾಗಿ ಬೆಳೆದಿವೆ. ಶ್ರೀ ಆದಿ ಚುಂಚನಗಿರಿ ಕ್ಷೇತ್ರ ಬಹುವಿಧದ ದಾಸೋಹಗಳಲ್ಲಿ ದೊಡ್ಡ ಹೆಸರು. ಕಷ್ಟ ಎಂದು ಬರುವ ದೀನರಿಗೆ ಕಲ್ಪವೃಕ್ಷವಾಗಿದೆ. ಜ್ಞಾನ ಎಂದು ಬರುವವರಿಗೆ ಕಾಮಧೇನು. ಸನಾತನ ಪರಂಪರೆ ಮತ್ತು ಆಧುನಿಕತೆಯ ಮಹಾಸಂಗಮವಾಗಿ, ಮೇರು ಮಹಾ ಪುಣ್ಯಕ್ಷೇತ್ರವಾಗಿ ಇಂದು ನಮಗೆಲ್ಲರಿಗೂ ದಾರಿದೀಪವಾಗಿದೆ ಎಂದು ನುಡಿದರು.

ಶ್ರೀಮಠದ ಪೀಠಾಧಿಪತಿ ನಿರ್ಮಲಾನಂದನಾಥಶ್ರೀ ಮಾತನಾಡಿ, 1800 ವರ್ಷಗಳ ಇತಿಹಾಸವುಳ್ಳ ಶ್ರದ್ಧಾಕೇಂದ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಬಾಲಗಂಗಾಧರ ಶ್ರೀಗಳ, ಭೈರವೈಕ್ಯ ಮಂದಿರ ಉದ್ಘಾಟನೆಯನ್ನು ಮೋದಿ ಮಾಡಿರುವುದು ಖುಷಿ ತಂದಿದೆ. ಮೋದಿ ಅವರ ಉಪಸ್ಥಿತಿಯಿಂದ ಕೋಟ್ಯಾಂತರ ಭಕ್ತರ ಅಪೇಕ್ಷೆ ನೆರ ವೇರಿದೆ. ಇಂತಹ ದಿವ್ಯ ಪರಂಪರೆಯ ಕಾರ್ಯಕ್ರಮಕ್ಕೆ ಮೋದಿ ಅವರು ಬಂದಿರುವುದು ತುಂಬಾ ಸಂತಸ ತಂದಿದೆ ಎಂದರು.

ಸಮಾಜಕ್ಕೆ ಬಾಲಗಂಗಾಧರನಾಥ ಶ್ರೀಗಳ ಕೊಡುಗೆ ಅಪಾರವಾಗಿದೆ. ಗುರೂಜಿ ದೇಹ ಬಿಟ್ಟ ಮೇಲೆ ನಿಮ್ಮಂತಹ ಭಕ್ತರ ಮನಸ್ಸಿನ ಮೂಲಕ ಕೆಲಸಗಳನ್ನು ಮಾಡುತ್ತಿದ್ದಾರೆ. 1.20ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ವಿದ್ಯೆ, ಆರೋಗ್ಯ ಆಶ್ರಯ ನೀಡಿ ಬೆಳೆಸಿದ್ದಾರೆ ಎಂದರು.

ಸಿಎನ್‌ಸಿಯಿಂದ ಕೊಡವರ ಹೊಸ ವರ್ಷದ ಎಡ್ಮ್ಯಾರ್ ಆಚರಣೆ



ಮಡಿಕೇರಿ,ಏ.15– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವರ ಹೊಸ ವರ್ಷದ ದಿನ ಎಡ್ಮ್ಯಾರ್ 1 ಅನ್ನು ಸಂಭ್ರಮದಿಂದ ಆಚರಿಸಿತು.

ದಿನದ ಅಂಗವಾಗಿ ಬೆಟ್ಟತ್ತೂರಿನಲ್ಲಿರುವ ಕುಪದೀರ ಎನ್.ಮೋಹನ್ ಅವರ ಭತ್ತದ ಗದ್ದೆಯಲ್ಲಿ ಭೂಮಿ ತಾಯಿಗೆ ಧಾರ್ಮಿಕ ಪೂಜೆಯನ್ನು ಸಲ್ಲಿಸಲಾಯಿತು. ಕೆಂಪಯ್ಯ ಹಾಗೂ ಕರಿಯ ಎಂಬ ಹೆಸರಿನ ಜೋಡೆತ್ತುಗಳ ಸಹಾಯದಿಂದ ಸಿ.ಎನ್.ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಭತ್ತದ ಗದ್ದೆಯಲ್ಲಿ ಸಾಂಪ್ರದಾಯಿಕ ಉಳುಮೆ, ನೇಗಿಲು ಹೊಡೆಯುವ ವಿಧಿಯನ್ನು ನೆರವೇರಿಸಿದರು. ಭೂತಾಯಿಗೆ ನಮಸ್ಕರಿಸುವ ಮೂಲಕ ಗೌರವ ಸಲ್ಲಿಸಿದರು. ಈ ಧಾರ್ಮಿಕ ಆಚರಣೆಗಳು ಕೊಡವ ಬುಡಕಟ್ಟು ಜನಾಂಗಕ್ಕೆ ಮಣ್ಣಿನೊಂದಿಗಿರುವ ಅವಿನಾಭಾವ ಸಂಬಂಧವನ್ನು ಸಾಕ್ಷೀಕರಿಸುತ್ತದೆ ಎಂದು ಎನ್.ಯು.ನಾಚಪ್ಪ ತಿಳಿಸಿದರು.

ಕೊಡವ ಜನಾಂಗೀಯ ಸಮುದಾಯ ಸೌರ ಕ್ಯಾಲೆಂಡರ್ ಅನ್ನು ಅನುಸರಿಸುತ್ತದೆ. ಸಿ.ಎನ್.ಸಿ ಪ್ರಾರಂಭವಾದ ದಿನದಿಂದ, ಕೊಡವರ ಅಸ್ತಿತ್ವದ ಬಗ್ಗೆ ವಿಶ್ವಕ್ಕೆ ಅರಿವು ಮೂಡಿಸಲು ಮತ್ತು ಕೊಡವ ಜನಾಂಗದ ವಿಶಿಷ್ಟ ಸಂಸ್ಕೃತಿಯನ್ನು ವಿಶ್ವ ಸಮುದಾಯಕ್ಕೆ ಪ್ರದರ್ಶಿಸಲು, ಆ ಮೂಲಕ ವಿಶ್ವಸಂಸ್ಥೆಯ ಮನ್ನಣೆ ಪಡೆಯಲು ಹಾಗೂ ಸಾಂವಿಧಾನಿಕ ಭರವಸೆಯ ಮೂಲಕ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಮತ್ತು ಸಂರಕ್ಷಿಸಲು ಕೊಡವ ಹೊಸ ವರ್ಷದ ದಿನ–ಎಡ್ಮ್ಯಾರ್ 1 ಸೇರಿದಂತೆ ಎಲ್ಲಾ ಕೊಡವ ಜಾನಪದ ಸಾಂಪ್ರದಾಯಿಕ ಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸುತ್ತಾ ಬಂದಿದ್ದೇವೆ ಎಂದು ಎನ್.ಯು.ನಾಚಪ್ಪ ವಿವರಿಸಿದರು.

ಇದೇ ವೇಳೆ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಹಕ್ಕೊತ್ತಾಯಗಳನ್ನು ಮಂಡಿಸಿದರು. ಲೆಫ್ಟಿನೆಂಟ್ ಕರ್ನಲ್ ಬಿ.ಎಂ. ಪಾರ್ವತಿ, ಕೂಪದಿರ ಒಕ್ಕದ ಅಧ್ಯಕ್ಷ ಕೂಪದಿರ ಪುಷ್ಪ ಮುತ್ತಪ್ಪ, ಕೂಪದಿರ ಗಂಗವ್ವ, ಕೂಪದಿರ ಕಾವೇರಮ್ಮ, ನಯನ ಯಶ್ವಂತ್, ಬಾಚರಣಿಯಂಡ ಹ್ಯಾರಿ ತಮ್ಮಯ್ಯ, ಕೂಪದಿರ ಮೋಹನ್, ಮಂದಪಂಡ ಮನೋಜ್ ಮಂದಣ್ಣ, ಕೂಪದಿರ ಸಾಬು, ಕೂಪದಿರ ರೋಷನ್, ಕೂಪದಿರ ಪ್ರಿಥಮ್, ಮಲ್ಲಾಜಿರ ಜನಮ್ ಬೋಪಣ್ಣ, ಮಲ್ಲಾಜಿರ ಆಯುಷ್ ಅಯ್ಯಣ್ಣ, ಯಶ್ವಂತ್ ಕುಮಾರ್ ಮತ್ತಿತರರು ಎಡ್ಮ್ಯಾರ್ 1 ಆಚರಣೆಗೆ ಸಾಕ್ಷಿಯಾದರು.

ಸೀರೆ ಜೋಕಾಲಿಗೆ ಸಿಲುಕಿ ಬಾಲಕ ಸಾವು

ಶ್ರೀರಂಗಪಟ್ಟಣ, ಏ.15– ಮನೆಯಲ್ಲಿ



ಕಟ್ಟಿದ್ದ ಸೀರೆ ಜೋಕಾಲಿಗೆ ಸಿಲುಕಿ ಬಾಲಕ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಾರೇಕುರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ವಿಜಯ್ ಕುಮಾರ್ ಎಂಬುವರ ಪುತ್ರ ಭೂಮಿತ್(7) ಮೃತಪಟ್ಟ ಬಾಲಕ.

ವಿವರ: ವಿಜಯ್ ಕುಮಾರ್ ದಂಪತಿ ತಮ್ಮ 2ನೇ ಮಗುವಿಗೆ ಅನಾರೋಗ್ಯವಿದ್ದ ಕಾರಣ ಭೂಮಿತ್‌ನನ್ನು ಮನೆ ಮುಂದೆ ಆಟವಾಡಿಕೊಂಡು ಇರುವಂತೆ ತಿಳಿಸಿ ಆಸ್ಪತ್ರೆಗೆ ತೆರಳಿದ್ದರು. ಆದರೆ ಪೋಷಕರು ಆಸ್ಪತ್ರೆಯಿಂದ ಮನೆಗೆ ವಾಪಸ್ ಬಂದಾಗ ಬಾಗಿಲು ಒಳಗಿನಿಂದ ಹಾಕಲ್ಪಟ್ಟಿತ್ತು. ಎಷ್ಟೇ ಕೂಗಿದರೂ ಬಾಗಿಲು ತೆಗೆಯದಿದ್ದಾಗ ಅನುಮಾನಗೊಂಡ ಪೋಷಕರು ಅಕ್ಕಪಕ್ಕದವರ ನೆರವಿನೊಂದಿಗೆ ಬಾಗಿಲು ಮುರಿದು ಒಳಗೆ ಪ್ರವೇಶಿಸಿದರು. ಈ ವೇಳೆ ಮನೆಯಲ್ಲಿ ಕಟ್ಟಿದ್ದ ಸೀರೆ ಜೋಕಾಲಿಯಲ್ಲಿ ಭೂಮಿತ್ ಸಿಲುಕಿ ನೇತಾಡುತ್ತಿರುವುದು ಕಂಡುಬಂದಿದೆ. ತಕ್ಷಣ ಬಾಲಕನನ್ನು ಕೆಳಗಿಳಿಸಿ, ಆತ ಬದುಕಿರಬಹುದೆಂಬ ಆಸೆಯಿಂದ ಪೋಷಕರು ಮತ್ತು ಗ್ರಾಮಸ್ಥರು ಮೈಸೂರು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಪರೀಕ್ಷಿಸಿದ ವೈದ್ಯರು ಬಾಲಕ ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ.

ಬಳಿಕ ಬಾಲಕನ ಶವವನ್ನು ಶ್ರೀರಂಗಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಬಹುಜನ ಸಮಾಜ ಪಕ್ಷದಿಂದ ಮಾತ್ರ ಅಧಿಕಾರ ಸಿಗಲು ಸಾಧ್ಯ



ಅಂಬೇಡ್ಕರ್ ಜಯಂತಿ ಮತ್ತು ಬಿಎಸ್‌ಪಿ ಸಂಸ್ಥಾಪನಾ ದಿನಾಚರಣೆಯನ್ನು ಬಹುಜನ ಸಮಾಜ ಪಕ್ಷದಿಂದ ಆಚರಿಸಲಾಯಿತು.

ಚಾಮರಾಜನಗರ: ಬಹುಜನ ಸಮಾಜ ಪಕ್ಷದಿಂದ ಮಾತ್ರ ಈ ಸಮುದಾಯಗಳು ಅಧಿಕಾರಕ್ಕೇರಲು ಸಾಧ್ಯ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಸಂತೇಮರಹಳ್ಳಿ ಹೋಬಳಿ ಕೇಂದ್ರದಲ್ಲಿರುವ ಬಯಲು ರಂಗಮಂದಿರದಲ್ಲಿ ಬಹುಜನ ಸಮಾಜ ಪಕ್ಷದ ಮೈಸೂರು ವಲಯ ಹಾಗೂ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಿಂದ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಹಾಗೂ ಬಹುಜನ ಸಮಾಜ ಪಕ್ಷದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತರ ಪ್ರದೇಶದಲ್ಲಿ ಬಹುಜನ ಸಮಾಜ ಪಕ್ಷ ಕಟ್ಟಿದ 10 ವರ್ಷದಲ್ಲಿ ಆಡಳಿತಕ್ಕೆ ಬಂದ ದಲಿತ ನಾಯಕಿ ಮಾಯಾವತಿ ಮುಖ್ಯಮಂತ್ರಿಯಾದರು. ಆದರೆ ಕರ್ನಾಟಕದಲ್ಲಿ ನೂರು ವರ್ಷ ಇತಿಹಾಸವಿರುವ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷ ಒಬ್ಬ ದಲಿತ ಮುಖ್ಯಮಂತ್ರಿ ಮಾಡಲು ಸಾಧ್ಯವಾಗಿಲ್ಲ. ಯಾವುದೇ ಕಾರಣಕ್ಕೂ ಕಾಂಗ್ರೆಸ್, ಬಿಜೆಪಿ ಹಾಗೂ ಜನತಾದಳ ಪಕ್ಷಗಳು ದಲಿತ ಹಿಂದುಳಿದ ವ್ಯಕ್ತಿಗಳಿಗೆ ಅಧಿಕಾರದ ಅವಕಾಶ ನೀಡುವುದಿಲ್ಲ ಎಂದು ದೂರಿದರು.

ಕಾಂಗ್ರೆಸ್, ಬಿಜೆಪಿ ಹಾಗೂ ಜನತಾದಳದಂತಹ ಮನುವಾದಿ ಪಕ್ಷಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಮಾಡುತ್ತಿಲ್ಲ. ಈ ಸಮುದಾಯಗಳ ಒಗ್ಗಟ್ಟನ್ನು ಒಡೆದು ಆಡಳಿತ ನಡೆಸುವ ಮೂಲಕ ಕೇವಲ ಮತ ಬ್ಯಾಂಕ್‌ಗಳನ್ನಾಗಿ ಮಾಡಿಕೊಂಡಿವೆ ಇದರ ಫಲವಾಗಿ ಒಳ ಮೀಸಲಾತಿ ವಿಚಾರವಾಗಿ ಪರಿಶಿಷ್ಟ ಸಮುದಾಯಗಳು ಬೀದಿಯಲ್ಲಿ ನಿಂತು ಕಚ್ಚಾಡುವಂತೆ ಮಾಡಿದ್ದಾರೆ ಎಂದು ಕಿಡಿಕಾರಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ದೇಶದಲ್ಲಿ ನಿರ್ದಿಷ್ಟ ಸಮುದಾಯ ಮಾತ್ರ ಅವರ ಜಯಂತಿ ಆಚರಿಸುತ್ತಿದೆ. ಆದರೆ ಹೊರ ದೇಶಗಳಲ್ಲಿ ಅಂಬೇಡ್ಕರ್ ಅವರ ಜನ್ಮ ದಿನವನ್ನು ವಿಶ್ವ ಜ್ಞಾನ ದಿನವನ್ನಾಗಿ ಆಚರಿಸುತ್ತಿರುವುದು ಭಾರತೀಯರೆಲ್ಲರೂ ಹೆಮ್ಮೆ ಪಡುವಂತಾಗಿದೆ. ಅಂಬೇಡ್ಕರ್ ಹುಟ್ಟಿದ ದೇಶದಲ್ಲಿ ಸೀಮಿತ ಜಾತಿಗಳು ಅವರ ಜನ್ಮ ದಿನಾಚರಣೆ ಆಚರಿಸುತ್ತಿರುವುದು ದೇಶದ ದುರಂತವಾಗಿದೆ ಎಂದು ತಿಳಿಸಿದರು.

ಬಿಎಸ್‌ಪಿ ರಾಜ್ಯ ಉಸ್ತುವಾರಿಗಳಾದ ಹರಾ. ಮಹೇಶ್, ಗಂಗಾಧರ್, ಉಪಾಧ್ಯಕ್ಷ ಜಾಮೀರ್ ಹುಸೇನ್, ರಾಧಾ ಕೃಷ್ಣ, ಕಾಂತಪ್ಪ, ಎನ್. ನಾಗಯ್ಯ, ಆಲಿಖಾನ್, ವಕೀಲ ಬಿ.ಆರ್. ಪುಟ್ಟಸ್ವಾಮಿ, ಕೆ.ಬಿ.ಸುಧಾ, ಬ್ಯಾಡ್‌ಮೂಡ್ಲು ಬಸವಣ್ಣ, ಕೃಷ್ಣಮೂರ್ತಿ ಇತರರಿದ್ದರು.

ಪ್ರತಿ ದಿನ ಬೆಳಗಿನ ಕಾಫಿಯೊಂದಿಗೆ ಮೈಸೂರು ಮಿತ್ರ ಬೆಳಗಿನ ಪತ್ರಿಕೆ ಓದುವುದೆ ಒಂದು ಸಂತೋಷದ ವಿಷಯವಾಗಿದೆ. ಈ ಪತ್ರಿಕೆ ಇಲ್ಲದೆ ಕಾಫಿ ಇಲ್ಲ

47 ನೇ ವರ್ಷಕ್ಕೆ ಕಾಲಿಡುತ್ತಿರುವ ಮೈಸೂರು ಮಿತ್ರ ದಿನಪತ್ರಿಕೆಗೆ ಶುಭಾಷಯಗಳು



ಸಿ. ನಾರಾಯಣಗೌಡ

ಅಧ್ಯಕ್ಷರು, ಹೋಟೆಲ್ ಮಾಲೀಕರ ಸಂಘ, ಮೈಸೂರು
ಉಪಾಧ್ಯಕ್ಷರು, ಸಂಘ ಸಂಸ್ಥೆಗಳ ಒಕ್ಕೂಟ ಮೈಸೂರು
ನಿರ್ದೇಶಕರು ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆ

21 Years ANNIVERSARY

ವಿಷ್ಣು ಭವನ್®

ಸಸ್ಯಾಹಾರಿ ಫ್ಯಾಮಿಲಿ ರೆಸ್ಟೋರೆಂಟ್

Vishnu Bhavan®

Pure Veg Family Restaurant

OPP. KSRTC BUS STAND, BELOW BHIMA JEWELLERS & GIRIYAS, B.N. ROAD, MYSORE






Memories of the inauguration 21 years ago...

Savour the Taste of Mysore's Traditional Delicious Embark on a sensory journey through **Vishnu Bhavan's** traditional and culinary wonders as you partake in the territory's most delicious South/North Indian, Chinese, continental delicious served remained worthwhile for decades and is cherished culinary haven where tradition meets innovation

ಇವಿಎಂ ಬದಲು ಬ್ಯಾಲೆಟ್ ಪೇಪರ್ ಬಳಕೆ ಮಸೂದೆಗೆ ರಾಜ್ಯಪಾಲರ ಅಂಕಿತ!



ಬೆಂಗಳೂರು: ಕರ್ನಾಟಕದ ಬಜೆಟ್ ಅಧಿವೇಶನದಲ್ಲಿ ಮಂಡನೆಯಾಗಿದ್ದ ಬ್ಯಾಲೆಟ್ ಪೇಪರ್ ಬಳಕೆ ಮಸೂದೆಗೆ ಕೊನೆಗೂ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆ ಎಲೆಕ್ಟ್ರಾನಿಕ್ ಮತ ಯಂತ್ರಗಳ ಬದಲಿಗೆ ಮತಪತ್ರಗಳ ಮೂಲಕ ಪಂಚಾಯತ್ ಚುನಾವಣೆಗಳನ್ನು ನಡೆಸಲು ದಾರಿ ಮಾಡಿಕೊಡುತ್ತದೆ. ಮಾರ್ಚ್‌ನಲ್ಲಿ ಬಜೆಟ್ ಅಧಿವೇಶನದ ಸಮಯದಲ್ಲಿ, ವಿರೋಧ ಪಕ್ಷ ಬಿಜೆಪಿಯ ಪ್ರತಿಭಟನೆಗಳ ನಡುವೆಯೂ ಕರ್ನಾಟಕದ ಉಭಯ ಸದನಗಳಲ್ಲೂ ಈ ಮಸೂದೆ ಅಂಗೀಕಾರಗೊಂಡಿತ್ತು. ಮತಪತ್ರದ ಗೌಪ್ಯತೆಯ ತತ್ವವು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳ ಮೂಲಾಧಾರವಾಗಿದೆ. ಇದನ್ನು ನ್ಯಾಯಾಂಗವು ಗುರುತಿಸಿದೆ. ಮತಪತ್ರದ ಗೌಪ್ಯತೆಯು ಮತದಾರರನ್ನು ಬಲವಂತ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸುತ್ತದೆ ಇದರಿಂದಾಗಿ ಸುಪ್ರೀಂ ಕೋರ್ಟ್‌ನ ಹಲವಾರು ತೀರ್ಪುಗಳಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಕಾಪಾಡುತ್ತದೆ ಎಂದು ಒತ್ತಿಹೇಳಿತು.

ಇವಿಎಂಗಳ ಕಾರ್ಯನಿರ್ವಹಣೆಯ ಬಗ್ಗೆ ಕೆಲವು ಕಳವಳಗಳನ್ನು ವ್ಯಕ್ತಪಡಿಸಲಾಗಿದೆ. ಕಾಯ್ದೆಯ ಪ್ರಕಾರ ಸಾರ್ವಜನಿಕ ನಂಬಿಕೆಯನ್ನು ಪುನಃಸ್ಥಾಪಿಸಲು ದೃಢವಾದ ರಹಸ್ಯ ಮತಪತ್ರ ವ್ಯವಸ್ಥೆಗೆ ಮರಳುವ ಅಗತ್ಯವಿದೆ. ಅನಾಮಧೇಯತೆ ಮತ್ತು ಪಾರದರ್ಶಕತೆಗೆ ಆದ್ಯತೆ ನೀಡುವ ಚುನಾವಣಾ ಕಾರ್ಯವಿಧಾನಗಳನ್ನು ಬಲಪಡಿಸುವ ಅಗತ್ಯತೆಯು ಬಗ್ಗೆ ಒಮ್ಮತ ಹೆಚ್ಚುತ್ತಿದೆ ಎಂದು ಕರ್ನಾಟಕ ಸರ್ಕಾರ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿಗೆ ಅಂಕ ಕೊಡಿ

ಹೈಕೋರ್ಟ್ ಆದೇಶ




ಬೆಂಗಳೂರು: ಪ್ರಸ್ತ 2025–26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಗ್ರೇಡಿಂಗ್ ವ್ಯವಸ್ಥೆಯನ್ನು ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ವಿ. ನಾಯ್ಕ್ ಅವರ ವಾದ ಪುರಸ್ಕರಿಸಿರುವ ನ್ಯಾಯಪೀಠ, 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡಬೇಕೆಂದು ರಾಜ್ಯ ಸರ್ಕಾರ ಇತ್ತೀಚೆಗಷ್ಟೇ ಅಧಿಸೂಚನೆ ಹೊರಡಿಸಿತ್ತು. ಹಿಂದಿಗೆ ಅಂಕದ ಬದಲು ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಕನ್ನಡಪರ ಸಂಘಟನೆಗಳು, ಸಾಹಿತಿ, ಲೇಖಕರು ಬೆಂಬಲ ವ್ಯಕ್ತಪಡಿಸಿದ್ದರು. ದೇಶಿಯ ಭಾಷೆಗಳ ಹಿತರಕ್ಷಣಾ ಒಕ್ಕೂಟ ಹಾಗೂ ಬಿಜೆಪಿಯ ನಾಯಕರು ತೀವ್ರ ವಿರೋಧವನ್ನು ತೋರಿದ್ದರು.

ಬಿಹಾರ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಪ್ರಮಾಣವಚನ



ಪಾಟ್ನಾ, ಏ.15–ಭಾರತೀಯ ಜನತಾ ಪಕ್ಷದ ನಾಯಕ ಸಾಮ್ರಾಟ್ ಚೌಧರಿ ಅವರು ಇಂದು ಬಿಹಾರದ 24ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಅವರು ಜೆಡಿಯು ನಾಯಕ ನಿತೀಶ್ ಕುಮಾರ್ ಅವರಿಂದ ತೆರವಾದ ಸ್ಥಾನ ಅಲಂಕರಿಸಿದ್ದಾರೆ.

ರಾಜ್ಯಪಾಲರಾದ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸಯ್ಯದ್ ಅತಾ ಹಸ್ನೈನ್ ಅವರು ಇಂದು ಬೆಳಗ್ಗೆ ಲೋಕಭವನ್‌ನಲ್ಲಿ ನಡೆದ ಸಮಾರಂಭದಲ್ಲಿ ಸಾಮ್ರಾಟ್ ಚೌಧರಿಗೆ ಮುಖ್ಯಮಂತ್ರಿಯಾಗಿ ಹಾಗೂ ಜೆಡಿಯು (JD(U)) ನಾಯಕರಾದ ವಿಜಯ್ ಕುಮಾರ್ ಚೌಧರಿ ಮತ್ತು ಬಿಜೇಂದ್ರ ಪ್ರಸಾದ್ ಯಾದವ್ ಅವರಿಗೆ ಸಚಿವ ಸಂಪುಟದ ಸದಸ್ಯರಾಗಿ ಪದಗ್ರಹಣ ಮತ್ತು ಅಧಿಕಾರ ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು.

ಸಾಮ್ರಾಟ್ ಚೌಧರಿ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಲಾಗಿದ್ದು, ನಂತರ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದ್ದರು. ಬಿಹಾರದಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಯ ಪ್ರಮುಖ ನಾಯಕರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಕೇಂದ್ರ ಸಚಿವರಾದ ಜೆ.ಪಿ. ನಡ್ಡಾ, ಚಿರಾಗ್ ಪಾಸ್ವಾನ್, ನಿತೀಶ್ ಕುಮಾರ್ ಹಾಗೂ ಎನ್‌ಡಿಎಗೆ ಸೇರಿದ ಎಲ್ಲಾ ಶಾಸಕರು ಉಪಸ್ಥಿತರಿದ್ದರು.

ಕಳೆದ ವಾರ ನಿತೀಶ್ ಕುಮಾರ್ ರಾಜ್ಯಸಭಾ ಸದಸ್ಯರಾದ ನಂತರ, ಮುಖ್ಯಮಂತ್ರಿ ಸ್ಥಾನಕ್ಕೆ ನಿನ್ನೆಯಷ್ಟೇ ರಾಜೀನಾಮೆ ಸಲ್ಲಿಸಿದ್ದರು. ಸಾಮ್ರಾಟ್ ಚೌಧರಿ ಅವರನ್ನು ನೂತನ ನಾಯಕನಾಗಿ ಆಯ್ಕೆ ಮಾಡಲಾಯಿತು.

ಸಾಮ್ರಾಟ್ ಚೌಧರಿ ಹಾಗೂ ಅವರ ಸಚಿವ ಸಂಪುಟದ ಪ್ರಮಾಣವಚನ ಸಮಾರಂಭಕ್ಕೆ ಹಲವು ಹಿರಿಯ ಬಿಜೆಪಿ ನಾಯಕರು ಹಾಜರಿದ್ದರು. ಬಿಹಾರ ವಿಧಾನಸಭಾಧ್ಯಕ್ಷ ಪ್ರೇಮ್ ಕುಮಾರ್ ಕೂಡ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಬಿಜೇಂದ್ರ ಪ್ರಸಾದ್ ಯಾದವ್ ಮತ್ತು ವಿಜಯ್ ಕುಮಾರ್ ಚೌಧರಿ ಅವರು ಉಪಮುಖ್ಯಮಂತ್ರಿಗಳಾಗುವ ನಿರೀಕ್ಷೆಯಿದೆ.

ನಕಲಿ ನೋಟುಗಳನ್ನು ನೀಡಿ ಆರ್‌ಬಿಐಗೆ ಟೋಪಿ ಹಾಕಲು ಹೋಗಿ ಸಿಕ್ಕಿಬಿದ್ದ ಭೂಪ!

ಬೆಂಗಳೂರು, ಏಪ್ರಿಲ್ 15: ಭಾರತೀಯ ರಿಸರ್ವ್ ಬ್ಯಾಂಕ್ ಕಚೇರಿಯಲ್ಲಿ ಚಲಾವಣೆ ರದ್ದಾಗಿರುವ 2,000 ರೂಪಾಯಿ ಮುಖಬೆಲೆಯ ನಕಲಿ ನೋಟುಗಳನ್ನು ಬದಲಾಯಿಸಲು ಯತ್ನಿಸಿದ 52 ವರ್ಷದ ವ್ಯಕ್ತಿಯನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದಾರೆ. 2 ಸಾವಿರ ಮುಖಬೆಲೆಯ 300ಕ್ಕೂ ಹೆಚ್ಚು ನೋಟುಗಳನ್ನು ತಂದಿದ್ದ ವ್ಯಕ್ತಿ, 7 ಲಕ್ಷ ರೂ.ಗೂ ಹೆಚ್ಚು ಮೊತ್ತವನ್ನು ಜಮಾ ಮಾಡುವಂತೆ ಕೇಳಿದ್ದ ಎನ್ನಲಾಗಿದೆ.

ನಾಗಶೆಟ್ಟಿಹಳ್ಳಿಯ ನಿವಾಸಿ ಎಸ್.ವಿ. ರಮೇಶ್ ಬಂಧಿತ ಆರೋಪಿ. ಈತ ಏಪ್ರಿಲ್ 9ರಂದು ನೃಪತುಂಗ ರಸ್ತೆಯಲ್ಲಿರುವ ಆರ್‌ಬಿಐ ಕಚೇರಿಗೆ ಭೇಟಿ ನೀಡಿ, ತನ್ನ ಬಳಿಯಿದ್ದ 375 ನೋಟುಗಳನ್ನು ನೀಡಿ ಒಟ್ಟು 7.5 ಲಕ್ಷ ರೂಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವಂತೆ ಕೋರಿದ್ದ. ಆದರೆ, ಅಧಿಕಾರಿಗಳು ನೋಟುಗಳನ್ನು ತಪಾಸಣೆ ನಡೆಸಿದಾಗ ಅವುಗಳು ನಕಲಿ ಎಂದು ತಿಳಿದುಬಂದಿದೆ. ಆರ್‌ಬಿಐ ಸಹಾಯಕ ಜನರಲ್ ಮ್ಯಾನೇಜರ್ ಭೀಮ್ ಚೌಧರಿ ಅವರು ನೀಡಿದ ದೂರಿನ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ಈ ಪ್ರಕರಣದ ಹಿಂದೆ ದೊಡ್ಡ ಜಾಲವಿರುವ ಶಂಕೆ ವ್ಯಕ್ತವಾಗಿದ್ದು, ಆರೋಪಿಗೆ ಈ ನಕಲಿ ನೋಟುಗಳನ್ನು ಪೂರೈಸಿದವರು ಯಾರು ಮತ್ತು ಇವುಗಳನ್ನು ಎಲ್ಲಿ ಮುದ್ರಿಸಲಾಗಿದೆ ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದೇವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. 2023ರಲ್ಲಿ ಆರ್‌ಬಿಐ 2,000 ರೂ. ನೋಟುಗಳನ್ನು ಚಲಾವಣೆ ಯಿಂದ ಹಿಂಪಡೆದಿದ್ದರೂ, ಸಾರ್ವಜನಿಕರಿಗೆ ಆರ್‌ಬಿಐ ಕಚೇರಿಗಳಲ್ಲಿ ಇವು ಗಳನ್ನು ಬದಲಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಒಬ್ಬ ವ್ಯಕ್ತಿ ಏಕಕಾಲಕ್ಕೆ ಗರಿಷ್ಠ 20,000 ರೂ. ಮೌಲ್ಯದ ನೋಟುಗಳನ್ನು ಮಾತ್ರ ಬದಲಾಯಿಸಬಹುದು. ಆದರೆ ರಮೇಶ್ ಅತೀ ದೊಡ್ಡ ಮೊತ್ತದ ನಕಲಿ ನೋಟುಗಳೊಂದಿಗೆ ಸಿಕ್ಕಿಬಿದ್ದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಸಿಬಿಎಸ್‌ಇ 10ನೇ ತರಗತಿ ಫಲಿತಾಂಶ ಪ್ರಕಟ

ನವದೆಹಲಿ: ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಶೇ 93.70ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಬಾರಿಯೂ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದು, ಶೇ 94.99ರಷ್ಟು ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಬಾಲಕರಿಗಿಂತ ಬಾಲಕಿಯರು ಶೇ 1.3ರಷ್ಟು ಹೆಚ್ಚು ಸಾಧನೆ ಮಾಡಿದ್ದಾರೆ. 2.20 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇಕಡ 90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಈ ಪೈಕಿ 55,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಫಲಿತಾಂಶ ಅಲ್ಪ ಏರಿಕೆ ಕಂಡಿದೆ ಈ ಬಾರಿ 8,074 ಕೇಂದ್ರಗಳಲ್ಲಿ ನಡೆದ ಪರೀಕ್ಷೆಗೆ 24.71 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಹಾಜರಾಗಿದ್ದರು.

ನಗರಸಭಾ ಕಾರ್ಯಾಲಯ, ಹುಣಸೂರು
CITY MUNICIPAL COUNCIL HUNSUR
ಮೈಸೂರು ಜಿಲ್ಲೆ–571105
E-mail: ka.hunsur.cmc@gmail.com ಫೋನ್: 08222–252048

ಸಂ:ಹುನಕಾ;/ಕಂ.ಶಾ/ಪಿ.ಆರ್/ಹ/01/2026–27 ದಿನಾಂಕ: 15–04–2026

"ಮರು ಹರಾಜು ಇಸ್ತಿಹಾರ್ ಪ್ರತಿ"

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಹುಣಸೂರು ನಗರಸಭೆಗೆ ಸೇರಿದ 2026–27ನೇ ಸಾಲಿನ ಪಟ್ಟಣದಾದ್ಯಂತ ವಾಹನದಲ್ಲಿ ಮೀನು ಮಾರಾಟ ಮಾಡುವ ಹಕ್ಕನ್ನು ದಿನಾಂಕ 01.04.2026 ರ ಬಹಿರಂಗ ಹರಾಜು ಹಾಗೂ ದಿನಾಂಕ 08.04.2026 ರಂದು ನಡೆದ ಮರು ಹರಾಜಿನಲ್ಲಿ ನಿಗಧಿತ ಸರ್ಕಾರಿ ಮೊತ್ತಕ್ಕೆ ಹರಾಜಾಗದ ಕಾರಣ, ಕೆಳಕಂಡ ಒಂದು ಐಟಂಅನ್ನು ಮರು ಹರಾಜು ಮಾಡಲು ಈ ಹಿಂದಿನ ಇಸ್ತಿಹಾರ್ ಪ್ರಕಟಣೆಯ ಷರತ್ತುಗಳಂತೆ ದಿನಾಂಕ 18.04.2026 ರ ಶನಿವಾರ ಬೆಳಿಗ್ಗೆ 11–00 ಗಂಟೆಗೆ ನಗರಸಭಾ ಕಛೇರಿ ಆವರಣದಲ್ಲಿ ನಗರಸಭಾ ಆಡಳಿತಾಧಿಕಾರಿಗಳಾದ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮೈಸೂರು ರವರು ಮತ್ತು ಪೌರಾಯುಕ್ತರ ಸಮ್ಮುಖದಲ್ಲಿ ಅಥವಾ ಅವರಿಂದ ಅಧಿಕಾರ ಪಡೆದವರ ಸಮ್ಮುಖದಲ್ಲಿ ಈ ಕೆಳಕಂಡ ಬಾಬ್ತುಗಳನ್ನು ಮರು ಹರಾಜು ಮೂಲಕ 12 (ಹನ್ನೆರಡು) ತಿಂಗಳ ಅವಧಿಗೆ ಅಂದರೆ 2026–27 ವಿಲೇ ಮಾಡಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯ ಕೆಲಸದ ವೇಳೆಯಲ್ಲಿ ಕಂದಾಯ ವಿಭಾಗದಿಂದ ಮಾಹಿತಿಯನ್ನು ಪಡೆಯಬಹುದು.

ಕ್ರಸಂ	ಬಾಬ್ತುಗಳ ವಿವರ	ಅವಧಿ	ಠೇವಣಿ ಮೊತ್ತ
1	ಪಟ್ಟಣದಾದ್ಯಂತ ವಾಹನಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು	–॥–	50,000–00

ಸಹಿ/– ಶ್ರೀ ಲಕ್ಷ್ಮೀಕಾಂತ್ ರೆಡ್ಡಿ ಜಿ, ಐ.ಎ.ಎಸ್
ಮಾನ್ಯ ಆಡಳಿತಾಧಿಕಾರಿಗಳು ಹಾಗೂ
ಮಾನ್ಯ ಜಿಲ್ಲಾಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು

ಸಹಿ/– ಶ್ರೀಮತಿ ಮಾನಸ ಎಂ,
ಕೆ.ಎಂ.ಎ.ಎಸ್ ಶ್ರೇಣಿ–1
ಪೌರಾಯುಕ್ತರು, ನಗರಸಭೆ
ಹುಣಸೂರು

ಮೈಸೂರು ಮಿತ್ರ ಗುರುವಾರ 16 ಏಪ್ರಿಲ್ 2026

ಮೂರನೇ ಪುಟದಿಂದ

ಪ್ರಧಾನಿ ಮೋದಿ ಪಿಸುದನಿಯ ಭರವಸೆ!?

ವಿಭಾಗ ಒಳಗೊಂಡಿದೆ. ಬೆಂಗಳೂರು ಮತ್ತು ಸುತ್ತಮುತ್ತಲ ನಗರಗಳಿಗೆ ಕುಡಿಯುವ ನೀರಿನ ಅಗತ್ಯಕ್ಕಾಗಿ ಕೈಗೆತ್ತಿಕೊಳ್ಳುತ್ತಿರುವ ಮೇಕೆದಾಟು ಯೋಜನೆಗೆ ಅನುಮೋದನೆ ನೀಡಿ. ಕಾವೇರಿ-ಗೋದಾವರಿ ಹಾಗೂ ಬೇಡ್ತಿ-ವರದಾ ನದಿ ಜೋಡಣೆ ಯೋಜನೆಗಳಲ್ಲಿ ರಾಜ್ಯಕ್ಕೆ ಕನಿಷ್ಠ 40 ರಿಂದ 45 ಟಿಎಂಸಿ ನೀರು ಹಂಚಿಕೆ ಮಾಡಲು ಮನವಿ ಮಾಡಿದ್ದಾರೆ. ರಾಜ್ಯ ಶಿಫಾರಸು ಮಾಡಿರುವ ಕೆಲವು ಹಿಂದುಳಿದ ಜಾತಿಗಳನ್ನು ಕೇಂದ್ರದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವಂತೆ ಹಾಗೂ ರಾಜ್ಯದ ಶೇ.56 ಮೀಸಲಾತಿ ನೀತಿಯನ್ನು ಸಂವಿಧಾನದ 9ನೇ ಪರಿಚ್ಛೇಧಕ್ಕೆ ಸೇರಿಸಲು ಕೋರಿದ್ದಾರೆ. ರಾಜ್ಯ ಸರ್ಕಾರ ಅಗತ್ಯ ಭೂಮಿ ನೀಡಿದ್ದರೂ ಕೋಲಾರದಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿ ಸ್ಥಾಪನೆಗೆ ಇನ್ನೂ ಅನುಮತಿ ನೀಡಿಲ್ಲ. ಬೆಂಗಳೂರು ಉಪನಗರ ರೈಲು ಯೋಜನೆಗೆ ಹಣ ಬಿಡುಗಡೆ ಹಾಗೂ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಸಂಪರ್ಕಿಸುವ ಬೆಂಗಳೂರು-ಮುಂಬೈ ಹೈಸ್ಪೀಡ್ ರೈಲು ಕಾರಿಡಾರ್ ಆರಂಭಿಸಲು ಮನವಿ ಮಾಡಿದ್ದಾರೆ. ಜಲಜೀವನ್ ಮಿಷನ್ ಯೋಜನೆಯಡಿ ಕೇಂದ್ರದಿಂದ 17,554 ಹಾಗೂ ಗ್ರಾಪಂಗಳ ಬಾಕಿ 2,860 ಕೋಟಿ ರೂ. ಅನುದಾನ ಬಿಡುಗಡೆಗೆ ಕೋರಿದ್ದಾರೆ.

ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನೆ

ಒಳಗೊಂಡ ಆರೋಗ್ಯಕರ ಆಹಾರ ಮತ್ತು ಕಡಿಮೆ ಎಣ್ಣೆ ಬಳಕೆಯನ್ನು ಉತ್ತೇಜಿಸುವಂತೆ ಕರೆ ನೀಡಿದರು. ಇದರ ಜೊತೆಗೆ ಯೋಗ ಮತ್ತು ಫಿಟ್ನೆಸ್ ಅನ್ನು ಅಳವಡಿಸಿಕೊಳ್ಳುವಂತೆ, ಸೇವಾಭಾವವನ್ನು ಬೆಳೆಸುವಂತೆ ಕೂಡ ಅವರು ಮನವಿ ಮಾಡಿದರು.

ಒಂಭತ್ತು ಸಂಕಲ್ಪಗಳು: ಈ ಒಂಭತ್ತು ಸಂಕಲ್ಪಗಳ ಮೇಲೆ ನಾವು ಪ್ರಾಮಾಣಿಕತೆ ಮತ್ತು ದೃಢನಿಶ್ಚಯದೊಂದಿಗೆ ಮುಂದೆ ಸಾಗಿದರೆ, ವಿಕಸಿತ ಕರ್ನಾಟಕ ಮತ್ತು ವಿಕಸಿತ ಭಾರತದತ್ತ ವೇಗವಾಗಿ ಸಾಗಬಹುದು ಎಂದರು. ಈ ಮಂದಿರವು ಮಠದ 71ನೇ ಪೀಠಾಧಿಪತಿ ಹಾಗೂ ವೊಕ್ಕಲಿಗ ಸಮುದಾಯದಲ್ಲಿ ಅತ್ಯಂತ ಗೌರವ ಹೊಂದಿದ್ದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳಿಗೆ ಸಮರ್ಪಿತ ಸ್ಮಾರಕವಾಗಿದೆ.

ಈ ಸಂದರ್ಭದಲ್ಲಿ ಮೋದಿ ಅವರು ಮಾಜಿ ಪ್ರಧಾನಮಂತ್ರಿ ಹಾಗೂ ಜೆಡಿಎಸ್ ಮುಖ್ಯಸ್ಥ ಹೆಚ್.ಡಿ. ದೇವೇಗೌಡ ಅವರೊಂದಿಗೆ 'ಸೌಂದರ್ಯ ಲಹರಿ ಮತ್ತು ಶಿವ ಮಹಿಮ್ನ ಸ್ತೋತ್ರಂ' ಪುಸ್ತಕವನ್ನು ಬಿಡುಗಡೆ ಮಾಡಿದರು.

ಮಂದಿರ ಉದ್ಘಾಟನೆಗೂ ಮೊದಲು ಪ್ರಧಾನಮಂತ್ರಿಗಳು ಜ್ವಾಲಾ ಪೀಠಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಪೌರಾಣಿಕ ಕಥೆಗಳ ಪ್ರಕಾರ ಇಲ್ಲಿ ಶಿವನು ತಪಸ್ಸು ಮಾಡಿದನೆಂದು ನಂಬಿಕೆ ಇದೆ. ನಂತರ ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ತಾವರ್‌ಚಂದ್ ಗೆಹ್ಲೋಟ್, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಇಂದಿನ ಪೀಠಾಧಿಪತಿ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇಂದಿನಿಂದ ಮನೆಗಣತಿ

ಫೆಬ್ರವರಿಗೆ 2ನೇ ಹಂತ: ಮುಂದಿನ ವರ್ಷ ಫೆಬ್ರವರಿಯಲ್ಲಿ 2ನೇ ಹಂತದ ಎಣಿಕೆ ನಡೆಯಲಿದೆ. ಆಗ ಜನಸಂಖ್ಯೆ ಎಣಿಕೆ ಮಾಡಲಾಗುತ್ತದೆ. ಪ್ರತಿಯೊಂದು ಮನೆಯ ಪ್ರತಿ ವ್ಯಕ್ತಿಯ ಜಾತಿ, ಸಾಮಾಜಿಕ-ಆರ್ಥಿಕ, ಸಾಮಾಜಿಕ ಮತ್ತು ಇತರ ವಿವರಗಳನ್ನು ಸಂಗ್ರಹಿಸಲಾಗುತ್ತದೆ.

ಗಣತಿಗೆ ಅವೈಜ್ಞಾನಿಕವಾಗಿ ಸ್ಥಳ ನಿಗದಿಗೆ ವಿರೋಧ: ಗಣತಿದಾರರಿಗೆ ತರಬೇತಿ ನೀಡುವಲ್ಲಿ ಗೊಂದಲ ಹಾಗೂ ಜನಗಣತಿ ಕಾರ್ಯಕ್ಕೆ ಅವೈಜ್ಞಾನಿಕವಾಗಿ ಸ್ಥಳ ನಿಗದಿ ಮಾಡಿರುವುದು ಹಾಗೂ 58 ವರ್ಷ ಮೀರಿದವರನ್ನು ಗಣತಿ ಕಾರ್ಯಕ್ಕೆ ನೇಮಕ ಮಾಡಿರುವುದಕ್ಕೆ ಶಿಕ್ಷಕರು ಹಾಗೂ ಇಲಾಖಾ ಸಿಬ್ಬಂದಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಏ.16ರಿಂದ ಒಂದು ತಿಂಗಳ ಕಾಲ ನಡೆಯುವ ಮನೆಗಣತಿ ಹಾಗೂ ಮನೆಗಳ ಪಟ್ಟಿ ಕಾರ್ಯಕ್ಕೆ ಶಿಕ್ಷಕರು ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತರಬೇತಿ ನೀಡುವ ಪ್ರಕ್ರಿಯೆ ಸಹ ಈಗಾಗಲೇ ಆರಂಭವಾಗಿದೆ. ಗ್ರಾಮಾಂತರ ವ್ಯಾಪ್ತಿಯಲ್ಲಿ ಬಹಳಷ್ಟು ಶಿಕ್ಷಕರು ತರಬೇತಿ ಸಭೆಗಳಿಗೆ ಹಾಜರಾಗಿದ್ದರೂ ಜಿಬಿಎ ಅಧಿಕಾರಿಗಳೂ ಗಣತಿ ತರಬೇತಿಗೆ ಹಾಜರಾಗುವಂತೆ ಸೂಚನಾ ಪತ್ರ ಕಳಿಸಿದ್ದಾರೆ. ತರಬೇತಿಗೆ ಹಾಜರಾಗಿರುವ ಶಿಕ್ಷಕರು, ಸಿಬ್ಬಂದಿಗೂ ಗೈರು ಹಾಜರಿ ಎಂದು ದಾಖಲಿಸಿ ಅಮಾನತು ಕ್ರಮ ಕೈಗೊಳ್ಳುವ ಬೆದರಿಕೆ ಹಾಕಿ ನೋಟಿಸ್ ಕಳಿಸಿದ್ದಾರೆ. ವಿಪರ್ಯಾಸವೆಂದರೆ ತರಬೇತಿಗೆ ಹಾಜರಾಗಿರುವ ಬಗ್ಗೆ ಅಧಿಕೃತ ಮಾಹಿತಿ ನೀಡಿದರೂ ಅದನ್ನು ಸ್ವೀಕರಿಸಲು ಜಿಬಿಎ ಅಧಿಕಾರಿಗಳು ನಿರಾಕರಿಸಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಕುಲಕರ್ಣಿ ದೋಷಿ: ನಾಳೆ ಶಿಕ್ಷೆ ಪ್ರಕಟ

ನ್ಯಾಯಾಲಯಕ್ಕೆ ಆಗಮಿಸಿದ್ದರು. ಇವರೊಂದಿಗೆ ಆರೋಪ ಪಟ್ಟಿಯಲ್ಲಿ ಹೆಸರಿಸಲಾಗಿದ್ದ ಎಲ್ಲಾ 21 ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿದ್ದರು.

2016ರ ಜೂ.15ರಂದು ಧಾರವಾಡದ ಜಿಮ್‌ನಲ್ಲಿ ಯೋಗೇಶ್‌ಗೌಡರ ಹತ್ಯೆಯಾಗಿತ್ತು. ಆರಂಭದಲ್ಲಿ ಜಮೀನಿನ ಗಲಾಟೆಗೆ ಸೀಮಿತ ವಾಗಿ ಗಲಾಟೆಯಾಗಿದೆ ಎಂದು ಸ್ಥಳೀಯ ಪೊಲೀಸರು ತೀರ್ಮಾನಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಆದರೆ ಅದನ್ನು ಒಪ್ಪದ ಕುಟುಂಬದ ಸದಸ್ಯರು ಹಾಗೂ ಹಿತೈಷಿಗಳು ಸಿಬಿಐ ತನಿಖೆಗಾಗಿ ನ್ಯಾಯಾಂಗ ಹೋರಾಟ ನಡೆಸಿದ್ದರು. ಕೊನೆಗೆ ಸಿಬಿಐ ತನಿಖೆಗೆ ಆದೇಶಿಸಲಾಗಿತ್ತು. ತನಿಖೆ ನಡೆಸಿದ ಸಿಬಿಐ ಮಾಜಿ ಸಚಿವ ವಿನಯ್ ಕುಲಕರ್ಣಿ, ಒಬ್ಬ ಎಸಿಪಿ, ಮತ್ತೊಬ್ಬ ಇನ್ಸ್‌ಪೆಕ್ಟರ್ ಸೇರಿದಂತೆ 21 ಮಂದಿಯನ್ನು ಆರೋಪಿಗಳೆಂದು ಗುರುತಿಸಿತ್ತು. ಅವರಲ್ಲಿ ಮೊದಲ ಆರೋಪಿ ಬಸವರಾಜ್ ಮುತ್ತಗಿ ಪ್ರಮುಖರಾಗಿದ್ದಾರೆ. ಅವರಿಗೂ ಮತ್ತು ಯೋಗೇಶ್‌ಗೌಡ ಅವರಿಗೂ ಜಮೀನಿನ ತಕರಾರಿತ್ತು ಎಂದು ಬಿಂಬಿಸಲಾಗಿತ್ತು. ಇವರೊಂದಿಗೆ ವಿಕ್ರಮ್ ಬಳ್ಳಾರಿ, ಕೀರ್ತಿ ಕುಮಾರ್, ಸಂದೀಪ್, ವಿನಾಯಕ್, ಮಹಾಬಲೇಶ್ವರ, ಸಂತೋಷ್, ದಿನೇಶ್, ಅಶ್ವತ್, ಕೆ.ಎಸ್.ಸುನೀಲ್, ನಜರ್ ಅಹಮದ್, ಶಹಾನ ವಾಜ್, ನೂತನ್, ಹರ್ಷಿತ್, ವಿನಯ್‌ಕುಲಕರ್ಣಿ, ಚಂದ್ರಶೇಖರ್ ಇಂಡಿ, ಶಿವಾನಂದ ಬೀರಾದಾರ್, ವಿಕಾಸ್ ಕಲಬುರಗಿ, ಚೆನ್ನಕೇಶ ಟಿಂಗರಿಕರ್, ವಾಸುದೇವ ನೀಲಕಣಿ, ಸೊಮಶೇಖರ ನ್ಯಾಮಗೌಡ ಅವರನ್ನು ಆರೋಪಿಗಳೆಂದು ಗುರುತಿಸಿತ್ತು.

ಸಫಾರಿ ನಿಷೇಧಕ್ಕೆ 'ಹೈ' ನಿರಾಕರಣೆ

ಹೀಗಾಗಿ ತಕ್ಷಣವೇ ಇಲ್ಲಿ ಜಾರಿಯಲ್ಲಿರುವ ಸಫಾರಿಗೆ ನಿಷೇಧ ಹೇರಬೇಕು ಎಂದು ಕೋರಿ ಮೈಸೂರಿನ ವಿ.ರವಿಕುಮಾರ್ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರ ವಿಭಾಗೀಯ ಪೀಠ, ಸಫಾರಿಗೆ ನೀಡಲಾಗಿರುವ ಅನುಮತಿ ತೆರವುಗೊಳಿಸಲು ನಿರಾಕರಿಸಿತು.

ಮುಂದಿನ ಆದೇಶದವರೆಗೆ ಸಫಾರಿ ನಡೆಯಬಹುದು ಎಂದು ಹೇಳಿದ ನ್ಯಾಯಪೀಠ ಸಂರಕ್ಷಿತ ಅರಣ್ಯದ ಯಾವ ಪ್ರದೇಶದಲ್ಲಿ ಸಫಾರಿ ನಡೆಯುತ್ತಿದೆ ಎಂಬ ಬಗ್ಗೆ ವರದಿ ನೀಡುವಂತೆ ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿತು. ಅಲ್ಲದೆ, ಅರಣ್ಯ ಪ್ರದೇಶದ ಕೋರ್, ಬಫರ್ ಮತ್ತು ಪ್ರವಾಸೋದ್ಯಮ ವಲಯಗಳ ಗಡಿ ರೇಖೆ, ಸಫಾರಿಗಳನ್ನು ನಡೆಸುತ್ತಿರುವ ನಿಖರವಾದ ಸ್ಥಳಗಳು ಮತ್ತು ಈ ವಲಯಗಳನ್ನು ಸೂಚಿಸುವ ನಕ್ಷೆಗಳನ್ನು ಸ್ಪಷ್ಟಪಡಿಸುವ ವಿವರವಾದ ಪ್ರಮಾಣಪತ್ರವನ್ನು ಸಲ್ಲಿಸಬೇಕು ಎಂದು ಸೂಚನೆ ನೀಡಿತು.

ಐದು ವರ್ಷ ನಮ್ಮ ತಂದೆಯೇ ಸಿಎಂ

ತಂದೆಯ ಪರವಾಗಿ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎರಡೂವರೆ ವರ್ಷಗಳಿಂದ ಇದನ್ನೇ ಹೇಳುತ್ತಿದ್ದೇನೆ. ಈಗಲೂ ಅದನ್ನೇ ಹೇಳುತ್ತೇನೆ. ನಮ್ಮ ತಂದೆಯ ಮಾತೇ ನನ್ನ ಮಾತು ಕೂಡ. ಸಚಿವ ಸಂಪುಟ ಪುನಾರ್ರಚನೆಗಾಗಿ ಶಾಸಕರು ದೆಹಲಿಗೆ ಹೋಗಿದ್ದಾರೆ. ಅವರು ದೆಹಲಿಗೆ ಹೋಗಿರುವುದಕ್ಕೂ ಸಿಎಂ ಸ್ಥಾನಕ್ಕೂ ಯಾವುದೇ ಸಂಬಂಧ ಇಲ್ಲ. ಜೊತೆಗೆ ಉಪಚುನಾವಣೆ ಫಲಿತಾಂಶಕ್ಕೂ ಸಿಎಂ ಸ್ಥಾನಕ್ಕೂ ಯಾವುದೇ ಸಂಬಂಧ ಇಲ್ಲ. ಸರ್ಕಾರವೂ ಭದ್ರವಾಗಿದೆ. ಸಿಎಂ ಸ್ಥಾನವೂ ಭದ್ರವಾಗಿದೆ ಎಂದು ತಿಳಿಸಿದರು.

ಸಚಿವ ಸ್ಥಾನ ಕೇಳೊಲ್ಲ: ನಾನು ಎಷ್ಟು ಭಾರಿ ಇದನ್ನು ಸ್ಪಷ್ಟಪಡಿಸಲಿ ಹೇಳಿ ಎಂದು ಮರು ಪ್ರಶ್ನಿಸಿ, ಸರ್ಕಾರಕ್ಕೆ ಎರಡೂವರೆ ವರ್ಷ ಆಗಿರುವ ಹಿನ್ನೆಲೆಯಲ್ಲಿ ಸಂಪುಟ ಪುನಾರ್ರಚನೆ ಕೇಳುತ್ತಿದ್ದಾರೆ. ಸಂಪುಟ ಪುನಾರ್ರಚನೆ ಮಾಡಬೇಕಿದೆ. ಯಾವಾಗ ಎಂಬುದನ್ನು ಹೈಕಮಾಂಡ್ ತೀರ್ಮಾನ ಮಾಡಲಿದೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ನಮ್ಮ ತಂದೆ ಸಿಎಂ ಆಗಿರುವವರೆಗೂ ನಾನು ಸಚಿವ ಸ್ಥಾನ ಕೇಳುವುದಿಲ್ಲ ಎಂದರು.

ಹೆಚ್‌ಡಿಕೆಗೆ ತಿರುಗೇಟು: ಮುಖ್ಯಮಂತ್ರಿಗಳು ತಮ್ಮ ಪುತ್ರನನ್ನು ವಸೂಲಿಗೆ ಇಟ್ಟುಕೊಂಡಿದ್ದಾರೆ ಎಂಬ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಡಾ.ಯತೀಂದ್ರ ತಿರುಗೇಟು ನೀಡಿದರು.

ನನ್ನ ಮೇಲಿನ ಆರೋಪಕ್ಕೆ ಒಂದೇ ಒಂದು ಸಾಕ್ಷಿ ಕೊಡಲಿ. ಅವರು ಕೇವಲ ಆರೋಪಗಳನ್ನು ಮಾಡುತ್ತಿದ್ದಾರೆ ಅಷ್ಟೇ. ವರ್ಗಾವಣೆ ದಂಧೆ ಎನ್ನುತ್ತಾರೆ. ಈ ಸಂಬಂಧ ಕೇವಲ ಒಂದೇ ಒಂದು ಸಾಕ್ಷಿ ಅವರಲ್ಲಿ ಇದೆಯಾ? ಕಮಿಷನ್ ದಂಧೆ ಎನ್ನುತ್ತಾರೆ ಅದಕ್ಕೆ ಸಾಕ್ಷಿ ಇದೆಯಾ? ಸಾಕ್ಷಿಯೇ ಇಲ್ಲದೆ ಎರಡೂವರೆ ವರ್ಷಗಳಿಂದ ನನ್ನ ಮೇಲೆ ಕೇವಲ ಆರೋಪಗಳನ್ನೇ ಮಾಡುತ್ತಿದ್ದಾರೆ. ಸಾಕ್ಷಿ ಕೊಟ್ಟು ಆರೋಪ ಮಾಡಲಿ. ಆಗ ಅದಕ್ಕೆ ಬೆಲೆ ಇರುತ್ತದೆ ಎಂದು ಕಿಡಿಕಾರಿದರು.

ನಾನು ಈಗ ಕುಮಾರಸ್ವಾಮಿ ವಸೂಲಿ ಮಾಡುತ್ತಿದ್ದಾರೆ ಹೇಳಬಹುದಾ. ಸಾಕ್ಷಿಯೇ ಇಲ್ಲದೆ ಆರೋಪ ಮಾಡುವುದು ಸುಲಭ. ನಾನು ಆ ರೀತಿಯ ಆರೋಪ ಎಂದಿಗೂ ಮಾಡುವುದಿಲ್ಲ. ಈ ಸರ್ಕಾರ ಬಂದಾಗಿನಿಂದ ವಿರೋಧ ಪಕ್ಷಗಳ ಕಣ್ಣಿಗೆ ನಾನೇ ಟಾರ್ಗೆಟ್. ಜನರಿಗೆ ನನ್ನ ಮೇಲೆ ತಪ್ಪು ಅಭಿಪ್ರಾಯ ಮೂಡಿಸಲು ಈ ರೀತಿ ಸುಳ್ಳು ಹೇಳುತ್ತಿದ್ದಾರೆ. ನನ್ನ ತಂದೆ ನನ್ನನ್ನು ವಸೂಲಿಗಾಗಿ ನೇಮಿಸಿಕೊಂಡಿಲ್ಲ. ನಾನು ಯಾವತ್ತು ಯಾವ ವಸೂಲಿಯೂ ಮಾಡಿಲ್ಲ. ನನ್ನ ತಂದೆಯ ಪರವಾಗಿ ನಾನು ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದರು.


ಮೈಸೂರು ಮಿತ್ರ
47
ಮೈಸೂರು ಮಿತ್ರ
ದಿನ ಪತ್ರಿಕೆಯ
46 ವರ್ಷಗಳ ಸಮರ್ಪಿತ ಸೇವೆಗೆ ಅಭಿನಂದನೆಗಳು ಹಾಗೂ
47ನೇ ವಾರ್ಷಿಕೋತ್ಸವಕ್ಕೆ ಶುಭಹಾರೈಕೆ
ಕಳೆದ
46
ವರ್ಷಗಳಿಂದ ಮೈಸೂರಿಗರ ನಾಡಿಮಿಡಿತ
'ಮೈಸೂರು ಮಿತ್ರ' ನಿಗೆ
ಹುಟ್ಟುಹಬ್ಬಕ್ಕೆ ನಮ್ಮ ಹೃದಯಪೂರ್ವಕ ಶುಭಾಶಯಗಳು.
ಪತ್ರಿಕೆ ಇನ್ನೂ ಎತ್ತರೆತ್ತರಕ್ಕೆ ಬೆಳೆಯಲಿ ಎಂಬುದು ನಮ್ಮ ಸದಾಶಯ.
ಈ ಶುಭ ಸಂದರ್ಭದಲ್ಲಿ ಪತ್ರಿಕೆಯ ಆಡಳಿತ ಮಂಡಳಿ,
ಸಿಬ್ಬಂದಿಗೂ ನಮ್ಮ ಅಭಿನಂದನೆಗಳು
ಜಿ.ಟಿ. ದೇವೇಗೌಡರ ಕುಟುಂಬವರ್ಗ

ಮೈಸೂರು ಮಿತ್ರ 47
ಮೈಸೂರು ಮಿತ್ರ
ವಾರ್ಷಿಕ ವಿಶೇಷಾಂಕ 2026
16-04-2026 ಗುರುವಾರ

ನಮ್ಮ ಮೈಸೂರು... ನಮ್ಮ ಹೆಮ್ಮೆ... ಆಗಬೇಕಲ್ಲವೆ...!

ನಮ್ಮ ದೇಶ, ನಮ್ಮ ರಾಜ್ಯ, ನಮ್ಮ ಮನೆ, ನಮ್ಮ ಭೂಮಿ, ನಮ್ಮ ಬೀದಿ, ನಮ್ಮ ಜನ. ಈ ಎರಡಕ್ಷರದ ನಮ್ಮ ಪದದಲ್ಲಿ ಮಿಳಿತಗೊಂಡಿರುವ ಸ್ವಾಮಿತ್ವದ ಭಾವನೆ, ಕಾಳಜಿ, ಜವಾಬ್ದಾರಿ ಪ್ರತಿಯೊಬ್ಬರ ಮನದ ಅರಿವಿಗೆ ಬಂದರೆ ಸಾಕು ಸಮಾಜದ ಚಿತ್ರಣವೇ ಬದಲಾಗುತ್ತದೆ. ಮಾನವೀಯ, ಸಾಮರಸ್ಯಪೂರಿತ ಸುಂದರ ಸ್ವರ್ಗವೇ ರೂಪುಗೊಳ್ಳುತ್ತದೆ. ಸಾಮಾನ್ಯವಾಗಿ ವಿದೇಶಗಳಿಗೆ ಭೇಟಿ ನೀಡುವ ನಮ್ಮವರು ಅಲ್ಲಿನ ಸ್ವಚ್ಛತೆ, ಶಿಸ್ತು, ಸೌಂದರ್ಯಕ್ಕೆ ಮಾರುಹೋಗುವುದುಂಟು. ಅದು ಹೇಗೆ ಸಾಧ್ಯವಾಯಿತು ಎಂಬುದರ ಬಗ್ಗೆ ಎಂದಾದರೂ ಅವಲೋಕಿಸಿದ್ದೀರಾ...! ಮೋಜು-ಮಸ್ತಿಗಾಗಿ ಆ ಒಂದು ಕ್ಷಣ ಮೀಸಲಿಡುತ್ತಾರೆ. ಆದರೆ, ನಮ್ಮ ನಗರ ಹೀಗೇಕಿಲ್ಲ ಎಂಬ ಪ್ರಶ್ನೆ ಎಂದಾದರೂ ಇಂತಹವರಲ್ಲಿ ಉದ್ಭವಿಸಿದರೆ, ಅದು ನಮ್ಮ ಹೆಮ್ಮೆ, ನಗರದ ಸಂರಕ್ಷಣೆ, ಬೆಳವಣಿಗೆಯಲ್ಲಿ ಪವಾಡವೇ ನಡೆದುಹೋಗುತ್ತಿತ್ತು!





● ಎಸ್.ಬಿ.ದೇವರಾಜ

ಮೂರು ದಿನಗಳಿಂದ ಕಸ ಸಂಗ್ರಹಿಸುವ ಗಾಡಿ ಬಂದಿಲ್ಲ, ಮೂಲೆಯ ಲೈಟ್ ಕಂಬದ ಬಳಿ ರಾಶಿ ಕಸ ಬಿದ್ದಿದೆ, ಮ್ಯಾನ್‌ಹೋಲ್ ಉಕ್ಕಿ ಕಲುಷಿತ ನೀರು ಮನೆ ಮುಂದೆ ಹರಿಯುತ್ತಿದೆ, ಬೀದಿ ದೀಪಗಳು ಬೆಳಗಿ ನಾಲ್ಕೈದು ದಿನಗಳೇ ಆಯ್ತು, ರಸ್ತೆ ಹೊಂಡವನ್ನೇ ಮುಚ್ಚಿಲ್ಲ. ಇಂತಹ ಸಾಲು-ಸಾಲು ದೂರಿನ ಮಳೆಗರೆದು ಸಂಬಂಧಪಟ್ಟ ಆಡಳಿತ ಅರ್ಥಾತ್ ಸರ್ಕಾರವನ್ನು ಶಪಿಸುವ ನಾವು, ಇದೆಲ್ಲದಕ್ಕೂ ನಾವೇ ಕಾರಣ ಎಂಬ ವಾಸ್ತವಾಂಶದ ಬಗ್ಗೆ ಯೋಚಿಸುವುದೂ ಇಲ್ಲ. ಸದ್ಯ ಮೈಸೂರಿಗರಾದ ನಮ್ಮ ಮನಃಸ್ಥಿತಿಯೂ ಇದಕ್ಕೆ ಸ್ವಲ್ಪವೂ ಭಿನ್ನವಾಗಿಲ್ಲ.

ಪೀಠಿಕೆಯಂತೆ ಇಲ್ಲಿನ ಪ್ರತಿಯೊಬ್ಬರಲ್ಲೂ 'ನಮ್ಮ ಮೈಸೂರು' ಎಂಬ ಸ್ವಾಮಿತ್ವದ ಭಾವನೆ ಜಾಗೃತವಾದರೆ ಬಹುತೇಕ ಎಲ್ಲಾ ಸಮಸ್ಯೆಗಳೂ ಸರಳವಾಗಿ ಪರಿಹಾರವಾಗುವುದರಲ್ಲಿ ಎರಡು ಮಾತಿಲ್ಲ. ಮೈಸೂರಿನ ಅಳಿವು-ಉಳಿವಿನ ಪ್ರಶ್ನೆ ಎದುರಾದಾಗ ಇಲ್ಲಿನ ನಿವಾಸಿಗಳು ನಿರ್ಣಾಯಕರೇ ಹೊರತು ಮತ್ತಾರೂ ಅಲ್ಲ. 'ನಮ್ಮ ಮೈಸೂರು' ಭಾವನೆಯೊಂದಿಗೆ ಒಂದಷ್ಟು ಕಾಳಜಿಯಿಂದ ಕನಿಷ್ಠ ಜವಾಬ್ದಾರಿ ನಿರ್ವಹಿಸಿದರೆ ಐತಿಹಾಸಿಕ ಹಾಗೂ ಪಾರಂಪರಿಕ ನಗರ ತನ್ನ ಸಹಜ ಸೌಂದರ್ಯ ಕಾಯ್ದುಕೊಂಡು ಹೋಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ನಾಡದೇವಿ ಚಾಮುಂಡೇಶ್ವರಿ ನೆಲೆವೀಡಿನಲ್ಲಿ ಯದುವಂಶದ ಒಡೆಯರು ಯೋಜಿತವಾಗಿ ನಿರ್ಮಿಸಿದ ಸುಂದರ ಮೈಸೂರು, ಸಾಕಷ್ಟು ಬದಲಾಗಿದೆ. ಪ್ರಜಾಪ್ರಭುತ್ವ ಆಡಳಿತ, ಆಧುನಿಕ ನೆಲೆಗಟ್ಟಿನ ಅಭಿವೃದ್ಧಿ ಯತ್ನದಲ್ಲಿ ನಗರದ ಮೂಲ ರೂಪವೇ ಮರೆಯಾಗುತ್ತಿದೆ. ಅದೃಷ್ಟವಶಾತ್ ಇತರ ದೊಡ್ಡ ನಗರಗಳಂತೆ 'ನಮ್ಮ ಮೈಸೂರು' ಸರಿಪಡಿಸಲಾಗದಂತಹ ದುಃಸ್ಥಿತಿ ಹಂತಕ್ಕೇನು ತಲುಪಿಲ್ಲ. ಆದರೂ ಒಂದಷ್ಟು ಸಾರ್ವಜನಿಕ ಸಮಸ್ಯೆಗಳು ದಿನೇ ದಿನೆ ಬಿಗಡಾಯಿಸುತ್ತಿರುವುದು ಭವಿಷ್ಯಕ್ಕೆ ಮಾರಕವಾಗುವ ಆತಂಕ ಸೃಷ್ಟಿಸಿದೆ.

ಪ್ರಮುಖವಾಗಿ ನೈರ್ಮಲ್ಯ ನಿರ್ವಹಣೆ ಮೈಸೂರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಐತಿಹಾಸಿಕ, ಧಾರ್ಮಿಕ, ಪಾರಂಪರಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ತಾಣಗಳ ಮಹತ್ವದ ಕೇಂದ್ರವಾಗಿರುವ ಮೈಸೂರು, ಸರಳ ಸಮಸ್ಯೆಗಳ ಗಂಭೀರ ಪರಿಣಾಮದಿಂದ ನಲುಗುತ್ತಿದೆ. ಎಲ್ಲೆಂದರಲ್ಲಿ ಕಣ್ಣಿಗೆ ರಾಚುವ ಕಸದ ರಾಶಿ, ರಸ್ತೆಯಲ್ಲಿ ತೊರೆಯಂತೆ ಹರಿಯುವ ಮಲಿನ ನೀರು, ಸಂಚಾರಕ್ಕೆ ಕಂಟಕವಾಗುವ ಹೊಂಡಗಳು, ಅಸಮರ್ಪಕ ತ್ಯಾಜ್ಯ ವಿಲೇವಾರಿ, ನಿಧಾನಗತಿಯ ಸಂಸ್ಕರಣೆಯಂತಹ ನಿತ್ಯ ನಿರ್ವಹಣೆಯಲ್ಲಿನ ವೈಫಲ್ಯಗಳು ಇನ್ನೂ ಗಟ್ಟಿಯಾಗುತ್ತಿವೆ. ಒಂದು ಹಿತಕರ ಕಲ್ಪನೆಯೊಂದಿಗೆ ದೇಶ-ವಿದೇಶಗಳಿಂದ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಘಾಸಿ ಉಂಟುಮಾಡುವ ಇಂತಹ ದೃಶ್ಯಗಳು ಸರ್ವೇಸಾಮಾನ್ಯ ಎನ್ನುವಂತೆ ಗೋಚರಿಸುತ್ತಿವೆ.

ಈಗಾಗಲೇ ಹೇಳಿದಂತೆ ಇದಕ್ಕೆಲ್ಲಾ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಹೊಣೆ ಮಾಡುವುದು ಸಹಜ ಹಾಗೂ ಸರಳ. ಆದರೆ ಇದೆಲ್ಲದರಲ್ಲೂ ನಮ್ಮ ಪಾಲು ಬಹಳಷ್ಟಿದೆ. ಆಹಾರ ಸೇವಿಸುವ ಮುನ್ನ ಹಾಗೂ ನಂತರ ನಮ್ಮ ಕೈಗಳು ಹಾಗೂ ತಟ್ಟೆಯನ್ನು ಸ್ವಚ್ಛಗೊಳಿಸುತ್ತೇವೆ. ನಮ್ಮ ಮನೆಯ ಮೂಲೆ ಮೂಲೆಯನ್ನೂ ಗುಡಿಸಿ-ಸಾರಿಸಿ ಶುಚಿಯಾಗಿಟ್ಟುಕೊಳ್ಳುತ್ತೇವೆ. ವರಾಂಡ, ಕಾಂಪೌಂಡ್ ಬಳಿ ಗಿಡ-ಗಂಟಿಗಳನ್ನು ಕಿತ್ತುಹಾಕಿ, ಕಸವನ್ನೆಲ್ಲಾ ತೆಗೆದು ಸುಂದರವಾಗಿಟ್ಟುಕೊಳ್ಳುತ್ತೇವೆ. ಇದಕ್ಕೆಲ್ಲಾ 'ನಮ್ಮ' ಎಂಬ ಸ್ವಾಮಿತ್ವದ ಕಾಳಜಿಯೇ ಕಾರಣ. ಬೇರೊಬ್ಬರ ಆದೇಶ, ಸಲಹೆ, ಮಾರ್ಗದರ್ಶನವಿಲ್ಲದೆ ಸ್ವಯಂ ಪ್ರೇರಣೆಯಿಂದ ಇಂತಹ ಜವಾಬ್ದಾರಿಗಳನ್ನು ನಿರಂತರವಾಗಿ ನಿರ್ವಹಿಸುತ್ತೇವೆ. ಹೀಗೆ 'ನಮ್ಮ ಮೈಸೂರು' ಎಂಬ ಭಾವನೆ ನಮ್ಮೆಲ್ಲರಲ್ಲೂ ಜಾಗೃತವಾಗಿಲ್ಲ ಏಕೆ? ಇದು ಸಾಧ್ಯವಾದರೆ ಸಾಕು ಅದ್ಭುತವೇ ಸೃಷ್ಟಿಯಾಗುತ್ತದೆ.

ಮನೆ ಹಾಗೂ ಮುಂದಿನ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಬಹುದು, ಆದರೆ ಇಡೀ ರಸ್ತೆ, ಊರನ್ನೆಲ್ಲಾ ನಾವು ಸ್ವಚ್ಛ ಮಾಡಲು ಸಾಧ್ಯವಿಲ್ಲ. ಆದರೆ ಸಾಮೂಹಿಕ ಪರಿಪಾಲನೆಯಿಂದ ಇದು ಖಂಡಿತ ಸಾಧ್ಯವಿದೆ. ಮೊದಲಿಗೆ 'ನಮ್ಮ ಮೈಸೂರು' ಸದಾ ಸುಂದರ ಹಾಗೂ ಸುರಕ್ಷಿತವಾಗಿರಬೇಕು, ಇಲ್ಲಿನ ನೈಸರ್ಗಿಕ, ಪಾರಂಪರಿಕ ಸೌಂದರ್ಯವನ್ನು ರಕ್ಷಿಸುವಲ್ಲಿ ನಮ್ಮ ಪಾತ್ರವೂ ಇದೆ ಎಂಬ ನಾಗರಿಕ ಪ್ರಜ್ಞೆ ಪ್ರತಿಯೊಬ್ಬ ಮೈಸೂರು ನಿವಾಸಿಯಲ್ಲಿ ಇರಬೇಕು. ಇದನ್ನು ಸದಾ ಸ್ಮರಣೆಯಲ್ಲಿಟ್ಟುಕೊಂಡು ಜಾಗೃತೆಯಿಂದ ನಡೆದುಕೊಳ್ಳಬೇಕು. ನಮ್ಮಿಂದಲೇ ಸೃಷ್ಟಿಯಾಗಿರುವ ಬಹುತೇಕ ಸಮಸ್ಯೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು.

ನಮ್ಮಿಂದಲೇ ಮೊದಲಾಗಲಿ...: ಪ್ರತಿಯೊಬ್ಬರೂ ತಮ್ಮ ಮನೆ ಮುಂದೆ ಶುಚಿಯಾಗಿಟ್ಟರೆ ಸಾಕು ಇಡೀ ರಸ್ತೆಯೇ ಸ್ವಚ್ಛವಾಗಿರುತ್ತದೆ. ಯಾವುದೇ ಕಾರಣಕ್ಕೂ ರಸ್ತೆ ಮೂಲೆಗಳಲ್ಲಿ, ದೊಡ್ಡ ಕಾಂಪೌಂಡ್‌ಗಳ ಬಳಿ, ಖಾಲಿ ಪ್ರದೇಶದಲ್ಲಿ ಕಸ ಬಿಸಾಡದೆ ಮನೆ ಮುಂದೆ ಬರುವ ಪಾಲಿಕೆ ಗಾಡಿಗೇ ನೀಡೋಣ. ಇದನ್ನು ಪ್ರತಿಯೊಬ್ಬರೂ ಪಾಲಿಸಿದರೆ ಖಂಡಿತವಾಗಿ ಎಲ್ಲೆಂದರಲ್ಲಿ ಕಸದ ರಾಶಿ ಬೀಳುವುದು ತಪ್ಪುತ್ತದೆ. ರಸ್ತೆಯಲ್ಲಿ ಮ್ಯಾನ್‌ಹೋಲ್ ಉಕ್ಕಿ ಹರಿಯುವ ಮಲಿನ ನೀರನ್ನು ದಾಟಿಕೊಂಡು ತಮ್ಮಪಾಡಿಗೆ ಮುಂದೆ ಸಾಗುವ ಬದಲು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ವಿಷಯ ತಿಳಿಸೋಣ. ಅಪಾಯಕಾರಿ ರಸ್ತೆ ಹೊಂಡವನ್ನು ಜೋಪಾನವಾಗಿ ದಾಟುವುದರ ಜೊತೆಗೆ ಅದನ್ನು ಮುಚ್ಚಿಸಿ, ಮುಂದಾಗಬಹುದಾದ ಅಪಘಾತಗಳನ್ನು ತಪ್ಪಿಸಲು ಪ್ರಯತ್ನಿಸೋಣ. ಅಪಘಾತ, ಗಲಾಟೆ, ಗದ್ದಲಗಳನ್ನು ನೋಡಿಯೂ ಅದು ನಮಗೆ ಸಂಬಂಧಿಸಿದ್ದಲ್ಲ ಎಂಬ ಕಾರಣಕ್ಕೆ ಅಲ್ಲಿಂದ ಕಾಲ್ಕೀಳುವುದಕ್ಕಿಂತ ಪೊಲೀಸರಿಗೆ ಮಾಹಿತಿ ನೀಡುವ ಕನಿಷ್ಠ ಜವಾಬ್ದಾರಿಯನ್ನು ನಿರ್ವಹಿಸೋಣ. ನಮ್ಮಿಂದಾಗಬಹುದಾದ ಇಂತಹ ಸರಳ ಕಾರ್ಯ ಹಾಗೂ ಜವಾಬ್ದಾರಿಗಳನ್ನು ತಪ್ಪದೇ ನಿಬಾಯಿಸಿದರೆ ಅದ್ಭುತ ಕಾರ್ಯಸಾಧನೆ ಶತಸಿದ್ಧ.

ಮೂಲ ಸೌಲಭ್ಯಗಳ ಜೊತೆಗೆ ನಿತ್ಯ ನಿರ್ವಹಣೆಯೂ ತೆರಿಗೆ ಸಂಗ್ರಹಿಸುವ ಸ್ಥಳೀಯ ಸಂಸ್ಥೆಯ ಜವಾಬ್ದಾರಿ ಎನ್ನುವುದು ಅಕ್ಷರಶಃ ಸತ್ಯ. ಹಾಗಂತ ನಮಗೆ ಆಶ್ರಯ ನೀಡಿರುವ ಊರಿನ ಮೇಲೆ ಕಿಂಚಿತ್ತೂ ಕಾಳಜಿ ತೋರದಿರುವುದು ಕ್ಷಮಾರ್ಹವಲ್ಲ. ಇದರಿಂದ ಉಂಟಾಗುವ ಗಂಭೀರ ಸಮಸ್ಯೆಗಳನ್ನು ಸ್ಥಳೀಯ ಸಂಸ್ಥೆಗಳು ಏಕಾಕಾಲಕ್ಕೆ ಸರಿಪಡಿಸುವುದಕ್ಕೂ ಸಾಧ್ಯವಿಲ್ಲ. ನಾನು, ನೀವು, ಅವರು, ಇವರು, ಪ್ರತಿಯೊಬ್ಬರೂ ಸ್ವಯಂ ನಿಯಮ ಪಾಲನೆಯೊಂದಿಗೆ ಸರಳ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಿದರೆ ನಾವಿರುವ ದೈವಿನೆಲೆ ಮೈಸೂರು, ಶೇ.95ರಷ್ಟು ಸಮಸ್ಯೆಗಳಿಂದ ಮುಕ್ತಿ ಪಡೆದು ಸ್ವಚ್ಛತೆ ಜೊತೆಗೆ ಕಾನೂನು-ಸುವ್ಯವಸ್ಥೆಯಲ್ಲೂ ಮಾದರಿಯಾಗುತ್ತದೆ.

ಆಡಳಿತವೂ ಒತ್ತಾಸೆಯಾಗಬೇಕು: ಹಾಗೆಯೇ, ನಮ್ಮ ಮೈಸೂರಿಗಾಗಿ ತುಡಿಯುವ ನಾಗರಿಕರಿಗೆ ಸ್ಥಳೀಯ ಸಂಸ್ಥೆಯೂ ಒತ್ತಾಸೆಯಾಗಿರಬೇಕು. ನಿರಂತರವಾಗಿ ಜಾಗೃತಿ ಮೂಡಿಸುವುದರ ಜೊತೆಗೆ ಮನೆ ಮನೆ ಕಸ ಸಂಗ್ರಹ ಕಾರ್ಯ ಒಂದು ದಿನವೂ ನಿಲ್ಲದಂತೆ ನಿಗಾ ವಹಿಸಬೇಕು. ಎಲ್ಲೆಂದರಲ್ಲಿ ಕಸ ಎಸೆಯುವವರ ಪತ್ತೆ ಮಾಡಿ, ದಂಡಾಸ್ತ್ರಕ್ಕಿಂತ ಮುಖ್ಯವಾಗಿ ಅವರ ಮನಃಪರಿವರ್ತನೆಗೆ ಕ್ರಮ ವಹಿಸಬೇಕು. ಯುಜಿಡಿ, ಮಳೆ ನೀರು ಚರಂಡಿ ಸೇರಿದಂತೆ ಯಾವುದೇ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ದೂರು ನೀಡಿದಾಕ್ಷಣ ಸ್ಪಂದಿಸಿ, ಪರಿಹಾರ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳು ಹಾಗೂ ಸಿಬ್ಬಂದಿ ಸಾರ್ವಜನಿಕರೊಂದಿಗೆ ಸೌಜನ್ಯ ಹಾಗೂ ಗೌರವದಿಂದ ನಡೆದುಕೊಳ್ಳಬೇಕು. ಎಲ್ಲಿಯೂ ಕಸದ ರಾಶಿ ಬೀಳದಂತೆ ಎಚ್ಚರವಹಿಸಬೇಕು. ವಿಲೇವಾರಿ ಹಾಗೂ ಸಂಸ್ಕರಣೆ ಕಾರ್ಯಕ್ಕೆ ಮತ್ತಷ್ಟು ವೇಗ ನೀಡಬೇಕು.

ಶಾಲಾ-ಕಾಲೇಜುಗಳಲ್ಲಿ ಶಿಕ್ಷಕರ ಮೂಲಕ ನಮ್ಮ ಹೆಮ್ಮೆಯ ಮೈಸೂರಿನ ಇತಿಹಾಸ, ಪರಂಪರೆಯ ಬಗ್ಗೆ ತಿಳಿಸಿ, ಸಾಮಾಜಿಕ ಜವಾಬ್ದಾರಿಯ ಮಾಹಿತಿ ನೀಡಬೇಕು. ನಮ್ಮ ಮನೆಯಂತೆ ನಮ್ಮ ಮೈಸೂರಿನ ಸ್ವಚ್ಛತೆ, ಸುರಕ್ಷೆ ಪ್ರತಿಯೊಬ್ಬರ ಜವಾಬ್ದಾರಿ ಎನ್ನುವುದನ್ನು ಮನದಟ್ಟು ಮಾಡಿಕೊಡಬೇಕು. ನಗರದ ಮೂಲೆ ಮೂಲೆಯಲ್ಲೂ ಅರಿವು ಕಾರ್ಯಕ್ರಮಗಳ ಮೂಲಕ ಎಲ್ಲರಲ್ಲೂ 'ನಮ್ಮ ಮೈಸೂರು' ಭಾವನೆಯನ್ನು ಬಿತ್ತಿ ಬೆಳೆಸಲು ಮುಂದಾಗಬೇಕು. ಈ ಸತ್ಕಾರ್ಯದಲ್ಲಿ ಎಲ್ಲಾ ಇಲಾಖೆಗಳೂ ತಮ್ಮದೇ ಆದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು. ಇದರಲ್ಲಿ ವೈಫಲ್ಯವಾಗದಂತೆ ಸಂಬಂಧಪಟ್ಟ ಮೇಲಧಿಕಾರಿಗಳು ನಿಗಾ ವಹಿಸಬೇಕು. ಒಟ್ಟಾರೆ ಮೈಸೂರಿನಲ್ಲಿ ನೆಲೆಸಿರುವ ಪ್ರತಿಯೊಬ್ಬರೂ 'ನಮ್ಮ ಮೈಸೂರು' ನಮ್ಮ ಹೆಮ್ಮೆ ಉತ್ಕಟ ಅಭಿಮಾನ, ಕಳಕಳಿ ಹೊಂದಿದರೆ ಸಾಂಸ್ಕೃತಿಕ ನಗರದ ಸ್ವಚ್ಛತೆ, ಸೌಂದರ್ಯ ಸಂರಕ್ಷಣೆಯಲ್ಲಿ ಅಚ್ಚರಿಯ ಪರಿವರ್ತನೆ ಸಾಧ್ಯವಿದೆ.

ಸ್ವಚ್ಛತೆ ಸ್ವಯಂ ನಿರ್ವಹಣೆ

ಮನೆಗಳಲ್ಲಿ ಮಾತ್ರವಲ್ಲ ಪ್ರತಿಯೊಂದು ಅಂಗಡಿ-ಮುಂಗಟ್ಟುಗಳಲ್ಲೂ ಸ್ವಚ್ಛತೆ ಕಾಯ್ದುಕೊಳ್ಳಬೇಕು. ಮಳಿಗೆ ಶುಚಿಗೊಳಿಸಿದ ಬಳಿಕ ಕಸವನ್ನು ರಸ್ತೆಯ ಯಾವುದೋ ಮೂಲೆಯಲ್ಲಿ ಬಿಸಾಡಿ ಕೈತೊಳೆದುಕೊಳ್ಳಬಾರದು. ತುರ್ತು ಕಾರಣದಿಂದ ಒಂದು ದಿನ ಕಸ ಸಂಗ್ರಹಣೆ ವಾಹನ ಬರದಿದ್ದರೂ ಮಳಿಗೆಯಲ್ಲೇ ಕಸ ಸಂಗ್ರಹಿಸಿಟ್ಟುಕೊಂಡು ಮರುದಿನ ನೀಡುವಂತಹ ವ್ಯವಸ್ಥೆ ಮಾಡಿಕೊಳ್ಳಬೇಕು. ತ್ಯಾಜ್ಯ ಉತ್ಪಾದನೆಯಾಗುವ ಮಳಿಗೆಗಳ ಮುಂದೆ ಕಡ್ಡಾಯವಾಗಿ ಡಸ್ಟ್‌ಬಿನ್‌ಗಳನ್ನು ಇಡಬೇಕು. ರಾತ್ರಿ ಅಂಗಡಿ ಬಂದ್ ಮಾಡುವ ಮುನ್ನ ತ್ಯಾಜ್ಯವನ್ನು ಚೀಲದಲ್ಲಿ ತುಂಬಿ, ಮನೆ ಮಾರ್ಗದಲ್ಲೆಲ್ಲೋ ಬಿಸಾಡಿ ಹೋಗುವ ಪರಿಪಾಠವಿದ್ದರೆ ಈಗಿನಿಂದಲೇ ನಿಲ್ಲಿಸಬೇಕು. ಕೈಗಾರಿಕೆಗಳು, ಹೋಟೆಲ್, ಆಸ್ಪತ್ರೆ ಸೇರಿದಂತೆ ಅತೀ ಹೆಚ್ಚು ತ್ಯಾಜ್ಯ ಉತ್ಪತ್ತಿಯಾಗುವ ಕೇಂದ್ರಗಳಲ್ಲಿ ಸ್ವಚ್ಛತೆ ಹಾಗೂ ತ್ಯಾಜ್ಯ ವಿಲೇವಾರಿಗೆ ಆದ್ಯತೆ ನೀಡಲೇಬೇಕು. ಸರ್ಕಾರಿ ಕಚೇರಿಗಳಲ್ಲಿ ಸ್ವಚ್ಛತಾ ನಿರ್ವಹಣೆ ಅನುಕರಣೀಯವಾಗಿರಬೇಕು.



ಹಕ್ಕುಗಳ ಜೊತೆಗೆ ಕರ್ತವ್ಯ ಪಾಲನೆಯ ಮಹತ್ವ ಅರಿಯಬೇಕು. ಇಂತಹ ಪೌರಪ್ರಜ್ಞೆಯನ್ನ ಶಾಲಾ ಹಂತದಲ್ಲಿ ಮಕ್ಕಳಲ್ಲಿ ಮೂಡಿಸಬೇಕು. ಪ್ರತಿಯೊಬ್ಬರಲ್ಲೂ ಜವಾಬ್ದಾರಿಯುತ ನಾಗರಿಕರಾಗಬೇಕೆಂಬ ಬಗ್ಗೆ ಅರಿವು ಮೂಡಿಸದೇ ಹೋದರೆ ಯಾವುದೇ ಸುಂದರ ಸಮಾಜ ಕಟ್ಟಲಾಗದು. ಹಾಗಾಗಿ ಶಾಲಾ ಮಟ್ಟದಲ್ಲೇ ಮಕ್ಕಳಲ್ಲಿ ಪೌರಪ್ರಜ್ಞೆ ಮೂಡಿಸಬೇಕು. ಆಗ ಸುಂದರ, ಸಮೃದ್ಧ, ಸ್ವಚ್ಛ ಮೈಸೂರು ನಿರ್ಮಾಣ ಸಾಧ್ಯ. ಮೈಸೂರಿಗೆ ಮಹಾರಾಜರ ಕೊಡುಗೆ ಅಪಾರ. ಅವರ ಪರಿಶ್ರಮದಿಂದ ವ್ಯವಸ್ಥಿತ ಮೈಸೂರು ನಿರ್ಮಾಣಗೊಂಡಿದೆ. ಭವಿಷ್ಯದ ಮೈಸೂರಿನ ಹಿತದೃಷ್ಟಿಯಿಂದ ಈ ಬಗ್ಗೆ ಇಂದಿನ ಪೀಳಿಗೆಗೆ ತಿಳಿಸಿಕೊಡಬೇಕು.

-ಎ.ಪಿ.ನಾಗೇಶ್

ಮ್ಯಾನೇಜಿಂಗ್ ಪಾರ್ಟ್‌ನರ್, ಎಪಿಎನ್ ಪ್ರಾಪರ್ಟೀಸ್.



ಮೈಸೂರಿಗರು ಪ್ರಜ್ಞಾವಂತ ನಾಗರಿಕರು. ಮಹಾರಾಜರು ಮಾದರಿ ಆಡಳಿತ ನೀಡಿದ ಊರಿದು. ಇಂದಿಗೂ ಮಹಾರಾಜರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುತ್ತಿದ್ದೇವೆ. ಅಕ್ರಮ, ನಾಗರಿಕರ ಬೇಜವಾಬ್ದಾರಿ, ಅಪರಾಧ ಮೊದಲಾದವು ಬೇರೆ ನಗರಗಳಿಗೆ ಹೋಲಿಸಿದರೆ ಮೈಸೂರಿನಲ್ಲಿ ಅತ್ಯಂತ ಕಡಿಮೆಯೇ ಇದೆ. ಇಲ್ಲಿನ ಜನ ಪ್ರಜ್ಞಾವಂತರಿದ್ದಾರೆ. ಬೇರೆ ನಗರಗಳಿಗೆ ಹೋಲಿಸಿದರೆ ಮೈಸೂರಿನಲ್ಲಿ ಸುರಕ್ಷತೆ, ಸ್ವಚ್ಛತೆ ಇದೆ. ಜೊತೆಗೆ ಸಾಂಸ್ಕೃತಿಕ ನೆಲೆಗೆ ಹೆಸರಾಗಿದೆ. ಸ್ವಚ್ಛತೆಯಲ್ಲಿ ಮೈಸೂರು ನಗರ ದೇಶದ ಮೊದಲ ನಗರವಾಗಿ ಹೊರಹೊಮ್ಮಿತ್ತು. ಈ ಬಾರಿ ಅದೇ ರೀತಿಯ ಉನ್ನತ ಸ್ಥಾನ ಅಲಂಕರಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದೆ. ಐದು ಬೆರಳು ಒಂದೇ ಸಮನಾಗಿ ಇರುವುದಿಲ್ಲ. ಅದೇ ರೀತಿಯಲ್ಲಿ ಸ್ವಚ್ಛತೆ, ಸುರಕ್ಷತೆಗೆ ವಿರುದ್ಧವಾಗಿ ವರ್ತಿಸುವ ಕೆಲವರು ಇರಬಹುದು. ಆದರೆ ಬೇರೆ ನಗರಗಳಿಗೆ ಹೋಲಿಸಿದರೆ ಮೈಸೂರಿಗರು ಹೆಚ್ಚಿನ ಪ್ರಜ್ಞಾವಂತರು. ಇದೊಂದು ಸುಂದರ, ಸ್ವಚ್ಛ, ಸುರಕ್ಷಿತ ನಗರಿ.

-ಸಂದೇಶ್ ನಾಗರಾಜ್

ಖ್ಯಾತ ಉದ್ಯಮಿ ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತ ಚಿತ್ರ ನಿರ್ಮಾಪಕರು, ಮಾಜಿ ಎಂಎಲ್‌ಸಿ



ಎಲ್ಲರಿಗೂ ತಿಳಿದಿರುವಂತೆ ಮೈಸೂರು ದೇಶದ ಸ್ವಚ್ಛ ನಗರಿ ಎಂಬ ಹಿರಿಮೆಯನ್ನು ಕೆಲ ವರ್ಷಗಳ ಹಿಂದೆ ಹೊಂದಿತ್ತು. ಮತ್ತೆ ಅಂತಹ ಉನ್ನತ ಸ್ಥಾನ ಅಲಂಕರಿಸಲು ಮೈಸೂರು ಮಹಾನಗರ ಪಾಲಿಕೆಯ ಜೊತೆಗೆ ಎಲ್ಲಾ ನಾಗರಿಕರು ಕೈಜೋಡಿಸಬೇಕು. ಮೈಸೂರಿನಲ್ಲಿ ಉತ್ತಮ ಪರಿಸರ, ಕಾನೂನು ಸುವ್ಯವಸ್ಥೆ ಸಂಬಂಧ ಜನತೆ ಮೊದಲಿನಿಂದಲೂ ಆಡಳಿತಕ್ಕೆ ಸಹಕಾರ ನೀಡುತ್ತಾ ಬಂದಿದ್ದಾರೆ. ಅದೇ ರೀತಿಯ ಸಹಕಾರ, ನಾಗರಿಕ ಪ್ರಜ್ಞೆ ಮುಂದುವರೆಸಲು ಹೆಚ್ಚು ಒತ್ತು ನೀಡಬೇಕು.

-ಜಿ.ಲಕ್ಷ್ಮೀಕಾಂತರೆಡ್ಡಿ

ಜಿಲ್ಲಾಧಿಕಾರಿಗಳು, ಮೈಸೂರು.








47
ನೇ ವಾರ್ಷಿಕೋತ್ಸವ ಆಚರಿಸುತ್ತಿರುವ
ಮೈಸೂರು ಮಿತ್ರನಿಗೆ
ವಾರ್ಷಿಕೋತ್ಸವದ
ಶುಭಾಶಯಗಳು
ಶ್ರೀ ದೊಡ್ಡಸ್ವಾಮೇಗೌಡ
ಅಧ್ಯಕ್ಷರು
ಎಂಸಿಡಿಸಿಸಿ ಬ್ಯಾಂಕ್ ಮೈಸೂರು
ಶ್ರೀ ಡಿ.ರವಿಶಂಕರ್
ಶಾಸಕರು
ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ
ಶುಭಕೋರುವವರು :
ಗಡ್ಡಮಹೇಶ್
ಅಧ್ಯಕ್ಷರು
ನಗರ ಯೋಜನಾ ಪ್ರಾಧಿಕಾರ
ಕೆ.ಆರ್.ನಗರ
ಕೆ.ಎನ್.ಪ್ರಸನ್ನಕುಮಾರ್
ಸೈಯದ್ ಜಾಬೀರ್
ಸವಿತಾ ಜವರಪ್ಪ


47
ನೇ ವಾರ್ಷಿಕೋತ್ಸವ ಆಚರಿಸುತ್ತಿರುವ
ಮೈಸೂರು ಮಿತ್ರನಿಗೆ
ಹೃತ್ಪೂರ್ವಕ
ಅಭಿನಂದನೆಗಳು
ಶುಭಕೋರುವವರು :
ಶ್ರೀ ಡಿ.ರವಿಶಂಕರ್
ಶಾಸಕರು,
ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ
ಶ್ರೀ ದೊಡ್ಡಸ್ವಾಮೇಗೌಡ
ಅಧ್ಯಕ್ಷರು,
ಎಂಸಿಡಿಸಿಸಿ ಬ್ಯಾಂಕ್ ಮೈಸೂರು


47
ಮೈಸೂರು ಮಿತ್ರ
47 ನೇ
ವಾರ್ಷಿಕೋತ್ಸವ
ಆಚರಿಸಿಕೊಳ್ಳುತ್ತಿರುವ
ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
ವಾರ್ಷಿಕೋತ್ಸವದ
ಶುಭಾಶಯಗಳು
ಉಮ್ಮತ್ತೂರು ಇಂದುಶೇಖರ್
(ಇಂಟರ್ ನ್ಯಾಷನಲ್ ಜಸ್ಟೀಸ್
ಅವಾರ್ಡ್ ಪುರಸ್ಕೃತರು)
ವಕೀಲರು, ಮಾಜಿ ಅಧ್ಯಕ್ಷರು
ಜಿಲ್ಲಾ ವಕೀಲರ ಸಂಘ
ಚಾಮರಾಜನಗರ
ಮೊ: 9880820462


47
ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ
ಮೈಸೂರು ಮಿತ್ರ
ಕನ್ನಡ ದಿನ ಪತ್ರಿಕೆಗೆ ಶುಭಾಶಯಗಳು
ಮಾವಿನಹಳ್ಳಿ ಎಸ್.ಸಿದ್ದೇಗೌಡ ರವರು
ಮಾಜಿ ಅಧ್ಯಕ್ಷರು ಮೈಮುಲ್ ಮತ್ತು ಎಪಿಎಂಸಿ ಮೈಸೂರು.
ಅಧ್ಯಕ್ಷರು ಮಾವಿನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ.
ಹಾಗೂ ಅಧ್ಯಕ್ಷರು ಜಯಪುರ ಜೇಡಿಕಟ್ಟೆ ರೈತ ಉತ್ಪಾದಕರ ಕಂಪನಿ.
ಜಯಪುರ ದೊಡ್ಡಪ್ರಮಾಣ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ಹಾಲಿ ನಿರ್ದೇಶಕರು.


ಮೈಸೂರು, ಮಂಡ್ಯ, ಕೊಡಗು, ಹಾಸನ ಮತ್ತು ಚಾಮರಾಜನಗರ
ಜಿಲ್ಲೆಗಳಲ್ಲಿ ಅತೀ ಹೆಚ್ಚು ಪ್ರಸರಣ ಹೊಂದಿರುವ
47
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
47 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಸಂದೇಶ್ ಸ್ವಾಮಿ
ಮೈಸೂರು ಮಹಾನಗರ ಪಾಲಿಕೆಯ
ಮಾಜಿ ಮಹಾಪೌರರು


ತೊಳಸಿ ಜ್ಯುಯಲ್ಸ್
THOLASI®
JEWELS
Fine Jewellers Since Generations
ಮೈಸೂರು ಮಿತ್ರ
ತನ್ನ 46 ವರ್ಷಗಳ ಸಮರ್ಪಿತ ಸೇವೆಯನ್ನು ಪೂರ್ಣಗೊಳಿಸಿ,
2026 ಏಪ್ರಿಲ್ 16ರಂದು ತನ್ನ
47ನೇ
ಪ್ರಕಾಶನ ವರ್ಷಕ್ಕೆ ಪ್ರವೇಶಿಸುತ್ತಿದೆ. ಈ ವಿಶೇಷ ಸಂದರ್ಭದಲ್ಲಿ,
ಕಳೆದ 46 ವರ್ಷಗಳಿಂದ ಅನುಸರಿಸುತ್ತಿರುವ ಪರಂಪರೆಯಂತೆ
ಮೈಸೂರು ಮಿತ್ರವು ವಿಶೇಷ ಸಂಚಿಕೆಯನ್ನು ಹೊರತರುತ್ತಿದೆ.

ಎನ್ ಶಾಸಕರೇ... ಹೇಗಿದ್ದೀರಾ..!

ಅವಕಾಶ, ಅನುದಾನ ಕೊರತೆ ನಡುವೆಯು
ಶಕ್ತಿ ಮೀರಿ ಕೆಲಸ ಮಾಡಿದ್ದೇನೆ

●ಮೋಹನ್ ಕಾಂಯಕ

ಸಂವಿಧಾನ ಬದ್ಧವಾಗಿ ಜನರಿಂದ ಆಯ್ಕೆಯಾಗಿ ಜನ ಸೇವೆಯ ಮೂಲಕ ವ್ಯವಸ್ಥೆಯ ದೊರೆಗಳಾಗಬೇಕಿದ್ದ ನಾವು, ವ್ಯವಸ್ಥೆಯ ಗುಲಾಮ ರಾಗುತ್ತಿದ್ದೇವೆ. ಪಂಚ ಗ್ಯಾರಂಟಿ ಯೋಜನೆಗಳ ಜಾರಿಯ ತೃಪ್ತಿ ಮನದಲ್ಲಿದ್ದರೂ ಅಭಿವೃದ್ಧಿ ಯೋಜನೆ ಗಳ ನಿರ್ಧಾರದಲ್ಲಿನ ವಿಳಂಬ ದೋರಣೆ ಯಿಂದಾಗಿ ಬೇಸರದ ಜೊತೆಗೆ ಕೆಲಸ ಮಾಡುವ ಆಸಕ್ತಿ ಕಡಿಮೆಯಾಗುತ್ತಿದೆ...!

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಮೂರು ವರ್ಷ ಪೂರ್ಣಗೊಳಿ ಸುತ್ತಿರುವ ಹೊತ್ತಿನಲ್ಲಿ ತಮ್ಮ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ, ಮಹತ್ವದ ಬದಲಾವಣೆ, ಸರ್ಕಾರದ ಸ್ಪಂದನೆ ಕುರಿತು 'ಮೈಸೂರು ಮಿತ್ರ' ನೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ ಮೈಸೂರು ನರಸಿಂಹರಾಜ ಕ್ಷೇತ್ರದ ಹಿರಿಯ ಶಾಸಕರೂ ಆದ ಮಾಜಿ ಸಚಿವ ತನ್ವೀರ್ ಸೇಠ್. ಪ್ರಸ್ತುತ ರಾಷ್ಟ್ರ ಮತ್ತು ರಾಜ್ಯ ರಾಜಕೀಯ ವ್ಯವಸ್ಥೆ ಅಯೋಮಯ ಹಂತಕ್ಕೆ ಬಂದಿದೆ. ಸಂವಿಧಾನ ಬದ್ಧವಾಗಿ ಚುನಾಯಿತ ಪ್ರತಿನಿಧಿಗಳು ಮಾಡಬೇಕಾದ ಕೆಲಸ–ಕಾರ್ಯಗಳಿಗೆ ಸರ್ಕಾರದ ಸ್ಪಂದನೆ, ಆರ್ಥಿಕ ನೆರವು, ಸೂಕ್ತ ಸಮಯ–ಸಂದರ್ಭಕ್ಕೆ ತೆಗೆದು ಕೊಳ್ಳಬೇಕಾದ ನಿರ್ಧಾರಗಳಲ್ಲಿ ವಿಳಂಬ ಧೋರಣೆ ಹೆಚ್ಚಾಗುತ್ತಿದೆ ಎಂದು ತಮ್ಮೊಳಗಿನ ಸಮಾದಾನ ಹಾಗೂ ಅಸಮಾದಾನವನ್ನ ಹಂಚಿಕೊಂಡಿದ್ದಾರೆ.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ನೀಡಬೇಕಾದ ತೆರಿಗೆ ಪಾಲನ್ನು ಸರಿಯಾಗಿ ನೀಡದಿರುವುದರಿಂದ ಸೃಷ್ಟಿಯಾದ ಕಷ್ಟದ ಪರಿಸ್ಥಿತಿಯ ನಡುವೆಯೂ ರಾಜ್ಯದ ಜನತೆಯ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಯಾವುದೇ ರೀತಿಯ ಹೊಸ ತೆರಿಗೆ ವಿಧಿಸದೆ ಜಾರಿ ಗೊಳಿಸಿದ ಪಂಚ ಗ್ಯಾರಂಟಿ ಯೋಜನೆ ಗಳು ಯಶಸ್ವಿಯಾಗುತ್ತಿವೆ. ನರಸಿಂಹ ರಾಜ ಕ್ಷೇತ್ರದಲ್ಲಿ ಗೃಹ ಲಕ್ಷ್ಮಿ ಯೋಜನೆಯಿಂದ ನಿರೀಕ್ಷೆಗೂ ಮೀರಿ ಅನುಕೂಲವಾಗಿದೆ. ಗೃಹ ಲಕ್ಷ್ಮಿ ಹಣದ ಸದ್ಬಳಕೆಯಿಂದ ಕ್ಷೇತ್ರದಲ್ಲಿ ಶೈಕ್ಷಣಿಕ ಪ್ರಗತಿ ಕಾಣುತ್ತಿದೆ. ಅನ್ನಭಾಗ್ಯ ಯೋಜನೆ ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿದೆ. ಆದರೆ, ಕ್ಷೇತ್ರದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಕಡಿಮೆ ಇರುವುದರಿಂದ **ಶಕ್ತಿ** ಯೋಜನೆಯಿಂದ ನಿರೀಕ್ಷಿತ ಪ್ರಯೋಜನವಾಗಿಲ್ಲ. ಒಟ್ಟಾರೆಯಾಗಿ ಪಂಚ ಗ್ಯಾರಂಟಿ ನನ್ನ ಕ್ಷೇತ್ರಕ್ಕೆ ಆರ್ಥಿಕ ಅನುಕೂಲತೆ ಒದಗಿಸಿದೆ.





ಫಲ ಕಾಣುತ್ತಿದೆ: ಹಲವು ವರ್ಷಗಳ ಹೋರಾಟದ ಫಲ ಇವಾಗ ಕ್ಷೇತ್ರದಲ್ಲಿ ಕಾಣುತ್ತಿದೆ. ಸರ್ಕಾರದಿಂದ ಇದುವರೆಗೆ ನೀಡಿರುವ ಶಾಸಕರ ಅನುದಾನದ ಬಹು ಪಾಲನ್ನು ಕ್ಷೇತ್ರದ ರಸ್ತೆ, ಚರಂಡಿ, ಒಳ ಚರಂಡಿ ಅಭಿವೃದ್ಧಿ ಹಾಗೂ ಕುಡಿಯುವ ನೀರು ಪೂರೈಕೆಗೆ ಬಳಕೆ ಮಾಡಲಾಗಿದೆ. ಸುಮಾರು 400 ಕೋಟಿ ರೂ.ನಷ್ಟು ಅನುದಾನವನ್ನು ಮೂಲಭೂತ ಸೌಕರ್ಯ ಒದಗಿಸಲು ವಿನಿಯೋಗ ಮಾಡಲಾಗಿದೆ. ಸಿಎಸ್‌ಆರ್ ಯೋಜನೆಯಡಿ ಅನುದಾನ ತಂದು ಕ್ಷೇತ್ರದಲ್ಲಿರುವ ಸರ್ಕಾರಿ ಪಿಯು ಕಾಲೇಜುಗಳ ಅಭಿವೃದ್ಧಿ ಹಾಗೂ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗೆ ಕುಡಿಯುವ ನೀರಿನಿಂದ ಹಿಡಿದು ಎಲ್ಲಾ ರೀತಿಯ ಅಗತ್ಯತೆಗಳನ್ನು ಪೂರೈಕೆ ಮಾಡಲಾಗುತ್ತಿದೆ. 75 ಕೋಟಿ ರೂ.ವೆಚ್ಚ ದಲ್ಲಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು ಅಭಿವೃದ್ಧಿ. ಸುಮಾರು 70 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ಐಟಿಐ ಕಾಲೇಜು ಉನ್ನತೀಕರಣ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ನವೀಕರಣ. ಶ್ರೀನಗರ ಮತ್ತು ಯಲಮ್ಮತಾಯಿ ಕಾಲೋನಿಯಲ್ಲಿ ಹೊಸ ಅಂಗನವಾಡಿ ಕೇಂದ್ರಗಳ ಸ್ಥಾಪನೆ ಮಾಡುವ ಮೂಲಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಹಾಗೆಯೇ 125 ಕೋಟಿ ವೆಚ್ಚದಲ್ಲಿ ಬನ್ನಿಮಂಟಪದಲ್ಲಿ ಹೊಸ ಬಸ್ ನಿಲ್ದಾಣ ವಾಗುತ್ತಿದೆ. ಜೊತೆಗೆ ಹೊಸ ಬಸ್ ನಿಲ್ದಾಣದ ಸುತ್ತಲಿನ ರಸ್ತೆಗಳ ಅಗಲೀ ಕರಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬಡ ಮಖಾನ್‌ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಆರಂಭಿಸಲಾಗುತ್ತಿದೆ. ಯರಗನಹಳ್ಳಿ ಮತ್ತು ರಾಜೀವ್‌ನಗರದಲ್ಲಿ ಹೊಸದಾಗಿ ಎರಡು 'ನಮ್ಮ ಕ್ಲಿನಿಕ್' ತೆರೆಯುವ ಹಂತದಲ್ಲಿವೆ. ಅಜೀಜ್ ಸೇಠ್ ಮುಖ್ಯ ರಸ್ತೆ, ಜೋಡಿ ತೆಂಗಿನಮರ ರಸ್ತೆ, ಅಂಬೇಡ್ಕರ್ ಸರ್ಕಲ್‌ನಿಂದ ಸರ್ಕಾರಿ ಅತಿಥಿ ಗೃಹದವರೆಗಿನ ಮೈಸೂರು–ಬೆಂಗಳೂರು ನೀಲಗಿರಿ ರಸ್ತೆ, ಎಸ್‌ಪಿ ಸರ್ಕಲ್‌ನಿಂದ ಚಾಮುಂಡಿ ವಿಹಾರ ಕ್ರೀಡಾಂಗಣ ಮಾರ್ಗವಾಗಿ ನಜರ್ ಬಾದ್ ಪೊಲೀಸ್ ಠಾಣೆವರೆಗಿನ ರಸ್ತೆ ಹಾಗೂ ಮಲೆ ಮಹದೇಶ್ವರ ರಸ್ತೆ ವೈಟ್ ಟಾಪಿಂಗ್ ಮೂಲಕ ಅಭಿವೃದ್ಧಿ ಮಾಡಲಾಗುತ್ತಿದೆ. ಜೊತೆಗೆ ರಿಂಗ್ ರಸ್ತೆಯಲ್ಲಿ ನಾಲ್ಕು ಅಂಡರ್ ಪಾಸ್ ನಿರ್ಮಾಣ ಮಾಡಲಾಗುವುದು. ರಾಜೀವ್‌ನಗರ 2ನೇ ಹಂತದಲ್ಲಿ ಪಾರಂಪರಿಕ ಶೈಲಿಯಲ್ಲಿ ಗ್ರಂಥಾಲಯ ನಿರ್ಮಾಣವಾಗಲಿದೆ.

ತೃಪ್ತಿ ಮತ್ತು ಅತೃಪ್ತಿ: ಮೈಸೂರಲ್ಲಿ ಅತೀ ಹೆಚ್ಚಿನ ಜನಸಂಖ್ಯೆಯುಳ್ಳ ಎನ್‌ಆರ್ ಕ್ಷೇತ್ರದ ಜನತೆಗೆ ಪಂಚ ಗ್ಯಾರಂಟಿ ಯೋಜನೆಯಿಂದಾದ ಅನುಕೂಲತೆಗಳ ತೃಪ್ತಿ ಇದ್ದರೆ, ಹತ್ತಾರು ಮನವಿಗಳನ್ನು ಕೊಟ್ಟು ಅಲೆದಾಡಿದರೂ ಪ್ರಮುಖ ಅಭಿವೃದ್ಧಿ ಕಾರ್ಯಗಳಾಗದಿರುವ ಅತೃಪ್ತಿಯೂ ಕಾಡುತ್ತಿದೆ. ಎನ್.ಆರ್ ಕ್ಷೇತ್ರದಲ್ಲಿ ಡಿಗ್ರಿ ಕಾಲೇಜು ಆಗಲೇಬೇಕು ಎಂದು ಜಾಗ ಗುರ್ತಿಸಿದ್ದರೂ ನಿರ್ಧಾರ ಅಂತಿಮವಾಗಿಲ್ಲ. ಇಂಜಿನಿಯರ್ ಕಾಲೇಜು ನಿರ್ಮಾಣಕ್ಕೂ ಸ್ಥಳ ಗುರ್ತಿಸಲಾಗಿದೆ. ಆದರೆ, ಮಂಜೂರಾಗಿಲ್ಲ. ಕೊರೊನಾ ಸಂದರ್ಭದಲ್ಲಿ 4 ಕೋಟಿ ರೂ.ಖರ್ಚು ಮಾಡಿ ವೈದ್ಯ ಕೀಯ ಸಲಕರಣೆಗಳ ಒದಗಿಸಿದ್ದರೂ ಬೀಡಿ ಕಾರ್ಮಿಕರ ಆಸ್ಪತ್ರೆಯನ್ನು ತಾಲೂಕು ಮಟ್ಟದ ಆರೋಗ್ಯ ಕೇಂದ್ರ ವನ್ನಾಗಿ ಅಭಿವೃದ್ಧಿ ಮಾಡುವ ಕಾರ್ಯ ನೆನೆಗುದಿಗೆ ಬಿದ್ದಿದೆ. ಆಶ್ರಯ ಯೋಜನೆಯಡಿ ಮನೆಗಳಿಗಾಗಿ ಸುಮಾರು 3 ಸಾವಿರ ಜನರು, ವಂತಿಕೆ ಹಣ ಕಟ್ಟಿ 20 ವರ್ಷದಿಂದ ಕಾಯುತ್ತಿದ್ದಾರೆ. ಆದರೆ, ಒಂದೇ ಒಂದು ಮನೆ ಕೊಡಲು ಸಾಧ್ಯವಾಗಿಲ್ಲ. 4.5 ಲಕ್ಷ ಜನಸಂಖ್ಯೆ ಮತ್ತು 51 ಸಾವಿರ ಮನೆಗಳಿಗೆ ಕ್ಷೇತ್ರಕ್ಕೆ ಹೊಸ ಪೊಲೀಸ್ ಠಾಣೆ ಮಾಡಿ ಎಂದರೆ, ಸಿಬ್ಬಂದಿ ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಬಾಲಭವನ ಅಭಿವೃದ್ಧಿ ಯೋಜನೆ ಗಳು ಸಿದ್ಧವಾದರೂ ಕಾರ್ಯ ರೂಪಕ್ಕೆ ತರಲು ಸ್ಪಂದನೆ ಸಿಗುತ್ತಿಲ್ಲ. ಇಷ್ಟೆಲ್ಲಾ ಹಿನ್ನಡೆಯಿಂದಾಗಿ, ವಿಳಂಬ ಧೋರಣೆಯನ್ನು ನೋಡಿ ನೋಡಿ ಅತೃಪ್ತ ಭಾವ ಕಾಡುತ್ತಿದೆ. ಕೆಲಸ ಮಾಡುವ ಆಸಕ್ತಿ ಕಡಿಮೆಯಾಗುತ್ತಿದೆ.



ಮತ್ತೆ ಚುನಾವಣೆಗೆ ಸ್ಪರ್ಧಿಸಲ್ಲ...!

ಕಳೆದ ಚುನಾವಣೆಯಲ್ಲೇ ಇನ್ನು ಮುಂದೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದೆ. ಆದರೆ, ಕ್ಷೇತ್ರದ ಮತದಾರರ ಒತ್ತಾಯದ ಮೇರೆಗೆ ನಿಲ್ಲುವಂತಾಗಿ, ಕ್ಷೇತ್ರದ ಅಭಿವೃದ್ಧಿ ಕಾರ್ಯ ಮುಂದುವರೆಸುವಂತಾಯಿತು. ಮಾನವೀಯತೆ ಮೆರೆಯಲು ಏನೆಲ್ಲಾ ಕಾರ್ಯಗಳನ್ನು ಮಾಡಬೇಕೋ ಅದೆಲ್ಲವನ್ನೂ ಶಕ್ತಿ ಮೀರಿ ಮಾಡಿದ್ದೇನೆ. ಕುಟುಂಬದ ಜೊತೆಗೆ ಕಾಲ ಕಳೆಯಬೇಕು. ಹಾಗೆಯೇ ಅಧಿಕಾರದ ಆಸೆ ನನ್ನಲ್ಲಿ ಉಳಿದಿಲ್ಲ. ಆದ್ದರಿಂದ ಖಂಡಿತ ಮುಂದಿನ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ನನ್ನ ನಿಲುವನ್ನು ಈ ಮೂಲಕ ಪ್ರಕಟಿಸಿದ್ದೇನೆ.

– ತನ್ವೀರ್ ಸೇಠ್



ಕೈ ಜೋಡಿಸಿ

ಮೈಸೂರು ಹೃದಯ ಭಾಗದಲ್ಲಿರುವ ಎನ್.ಆರ್ ಕ್ಷೇತ್ರಕ್ಕೆ ಹಿಂದೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿತ್ತು. ಆದರೀಗ ಕುಡಿಯುವ ನೀರಿನ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿದೆ. ಮಳೆ ಬಂದರೆ ಎಲ್ಲಿ ಅನಾಹುತ ಸಂಭವಿಸುತ್ತೋ ಎಂದು ರಾತ್ರಿಯಿಡೀ ಕಾಯುತ್ತಿದ್ದ ಪರಿಸ್ಥಿತಿ ದೂರವಾಗಿದೆ. ನಾನೆಂದು ಯಾರನ್ನೂ ಬೇರೆಯವರೆಂಬ ಭಾವನೆಯಲ್ಲಿ ಕಂಡಿಲ್ಲ. ಆದರೂ ನನ್ನ ವಿರುದ್ಧ ಮಾತನಾಡುವವರು ನನ್ನೊಂದಿಗೆ ಕೈ ಜೋಡಿಸಿದರೆ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಮಾಡಬಹುದು.


ನಂದಿನಿ
ಮೈಸೂರು ಮಿತ್ರ
47
ಚಾಮರಾಜನಗರ
ಚಾಮುಲ್
ಜಿಲ್ಲಾ ಹಾಲು ಒಕ್ಕೂಟ
ಮೈಸೂರು ಮಿತ್ರ
ದಿನ ಪತ್ರಿಕೆಯ
46 ವರ್ಷಗಳ ಸಮರ್ಪಿತ ಸೇವೆಗೆ ಅಭಿನಂದನೆಗಳು ಹಾಗೂ
47ನೇ ವಾರ್ಷಿಕೋತ್ಸವದ ಶುಭಾಶಯಗಳು
ಶುಭಕೋರುವವರು
ಶ್ರೀ ಎಂ. ನಂಜುಂಡಸ್ವಾಮಿ
ಅಧ್ಯಕ್ಷರು
ಶ್ರೀ ಹೆಚ್.ಎಸ್. ನಂಜುಂಡಪ್ರಸಾದ್
ನಿರ್ದೇಶಕರು
ಶ್ರೀ ವೈ.ಸಿ. ನಾಗೇಂದ್ರ
ನಿರ್ದೇಶಕರು
ಶ್ರೀ ಹೆಚ್.ಎಸ್. ಬಸವರಾಜು
ನಿರ್ದೇಶಕರು
ಶ್ರೀ ಎಸ್. ಮಹದೇವಸ್ವಾಮಿ
ನಿರ್ದೇಶಕರು
ಶ್ರೀ ಎಂ.ಪಿ. ಸುನೀಲ್
ನಿರ್ದೇಶಕರು
ಶ್ರೀ ಸದಾಶಿವಮೂರ್ತಿ
ನಿರ್ದೇಶಕರು
ಶ್ರೀ ಶಾಹುಲ್ ಅಹಮದ್
ನಿರ್ದೇಶಕರು
ಶ್ರೀಮತಿ ಶೀಲಾ ಪುಟ್ಟರಂಗಶೆಟ್ಟಿ
ನಿರ್ದೇಶಕರು
ಶ್ರೀ ಕೆ.ಕೆ. ರೇವಣ್ಣ
ಸರ್ಕಾರದ ನಾಮ ನಿರ್ದೇಶಕರು
ಶ್ರೀಮತಿ ಜ್ಯೋತಿ ಅರಸ್.ಜಿ.ಸಿ
ಸಹಕಾರ ಸಂಘಗಳ ಉಪನಿಬಂಧಕರು
ಡಾ|| ಮಂಜುನಾಥ. ಬಿ
ಉಪ ನಿರ್ದೇಶಕರು ಪಶುಪಾಲನಾ ಇಲಾಖೆ
ಶ್ರೀ ಜಗದೀಶ್ ನಾಯಕ್
ಎನ್.ಡಿ.ಡಿ.ಬಿ ಪ್ರತಿನಿಧಿ
ಶ್ರೀ ವಿ.ಸಿ. ವೆಂಕಟೇಶ್
ಮುಖ್ಯಸ್ಥರು (ಗುಣ ಭರವಸೆ ಮತ್ತು ಉತ್ಪಾದನೆ)
ಕ.ಹಾ.ಮ. ಪ್ರತಿನಿಧಿ
ಶ್ರೀ ಕೆ. ರಾಜಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಚಾಮರಾಜನಗರ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಕುದೇರು ಗ್ರಾಮ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316. ಕರ್ನಾಟಕ.

75ರ ಹರೆಯದ ಟೆನ್ನಿಸ್ ಸಾಧಕ!

● ಮೋಹನ್ ಕಾಯಕ

ಇಂಟರ್‌ನ್ಯಾಷನಲ್ ಟೆನ್ನಿಸ್ ಫೆಡರೇಷನ್‌ನ ವರ್ಲ್ಡ್ ಟೆನ್ನಿಸ್ ಮಾಸ್ಟರ್ಸ್ ರ‍್ಯಾಂಕಿಂಗ್‌ನಲ್ಲಿ ಭಾರತ ಮಾತ್ರವಲ್ಲ ಏಷ್ಯಾ ಖಂಡದಲ್ಲಿಯೇ ನಂಬರ್ ಓನ್ ರ‍್ಯಾಂಕ್ ಪಡೆದಿರುವ ಸಾಂಸ್ಕೃತಿಕ ನಗರಿ ಮೈಸೂರಿನ ಹಿರಿಯ ಅಂತರಾಷ್ಟ್ರೀಯ ಟೆನ್ನಿಸ್ ಪಟು ತುಳಸಿರಾಮು ಬಿಳಿಕೆರೆ ಸಿದ್ದರಾಜು(ತುಳಸಿರಾಮು) ವಿಶ್ವದಲ್ಲಿ 48ನೇ ರ‍್ಯಾಂಕಿಂಗ್ ವಿಶಿಷ್ಟ ಸಾಧನೆಯೊಂದಿಗೆ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಮೊದಲು ಟೆನ್ನಿಸ್ ಕ್ರೀಡೆಯನ್ನು ಆರೋಗ್ಯ ದೃಷ್ಟಿಯಿಂದ ಹವ್ಯಾಸವಾಗಿ ಆರಂಭಿಸಿ, ಈಗ ಅಸಾಮಾನ್ಯ ಸಾಧನೆ ಮಾಡಿರುವ 75 ವರ್ಷದ ಹಿರಿಯ ಸಾಹಸಿ ತುಳಸಿರಾಮು, ವರ್ಲ್ಡ್ ಟೆನ್ನಿಸ್ ಮಾಸ್ಟರ್ಸ್ ರ‍್ಯಾಂಕಿಂಗ್‌ನಲ್ಲಿ 1700 ಅಂಕಗಳೊಂದಿಗೆ ಏಷ್ಯಾ ಖಂಡದಲ್ಲೇ ಅಗ್ರಸ್ಥಾನ ಪಡೆದು ಹೊಸ ಐತಿಹ್ಯ ಬರೆದಿದ್ದಾರೆ.

2005–06 ರಿಂದ ಅಂದರೆ ತಮ್ಮ 51ನೇ ವಯಸ್ಸಿನಿಂದ ಟೆನ್ನಿಸ್ ಕ್ರೀಡೆಯಲ್ಲಿ ತೊಡಗಿಸಿಕೊಂಡ ಅವರು, ಮೈಸೂರು ಟೆನ್ನಿಸ್ ಕ್ಲಬ್‌ನಲ್ಲಿ ನಿರಂತರ ಅಭ್ಯಾಸ ನಡೆಸುತ್ತಾ, 100ಕ್ಕೂ ಹೆಚ್ಚು ರಾಜ್ಯ, ರಾಷ್ಟ್ರ ಮತ್ತು ಅಂರಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಿ 80ಕ್ಕೂ ಹೆಚ್ಚು ಪಂದ್ಯಾವಳಿಗಳಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

2013ರಲ್ಲಿ ಮುಂಬೈನಲ್ಲಿ ನಡೆದ 7ನೇ ಸೀನಿಯರ್ ರ‍್ಯಾಂಕಿಂಗ್ ಚಾಂಪಿಯನ್ ಶಿಪ್, 2017ರಲ್ಲಿ ಎಐಎಸ್‌ಟಿಎ ಟೆನ್ನಿಸ್ ಟೂರ್ನಮೆಂಟ್, 2019ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಎಐಎಸ್‌ಟಿಎ ಸಿನಿಯರ್ ನ್ಯಾಷನಲ್ ಟೆನ್ನಿಸ್ ಚಾಂಪಿಯನ್ಸ್, ಅದೇ ವರ್ಷ ವಿಜಯವಾಡದಲ್ಲಿ ಆಲ್ ಇಂಡಿಯಾ ರ‍್ಯಾಂಕಿಂಗ್ ಸಿನಿಯರ್ ಟೆನ್ನಿಸ್ ಟೂರ್ನಿಮೆಂಟ್, 2021ರಲ್ಲಿ ಕರ್ನಾಟಕ ರಾಜ್ಯ ಮಾಸ್ಟರ್ಸ್ ಗೇಮ್ಸ್, 2ನೇ ಕರ್ನಾಟಕ ಸ್ಟೇಟ್ ಮಾಸ್ಟರ್ ಗೇಮ್ಸ್, 2022ರಂದು ಬೆಂಗಳೂರಿನಲ್ಲಿ ನಡೆದ 38ನೇ ಸ್ಟೆಪಾಕ್ ಅನ್ಯೂಯಲ್ ಪ್ರೈಜ್‌ಮನಿ ಟೆನ್ನಿಸ್ ಟೂರ್ನಿಮೆಂಟ್, 2023ರಂದು ವಿಜಯವಾಡದಲ್ಲಿ ನಡೆದ ಆಲ್ ಇಂಡಿಯಾ ಸೀನಿಯರ್ ರ‍್ಯಾಂಕಿಂಗ್ ಟೂರ್ನಿಮೆಂಟ್, ಅಂತಾರಾಷ್ಟ್ರೀಯ ಟೆನ್ನಿಸ್ ಫೆಡರೇಶನ್(ಐಟಿಎಫ್) ಚಿದಂಬರಂ, ಅಹಮದಾಬಾದ್, ಚೀನಾ ಮತ್ತು ಸಿಂಗಾಪುರ್‌ನಲ್ಲಿ ಆಯೋಜಿತ ಅಂತಾರಾಷ್ಟ್ರೀಯ ಟೆನಿಸ್ ಪಂದ್ಯಾವಳಿಗಳಲ್ಲಿ 55 ವರ್ಷದಿಂದ 70 ವರ್ಷ ಮೇಲ್ಪಟ್ಟ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಪಾರುಪತ್ಯ ಮೆರೆದಿದ್ದಾರೆ.



> "ವಯಸ್ಸಾದಂತೆ ಉತ್ಸಾಹ ಕಳೆದುಕೊಳ್ಳುವುದು ಸಹಜ. ಆದರೆ, ಸದಾ ಉತ್ಸಾಹಿಯಾಗಿರಲು ಕ್ರೀಡೆ ಸಹಕಾರಿಯಾಗುತ್ತದೆ. ಗೆಲ್ಲಬೇಕೆಂಬ ಹಠವೇ ನಮ್ಮನ್ನು ಉತ್ಸಾಹಿಯನ್ನಾಗಿ ಮಾಡುತ್ತದೆ. ಅಲ್ಲದೆ ಗೆದ್ದ ಬಳಿಕ ಅಭಿನಂದನೆ ಪಡೆಯುವುದರಲ್ಲಿ ದೊರೆಯುವ ತೃಪ್ತಿ ಮತ್ತೆಲ್ಲೂ ಸಿಗದು. ಆದ್ದರಿಂದ ಪ್ರತಿಯೊಬ್ಬರು ಒಂದಲ್ಲಾ ಒಂದು ಬಗೆಯ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು.
> - ಸೀತಾರಾಮು,
> ಹಿರಿಯ ಟೆನ್ನಿಸ್ ಪಟು

ಟೆನ್ನಿಸ್ ಕ್ರೀಡೆಗಿಳಿದ ಮೂರನೇ ವರ್ಷಕ್ಕೆ ಆಲ್ ಇಂಡಿಯಾ ಸೀನಿಯರ್ಸ್ ಟೆನ್ನಿಸ್ ಟೂರ್ನಿಮೆಂಟ್‌ನ ಸಿಂಗಲ್ಸ್‌ನಲ್ಲಿ ವಿನ್ನರ್ ಆದ ಬಳಿಕ ಭಾಗವಹಿಸಿದ ಬಹುತೇಕ ಪಂದ್ಯಾವಳಿಗಳಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಸಾಕಷ್ಟು ಮೆಡಲ್ ಜಯಿಸಿದ್ದೇನೆ. ಇಂದು ಭಾರತಕ್ಕೆ ಮಾತ್ರವಲ್ಲದೆ ಏಷ್ಯಾ ಖಂಡದಲ್ಲೆ ನಾನು ನಂಬರ್ ಒನ್!. ವರ್ಷಕ್ಕೆ 10ಕ್ಕೂ ಹೆಚ್ಚು ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿದ್ದಾರೆ.

ಫೆ.10ರಂದು ತಿರುವನಂತಪುರ ಐಟಿಎಫ್ ಎಂಟಿ–400 ಟೂರ್ನಮೆಂಟ್‌ನ 70 ವರ್ಷ ಮೇಲ್ಪಟ್ಟ ವಿಭಾಗದ ಸಿಂಗಲ್ಸ್ ರನ್ನರ್, ಡಬಲ್ಸ್ ವಿನ್ನರ್ ಆಗಿರುವ ತುಳಸಿರಾಮು, ಮಾ.8 ರಂದು ಟರ್ಕಿಯಲ್ಲಿ ನಡೆಯುವ ಮಾಸ್ಟರ್ಸ್ ವರ್ಲ್ಡ್ ಚಾಂಪಿಯನ್ ಶಿಪ್ ಭಾರತ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಅಲ್ಲದೆ ಪದಕ ಜಯಿಸುವ ಭರವಸೆಯನ್ನು ಮೂಡಿಸಿದ್ದಾರೆ.




ಮೈಸೂರು ಟೆನ್ನಿಸ್ ಕ್ಲಬ್‌ನಲ್ಲಿ ಪ್ರತಿನಿತ್ಯ 1–2 ಗಂಟೆಗಳ ಕಾಲ ಪ್ರಾಕ್ಟಿಸ್ ಮಾಡಲಿದ್ದು, ಆಹಾರ ಕ್ರಮದಲ್ಲಿಯೂ ಶಿಸ್ತು ಕಾಯ್ದುಕೊಂಡಿದ್ದಾರೆ. ಸ್ನಾತಕೋತ್ತರ ಪದವಿ ಪಡೆದಿರುವ ಅವರು, ರಿಯಲ್ ಎಸ್ಟೇಟ್ ಉದ್ಯಮಿಯಾಗಿ ಟೆನಿಸ್ ಕ್ರೀಡೆಯನ್ನು ಅಪ್ಪಿಕೊಂಡಿದ್ದಾರೆ. ಹಿರಿಯ ವಯಸ್ಸಿನಲ್ಲೂ ಉತ್ಸಾಹಿ ಯುವಕರಂತೆ ಅಂಕಣದಲ್ಲಿದ್ದಾಗ ಎಲ್ಲರ ಗಮನ ಸೆಳೆಯುವುದು ಮಾತ್ರವಲ್ಲದೆ ಮೆಡಲ್ ಗೆಲ್ಲುವ ಆತ್ಮವಿಶ್ವಾಸ ಹೊಂದಿದ್ದಾರೆ.

ಮಕ್ಕಳಿಂದ ಟೆನ್ನಿಸ್ ಆರಂಭ: ನನ್ನ ಮಕ್ಕಳನ್ನು ಟೆನ್ನಿಸ್ ಕ್ರೀಡೆಗೆ ಸೇರಿಸಬೇಕು ಎಂದುಕೊಂಡು ಮೈಸೂರು ಟೆನಿಸ್ ಕ್ಲಬ್ ಬಳಿ ಕೋಚ್‌ಗಳನ್ನು ಭೇಟಿ ಯಾಗಿದ್ದೆ. ಆದರೆ, ಟೆನಿಸ್ ಆಟ ನನ್ನ ಮೇಲೆಯೇ ಹೆಚ್ಚು ಪರಿಣಾಮ ಬೀರಿತು. ಪ್ರತಿನಿತ್ಯ ಒಂದೆರಡು ಗಂಟೆ ಪ್ರಾಕ್ಟಿಸ್ ಮಾಡುತ್ತಾ ಬಂದಿದ್ದರ ಫಲವಾಗಿ ದೇಶವನ್ನು ಪ್ರತಿನಿಧಿಸುವಂತಹ ಅವಕಾಶ ಸಿಕ್ಕಿತು ಎಂದು ಹಿರಿಯ ಟೆನ್ನಿಸ್ ಪಟು ಸೀತಾರಾಮು 'ಮೈಸೂರು ಮಿತ್ರ'ನಲ್ಲಿ ಹೆಮ್ಮೆಯಿಂದ ನುಡಿಯುತ್ತಾರೆ.

ಏನ್ ಶಾಸಕರೇ... ಹೇಗಿದ್ದೀರಾ..!

ಮಂಡ್ಯ ಅಭಿವೃದ್ಧಿಯಾಗುತ್ತಿದೆ...



ರವಿಕುಮಾರ್ ಗಣಿಗ ಶಾಸಕರು, ಮಂಡ್ಯ ವಿಧಾನಸಭಾ ಕ್ಷೇತ್ರ



ಅಮೃತ್ ಯೋಜನೆಯಡಿ ಮಂಡ್ಯ ನಗರದ ಗಾಂಧಿ ಪಾರ್ಕ್ ಸೇರಿದಂತೆ ಡಿವಿಕೆ, ಚೆನ್ನಯ್ಯ ಪಾರ್ಕ್‌ಗಳ 1.8 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ರವಿಕುಮಾರ್ ಗಣಿಗ ಚಾಲನೆ ನೀಡುತ್ತಿರುವುದು.

ಗ್ಯಾರಂಟಿಗಳ ನಡುವೆಯೂ ಮಂಡ್ಯ ಅಭಿವೃದ್ಧಿ ಆಗುತ್ತಿದೆ. ಬಜೆಟ್, ಸಂಪುಟ ಸಭೆ ಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಹಲವು ಯೋಜನೆಗಳು ದಕ್ಕಿವೆ.

ಈ ಬಾರಿಯ ಬಜೆಟ್‌ನಲ್ಲಿ ಜಿಲ್ಲೆಯ ವಿ.ಸಿ.ನಾಲೆ ಅಭಿವೃದ್ಧಿಗೆ ನೂರು ಕೋಟಿ ಘೋಷಿಸಲಾಗಿದೆ. ಇದು ಕೇವಲ ಮಂಡ್ಯ ಮಾತ್ರವಲ್ಲದೇ ಮದ್ದೂರು ಸೇರಿದಂತೆ ಜಿಲ್ಲೆಯ ಇತರೆ ತಾಲೂಕಿನ ಜನರಿಗೂ ಅನುಕೂಲವಾಗಲಿದೆ ಶೀಘ್ರಟೆಂಡರ್ ಕರೆದು ನಾಲಾ ಅಭಿವೃದ್ಧಿ ಮಾಡಬೇಕಿದೆ.


ಎರಡೂವರೆ ವರ್ಷದಲ್ಲಿ 100 ಕೋಟಿ ಹಣವನ್ನು ನಾಲಾ ಅಭಿವೃದ್ಧಿ ಕಾಮಗಾರಿಗೆ ವ್ಯಯ ಮಾಡಲಾಗಿದೆ. ಇನ್ನೂ ನೂರು ಕೋಟಿ ಹಣ ನಾಲಾ ಅಭಿವೃದ್ಧಿಗಾಗಿ ಹಂತ ಹಂತವಾಗಿ ಬಿಡುಗಡೆಯಾಗಲಿದ್ದು, ಇದಕ್ಕಾಗಿ ಬೇಡಿಕೆ ಸಲ್ಲಿಸಲಾಗಿದೆ. ಜೊತೆಗೆ ಬಸರಾಳು ಭಾಗದ ಹೇಮಾವತಿ ನಾಲೆ ಅಭಿವೃದ್ಧಿಗೆ ಡಿಪಿಆರ್ ಆಗಿದೆ. 350 ಕೋಟಿ ವೆಚ್ಚದಲ್ಲಿ ಬಸರಾಳು ಭಾಗದ ನಾಲಾ ಅಭಿವೃದ್ಧಿ ಕಾಮಗಾರಿಯನ್ನೂ ಕೈಗೆತ್ತಿಕೊಳ್ಳಲಾಗುತ್ತಿದೆ.


ಮಂಡ್ಯ ನಗರಕ್ಕೆ ಹೊಸರೂಪ ಕೊಡಲು ಮುಂದಾಗಿದ್ದು, ಡೆಲ್ಟಾ ಮೂಲಕ ಮಹಾನಗರ ಪಾಲಿಕೆ ಮಾದರಿಯಲ್ಲಿ ಮಂಡ್ಯ ನಗರದ ಬೆಸಗರಹಳ್ಳಿ ರಾಮಣ್ಣ ವೃತ್ತದಿಂದ ಗೌರಿಶಂಕರ ಕಲ್ಯಾಣ ಮಂಟಪದವರೆಗೆ ಉತ್ತಮ ರೀತಿಯ ರಸ್ತೆ, ಫುಟ್‌ಪಾತ್, ಸೈಕಲ್ ಹಬ್ ನಿರ್ಮಿಸಲಾಗುವುದು. ಜೊತೆಗೆ ಬನ್ನೂರು ರಸ್ತೆಯನ್ನು ಸಂಪೂರ್ಣ ಅಭಿವೃದ್ಧಿ ಮಾಡಬೇಕೆಂಬ ಮಹತ್ವದ ಉದ್ದೇಶವಿದೆ. ಇದರ ಜೊತೆಗೆ ಮಂಡ್ಯ ನಗರದ ಹೊಸಹಳ್ಳಿ ವೃತ್ತದ ಅಭಿವೃದ್ಧಿಗೂ 1.5 ಕೋಟಿ ಬಿಡುಗಡೆಯಾಗಿದೆ. ನಗರಸಭೆ ಮೂಲಕ ಹಣ ಬಿಡುಗಡೆಯಾಗಿ ವಿದೇಶಿ ಮಾದರಿಯಲ್ಲಿ ವೃತ್ತವನ್ನು ಅಭಿವೃದ್ಧಿಪಡಿಸಲಾಗುವುದು. ವಿ.ವಿ.ರಸ್ತೆಗೆ 4 ಕೋಟಿ ವೆಚ್ಚದಲ್ಲಿ ನಗರಸಭೆ ಮತ್ತು ಡೆಲ್ಟಾ ಮೂಲಕ ಸಂಪೂರ್ಣ ಅಭಿವೃದ್ಧಿಪಡಿಸಿ, ವಾಹನ ನಿಲ್ದಾಣ ಮುಕ್ತ ರಸ್ತೆಯನ್ನಾಗಿ ಪರಿವರ್ತಿಸಬೇಕಾಗಿದೆ ಎಂದು ತಮ್ಮ ಕನಸಿನ ಯೋಜನೆಯನ್ನು ಮುಂದಿಟ್ಟರು.


> "ಮಂಡ್ಯ ಅಭಿವೃದ್ಧಿಗೆ ಎರಡೂವರೆ ವರ್ಷದಲ್ಲಿ ರಾಜ್ಯ ಸರ್ಕಾರ ಭರಪೂರ ಕೊಡುಗೆ ನೀಡಿದೆ. ಇನ್ನುಳಿದ ಅವಧಿಯಲ್ಲೂ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಸ್ಪಂದಿಸಿ ಮತ್ತಷ್ಟು ಅನುದಾನವನ್ನು ಕೊಡುತ್ತದೆ ಎಂಬ ಭರವಸೆ ನನ್ನಲ್ಲಿದೆ. ಜೊತೆಗೆ ಕೇಂದ್ರ ಸಚಿವರು ಮಂಡ್ಯಕ್ಕೆ ಕೈಗಾರಿಕೆ ತರುತ್ತೇವೆ ಎಂಬ ಭರವಸೆ ನೀಡಿದ್ದು, ಈ ಹಿನ್ನಲೆಯಲ್ಲಿ ಬಸರಾಳು ಬಳಿ ನೂರು ಎಕರೆ ಜಮೀನನ್ನು ಗುರುತಿಸಿದ್ದೇನೆ. ಆ ಜಾಗದಲ್ಲಿ ಕೈಗಾರಿಕೆ ಬಂದರೆ ನಮ್ಮ ಜನಕ್ಕೆ ಸಾಕಷ್ಟು ಉದ್ಯೋಗ ಸಿಗಲಿದೆ
> - ರವಿಕುಮಾರ್ ಗಣಿಗ
> ಶಾಸಕರು, ಮಂಡ್ಯ


ಹೊಸ ಸಕ್ಕರೆ ಕಾರ್ಖಾನೆ ನಿರ್ಮಿಸುವ ಬದಲು ಈಗಿರುವ ಮೈಶುಗರ್‌ಗೆ ಹೊಸ ಬಾಯ್ಲರ್ ಅಳವಡಿಸಲಾಗುವುದು. ಇದಕ್ಕೆ 60 ಕೋಟಿ ಖರ್ಚಾಗಲಿದ್ದು, ಸರ್ಕಾರ ಹಣ ನೀಡಲಿದೆ. ಇದಕ್ಕಾಗಿ ಟೆಂಡರ್ ಸಹ ಕರೆಯಲಾಗಿದೆ. ಇದಿಷ್ಟೇ ಅಲ್ಲದೆ 33 ಕೋಟಿ ವೆಚ್ಚದಲ್ಲಿ ಮಂಡ್ಯಕ್ಕೆ ಕಾರ್ಮಿಕ ವಸತಿ ಶಾಲೆ ಬಜೆಟ್‌ನಲ್ಲಿ ಮಂಜೂರಾಗಿದೆ.

35 ಕೋಟಿ ವೆಚ್ಚದಲ್ಲಿ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ವತಿಯಿಂದ ಅಬ್ದುಲ್ ಕಲಾಂ ಆಜಾದ್ ಯೋಜನೆಯಡಿ ಬಿ.ಹೊಸೂರು ಗ್ರಾಮದಲ್ಲಿ ಎರಡೂವರೆ ಎಕರೆ ಜಾಗ ಮಂಜೂರಾಗಿದೆ. ಅಲ್ಲಿ ಅಲ್ಪಸಂಖ್ಯಾತರ ಮಕ್ಕಳಿಗಾಗಿ ಹಾಸ್ಟೆಲ್ ನಿರ್ಮಿಸಲಾಗುವುದು. ಜೊತೆಗೆ ಇನ್ನು 2.5 ಎಕರೆ ಜಾಗ ಬೇಕಾಗಿದ್ದು, ಶೀಘ್ರದಲ್ಲೇ ಜಿಲ್ಲಾಧಿಕಾರಿಗಳು ಉಳಿದ ಜಾಗವನ್ನು ಮಂಜೂರು ಮಾಡಿಕೊಡಲಿದ್ದಾರೆ. ಒಟ್ಟಾರೆಯಾಗಿ ಬಿ.ಹೊಸೂರು ಗ್ರಾಮವನ್ನು ಶಿಕ್ಷಣ ಮತ್ತು ಆರೋಗ್ಯ ಹಬ್ ಮಾಡಬೇಕಿದೆ. ಅಮೃತ್ 1 ಯೋಜನೆಯಡಿ ನಗರದ 24 ವಾರ್ಡ್‌ಗೆ ಕುಡಿಯುವ ನೀರು ಸೌಕರ್ಯವನ್ನು ಶೀಘ್ರ ಒದಗಿಸಲಾಗುವುದು. 150 ಕೋಟಿ ವೆಚ್ಚದಲ್ಲಿ ನಗರದ 24 ವಾರ್ಡ್‌ಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಗುರಿ ಹೊಂದಲಾಗಿದೆ.


47
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
47
ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ತನ್ವೀರ್ ಸೇಠ್
ಶಾಸಕರು, ನರಸಿಂಹರಾಜ
ವಿಧಾನಸಭಾ ಕ್ಷೇತ್ರ
ಮೈಸೂರು



ಶುಭಾಶಯಗಳು
47
ಮೈಸೂರು ಮಿತ್ರ
46 ವರ್ಷಗಳನ್ನು ಪೂರೈಸಿ
47ನೇ ವಸಂತಕ್ಕೆ
ಪ್ರವೇಶಿಸುತ್ತಿರುವ
ಮಿತ್ರನಿಗೆ ಶುಭಾಶಯಗಳು
ಡಾ. ಡಿ. ತಿಮ್ಮಯ್ಯ
ವಿಧಾನ ಪರಿಷತ್ತಿನ ಸದಸ್ಯರು,
ಕರ್ನಾಟಕ



47
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
47 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಪ್ರಾದೇಶಿಕ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಎಸ್.ಬಿ.ಎಂ.ಮಂಜು
ಮಾಜಿ ಕಾರ್ಪೊರೇಟರ್,
ಸಹಕಾರಿಗಳು ಹಾಗೂ
ಮೈಸೂರು ನಗರ
ಜೆಡಿಎಸ್ ಅಧ್ಯಕ್ಷರು


47
ಮೈಸೂರು ಮಿತ್ರನಿಗೆ
47th
ನೇ ವರ್ಷದ
ವಾರ್ಷಿಕೋತ್ಸವದ ಶುಭಾಶಯಗಳು
ಸಿ.ಬಸವೇಗೌಡ
ಮಾಜಿ ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ
ಪ್ರಾಧಿಕಾರ/ಮೈಸೂರು-ಚಾಮರಾಜನಗರ
ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್

ಮಕ್ಕಳ ಕೈಲಿ ಸ್ಮಾರ್ಟ್‌ಫೋನ್

ಮೊದಲು ಮುದ್ದು, ಬಳಿಕ ಗುದ್ದು..!





ಹತ್ತು ವರ್ಷದ ಬಾಲಕನೊಬ್ಬ ಪಬ್‌ಜಿ ಆಡುತ್ತಾ ಅಥವಾ ಇನ್‌ಸ್ಟಾ ರೀಲ್ಸ್ ನೋಡುತ್ತಾ ತಲ್ಲೀನನಾಗಿದ್ದಾನೆ. ಅಕಸ್ಮಾತ್ ಅವನ ಕೈಲಿದ್ದ ಫೋನ್ ಕಿತ್ತುಕೊಂಡರೆ ಅವನು ತೋರುವ ಪ್ರತಿಕ್ರಿಯೆ ಹೇಗಿರುತ್ತದೆ? ಬಹುಶಃ ಒಬ್ಬ ಡ್ರಗ್ ಅಡಿಕ್ಟ್‌ನನ್ನು ಪುನರ್ವಸತಿ ಕೇಂದ್ರಕ್ಕೆ ಸೇರಿಸಿದಾಗ ಆಗುವಷ್ಟು ಆಕ್ರೋಶ!

ಇಂದು ಸೋಷಿಯಲ್ ಮೀಡಿಯಾ ಕೇವಲ ಮನರಂಜನೆಯಲ್ಲ, ಅದು ಮಕ್ಕಳ ಮೆದುಳನ್ನು ಆವರಿಸಿಕೊಳ್ಳುತ್ತಿರುವ **'ಡಿಜಿಟಲ್ ಡ್ರಗ್'**. ಈ ಅಪಾಯವನ್ನು ಅರಿತ ಸರ್ಕಾರಗಳು ಸದ್ಯ ಈಗಲಾದರೂ ಬ್ಯಾನ್ (Ban) ಎಂಬ ಕತ್ತರಿ ಹಿಡಿದು ನಿಂತಿವೆ. ಆದರೆ, ಬರೀ ನಿಷೇಧದಿಂದ ಈ ಯುದ್ಧ ಗೆಲ್ಲಲು ಸಾಧ್ಯವೇ?

ಕರ್ನಾಟಕ ಸರ್ಕಾರವು ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಹೊಸ 'ಡಿಜಿಟಲ್ ಡಿಟಾಕ್ಸ್' (Digital Detox) ನೀತಿಯ ಕರಡನ್ನು ಸಿದ್ಧಪಡಿಸುತ್ತಿದ್ದು, ಇದರ ಪ್ರಕಾರ ಶಾಲಾ ಮಕ್ಕಳಿಗೆ ದಿನಕ್ಕೆ ಕೇವಲ ಒಂದು ಗಂಟೆಯ ಸ್ಕ್ರೀನ್ ಟೈಮ್‌ಗೆ ಮಿತಿ ಹೇರಲು ಮತ್ತು ಸಂಜೆ 7 ಗಂಟೆಯ ನಂತರ ಇಂಟರ್ನೆಟ್ ಬಳಕೆಯನ್ನು ನಿರ್ಬಂಧಿಸುವ ವಿಚಾರ ಪ್ರಸ್ತಾಪಿಸಲಾಗಿದೆ. ಸ್ಮಾರ್ಟ್‌ಫೋನ್ ಮತ್ತು ಇಂಟರ್ನೆಟ್ ವ್ಯಸನದಿಂದ ಮಕ್ಕಳಲ್ಲಿ ಹೆಚ್ಚುತ್ತಿರುವ ಏಕಾಗ್ರತೆಯ ಕೊರತೆ, ನಿದ್ರಾಹೀನತೆ ಮತ್ತು ಸಾಮಾಜಿಕ ಅಂತರದಂತಹ ಸಮಸ್ಯೆಗಳನ್ನು ಹೋಗಲಾಡಿಸಲು ಈ ಕ್ರಮ ಅನಿವಾರ್ಯವಾಗಿದ್ದು, ಶಿಕ್ಷಣ ಸಂಸ್ಥೆಗಳು ಮತ್ತು ಪೋಷಕರು ಈ ನಿಯಮಗಳನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಸರ್ಕಾರ ಆಶಿಸಿದೆ. ಈ ನೀತಿಯು ಡಿಜಿಟಲ್ ಜಗತ್ತಿನ ಮಾಯಾಜಾಲದಿಂದ ನಮ್ಮ ಮುಂದಿನ ತಲೆಮಾರನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಒಂದು ಕ್ರಾಂತಿಕಾರಿ ಮತ್ತು ಕಾನೂನುಬದ್ಧ ಮುನ್ನೆಚ್ಚರಿಕೆಯಾಗಿದೆ.

ಇದು ನಮ್ಮ ರಾಜ್ಯ, ದೇಶ ಮಾತ್ರವಲ್ಲ ಮಕ್ಕಳನ್ನು ಸೋಷಿಯಲ್ ಮೀಡಿಯಾದಿಂದ ದೂರವಿಡಲು ಜಗತ್ತಿನಾದ್ಯಂತ ಭರ್ಜರಿ ತಯಾರಿ ನಡೆದಿದೆ ಆಸ್ಟ್ರೇಲಿಯಾದಲ್ಲಿ 16 ವರ್ಷದೊಳಗಿನ ಮಕ್ಕಳಿಗೆ ಸೋಷಿಯಲ್ ಮೀಡಿಯಾ ಬಳಸುವುದನ್ನು ಸಂಪೂರ್ಣವಾಗಿ ನಿಷೇಧಿಸುವ ಕಠಿಣ ಕಾನೂನು ತರಲಾಗುತ್ತಿದೆ. ಇದು ಜಗತ್ತಿನಲ್ಲೇ ಅತಿ ದೊಡ್ಡ 'ಡಿಜಿಟಲ್ ಲಾಕ್‌ಡೌನ್'.

ಚೀನಾವೂ ಒಂದು ಹೆಜ್ಜೆ ಮುಂದೆ ಹೋಗಿ 'ಮೈನರ್ ಮೋಡ್' ಜಾರಿಗೆ ತಂದಿದೆ. ರಾತ್ರಿ ವೇಳೆ ಮಕ್ಕಳು ಇಂಟರ್ನೆಟ್ ಬಳಸುವಂತಿಲ್ಲ ಮತ್ತು ಅವರ ಆನ್‌ಲೈನ್ ಸಮಯಕ್ಕೆ ಮಿತಿಯಿದೆ.

ಅಮೆರಿಕದ ಫ್ಲೋರಿಡಾದಂತಹ ರಾಜ್ಯಗಳಲ್ಲಿ 14 ವರ್ಷದೊಳಗಿನ ಮಕ್ಕಳಿಗೆ ಅಕೌಂಟ್ ತೆರೆಯಲು ಪೋಷಕರ ಅನುಮತಿ ಕಡ್ಡಾಯ.

ಭಾರತದಲ್ಲಿ ಡಿಜಿಟಲ್ ಪರ್ಸನಲ್ ಡೇಟಾ ಪ್ರೊಟೆಕ್ಷನ್ ಆಕ್ಟ್ (DPDP)–2023 ಪ್ರಕಾರ, 18 ವರ್ಷದೊಳಗಿನ ಮಕ್ಕಳ ದತ್ತಾಂಶವನ್ನು ಬಳಸಲು ಪೋಷಕರ ಒಪ್ಪಿಗೆ ಅನಿವಾರ್ಯ. ಆದರೆ ಸಮಸ್ಯೆ ಇರುವುದು ಕಾನೂನಿನಲ್ಲಲ್ಲ, ಅದರ ಅನುಷ್ಠಾನದಲ್ಲಿ!

ಉದಾಹರಣೆಗೆ ಒಬ್ಬ ಬಾಲಕ ತನ್ನ ತಂದೆಯ ಆಧಾರ್ ಕಾರ್ಡ್ ಬಳಸಿ ಅಥವಾ ಜನ್ಮದಿನಾಂಕವನ್ನು ಸುಳ್ಳಾಗಿ ನಮೂದಿಸಿ ಅಕೌಂಟ್ ತೆರೆದರೆ ಅದನ್ನು ತಡೆಯುವ ತಾಂತ್ರಿಕ ಶಕ್ತಿ ಇನ್‌ಸ್ಟಾಗ್ರಾಮ್‌ಗೆ ಇದೆಯೇ?

ಕೇವಲ ನಿಷೇಧ ಸಾಲದು
(The 'Forbidden Fruit' Effect)

ಮಕ್ಕಳಿಗೆ ಬೇಡ ಎಂದದ್ದೇ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಬರೀ ಕಾನೂನಿನ ಮೂಲಕ ನಿಷೇಧ ಹೇರುವುದು ಸಮುದ್ರದ ಅಲೆಗಳನ್ನು ಬರಿಗೈಯಲ್ಲಿ ತಡೆಯಲು ಯತ್ನಿಸಿದಂತೆ.!

ನಿಷೇಧ ಹೇರಿದರೆ ಮಕ್ಕಳು 'ಡಾರ್ಕ್ ವೆಬ್' ಅಥವಾ ಅಸುರಕ್ಷಿತ ಆಪ್‌ಗಳ ಮೂಲಕ ಸೋಷಿಯಲ್ ಮೀಡಿಯಾ ಪ್ರವೇಶಿಸಬಹುದು. ಇದು ಅವರನ್ನು ಇನ್ನಷ್ಟು ದೊಡ್ಡ ಅಪಾಯಕ್ಕೆ ತಳ್ಳುತ್ತದೆ. ಮಕ್ಕಳಿಗೆ ಫೋನ್ ಕೊಡದಿದ್ದರೆ ಸಾಲದು, ಅದನ್ನು ಹೇಗೆ ಬಳಸಬೇಕು ಎಂಬ 'ಡಿಜಿಟಲ್ ಹೈಜೀನ್' ಕಲಿಸುವುದು ಇಂದಿನ ತುರ್ತು ಅಗತ್ಯ.

ನಮ್ಮ ಕಾನೂನುಗಳು ಕೇವಲ 'ರಿಯಾಕ್ಟಿವ್' ಆಗಿರಬಾರದು, ಅವು 'ಪ್ರೊಆಕ್ಟಿವ್' ಆಗಿರಬೇಕು. ಅಲ್ಗಾರಿದಮ್‌ಗಳು ಮಕ್ಕಳನ್ನು ಸೆಳೆಯದಂತೆ ಕಂಪನಿಗಳ ಮೇಲೆ ದಂಡ ಹೇರಬೇಕೇ ಹೊರತು, ಕೇವಲ ಪೋಷಕರನ್ನು ಜವಾಬ್ದಾರರನ್ನಾಗಿ ಮಾಡಬಾರದು.

ಇಂದು ಅಮ್ಮಂದಿರು ಮಗು ಅಳಬಾರದೆಂದು ಫೋನ್ ಕೊಡುತ್ತಾರೆ, ತಂದೆಯಂದಿರು ತಮ್ಮ ಕೆಲಸಕ್ಕೆ ತೊಂದರೆಯಾಗಬಾರದೆಂದು ಟ್ಯಾಬ್ ಕೊಡುತ್ತಾರೆ. ಕೊನೆಗೆ ಮಗು ಸೋಷಿಯಲ್ ಮೀಡಿಯಾಕ್ಕೆ ಅಡಿಕ್ಟ್ ಆದಾಗ ಸರ್ಕಾರ ಏನು ಮಾಡುತ್ತಿದೆ? ಎಂದು ಪ್ರಶ್ನಿಸುತ್ತಾರೆ! ಇದು ಬೆಂಕಿಯ ಪಕ್ಕ ಪಟಾಕಿ ಇಟ್ಟು ಯಾರು ಹಚ್ಚಿದ್ದು? ಎಂದು ಕೇಳಿದಂತಿದೆ.

ಮಕ್ಕಳ ರಕ್ಷಣೆ ಎಂಬುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಅದು ಪೋಷಕರು, ಶಾಲೆ ಮತ್ತು ತಂತ್ರಜ್ಞಾನ ಕಂಪನಿಗಳ ಜಂಟಿ ಕಾರ್ಯಾಚರಣೆ. ಬರೀ ಬ್ಯಾನ್ ಮಾಡುವುದು ರೋಗಕ್ಕೆ ಪ್ಯಾರಾಸಿಟಮಾಲ್ ನೀಡಿದಂತೆ; ನಮಗೆ ಬೇಕಿರುವುದು ರೋಗ ಬರದಂತೆ ತಡೆಯುವ ಡಿಜಿಟಲ್ ಲಸಿಕೆ!

ಬ್ರಿಟನ್ ನಿಯಂತ್ರಕರು (UK Regulators) ಕೇವಲ ನಿಷೇಧ (Ban) ಎಂಬ ಸುಲಭದ ಹಾದಿ ಹಿಡಿಯುವ ಬದಲು, ಜಗತ್ತಿನ ದೈತ್ಯ ಕಂಪನಿಗಳಾದ ಯೂಟ್ಯೂಬ್, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ಗೆ ನೇರ ಸವಾಲು ಹಾಕಿದ್ದಾರೆ. ಬರೀ ರೂಲ್ಸ್ ಮಾಡಿದರೆ ಸಾಲದು, ನೀವು ಮಕ್ಕಳನ್ನು ಈ ಅಡಿಕ್ಷನ್‌ನಿಂದ ಹೇಗೆ ರಕ್ಷಿಸುತ್ತೀರಿ ಎಂದು ನಮಗೆ ತೋರಿಸಿ ಎಂದು ಬಹಿರಂಗ ಪತ್ರ ಬರೆದಿದ್ದಾರೆ. ಇದು ಕೇವಲ ಕಾನೂನಲ್ಲ, ಇದು ಟೆಕ್ ಕಂಪನಿಗಳ ವಿರುದ್ಧದ ಯುದ್ಧದ ಮುನ್ಸೂಚನೆ!?

–ವಿಜಯಕುಮಾರ್ ಎಸ್ ಎ,
ಬರಹಗಾರರು ಮತ್ತು ಕಾನೂನು ಸಲಹೆಗಾರರು

ಏನ್ ಶಾಸಕರೇ... ಹೇಗಿದ್ದೀರಾ..!

ಪಾಂಡವಪುರ ತಾಲೂಕಿನ ಸಹಜ ಕೃಷಿಗೆ ಸರ್ಕಾರದ ಸಹಾಯ ಹಸ್ತ



–ದರ್ಶನ್ ಪುಟ್ಟಣ್ಣಯ್ಯ
ಶಾಸಕರು, ಮೇಲುಕೋಟೆ ವಿಧಾನಸಭಾ ಕ್ಷೇತ್ರ



ಪಾಂಡವಪುರ ಪಟ್ಟಣದಲ್ಲಿ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದಿದ್ದ ಮಲಿನ ನೀರು ಸಂಸ್ಕರಣ ಘಟಕವನ್ನು 20 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುವ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭೂಮಿ ಪೂಜೆ ನೆರವೇರಿಸುತ್ತಿರುವುದು.

ಐತಿಹಾಸಿಕ ಮೇಲುಕೋಟೆ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ಉತ್ತಮ ಸ್ಪಂದನೆ ದೊರೆತಿದೆ. ಎರಡೂವರೆ ವರ್ಷದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳಿಗೆ ಸರ್ಕಾರ ಸಹಾಯಹಸ್ತ ಚಾಚಿದೆ.

ಈ ಬಾರಿಯ ಬಜೆಟ್‌ನಲ್ಲಿ ಪಾಂಡವಪುರ ತಾಲೂಕನ್ನು ಸಾವಯವ ಕೃಷಿ ತಾಲೂಕು ಎಂಬುದಾಗಿ ಘೋಷಣೆ ಮಾಡಲಾಗಿದೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ ಮತ್ತು ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರೈತರು ಸಾವಯವ ಕೃಷಿಯೆಡೆಗೆ ಸಾಗಬೇಕು. ಇದರಿಂದ ಭೂಮಿಯ ಫಲವತ್ತತೆಯೂ ಹೆಚ್ಚಲಿದೆ. ಗುಣಮಟ್ಟದ ಆಹಾರ ಹಾಗೂ ಆರೋಗ್ಯ ಸುಧಾರಣೆಗೂ ಸಹಕಾರಿಯಾಗಲಿದೆ, ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳುವುದು ದೇಶದ ಬಹುದೊಡ್ಡ ಸವಾಲಾಗಿತ್ತು. ಆದರೆ ಇಂದು ರಾಸಾಯನಿಕ ಗೊಬ್ಬರ, ಔಷಧ ಸಿಂಪಡಣೆಯಿಂದಾಗಿ ಫಲವತತ್ತೆ ಹಾಳಾಗಿದೆ. ಇದರ ಸುಧಾರಣೆಗೆ ಪ್ರತಿಯೊಬ್ಬರ ಪ್ರಮುಖ ಜವಾಬ್ದಾರಿಯಾಗಿದೆ. ಸಾವಯವ ಕೃಷಿಯ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮ ರೂಪಿಸುವ ಸಿದ್ದತೆಗಳ ಕುರಿತು ಸರಕಾರದೊಂದಿಗೆ ಸಭೆ ನಡೆಸಿ ಚರ್ಚಿಸಲಾಗುವುದು.

ರೈತರು ಬೆಳೆಯುವ ಬೆಳೆಗಳನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವೇ ಖರೀದಿಸಿ ಮಾರಾಟ ಮಾಡಿ, ರೈತರ ಬೆಳೆಗೆ ಅಧಿಕ ಲಾಭ ನೀಡುವ ಮೂಲಕ ರೈತರನ್ನು ಆರ್ಥಿಕವಾಗಿ ಸದೃಢಗೊಳಿಸುವ ಹೊಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಶೀಘ್ರ ಕಾರ್ಯಗತವಾಗಲಿದೆ. ಇದರಿಂದ ದಲ್ಲಾಳಿಗಳ ಹಾವಳಿಯನ್ನು ಸಹ ತಪ್ಪಿಸಿದಂತಾಗುತ್ತದೆ. ಜತೆಗೆ ರೈತರಿಗೂ ಅಧಿಕ ಲಾಭವಾಗಿ ಸೊಸೈಟಿಗಳು ಲಾಭದಾಯಕವಾಗಲಿವೆ. ಇದಕ್ಕಾಗಿ ನಬಾರ್ಡ್ ಅಥವಾ ಡಿಸಿಸಿ ಬ್ಯಾಂಕ್‌ಗಳಿಂದ ಸೊಸೈಟಿಗಳಿಗೆ ಆರ್ಥಿಕ ನೆರವು ನೀಡಲು ಕ್ರಮವಹಿಸಲಾಗುತ್ತಿದೆ.

ಪಾಂಡವಪುರ ಪಟ್ಟಣದಲ್ಲಿ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮಲೀನ ನೀರು ಸಂಸ್ಕರಣ ಘಟಕ ನಿರ್ಮಾಣಕ್ಕೆ 20 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಒಳಚರಂಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಿ ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಮಲೀನ ನೀರು ಸಂಸ್ಕರಣ ಘಟಕ ನಿರ್ಮಾಣ ಮಾಡಲು ಪಟ್ಟಣದ ಬನ್ನಾರಿ ಮಾರಿಯಮ್ಮ ದೇವಸ್ಥಾನದ ಮುಂಭಾಗ ಕೃಷಿ ಪ್ರದೇಶದಲ್ಲಿ ರೈತರಿಂದ ಪಡೆದುಕೊಂಡಿರುವ 5 ಎಕರೆ 21 ಗುಂಟೆ ಪ್ರದೇಶದಲ್ಲಿ ಘಟಕ ನಿರ್ಮಾಣ ಮಾಡಲು ಚಾಲನೆ ನೀಡಲಾಗಿದೆ.

ಬಿಡುಗಡೆ ಆಗಿರುವ 24 ಕೋಟಿ ಅನುದಾನದಲ್ಲಿ ಪೈಪ್‌ಲೈನ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಇಲ್ಲಿ ಸಂಸ್ಕರಣೆ ಮಾಡಲಾಗುವ ನೀರನ್ನು ರೈತರ ಭೂಮಿಗೆ ಬಿಡುವುದರ ಜತೆಗೆ, ಭೂಮಿ ನೀಡಿದ ರೈತರ ಕುಟುಂಬಕ್ಕೆ ಉದ್ಯೋಗ ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ರೈತರ ಬೆಳೆಗಳನ್ನು ಬೆಂಬಲ ಬೆಲೆಯಡಿ ಖರೀದಿಸಿ ಶೇಖರಣೆ ಮಾಡಲು ಕೋಲ್ಡ್ ಸ್ಟೋರೇಜ್‌ಗಳು, ಗೋದಾಮುಗಳ, ಮಾರುಕಟ್ಟೆ ನಿರ್ಮಾಣಕ್ಕಾಗಿ ನಬಾರ್ಡ್ ಹಾಗೂ ಡಿಸಿಸಿ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯಗಳು ದೊರೆಯುತ್ತವೆ. ಆಸಕ್ತ ಸಹಕಾರ ಸಂಘಗಳು ಯೋಜನೆ ರೂಪಿಸಿಕೊಳ್ಳಲು ಮುಂದಾದರೆ ಅದಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲು ನಾವು ಸಿದ್ದರಿದ್ದೇವೆ. ರೈತರ ಬೆಳೆಗಳನ್ನು ಖರೀದಿಸಿ ನಮ್ಮ ಬ್ರಾಂಡ್ ಮೂಲಕವೇ ಮಾರಾಟ ಮಾಡಲು 'ಮಿಷನ್ ಮೇಲುಕೋಟೆ–31' ಹೊಸ ಯೋಜನೆ ರೂಪಿಸಲಾಗಿದೆ. ಸಹಕಾರ ಸಂಘಗಳ ಮೂಲಕವೇ ಬಿತ್ತನೆ ಬೀಜ ಮಾರಾಟ ಮಾಡಿಸಿ ಸಬ್ಸಿಡಿಯನ್ನು ಸಹಕಾರ ಸಂಘಕ್ಕೆ ನೀಡಲು ಈಗಾಗಲೆ ಸರಕಾರದ ಹಂತದಲ್ಲಿ ಚರ್ಚಿಸಲಾಗಿದೆ ಎಂದು ಆಶ್ವಾಸನೆ ನೀಡಿದರು.

ಪಟ್ಟಣದ ವ್ಯಾಪ್ತಿಯಲ್ಲಿ ಕೆಲವೆಡೆ ರಸ್ತೆ ನಿರ್ಮಾಣಕ್ಕಾಗಿ ಮೂವರು ತಮ್ಮ ನಿವೇಶನಗಳನ್ನು ಬಿಟ್ಟುಕೊಟ್ಟಿದ್ದಾರೆ. ಹಾರೋಹಳ್ಳಿ ಬಳಿ ಹಂಚಿಕೆ ಮಾಡಲಾಗುತ್ತಿರುವ 178 ನಿವೇಶನಗಳ ಪೈಕಿ ಮೂವರಿಗೆ ಒಂದೊಂದು ನಿವೇಶನ ಕಾಯ್ದಿರಿಸಿ ಉಳಿಕೆ 175 ಸೈಟುಗಳನ್ನು ಹಂಚಿಕೆ ಮಾಡಬೇಕು, ನಿವೇಶನ ಹಂಚಿಕೆ ಮಾಡುವ ಮುನ್ನ ಅಲ್ಲಿಗೆ ಬೇಕಿರುವ ಮೂಲಸೌಕರ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ನಂತರ ನಿವೇಶನ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ.


ಸಂತೆ ಮೈದಾನದಲ್ಲಿ ಅಂದಾಜು 70 ಕೋಟಿ ವೆಚ್ಚದಲ್ಲಿ 72 ಅಂಗಡಿ ಮಳಿಗೆ ನಿರ್ಮಾಣ ಮಾಡಲು ಚಿಂತನೆ ನಡೆಸಲಾಗಿದೆ. ಇದಕ್ಕೆ ಸರಕಾರದಿಂದ ಅಷ್ಟು ಅನುದಾನ ಸಿಗುವುದು ಕಷ್ಟವಾಗಿರುವುದರಿಂದ ಕೆಯುಐಡಿಎಫ್‌ಸಿ ವತಿಯಿಂದ ಶೇ.70ರಷ್ಟು ಸಾಲಪಡೆದು ಉಳಿದ ಹಣವನ್ನು ಪುರಸಭೆಯಿಂದ ಬಳಕೆ ಮಾಡಿಕೊಳ್ಳಬಹುದು. ಹೀಗೆ ಸರ್ಕಾರವು ಕೆಲ ಯೋಜನೆಗಳಿಗೆ ಸ್ಪಂದಿಸಿ ಅನುದಾನ ನೀಡಿದ್ದರೆ, ಇನ್ನು ಕೆಲ ಯೋಜನೆಗಳಿಗೆ ಅನುದಾನ ಕೊಡಬೇಕು. ಮುಂದಿನ ದಿನಗಳಲ್ಲಿ ಪಾಂಡವಪುರ ಕೃಷಿ ಚಟುವಟಿಕೆ ಇನ್ನಷ್ಟು ಆದ್ಯತೆ ನೀಡಬೇಕಿದೆ.


47
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
47 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಲಯನ್ ಡಾ. ಎನ್.ಕೃಷ್ಣೇಗೌಡ
ಪಿ.ಎಂ.ಜೆ.ಎಫ್ ಮಲ್ಟಿಪಲ್ ಕೌನ್ಸಿಲ್
ಮಾಜಿ ಚೇರ್ಮನ್, ಎಂ.ಡಿ-317
ಲೆಕ್ಕ ಪರಿಶೋಧಕರು
ಹಾಗೂ ವಕೀಲರು


ಮೈಸೂರು ಮಿತ್ರ
ಸ್ಥಾಪನೆ: 1980
47
ಅತ್ಯುತ್ತಮ ಪತ್ರಿಕೋದ್ಯಮ
ನಮ್ಮ ಮೈಸೂರು ಮಿತ್ರನಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಪಿ.ಪ್ರಶಾಂತ್ ಗೌಡ
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ
ಮ್ಯಾನೇಜಿಂಗ್ ಡೈರೆಕ್ಟರ್, ಕನುಷಿ ಗ್ರೂಪ್
ಅಧ್ಯಕ್ಷರು, ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘ
ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ.
ಪಿರಿಯಾಪಟ್ಟಣ
ಪಿ.ಜಿ.ಜನಸ್ಪಂದನಾ ಫೌಂಡೇಶನ್, ಮೈಸೂರು


ಮೈಸೂರು ಮಿತ್ರ
ಸ್ಥಾಪನೆ: 1980
47
ಅತ್ಯುತ್ತಮ ಪತ್ರಿಕೋದ್ಯಮ
ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ
ಮೈಸೂರು ಮಿತ್ರ
ಕನ್ನಡ ದಿನ ಪತ್ರಿಕೆಗೆ
ಶುಭಾಶಯಗಳು
ಶುಭಕೋರುವವರು
ಮೊಹಿಯುದ್ದಿನ್
ಉದ್ಯಮಿಗಳು ಹಾಗೂ ಹೆಚ್.ಎಂ.ಐ ಫ್ರೂಟ್ಸ್ ಮಾಲೀಕರು.
ಜಯಪುರ ಮೈಸೂರು ತಾಲ್ಲೂಕು.
ಹೆಚ್. ಎಂ. ಐ ಫ್ರೂಟ್ಸ್ & ಕೋ.
ಫ್ರೂಟ್ಸ್ ಕಮಿಷನ್ ಏಂಜೆಂಟ್.
ಶಾಪ್ ನಂ. ಇ-69, ಎಪಿಎಂಸಿ ಸಬ್ ಯಾರ್ಡ್,
ನ್ಯೂ ಸಯ್ಯಾಜಿರಾವ್ ರಸ್ತೆ, ಬಂಬೂಬಜಾರ್, ಮೈಸೂರು


ಮೈಸೂರು ಮಿತ್ರ
ಸ್ಥಾಪನೆ: 1980
47
ಅತ್ಯುತ್ತಮ ಪತ್ರಿಕೋದ್ಯಮ
ನೇ ವಾರ್ಷಿಕೋತ್ಸವ ಆಚರಿಸುತ್ತಿರುವ
ಮೈಸೂರು ಮಿತ್ರನಿಗೆ
ವಾರ್ಷಿಕೋತ್ಸವದ
ಶುಭಾಶಯಗಳು
ಶ್ರೀ ದೊಡ್ಡಸ್ವಾಮೇಗೌಡ
ಅಧ್ಯಕ್ಷರು
ಎಂಸಿಡಿಸಿಸಿ ಬ್ಯಾಂಕ್, ಮೈಸೂರು
ಶ್ರೀ ಡಿ.ರವಿಶಂಕರ್
ಶಾಸಕರು
ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ
ಶುಭಕೋರುವವರು :
ಶ್ರೀ ಎಸ್.ರವಿ
ಸಮಾಜ ಸೇವಕರು,
ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರ



ಮೈಸೂರು ಮಿತ್ರ
47
47
ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಪ್ರಕಟಣೆ :
ಸಾ.ರಾ. ಬಿಲ್ಡರ್ಸ್ & ಡೆವಲಪರ್ಸ್ ಪ್ರೈ. ಲಿಮಿಟೆಡ್, ಮೈಸೂರು
ಸಾ.ರಾ. ಪ್ರಜನಿ ಹೋಟೆಲ್ ಪ್ರೈ. ಲಿಮಿಟೆಡ್, ಮೈಸೂರು
ಸಾ.ರಾ. ಸ್ಟಡ್ ಫಾರಂ, ಮೈಸೂರು,
ಸಾ.ರಾ. ವಿಷ್ಣು ಗಾರ್ಡನ್ ಹೋಟೆಲ್ ಪ್ರೈ. ಲಿಮಿಟೆಡ್, ಬೆಂಗಳೂರು
ಸಾ.ರಾ. ಎಸ್ಟೇಟ್ಸ್, ಕೊಡಗು
ಜಿ.ಎನ್.ಜಿ. ಗ್ರಾನೈಟ್ ಪ್ರೈ. ಲಿಮಿಟೆಡ್, ಮೈಸೂರು
ಸಾರಾ ಶೇಷ್ ಹೆಚ್.ಪಿ.ಸಿ.ಎಲ್ ಡೀಲರ್ಸ್ ದಟ್ಟಗಳ್ಳಿ ಮೈಸೂರು
ಮಹದೇಶ್ವರ ಹೆಚ್.ಪಿ.ಸಿ.ಎಲ್ ಡೀಲರ್ಸ್ ವಿವೇಕಾನಂದನಗರ ಮೈಸೂರು
ಗೌರಿ ಆರ್ಟ್ಸ್ & ಫಿಲಮ್ಸ್, ಬೆಂಗಳೂರು
ಸಾರಾ ಕನ್ವೆನ್ಷನ್ ಹಾಲ್, ದಟ್ಟಗಳ್ಳಿ, ಮೈಸೂರು

ಮೈಸೂರು ಮಿತ್ರ

ವಾರ್ಷಿಕ ವಿಶೇಷಾಂಕ 2026

16-04-2026
ಗುರುವಾರ

ಮೈಸೂರಲ್ಲಿ ಹೊಂಗೆ ವನ

ಬೇಸಿಗೆಯಲ್ಲೂ ತಂಪು... ತಂಪು...



● ಎಸ್.ಬಿ.ದೇವರಾಜ

ನಮ್ಮ ಮೈಸೂರು, ಹೊಂಗೆ ವನವಾಗುತ್ತಿದೆ. ನಗರದೆಲ್ಲೆಡೆ ಬಹುಪಯೋಗಿ ಹೊಂಗೆ ಮರಗಳು ನಳನಳಿಸುತ್ತಿವೆ. ಬೇಸಿಗೆಯಲ್ಲಂತೂ ಹಚ್ಚಸಿರಿನಿಂದ ಕಂಗೊಳಿಸುತ್ತಾ ತಂಪಾದ ನೆರಳು, ಶುದ್ಧ ಗಾಳಿ ಧಾರೆ ಎರೆಯುತ್ತಿವೆ. ಒಂದು ವಿಧದಲ್ಲಿ 'ಆರೋಗ್ಯ ಮೈಸೂರು' ನಿರ್ಮಾಣಕ್ಕೆ ಒತ್ತಾಸೆಯಾಗಿ ನಿಂತಿವೆ.

ಈಗಂತೂ ಹೆಜ್ಜೆ ಹೆಜ್ಜೆಗೊಂದರಂತೆ ಹೊಂಗೆ ಮರಗಳು ಸಮೃದ್ಧ ನೆರಳು ಕಲ್ಪಿಸಿರುವುದರಿಂದ ಬಿರು ಬೇಸಿಗೆಯಲ್ಲೂ ಮೈಸೂರು ಎಷ್ಟೊಂದು ತಂಪಾಗಿದೆ. ಮೈಸೂರು ನಗರವನ್ನು ಒಂದು ಸುತ್ತು ಹಾಕಿದರೆ ಹಿತವಾದ ಅನುಭವವಾಗುತ್ತದೆ. ಬಿಸಿಲಿನ ಝಳವಿದ್ದರೂ ಒಂದಿಷ್ಟೂ ಆಯಾಸವಾಗುವುದಿಲ್ಲ, ತಲೆಸುತ್ತಿನಿಂದ ಬಳಲುವುದಿಲ್ಲ. ಸಾಕಪ್ಪಾ ಸಾಕು ಇನ್ನು ನಡೆಯಲಾಗದು ಎಂಬ ಅಶಕ್ತ ಭಾವನೆ ಮೂಡುವುದಿಲ್ಲ. ಹೊಂಗೆ ಮರಗಳು ದೇಹ ಮತ್ತು ಮನಸ್ಸಿಗೆ ಹೊಸ ಚೈತನ್ಯ ಹಾಗೂ ನೆಮ್ಮದಿ ನೀಡುತ್ತವೆ.

ಉಲ್ಲಾಸದ ವಾತಾವರಣ: 'ಹೊಂಗೆ ಹೂವ ತೊಂಗಲಲ್ಲಿ, ಭೃಂಗದ ಸಂಗೀತ ಕೇಳಿ, ಮತ್ತೆ ಕೇಳಿ ಬರುತಿದೆ...' ಈ ಕವಿವಾಣಿಯ ಭಾವ ಇದೀಗ ಮೈಸೂರಿನಲ್ಲಿ ರಿಂಗಣಿಸುತ್ತಿದೆ. ಹೊಂಗೆ ಹೂವು ನಗುಚೆಲ್ಲಿ, ದಾರಿಯುದ್ದಕ್ಕೂ ಘಮ ಬೀರುತ್ತಿವೆ. ಸಾಲು ಮರಗಳಿರುವ ಕಡೆ ಎಳೆ ಹಸಿರಿನ ಚಪ್ಪರ ಹಾಕಿರುವಂತೆ ಭಾಸವಾಗುತ್ತದೆ. ಸಂಜೆ ವೇಳೆ ಭೃಂಗ(ದುಂಬಿ)ಗಳ ಕಲರವ ಕರ್ಣಾನಂದ. ನವೋಲ್ಲಾಸದಿಂದ ಮೈದಳೆದಿರುವ ಮರಗಳಡಿಯಲ್ಲಿ ಹೂವುಗಳ ಹಾಸಿಗೆ ಮತ್ತಷ್ಟು ಹಿತ ನೀಡುತ್ತವೆ. ಹೆಜ್ಜೆ ಹೆಜ್ಜೆಗೂ ಮನಸ್ಸಿಗೆ ನೆಮ್ಮದಿ ತುಂಬುತ್ತವೆ.

ಬಯಲು ಸಿದೌಷಧ: ಹೊಂಗೆ, ಭಾರತದ ಪಾರಂಪರಿಕ ನಿತ್ಯಹಸುರಿನ ಹಾಗೂ ಔಷಧೀಯ ಗುಣವುಳ್ಳ ವಿಶೇಷ ಮರ. ಬರಡು ಭೂಮಿಯಲ್ಲೂ ಸೊಂಪಾಗಿ ಬೆಳೆದು, ಬಿರು ಬೇಸಿಗೆಯಲ್ಲೂ ತಂಪಾದ ನೆರಳು ಕರುಣಿಸುವುದರಿಂದ ಹೊಂಗೆ ಮರವನ್ನು 'ತಾಯಿ ಮಡಿಲು' ಎಂದೇ ಬಣ್ಣಿಸುತ್ತಾರೆ. ಇದು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಪರಿಸರ ಸ್ನೇಹಿ ಮರ. ಈ ಎಲ್ಲಾ ಕಾರಣದಿಂದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬೆಳೆಯಲಾಗುತ್ತದೆ. ಸದ್ಯ ಮೈಸೂರು ನಗರವೂ 'ಹೊಂಗೆ ವನ'ವಾಗಿ ಬದಲಾಗುತ್ತಿರುವುದು ಸಂತಸದ ಸಂಗತಿ.

> “ ಟೀಂ ಮೈಸೂರು ತಂಡದ ವತಿಯಿಂದ ಮೈಸೂರು ನಗರದಲ್ಲಿ 12 ವರ್ಷಗಳಿಂದ 'ಹಸಿರು ಮೈಸೂರು' ಅಭಿಯಾನದೊಂದಿಗೆ ಗಿಡಗಳನ್ನು ನೆಟ್ಟು ನೀರು ಹಾಕಿ, ಪೋಷಿಸಿಕೊಂಡು ಬರಲಾಗುತ್ತಿದೆ. ಹೊಂಗೆ ಗಿಡಗಳು ನೀರಿನ ಕೊರತೆಯಾದರು ಅಷ್ಟು ಸುಲಭವಾಗಿ ಒಣಗುವುದಿಲ್ಲ ಇನ್ನು ಹಸುಗಳು ಈ ಗಿಡವನ್ನು ತಿನ್ನುವುದಿಲ್ಲ. ಹೊಂಗೆ ಮರದ ನೆರಳು ಸದಾ ತಂಪಾಗಿರುತ್ತದೆ. ಹಾಗಾಗಿ ನಮ್ಮ ತಂಡದಿಂದಲೂ ಸೂಕ್ತ ಜಾಗದಲ್ಲಿ ಹೊಂಗೆ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ.
>
> **-ಗೋಕುಲ್ ಗೋವರ್ಧನ್,** ಟೀ ಮೈಸೂರು.



ಪೊಂಗಾಮಿಯ ಪಿನ್ನಾಟ ಎಂಬ ವೈಜ್ಞಾನಿಕ ಹೆಸರಿನ ಹೊಂಗೆ ಮರ, ಏಪ್ರಿಲ್–ಮೇ ತಿಂಗಳಲ್ಲಿ ನೀಲಿ ಮಿಶ್ರಿತ ಬಿಳಿಯ ಹೂಗೊಂಚಲಿನಿಂದ ಕಂಗೊಳಿಸುತ್ತದೆ. ತಂಪಾದ ನೆರಳು, ಶುದ್ಧ ಗಾಳಿ ನೀಡುವುದಷ್ಟೇ ಅಲ್ಲ, ಹೊಂಗೆ ಮರದಿಂದ ಹಲವು ಉಪಯೋಗಗಳಿವೆ. ಔಷಧೀಯ ಗುಣವುಳ್ಳ ಹೊಂಗೆ ಮರದ ಬೀಜ, ಎಲೆ, ಹೂವು ಹಾಗೂ ತೊಗಟೆಯನ್ನು ಪ್ರಾಚೀನ ಕಾಲದಿಂದಲೂ ವಿವಿಧ ರೋಗ ನಿವಾರಣೆಗೆ ಬಳಸಲಾಗುತ್ತಿದೆ.

ಆಯುರ್ವೇದ ಮತ್ತು ಸಿದ್ಧ ವೈದ್ಯ ಪದ್ಧತಿಯಲ್ಲಿ ಹೊಂಗೆ ಮರದ ಭಾಗಗಳನ್ನು ಬ್ಯಾಕ್ಟೀರಿಯಾ ವಿರೋಧಿ ಹಾಗೂ ಉರಿಯೂತ ನಿವಾರಕವಾಗಿ ಬಳಸಲಾಗುತ್ತದೆ. ಹೊಂಗೆಯನ್ನು ಜೀರ್ಣಕ್ರಿಯೆಯ ಉದ್ದೀಪನಕ್ಕಾಗಿ ಬಳಸಲಾಗುತ್ತದೆ. ಜೀರ್ಣಾಂಗಗಳ ಸಾಮರ್ಥ್ಯವನ್ನು ಹೆಚ್ಚಿಸಿ, ಅಜೀರ್ಣದ ದೋಷವನ್ನು ನಿವಾರಣೆ ಮಾಡುವುದಕ್ಕೆ ಚೂರ್ಣದ ರೀತಿಯಲ್ಲಿ ಬಳಸುವ ಪದ್ಧತಿಯಿದೆ. ಅಜೀರ್ಣ, ಮಲಬದ್ಧತೆ, ಹಸಿವಿನ ಕೊರತೆ ಸೇರಿದಂತೆ ಅನೇಕ ಉದರ ಸಮಸ್ಯೆಗಳಿಗೆ ಹೊಂಗೆ ರಾಮಬಾಣ.

> “ ಹೊಂಗೆಗೆ ಸಂಸ್ಕೃತದಲ್ಲಿ ಕರಂಜ ಎನ್ನುತ್ತಾರೆ. ಇದರ ತೈಲವನ್ನು ಎಕ್ಜಿಮಾ, ಸ್ಕೇಬಿಸ್, ಸೋರಿಯಾಸಿಸ್‌ನಂತಹ ದೀರ್ಘಕಾಲದ ಚರ್ಮದ ಸಮಸ್ಯೆಗಳಿಗೆ ಔಷಧಿಯಾಗಿ ಬಳಸುತ್ತಾರೆ. ಗಾಯಕ್ಕೆ ಹೊಂಗೆ ಎಲೆಯ ಪೇಸ್ಟ್ ಹಚ್ಚುವುದಿದೆ. ತೈಲವನ್ನು ಚರ್ಮ ಸುರಕ್ಷತೆ ಉತ್ಪನ್ನಗಳಲ್ಲೂ ಬಳಕೆ ಮಾಡಲಾಗುತ್ತದೆ. ಸೋಪು ತಯಾರಿಕೆಯಲ್ಲೂ ಉಪಯೋಗಿಸಲಾಗುತ್ತದೆ. ಹೀಗೆ ಹಲವು ಆಯುರ್ವೇದ ಉತ್ಪನ್ನಗಳಲ್ಲಿ ಕರಂಜವನ್ನು ಬಳಸಲಾಗುವುದು. ಹಾಗಾಗಿ ಈ ಮರ ತುಂಬಾ ಪ್ರಯೋಜನಕಾರಿ.
>
> **- ಡಾ.ಗಜಾನನ ಹೆಗ್ಡೆ,** ನಿವೃತ್ತ ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ಕಾಲೇಜು, ಮೈಸೂರು



ಸಂಧಿವಾತ(ಆರ್ಥರೈಟಿಸ್) ಶಮನಕ್ಕೆ ಹೊಂಗೆಯನ್ನು ಉಪಯೋಗಿಸಲಾಗುತ್ತದೆ. ವಾತವನ್ನು ತಡೆಯುವ ಗುಣ ಹೊಂಗೆಯಲ್ಲಿರುವುದರಿಂದ ದೇಹದಲ್ಲಿರುವ ಉರಿಯೂತವನ್ನು ತಗ್ಗಿಸುತ್ತದೆ. ಕೀಲುಗಳ ನೋವಿಗೆ ಪರಿಣಾಮಕಾರಿ ಔಷಧವಾಗಿ ಕೆಲಸ ಮಾಡುತ್ತದೆ. ಮಳೆಗಾಲ ಹಾಗೂ ಚಳಿಗಾಲದಲ್ಲಿ ಋತುಮಾನದ ಬದಲಾವಣೆಯೊಂದಿಗೆ ಕಾಡುವಂತಹ ಶೀತ–ಕೆಮ್ಮಿಗೆ ಹೊಂಗೆ ಪರಿಣಾಮಕಾರಿ ಔಷಧ. ಎದೆಭಾರವಾಗಿ ಕಫ ಬಿಗಿಯುವುದು, ದಮ್ಮು, ಅಸ್ತಮಾದಂತಹ ಸಮಸ್ಯೆಗಳಿಗೂ ಸೂಕ್ತ ರೀತಿಯಲ್ಲಿ ಬಳಸುವ ಪರಿಪಾಠವಿದೆ.

ಹಲವು ರೀತಿಯ ಚರ್ಮದ ಸಮಸ್ಯೆಗಳಿಗೆ ಹೊಂಗೆ ಎಣ್ಣೆಯನ್ನು ಔಷಧಯಾಗಿಯೂ ಬಳಸಲಾಗುತ್ತದೆ. ಸಣ್ಣ ಗಾಯ, ಇಸುಬು, ತೊನ್ನುಗಳಿಗೆ ಹೊಂಗೆಯ ಉಪಚಾರ ಬಳಕೆಯಲ್ಲಿದೆ.

> “ ಹೊಂಗೆ ಮರ ಒಂದು ಅತ್ಯಂತ ಉಪಯುಕ್ತ ಔಷಧೀಯ ಮತ್ತು ನೈಸರ್ಗಿಕ ಸಂಪನ್ಮೂಲ. ಇದರ ಬೀಜದಿಂದ ತೆಗೆಯುವ ಎಣ್ಣೆ ಚರ್ಮರೋಗ, ಕೀಲು ನೋವು ನಿವಾರಣೆಗೆ ಬಳಸುತ್ತಾರೆ. ಈ ಮರದಿಂದ ಸಾಕಷ್ಟು ಉಪಯೋಗವಿದೆ. ಜೈವಿಕ ಇಂಧನ ತಯಾರಿಕೆಗೂ ಬಳಸಲಾಗುತ್ತಿದೆ. ಬಹು ಉಪಯೋಗಿ ಹೊಂಗೆ ಮರ ಮೈಸೂರು ನಗರದ ಪ್ರಾಕೃತಿಕ ಸೌಂದರ್ಯವನ್ನೂ ಹೆಚ್ಚಿಸಿದೆ. ನಮ್ಮ ರಘುಲಾಲ್ ಸಂಸ್ಥೆಯಿಂದಲೂ ಸಾಕಷ್ಟು ಹೊಂಗೆ ಗಿಡಗಳನ್ನು ಬೆಳೆಸಲಾಗಿದೆ.
>
> **- ರಾಘವನ್,** ರಘುಲಾಲ್ ಅಂಡ್ ಕಂಪನಿ




ಹೊಂಗೆ ಎಣ್ಣೆಯು ಸೋಂಕು ನಿರೋಧಕ ಗುಣ ಹೊಂದಿದೆ. ಕೊಬ್ಬರಿ ಎಣ್ಣೆಯೊಂದಿಗೆ ಹೊಂಗೆ ಎಣ್ಣೆಯನ್ನು ಬೆರೆಸಿ, ನಿಯಮಿತವಾಗಿ ಲೇಪಿಸಿದರೆ ಹಲವು ಚರ್ಮದ ಸಮಸ್ಯೆಗಳು ಗುಣವಾಗುತ್ತವೆ ಎನ್ನಲಾಗುತ್ತದೆ. ಹೊಂಗೆ ಬೇರಿನ ಕಷಾಯವನ್ನು ರೋಸ್ ವಾಟರ್ ಜೊತೆ ಸೇರಿಸಿ ಬಳಸುವುದಿದೆ.

ಬಾಯಿ ಹುಣ್ಣು ಇದ್ದರೆ ಕೊಬ್ಬರಿ ಎಣ್ಣೆಯೊಂದಿಗೆ ಒಂದೆರಡು ಹನಿ ಹೊಂಗೆ ಎಣ್ಣೆ ಬೆರೆಸಿ ಹುಣ್ಣಿಗೆ ನೇರವಾಗಿ ಲೇಪಿಸಬಹುದು. ಬೇವಿನ ಕಡ್ಡಿಗಳಂತೆ ಹೊಂಗೆಯ ಕಡ್ಡಿಗಳನ್ನೂ ಹಲ್ಲುಜ್ಜಲು ಬಳಸುತ್ತಿದ್ದರಂತೆ. ಮೂಲವ್ಯಾಧಿಯಿಂದ ಬಳಲುತ್ತಿರುವವರಿಗೂ ಇದು ತುಂಬಾ ಪ್ರಯೋಜನಕಾರಿ. ತಲೆಯಲ್ಲಿನ ಹೇನುಗಳ ನಿವಾರಣೆಗೆ, ಹೊಂಗೆ ಎಣ್ಣೆಯನ್ನು ತಲೆಗೆ ಮಸಾಜ್ ಮಾಡಿ ಶಾಂಪೂವಿನಿಂದ ತೊಳೆಯುವ ಕ್ರಮವಿದೆ. ತಲೆಗೆ ಹಾಕುವ ಕೊಬ್ಬರಿ ಎಣ್ಣೆಯ ಜೊತೆಗೆ ಕೆಲವು ಹನಿ ಹೊಂಗೆ ಎಣ್ಣೆಯನ್ನೂ ಬೆರೆಸುವುದರಿಂದ ತಲೆಯ ಚರ್ಮದ ಸೋಂಕಿದ್ದಲ್ಲಿ ನಿಯಂತ್ರಣಕ್ಕೆ ಬರುತ್ತದೆ. ತಲೆ ಹೊಟ್ಟು ನಿಯಂತ್ರಣಕ್ಕೂ ಇದು ಪರಿಣಾಮಕಾರಿ ಎನ್ನಲಾಗುತ್ತದೆ. ಆದರೆ ಯಾವುದೇ ಕಾರಣಕ್ಕೂ ವೈದ್ಯರ ಸಲಹೆ ಪಡೆಯದೆ ನೇರವಾಗಿ ಹೊಂಗೆಯನ್ನು ಬಳಸಬಾರದು. ತಜ್ಞರ ಮಾರ್ಗದರ್ಶನದಂತೆ ಕ್ರಮಬದ್ಧವಾಗಿ ನಿಯಮಿತವಾಗಿ ಬಳಕೆ ಮಾಡಿದರೆ ಖಂಡಿತ ಪ್ರಯೋಜನಕಾರಿ.



> “ ಎಲ್ಲಾ ಮರಗಳಿಂದಲೂ ಉಪಯೋಗ ಇದೆ. ಗರಿಷ್ಠ ಆಮ್ಲಜನಕ ನೀಡುವುದು ಅರಳಿ ಮರ. ಮೈಸೂರು ಪ್ರದೇಶಕ್ಕೆ ಅತ್ಯಂತ ಸೂಕ್ತವಾದ ಅರಳಿ, ಆಲ, ಗೋಣಿ ಮರಗಳಿಗೆ ದೊಡ್ಡ ಇತಿಹಾಸವೇ ಇದೆ. ಆದರೆ ಹೊಂಗೆ ಮರ ಬೇಸಿಗೆಯಲ್ಲೂ ಹಸಿರಾಗಿದ್ದು, ತಂಪು ಗಾಳಿ ಕೊಡುವುದರಿಂದ ಎಲ್ಲರೂ ಇಷ್ಟಪಡುತ್ತಾರೆ. ಹೊಂಗೆ ಮರದ ಎಲೆಯನ್ನು ಪ್ರಾಣಿಗಳು ತಿನ್ನುವುದಿಲ್ಲ. ಹಾಗಾಗಿ ಬಡಾವಣೆಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಹಲವು ಉತ್ಪನ್ನಗಳಿಗೆ ಈ ಮರದ ಕಾಯಿ ಬಳಸುವುದರಿಂದ ವಾಣಿಜ್ಯ ಬೆಳೆಯಾಗಿ ಬೆಳೆಯಲು ಅರಣ್ಯ ಇಲಾಖೆಯೂ ರೈತರಿಗೆ ಉತ್ತೇಜನ ನೀಡುತ್ತದೆ. **-ಕೆ.ಪರಮೇಶ್,** ಡಿಸಿಎಫ್, ಮೈಸೂರು




ಪರ್ಯಾಯ ಇಂಧನ: ಹೊಂಗೆ ಬೀಜಗಳಿಂದ ತೆಗೆಯುವ ಎಣ್ಣೆಯನ್ನು ಡೀಸೆಲ್‌ಗೆ ಪರ್ಯಾಯವಾಗಿ ವಾಹನಗಳಿಗೆ ಬಳಸುವ ಪ್ರಯೋಗವೂ ನಡೆದಿದೆ. ಹೊಂಗೆ ಎಣ್ಣೆಯನ್ನು ಕೀಟನಾಶಕವಾಗಿ ಮತ್ತು ಸಾಬೂನು ತಯಾರಿಕೆಯಲ್ಲೂ ಬಳಸಲಾಗುತ್ತಿದೆ. ಇಂತಹ ಹತ್ತು–ಹಲವು ಪ್ರಯೋಜನಕಾರಿ ಹೊಂಗೆ ಮರಗಳು ಮತ್ತಷ್ಟು ಹೆಚ್ಚಲಿ. ಪರಿಸರ ಸಮತೋಲನ ಕಾಪಾಡುವಲ್ಲೂ ಮಹತ್ವದ್ದಾಗಿರುವ ಹೊಂಗೆ ಮರದ ಕಾಂಡ ಮಧ್ಯಮ ಎತ್ತರದ್ದು. ಹಾಗಾಗಿ ಜೋರು ಮಳೆ–ಗಾಳಿಯಲ್ಲಿ ಮರದ ರೆಂಬೆಗಳು ಮುರಿಯಬಹುದು. ಆದರೆ, ಬುಡಸಹಿತ ನೆಲಕ್ಕುರುಳುವ ಸಾಧ್ಯತೆ ಕಡಿಮೆ. ಹಾಗಾಗಿ ಮೈಸೂರಿನೆಲ್ಲೆಡೆ ಹೊಂಗೆ ಮರ ಹಬ್ಬಿದರೆ ಇನ್ನೂ ಒಳ್ಳೆಯದು ಎಂಬುದು ಪರಿಸರವಾದಿಗಳ ಅಭಿಪ್ರಾಯ.

ಸಾಂಸ್ಕೃತಿಕ, ಪಾರಂಪರಿಕ, ಐತಿಹಾಸಿಕ ನಗರ ಮೈಸೂರಲ್ಲಿ ಹಸಿರು ಉಳಿದಿರುವುದು ಸಮಾಧಾನದ ಸಂಗತಿ. ಅವೈಜ್ಞಾನಿಕ ಅಭಿವೃದ್ಧಿ ಕಾಮಗಾರಿಗಳ ನೆಪದಲ್ಲಿ ಬಹುಸಂಖ್ಯೆಯ ಮರಗಳಿಗೆ ಕೊಡಲಿಪೆಟ್ಟು ಬಿದ್ದಿದೆಯಾದರೂ ವ್ಯಾಪಕ ಹನನಕ್ಕೆ ಅವಕಾಶವಾಗಿಲ್ಲ. ಮರ ಕಡಿಯಲು ಮುಂದಾದರೆ ಪರಿಸರವಾದಿಗಳು ವಿರೋಧಿಸುತ್ತಾರೆಂಬ ಜಾಗೃತೆ ಇದೆ. ಮತ್ತೊಂದೆಡೆ ಅರಣ್ಯ ಇಲಾಖೆ ಪ್ರಯತ್ನದ ಜೊತೆಗೆ ರಘುಲಾಲ್ ಅಂಡ್ ಕಂಪನಿ, ಟೀಂ ಮೈಸೂರು ಸೇರಿದಂತೆ ಹಲವು ಸಂಘ–ಸಂಸ್ಥೆಗಳ ಅಭಿಯಾನದ ಪ್ರತಿಫಲವಾಗಿ ಮೈಸೂರು ಹಸಿರಾಗಿಯೇ ಉಳಿದಿದೆ. ಗಿಡ ನೆಟ್ಟು ಕೈತೊಳೆದುಕೊಳ್ಳದೆ ಅದಕ್ಕೆ ಗಾರ್ಡ್ ಅಳವಡಿಸಿ, ಬೇಸಿಗೆಯಲ್ಲಿ ಮರೆಯದೆ ನೀರುಣಿಸಿ ಸೊಂಪಾಗಿ ಬೆಳೆಸುವ ಬದ್ಧತೆಯಿಂದಾಗಿ ಗಿಡ–ಮರಗಳು ದಿನೇ ದಿನೇ ಹೆಮ್ಮರವಾಗುತ್ತಿವೆ.



ಚಿತ್ರಗಳು: ಲಕ್ಷ್ಮೀನಾರಾಯಣ ಯಾದವ್

ಕಲ್ಪನೆಗೆ ರೂಪ ಕೊಡುವ ಕಲಾವಿದ ಪುಟ್ಟರಾಜು







● ಎಂ.ಟಿ.ಯೋಗೇಶ್‌ಕುಮಾರ್

ಶ್ರದ್ಧೆಯಿಂದ ಮೈಗೂಡಿಸಿಕೊಂಡರೆ ಕಲೆ ಒಲಿದು, ಉಸಿರಿರುವವರೆಗೂ ಕೈ ಹಿಡಿಯುತ್ತದೆ. ಇದಕ್ಕೆ ಸಾಂಸ್ಕೃತಿಕ ನಗರಿ ಮೈಸೂರಿನ ಹಿರಿಯ ಕಲಾವಿದ ಪುಟ್ಟರಾಜು ನಿದರ್ಶನ. ಇಂದಿಗೂ 'ಪೆನ್ಸಿಲ್ ಸ್ಕೆಚ್' ಮೂಲಕ ಕಲ್ಪನೆಗಳಿಗೆ ಅದ್ಭುತ ರೂಪ ಕಲ್ಪಿಸುವ ಶಕ್ತಿಯಿದೆ. ಇನ್ಲೆ ಕಲಾವಿದರಿಗೆ ದಾರಿದೀಪವೂ ಆಗಿದ್ದಾರೆ.

ಮೈಸೂರಿನ ಎನ್.ಆರ್.ಮೊಹಲ್ಲಾದ ಇನ್ಲೆ ಕಲಾವಿದ ಬಿ.ಮೋಹನ್‌ಕುಮಾರ್ ಅವರ ಬಳಿ 'ಪೆನ್ಸಿಲ್ ಸ್ಕೆಚ್' ಮೂಲಕ ಕಲ್ಪನೆಗೆ ಮೆರಗು ನೀಡುತ್ತಿದ್ದಾರೆ.

ಮೂಲತಃ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಮುಳ್ಳೂರು ಗ್ರಾಮದ ಆರ್.ಪುಟ್ಟರಾಜು ಅವರಿಗೀಗ 91 ವರ್ಷ. ಹಲವು ವರ್ಷದಿಂದ ಮೈಸೂರಲ್ಲೇ ನೆಲೆಸಿದ್ದು, 15 ವರ್ಷದ ಬಾಲಕನಿಂದಲೂ ಚಿತ್ರ ರಚನೆಯಲ್ಲಿ ತೊಡಗಿಸಿಕೊಂಡು, ಇದೀಗ 75 ವರ್ಷದ ಚಿತ್ರ ರಚನೆಯ ಸುದೀರ್ಘ ಅನುಭವ ವಾಗಿದೆ. ಪೆನ್ಸಿಲ್ ಸ್ಕೆಚ್, ಪೇಯಿಂಟಿಂಗ್, ಡ್ರಾಯಿಂಗ್, ಇನ್ಲೆ ಆರ್ಟ್‌ನಲ್ಲೂ ಪಳಗಿರುವ ಪುಟ್ಟರಾಜು ಅವರು ಚಿತ್ರರಂಗದಲ್ಲೂ ಸೆಟ್ ವರ್ಕ್ ಮಾಡಿರುವ ಅನುಭವ ಹೊಂದಿದ್ದಾರೆ.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ: ಹಿರಿಯ ಕಲಾವಿದ ಆರ್.ಪುಟ್ಟರಾಜು ಅವರಿಗೆ 2008ರಲ್ಲಿ ಅವರ ಕಲಾ ಸೇವೆ ಪರಿಗಣಿಸಿ, ಅಂದಿನ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದು, ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಶಸ್ತಿ ಪ್ರದಾನ ಮಾಡಿದ್ದರು. ಇದರೊಂದಿಗೆ ವಿವಿಧ ಅಕಾಡೆಮಿ ಸೇರಿದಂತೆ ಹಲವು ಸಂಘ-ಸಂಸ್ಥೆಗಳಿಂದಲೂ ಅನೇಕ ಪ್ರಶಸ್ತಿಗಳು ಪುಟ್ಟರಾಜು ಅವರಿಗೆ ಸಂದಿವೆ.

ನೇಪತ್ಯಕ್ಕೆ ಸರಿದರು: ಈ ಹಿಂದೆ ಮೈಸೂರಿನ ಮುಂಚೂಣಿ ಕಲಾವಿದರಲ್ಲಿ ಒಬ್ಬರಾಗಿದ್ದ ಪುಟ್ಟರಾಜು, ತನ್ನ ಸುದೀರ್ಘ ಕಲಾ ಸೇವೆಯಲ್ಲಿ ಸಾವಿರಾರು ಚಿತ್ರಗಳನ್ನು ರಚಿಸಿ, ಅವುಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿದ್ದರು. ತಮ್ಮ ಸ್ಟುಡಿಯೋದಲ್ಲಿಟ್ಟುಕೊಂಡಿದ್ದ ಲಕ್ಷಾಂತರ ರೂ. ಮೌಲ್ಯದ ಇನ್ಲೆ ಕಲೆ, ಪೆನ್ಸಿಲ್ ಸ್ಕೆಚ್, ಪೇಯಿಂಟಿಂಗ್ ಸೇರಿದಂತೆ ಅಪರೂಪದ ನೂರಾರು ಕಲಾಕೃತಿಯನ್ನು ಆಂಧ್ರ ಮೂಲದ ವ್ಯಕ್ತಿಯೊಬ್ಬರು, ಹಣ ನೀಡುವುದಾಗಿ ಭರವಸೆ ನೀಡಿ ತೆಗೆದುಕೊಂಡು ಹೋದವರು, ಕೊನೆಗೆ ಮೋಸ ಮಾಡಿದ್ದರಿಂದ ಕಲೆಯ ಬಗ್ಗೆಯೇ ಬೇಸರಗೊಂಡು ದೂರ ಸರಿದಿದ್ದರು. ಆದರೆ, ಇದೀಗ ಇವರ ಕಲೆಯ ಮಹತ್ವ ಅರಿತು ಯುವ ಕಲಾವಿದ ಬಿ.ಮೋಹನ್‌ಕುಮಾರ್, ಹಿರಿಯ ಕಲಾವಿದ ಪುಟ್ಟರಾಜು ಅವರನ್ನು ತಮ್ಮ ಸ್ಟುಡಿಯೋದಲ್ಲಿಟ್ಟುಕೊಂಡು, ಅವರಿಂದ ಪೆನ್ಸಿಲ್ ಸ್ಕೆಚ್ ಕಲಾ ಪ್ರಕಾರದ ಮೂಲಕ ಮತ್ತೆ ಮುನ್ನಲೆಗೆ ತಂದಿದ್ದಾರೆ.

ಚಲನಚಿತ್ರ ರಂಗದಲ್ಲೂ ಸೇವೆ: ಕಲಾವಿದ ಪುಟ್ಟರಾಜು, ಕನ್ನಡ, ತಮಿಳು ಸೇರಿದಂತೆ ವಿವಿಧ ಭಾಷೆಯ ಚಿತ್ರರಂಗದಲ್ಲೂ ಸೇವೆ ವಿಸ್ತರಿಸಿದ್ದಾರೆ. ಸುಮಾರು 30 ಚಲನಚಿತ್ರಗಳಿಗೆ ಸೆಟ್ ವರ್ಕ್ ಮಾಡಿದ್ದಾರೆ. ಭಾರತದ ಖ್ಯಾತ ನಿರ್ದೇಶಕರಾದ ಕೆ.ಬಾಲಚಂದರ್, ಕೆ.ಎಸ್.ಪ್ರಕಾಶ್‌ರಾವ್, ವಿನ್ಸೆಂಟ್ ಸೇರಿದಂತೆ ಇತರರೊಂದಿಗೆ ಕೆಲಸ ಮಾಡಿದ್ದಾರೆ. ಹೆಸರಾಂತ ನಟ ಎಂಜಿಆರ್ ಅವರಿಂದಲೂ ಪ್ರಶಂಸೆಗೆ ಪುಟ್ಟರಾಜು ಪಾತ್ರರಾಗಿದ್ದಾರೆ.

ಗಣ್ಯರಿಗೆ ನೀಡುತ್ತಿದ್ದ ಚಿತ್ರಗಳು

ಈ ಹಿಂದೆ ಮೈಸೂರಿಗೆ ಬರುವ ಗಣ್ಯರಿಗೆ ಉಡುಗೊರೆಯಾಗಿ ನೀಡುತ್ತಿದ್ದ ಬಹುತೇಕ ಕಲಾ ಕೃತಿಗಳು ಇದೇ ಪುಟ್ಟರಾಜು ಅವರು ರಚಿಸಿದಂತವು. ಗಣ್ಯರಿಗೆ ಉಡುಗೊರೆ ನೀಡಲು ಪೋಟ್ರೆಟ್ ಮೊದಲೇ ಆರ್ಡರ್ ಕೊಡುತ್ತಿದ್ದರು. ಇದರಿಂದ ಮೈಸೂರಿಗೆ ಬರುವ ರಾಷ್ಟ್ರ, ರಾಜ್ಯ, ಅಂತರರಾಷ್ಟ್ರೀಯ ಮಟ್ಟದ ನಾಯಕರಿಗೆ ಕೊಡುಗೆಯಾಗಿ ನೀಡಿದ ಇನ್ಲೆ ಆರ್ಟ್, ಕೆತ್ತನೆ, ಚಿತ್ರಕಲೆ ಮನೆ ಮಾತಾಗಿವೆ. ಪ್ರಸ್ತುತ ಮೈಸೂರಲ್ಲಿರುವ ಬಹುತೇಕ ಇನ್ಲೆ ಆರ್ಟ್‌ಗಳ ಕಲ್ಪನಾ ಚಿತ್ರಗಳು ಆರ್.ಪುಟ್ಟರಾಜು ಅವರದ್ದೇ ಆಗಿರುವುದು ವಿಶೇಷ.

ನನಗೆ ಪ್ರಯೋಜನವಾಗಲಿಲ್ಲ, ಬೇರೆಯವರಿಗೆ ಉಪಯೋಗವಾದವು...

"ನಾನು ಕಲೆಯ ಸಹವಾಸವೇ ಬೇಡ ಎಂದು ಸುಮ್ಮನಿದ್ದೆ. ಕೆಲವರು ಮಾಡಿದ ಮೋಸ ಹಾಗೂ ತಾಯಿ. ಪತ್ನಿ ನಿಧನದಿಂದ ಒಂಟಿಯಾದ ನಾನು ಖಿನ್ನತೆಗೆ ಒಳಗಾದೆ. ದೂರ ಇದ್ದ ನನ್ನನ್ನು ಯುವ ಕಲಾವಿದ ಮೋಹನ್ ಕುಮಾರ್ ಕರೆದುಕೊಂಡು ಬಂದು ಮತ್ತೆ ಪೆನ್ಸಿಲ್ ಸ್ಕೆಚ್ ಮಾಡಿಸುತ್ತಿದ್ದಾರೆ. ನಾನು 15 ವರ್ಷದವನಿದ್ದಾಗ ಕಲೆಯನ್ನ ಕಲಿತೆ. ಸುಮಾರು 75 ವರ್ಷಗಳಿಂದ ಮಾಡಿಕೊಂಡು ಬಂದಿರುವ ಮಹತ್ವವಾದಂತಹ ಕೃತಿಗಳನ್ನು ವ್ಯಕ್ತಿಯೊಬ್ಬರು ತೆಗೆದುಕೊಂಡು ಹೋದರು. ಹಣ ನೀಡುವುದಾಗಿ ಭರವಸೆ ನೀಡಿ, ಕೊನೆಗೆ ಮೋಸ ಮಾಡಿದರು. ಇದಕ್ಕೆ ಕೋರ್ಟ್, ಪೊಲೀಸ್ ಠಾಣೆ ಅಲೆದು ಸುಸ್ತಾದೆ. ಬೇರೆಯವರು ತಮಗಾಗಿ ನನ್ನನ್ನು ಬಳಸಿಕೊಂಡರು ಎಂಬ ನೋವು ಸದಾ ಕಾಡುತ್ತಿದೆ. ಇದರಿಂದ ನನಗೆ ಏನೂ ಪ್ರಯೋಜನವಾಗಲಿಲ್ಲ. ಆದರೆ ಬೇರೆಯವರಿಗೆ ಉಪಯೋಗವಾದವು...

– ಆರ್.ಪುಟ್ಟರಾಜು, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಕಲಾವಿದರು.

ಏನ್ ಶಾಸಕರೇ... ಹೇಗಿದ್ದೀರಾ..!

ಗುಂಡ್ಲುಪೇಟೆ ಕ್ಷೇತ್ರದ 110 ಕೆರೆಗಳ ಭರ್ತಿಗೆ ಅನುದಾನ



–ಹೆಚ್.ಎಂ.ಗಣೇಶ್‌ಪ್ರಸಾದ್, ಶಾಸಕ, ಗುಂಡ್ಲುಪೇಟೆ

"ನಾನು ರಾಜಕೀಯಕ್ಕೆ 9 ವರ್ಷಗಳ ಹಿಂದೆ ಅಂದರೆ ನನ್ನ ತಂದೆ ನಿಧನದ ಬಳಿಕ ಬಂದೆ. ಕಳೆದ ಮೂರು ವರ್ಷದಿಂದ ಶಾಸಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಇಷ್ಟು ದಿನಗಳ ಸಾರ್ವಜನಿಕ ಸೇವೆ ನನಗೆ ತೃಪ್ತಿ ತಂದಿದೆ.

–ಎಚ್.ಎಂ.ಗಣೇಶಪ್ರಸಾದ್.

ಸಂದರ್ಶನ: ಸಿದ್ದಲಿಂಗಸ್ವಾಮಿ

ಮೈಸೂರು ಮಿತ್ರ: ರಾಜ್ಯ ಸರ್ಕಾರದ ಮೂರು ವರ್ಷದ ಸಾಧನೆ ನಿಮಗೆ ತೃಪ್ತಿ ತಂದಿದೆಯಾ?

ಗಣೇಶ್‌ಪ್ರಸಾದ್: ಹೌದು, ನನಗೆ ಶೇ.100ರಷ್ಟು ತೃಪ್ತಿ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನ ಕ್ಷೇತ್ರದ ಅಭಿವೃದ್ಧಿಗಾಗಿ ಆರಂಭದಿಂದಲೂ ಅನುದಾನ ನೀಡುತ್ತಲೇ ಬಂದಿದ್ದಾರೆ. ಮೊದಲ ವರ್ಷ 25 ಕೋಟಿ, ಎರಡನೇ ವರ್ಷ ಅತಿವೃಷ್ಟಿಗಾಗಿ 10 ಕೋಟಿ, ಪ್ರಸಕ್ತ ವರ್ಷ 50 ಕೋಟಿ ಅನುದಾನ ನೀಡಿದ್ದಾರೆ. ಒಟ್ಟಾರೆ ಮೂರು ವರ್ಷದಲ್ಲಿ ನನ್ನ ಕ್ಷೇತ್ರಕ್ಕೆ ಸುಮಾರು 85 ಕೋಟಿ ಅನುದಾನ ನೀಡಿದ್ದಾರೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಕ್ಷೇತ್ರದಲ್ಲಿ ರಸ್ತೆ ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ ಸೇರಿದಂತೆ ಬಾಕಿ ಉಳಿದಿದ್ದ ಹಳೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಮಿತ್ರ: ನಿಮ್ಮ ಕ್ಷೇತ್ರದಲ್ಲಿ ಆದಂತಹ ಪ್ರಮುಖ ಕಾಮಗಾರಿಗಳು ಯಾವುವು?

ಗಣೇಶ್ ಪ್ರಸಾದ್: ನನ್ನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೊರಾರ್ಜಿ ದೇಸಾಯಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಶಾಲೆಗಳು ಆರಂಭವಾಗಿವೆ. ಜೊತೆಗೆ ಅಂದಾಜು 40 ಕೋಟಿ ಅನುದಾನದಡಿಯಲ್ಲಿ ಮೂರು ವಿದ್ಯುತ್ ಉಪ ಕೇಂದ್ರಗಳಿಗೆ ಚಾಲನೆ ನೀಡಲಾಗಿದೆ. ಮೂರು ದಿನಗಳ ಹಿಂದೆ ಗೋಪಾಲಪುರದಲ್ಲಿಯೂ ಚಾಲನೆ ನೀಡಿದ್ದೇನೆ. ಇದಲ್ಲದೇ ಎಸ್‌ಇಪಿ ಅನುದಾನವನ್ನು ನನ್ನ ಕ್ಷೇತ್ರಕ್ಕೆ ಸಾಕಷ್ಟು ನೀಡಲಾಗಿದೆ. ಟಿಎಸ್‌ಪಿಯಲ್ಲಿ 4 ಕೋಟಿ ಅನುದಾನ ನೀಡಲಾಗಿದ್ದು, ಇದರ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಕ್ಷೇತ್ರದ ವಿವಿಧೆಡೆ ಬಾಕಿ ಉಳಿದಿದ್ದ ಸಮುದಾಯ ಭವನಗಳ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಮಿತ್ರ: ನಿಮಗೆ ತೃಪ್ತಿ ತಂದ ಅಭಿವೃದ್ಧಿ ಕಾರ್ಯ ಯಾವುದು?

ಗಣೇಶ್‌ಪ್ರಸಾದ್: ಬೊಮ್ಮನಹಳ್ಳಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಶಾಲೆ ಹಾಗೂ ಎಪಿಎಂಸಿ ಹತ್ತಿ ಮಾರುಕಟ್ಟೆ ಪ್ರಾರಂಭ. ಇವೆರಡು ನನ್ನ ತಂದೆ, ಮಾಜಿ ಸಚಿವರಾದ ಎಚ್.ಎಸ್. ಮಹದೇವಪ್ರಸಾದ್ ಅವರು ಅನುಮೋದನೆ ನೀಡಿದ ಯೋಜನೆಗಳಾಗಿವೆ. ಇವೆರಡಕ್ಕೂ ನಾನು ಚಾಲನೆ ನೀಡಿದ್ದೇನೆ. ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿರುವ ನನಗೆ ಈ ಮೂರು ವರ್ಷದ ಅವಧಿಯಲ್ಲಿ ನಮ್ಮ ಸರ್ಕಾರದ ಸಾಧನೆ ಹೆಚ್ಚು ಖುಷಿ ತಂದಿದೆ. ಎಸ್‌ಇಟಿಪಿಯಲ್ಲಿ 20 ಕೋಟಿ, ಪಿಡಬ್ಲ್ಯೂಡಿಯಲ್ಲಿ 30 ಕೋಟಿ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ. ಅರಣ್ಯದಂಚಿನ ಗ್ರಾಮಗಳಲ್ಲಿ ಕಾಡಾನೆಗಳ ಉಪಟಳ ತಪ್ಪಿಸುವ ನಿಟ್ಟಿನಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೂ ಭೂಮಿಪೂಜೆ ಮಾಡಲಾಗಿದೆ.

ಮಿತ್ರ: ಮುಂದಿನ 2 ವರ್ಷದಲ್ಲಿ ಅಭಿವೃದ್ಧಿ ಗುರಿ ಹೇಗಿರುತ್ತೆ?

ಗಣೇಶ್‌ಪ್ರಸಾದ್: ಇದೇ ತಿಂಗಳು ಏ.21ರಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು 475 ಕೋಟಿ ಅನುದಾನದಡಿ 110 ಕೆರೆಗಳಿಗೆ ನೀರು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ಸಚಿವರು ಪಾಲ್ಗೊಳ್ಳಲಿದ್ದಾರೆ. ಈ ಯೋಜನೆಯು ಮುಂದಿನ ಎರಡು ವರ್ಷದಲ್ಲಿ ಕನಿಷ್ಠ ಶೇ.75ರಿಂದ 80ರಷ್ಟು ಪೂರ್ಣಗೊಳಿಸಲು ಕ್ರಮ ವಹಿಸುತ್ತೇನೆ. ಇದಲ್ಲದೇ ಅಂದಾಜು 5 ಕೋಟಿ ಅನುದಾನದಡಿ ಗುಂಡ್ಲುಪೇಟೆ ಪಟ್ಟಣದ ರಸ್ತೆಗಳು, ಚರಂಡಿ ಅಭಿವೃದ್ಧಿ ಮಾಡಲಾಗುವುದು. ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಗುಂಡ್ಲುಪೇಟೆ ಪಟ್ಟಣದಲ್ಲಿ ಯುಜಿಡಿ ಕಾಮಗಾರಿಗೆ 80 ಕೋಟಿ ಅನುದಾನ, ಒಂದು ಸಂಚಾರ ಪೊಲೀಸ್ ಠಾಣೆ ಹಾಗೂ ಗುಂಡ್ಲುಪೇಟೆ ಎಪಿಎಂಸಿಯಲ್ಲಿ ಒಂದು ಕೋಲ್ಡ್‌ಸ್ಟೋರೇಜ್ ನಿರ್ಮಾಣ ಮಾಡಲಾಗುತ್ತಿದೆ. ಇವೆಲ್ಲದರ ಜೊತೆಗೆ ಹಲವು ಅಭಿವೃದ್ಧಿ ಕೆಲಸಗಳನ್ನು ಮುಂದಿನ ಎರಡು ವರ್ಷದ ಅವಧಿಯಲ್ಲಿ ಮಾಡುವ ಗುರಿಯನ್ನು ಹೊಂದಿದ್ದೇನೆ.




ಪಾಕ ಶಾಲೆ

ಮಟನ್ ರೋಸ್ಟ್


ಬೇಕಾಗುವ ಪದಾರ್ಥಗಳು: ಮಟನ್: 1/2 ಕೆಜಿ (ಚಿಕ್ಕದಾಗಿ ಕತ್ತರಿಸಿದ್ದು), ಈರುಳ್ಳಿ: 2–3 (ಸಣ್ಣದಾಗಿ ಹೆಚ್ಚಿದ್ದು), ಶುಂಠಿ–ಬೆಳ್ಳುಳ್ಳಿ ಪೇಸ್ಟ್: 1 ದೊಡ್ಡ ಚಮಚ, ಖಾರದಪುಡಿ: 1–2 ಚಮಚ (ರುಚಿಗೆ ತಕ್ಕಂತೆ), ದನಿಯಾ ಪುಡಿ: 1 ಚಮಚ, ಗರಂ ಮಸಾಲ ಪುಡಿ: 1/2 ಚಮಚ, ಅರಿಶಿನ ಪುಡಿ: 1/2 ಚಮಚ, ಕಾಳು ಮೆಣಸಿನ ಪುಡಿ: 1 ಚಮಚ, ಕರಿಬೇವು: 2 ಎಸಳು, ಹಸಿಮೆಣಸಿನಕಾಯಿ: 2–3, ಎಣ್ಣೆ ಅಥವಾ ತುಪ್ಪ: 3–4 ಚಮಚ, ನಿಂಬೆ ರಸ: 1 ಚಮಚ, ಉಪ್ಪು: ರುಚಿಗೆ ತಕ್ಕಷ್ಟು

ಮಾಡುವ ವಿಧಾನ...


ಕುಕ್ಕರ್‌ನಲ್ಲಿ ಮಟನ್, ಅರಿಶಿನ, ಉಪ್ಪು, ಸ್ವಲ್ಪ ಖಾರದ ಪುಡಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಮತ್ತು ಸ್ವಲ್ಪ ನೀರು ಸೇರಿಸಿ 4–5 ಸೀಟಿ ಬರುವವರೆಗೆ ಬೇಯಿಸಿಕೊಳ್ಳಿ. ಒಂದು ಬಾಣಲೆಗೆ ಎಣ್ಣೆ ಅಥವಾ ತುಪ್ಪ ಹಾಕಿ ಬಿಸಿ ಮಾಡಿ. ಅದಕ್ಕೆ ಕರಿಬೇವು, ಹಸಿಮೆಣಸಿನಕಾಯಿ ಮತ್ತು ಈರುಳ್ಳಿ ಸೇರಿಸಿ ಚೆನ್ನಾಗಿ ಹುರಿಯಿರಿ. ಈರುಳ್ಳಿ ಚಿನ್ನ ಬಣ್ಣ ಬರುವವರೆಗೆ ಹುರಿಯಬೇಕು. ಈಗ ಇದಕ್ಕೆ ಧನಿಯಾ ಪುಡಿ, ಖಾರದ ಪುಡಿ ಮತ್ತು ಗರಂ ಮಸಾಲ ಸೇರಿಸಿ ಸಣ್ಣ ಉರಿಯಲ್ಲಿ 1 ನಿಮಿಷ ಹುರಿಯಿರಿ. ಬೇಯಿಸಿದ ಮಟನ್ ಅನ್ನು ಮಸಾಲೆಯೊಂದಿಗೆ ಸೇರಿಸಿ (ಮಟನ್ ಬೇಯಿಸಿದ ನೀರು ಇದ್ದರೆ ಅದನ್ನೂ ಸೇರಿಸಿ). ಮಟನ್ ನೀರಿನಂಶ ಸಂಪೂರ್ಣವಾಗಿ ಆವಿಯಾಗಿ ಅದು ಎಣ್ಣೆ ಬಿಡುವವರೆಗೆ ಚೆನ್ನಾಗಿ ಫ್ರೈ ಮಾಡಿ. ಕೊನೆಯಲ್ಲಿ ಕಾಳು ಮೆಣಸಿನ ಪುಡಿ ಮತ್ತು ಲಿಂಬೆ ರಸ ಸೇರಿಸಿ ಚೆನ್ನಾಗಿ ಕಲಸಿ. ಬೇಕಿದ್ದಲ್ಲಿ ಸಣ್ಣದಾಗಿ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಮೇಲಿನಿಂದ ಉದುರಿಸಿ. ಇದೀಗ ರುಚಿಕರವಾದ ಮಟನ್ ರೋಸ್ಟ್ ಸವಿಯಲು ಸಿದ್ಧ.














ನನಗೆ ನೀನು... ನಿನಗೆ ನಾನು...



ಏಂತರ್, ಇನ್ನೊಂದು ಮಾತಾಡಿದರೆ ನಾನು ಸುಮ್ಮನಿರುವುದಿಲ್ಲ. ನಿಮಗೆ ಆಸ್ತಿ ತಾನೇ ಬೇಕು? ಇಬ್ಬರಿಗೂ ಸಮ ಪಾಲು ಮಾಡಿ ಕೊಟ್ಟುಬಿಡುತ್ತೇನೆ. ತೆಗೆದುಕೊಳ್ಳಿ. ನದಿಯಲ್ಲಿ ನೀರು ಹರಿವವರೆಗೆ ಮಾತ್ರ ಅದಕ್ಕೆ ಬೆಲೆ. ಆಮೇಲೆ ನೀವ್ಯಾರೋ... ನಾನ್ಯಾರೋ...?'

ಕರುಣಾ ಕರ ಒಂದೇ ಸಮನೆ ಕೂಗಾಡಿ ಸುಸ್ತಾಗಿ ಒಂದು ಮೂಲೆ ಸೇರಿದನು. ಅವನಿಗೆ ಆಯಾಸವಾಗಿದೆ. ಒಂದು ಲೋಟ ನೀರು ಕೊಡೋಣ ಎನ್ನುವ ಒಂದು ನರಪಿಳ್ಳೆಯೂ ಅಲ್ಲಿರಲಿಲ್ಲ. ತಮ್ಮ ರೂಮು ಸೇರಿ ಪವಡಿಸಲು ಅನುವು ಮಾಡಿಕೊಳ್ಳುತ್ತಿದ್ದರು.

ಕರುಣಾಕರನಿಗೆ ಮಕ್ಕಳ ಮೇಲೆ ಸಿಟ್ಟಾಗಲೀ, ಉದಾಸೀನವಾಗಲೀ ಇಲ್ಲ. ನಡೆಯಲು ಇದ್ದ ಒಂದು ಹಾದಿ ಮುಚ್ಚಿಹೋದಾಗ, ಕರುಣಾಕರ ಇನ್ನೊಂದು ಹಾದಿಯನ್ನು ಅವಲಂಬಿಸಲೇಬೇಕಾಯಿತು. ಹೆಂಡತಿ ಯಾವ ಸೂಚನೆಯೂ ಕೊಡದೆ, ಹೃದಯ ಸ್ತಂಭನವಾಗಿ ಇದ್ದಕ್ಕಿದ್ದಂತೆ ತನ್ನನ್ನಗಲಿದ ನಂತರ, ಕರುಣಾಕರ ಬೇಸತ್ತನು, ಅತ್ತನು, ನೊಂದು ಕೊರಗಿದನು. ಆದರೆ ಪ್ರಾಣ ಬಿಟ್ಟು ಬಿಡುವ ನಿರ್ಧಾರ ತೆಗೆದುಕೊಳ್ಳಲಿಲ್ಲ. ಅವಳಿಲ್ಲದ ಮೇಲೆ ಈ ಪ್ರಪಂಚದಲ್ಲಿ ತನಗಿನ್ನೇನು ಕೆಲಸ ಅನಿಸಿದರೂ, ದೇಹ ತೊರೆಯುವುದು ಅಷ್ಟು ಸುಲಭವೇ? ಆಗಲಿಲ್ಲ! ಆ ಕಡೆಗೆ ಅವನ ಗಮನ ಹರಿಯಲೂ ಇಲ್ಲ. ಹೆಂಡತಿಯನ್ನು ಕ್ಷಣಕಾಲವೂ ಬಿಟ್ಟಗಲದ ಅವನಿಗೆ, ಹೆಂಡತಿ ಸತ್ತ ನಂತರವೇ ತಿಳಿದದ್ದು, ತಾನು ಪರಾಧೀನನೆಂದು! ಹಾಗಾದರೆ ಹೆಂಡತಿಯನ್ನು ಅಷ್ಟು ಪ್ರೀತಿಸುತ್ತಿದ್ದನೆ ತಾನು? ಹೌದೆಂದಿತು ಅಂತರಂಗ..

ಒರಗಲಿಕ್ಕೆ ಹೆಂಡತಿಯ ಭುಜ ಅಲಭ್ಯವಾದಾಗ, ಸಹಜವಾಗೇ ಕರುಣಾಕರನ ಗಮನ ಮಕ್ಕಳೆಡೆಗೆ ಹರಿಯತೊಡಗಿತು. ಮೆಲ್ಲಗೆ ಮಕ್ಕಳ ಆಗುಹೋಗುಗಳೆಡೆಗೆ ವಾಲಿಕೊಳ್ಳತೊಡಗಿದನು. ಕಷ್ಟ ಸುಖ ವಿಚಾರಿಸತೊಡಗಿದನು. ತನ್ನ ಅವಶ್ಯ ವಸ್ತುಗಳನ್ನು ಕೇಳಿ ತರಿಸಿಕೊಳ್ಳತೊಡಗಿದನು.

ಒಂದು ರಾತ್ರಿ ಕರುಣಾಕರ ನಿದ್ದೆ ಬರದೆ ಹಾಸಿಗೆಯ ಮೇಲೆ ಹೊರಳಾಡುತ್ತಿರುವಾಗ, ಮನಸ್ಸು ಮ್ಲಾನವಾಯಿತು. ಲೋಕವಿರುವಂತೆ ತಾನೂ ಕೂಡಾ ಸ್ವಾರ್ಥಿಯಾಗಿಬಿಟ್ಟೆನಲ್ಲ! ಹಾಗಾದರೆ ಈ ಲೋಕದ ಕಣ್ಣಿಗೆ ತಾನು ಹೇಗೆ ಕಾಣುತ್ತಿರುವೆ? ಹೆಂಡತಿ ಹೋದರೂ ಅವಳ ಬಗ್ಗೆ ಚಿಂತಿಸದ ನಿರ್ಲಿಪ್ತನಾಗೇ? ಇದ್ದಳು, ಹೋದಳೆಂಬ ಭಾವ ಬಿಂಬಿತವಾಗಿರಬಹುದೇ ಸಮಾಜದಲ್ಲಿ ಜನಕ್ಕೆ? ತಾನಿರುವುದೂ ಹಾಗೇ ತಾನೇ? ಅವಳಿರುವವರೆಗೂ ಅವಳನ್ನು ಬಿಟ್ಟು ಕದಲದ ತಾನು, ಈಗ ಮಕ್ಕಳೆಡೆಗೆ ಹೇಗೆ ಹೊರಳಿಕೊಂಡೆ! ತನಗಾಗಿ ಹಗಲಿರುಳು ಕಾದು ಹಂಬಲಿಸಿದ, ತನಗೆ ನೆತ್ತತ್ತಿದರೆ ತಾನು, ಕೆಮ್ಮಿ, ಕ್ಯಾಕರಿಸಿ ಓಡಿಬಂದು ನೆತ್ತಿ ತಟ್ಟುವ ಅವಳ ಅಂತಃಕರಣದ ಭಾವಕ್ಕೆ ತಾನು ಯೋಗ್ಯನೇ? ಪ್ರತಿಕ್ಷಣವೂ ನಿಮಗೇನು ಬೇಕು ಎನ್ನುತ್ತಲೇ ತನ್ನ ಹಿಂದೆ ಮುಂದೆ ಸುತ್ತಿದ ಅವಳನ್ನು ತಾನು ಕೇವಲ ಬಳಸಿಕೊಂಡೆನಾ? ಅವಳು ಜ್ವರ, ಅದೂ-ಇದೂ ಎಂದು ಸಣ್ಣ ಪುಟ್ಟದಾಗಿ ನರಳಿದಾಗಲೂ ತಾನೆಂದಾದರೂ ಆಪ್ತವಾಗಿ ವಿಚಾರಿಸಿದ್ದೇನೇ? ಇಲ್ಲವಲ್ಲ!

'ಅಪ್ಪಾ, ಹೊರಗೆ ಹೋಗುತ್ತಿದ್ದೇನೆ. ಏನಾದರೂ ಬೇಕಾ? ಆಮೇಲೆ ತಲೆ ತಿನ್ನಬೇಡಿ.' ಎಂದ ಮಗನ ಧ್ವನಿಗೆ, ಈಗೆಂತ ಹೊರಗೆ ಹೋಗುತ್ತಾನೆ? ಹನ್ನೊಂದಾಯಿತು ಎಂದುಕೊಂಡರೂ, ಏನು ಕೇಳಲೂ ಮನಸಾಗದೆ, ಮಾತಾಡದೆ ಸುಮ್ಮನಿದ್ದನು. ಸ್ವಲ್ಪ ಹೊತ್ತು ಕಾದ ಮಗ ಹೊರಟು ಹೋದ.

*****

ಕರುಣಾಕರನ ಸಂಸಾರ ಸುಖವಾದದ್ದೇ. ಕೊರತೆಯೆಂಬುದಿಲ್ಲ. ಸಾಕಷ್ಟು ಆಸ್ತಿ ಹಣಕಾಸು ಒಡವೆಗಳೂ ಇದ್ದವು. ದೂರದಲ್ಲೆಲ್ಲೋ ಜಮೀನೂ ಇತ್ತು. ಮಕ್ಕಳ ಓದು, ಕೆಲಸ, ಮದುವೆ ಎಲ್ಲದರಲ್ಲೂ ಕರುಣಾಕರ ಸಂತೃಪ್ತ. ಹೆಂಡತಿಯ ಬಗೆಗೂ ಅಪಾರವಾದ ಪ್ರೀತಿ, ಆಕೆಗೂ ಕರುಣಾಕರನೆಂದರೆ ದೈವತ್ವ ಭಾವ. ಸುಂದರ ಸಂಸಾರವೆನ್ನಲಡ್ಡಿ ಇಲ್ಲವೇ ಇಲ್ಲ!

> ಎಲ್ಲರ ಜೀವನ ವಿಧಾನಗಳೂ ಒಂದೇ ಆಗಿವೆ. ತಾನಿಲ್ಲಿಗೆ ಸೇರಿಕೊಂಡಿದ್ದೇ ಒಳ್ಳೆಯದಾಯಿತು. ತಾನು ತನ್ನ ಮಕ್ಕಳಿಗೆ ಪರಕೀಯನಾದ ಮೇಲೆ ಅಲ್ಲಿರುವುದು ಸೂಕ್ತವಲ್ಲ ಅನಿಸಿದ್ದೇ ಸರಿ. ಸದ್ಯಕ್ಕೆ ಬೇಸರ ಮಾಡಿಕೊಳ್ಳುತ್ತಾರೆ, ಮಾಡಿಕೊಳ್ಳಲಿ. ಎಷ್ಟುದಿನ? ಈಗ ಕರುಣಾಕರ ನೆಮ್ಮದಿಯ ನಿಟ್ಟುಸಿರುಗರೆದನು. ಒಂದೆರಡು ವಾರ ಕಳೆಯುವಷ್ಟರಲ್ಲಿ ಎಲ್ಲರೂ ಚಿರಪರಿಚಿತರಾದರು. ಒಬ್ಬೊಬ್ಬರ ಕಷ್ಟ ಸುಖಗಳೂ ಬಹು ತೆರನಾದವು. ಎಲ್ಲರನ್ನೂ ಅರಿತುಕೊಳ್ಳುವಲ್ಲಿ ಕರುಣಾಕರ ಗೆದ್ದನು. ಕಾರಣ ಅವನ ಗ್ರಹಣ ಶಕ್ತಿ ಅದ್ಭುತವಾದದ್ದು. ಸಾಕಷ್ಟು ಮಂದಿ ಮಹಿಳೆಯರು, ಪುರುಷರು ಆತ್ಮೀಯರಾದರು.

ಆದರೇನು? ದೈವ ಸಂಕಲ್ಪ ಒಂದಿದೆಯಲ್ಲ! ಹೆಂಡತಿ ತೀರಿದ ಬಳಿಕ ಕರುಣಾಕರ ಒಂಟಿಯಾದ. ಮನೆಯಲ್ಲಿ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳಿದ್ದರೂ, ತನ್ನನ್ನು ಆಪ್ತವಾಗಿ ಅಲಿಂಗಿಸುವ ಜೀವದ ಕೊರತೆ ಅವನಿಗೆ ಕಾಡತೊಡಗಿದರೂ, ತನ್ನೊಳಗೇ ಮರೆಮಾಚಿಕೊಂಡು, ಮಕ್ಕಳ ಜೊತೆಗೆ ಹೊಂದಿಕೊಂಡು ಬಾಳಲು ಪ್ರಯತ್ನಿಸುತ್ತಿದ್ದನು.

ಒಂದು ದಿನ ಹಿರಿಯ ಮಗ, 'ಅಪ್ಪಾ ನಾನು ಒಂದು ಶೇರ್ ಪರ್ಚೇಸ್ ಮಾಡಬೇಕೂಂತಿದೀನಿ. ಅದಕ್ಕೆ ನನ್ನ ಬಳಿಯಿರೋ ಹಣ ಸಾಕಾಗಲ್ಲ, ಈ ಆಸ್ತಿ ಯಾವತ್ತಿದ್ದರೂ ಪಾಲಾಗಲೇ ಬೇಕು ತಾನೆ? ನನ್ನ ಪಾಲು ನನಗೆ ಕೊಟ್ಟುಬಿಡಿ.' ಎರಡನೆ ಯವನೂ ಇದಕ್ಕೆ ಒತ್ತಾಸೆಯಾಗಿ ರಾಗ ಹಾಡಿದ;

'ಹೌದಪ್ಪಾ ಮಾವನವರು ಕೊಟ್ಟಿರುವ ಸೈಟಿನಲ್ಲಿ ಮನೆ ಕಟ್ಟಬೇಕೂಂತಿದೀನಿ. ನನ್ನ ಪಾಲು ನನಗೆ ಕೊಟ್ಟರೆ ನಾನೂ ಮುಂದುವರೆಯಬಹುದು.'

ಕರುಣಾಕರ ಮಕ್ಕಳ ಮುಖ ನೋಡಿದ ತೀಕ್ಷ್ಣವಾಗಿ. ಇದಿನ್ನು ಬಗೆ ಹರಿಯದ ಸಮಸ್ಯೆ ಅನಿಸತೊಡಗಿ, 'ಪಾಲು ಮಾಡಲೇ ಬೇಕೇನ್ರೋ ಆಸ್ತೀನಾ?' ಅಂದಾಗ, ಆ ಮಕ್ಕಳೋ,

'ಇಟ್ಟುಕೊಂಡು ಇನ್ನೇನು ಮಾಡ್ತೀರಾ ಹೇಳಿ? ಅಮ್ಮನಂತೂ ಹೋಗಿಯಾಯ್ತು. ಈಗಲೇ ನೀವು ಎಲ್ಲ ಹಂಚಿಬಿಟ್ಟರೆ ನಾಳೆ ದಿನ ಯಾವ ಸಮಸ್ಯೆಯೂ ಇರೋಲ್ಲ ಅಲ್ವೇ'?

ಅಹಹಾ ಏನು ಮಕ್ಕಳು! ಎಂಥಾ ಸಲಹೆ ಕೊಡುತ್ತಾರೆ. ತನ್ನ ಜೀವದ ಬಗ್ಗೆ ಇವರಿಗೆ ಲವಲೇಶವೂ ನಂಬಿಕೆಯಿಲ್ಲವೆಂಬುದನ್ನು ತೋರಿಸಿಬಿಟ್ಟರು! ಇಷ್ಟಾದ ಮೇಲೆ ತಾನು ಭಾಗ ಮಾಡದೆ ಇರುವುದು ಸರಿಯಲ್ಲ, ಸುಮ್ಮನಿದ್ದರೆ ತನ್ನನ್ನು ಆಸೆಬುರುಕನೆನ್ನಲೂ ಇವರು ಹೇಸಲಾರರು! ಇನ್ನು ತಾನು ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು.

'ನಿಮ್ಮಿಚ್ಛೆಯಂತೇ ಆಗಲಿ. ಮಾಡೋಣ. ಅದಕ್ಕೆ ಸ್ವಲ್ಪ ಸಮಯ ಬೇಕು. ಕೊಡಲಾದೀತೇ?' ಅಪ್ಪನ ವ್ಯಂಗ್ಯದ ಛಾಟಿಯಂಥ ಮಾತಿಗೆ ಇಬ್ಬರೂ ತಲೆ ತಗ್ಗಿಸಿದರು. ಒಂದು ವಾರದ ಬಳಿಕ ಎಲ್ಲವೂ ಇತ್ಯರ್ಥವಾಗಿ, ಅವರವರ ಪತ್ರ ಅವರವರ ಕೈಸೇರಿತು. ಮಕ್ಕಳ ಮಾತು ಮುಂದುವರೆಯಿತು.

'ಮೂರು ಭಾಗವೇಕಪ್ಪಾ? ನೀವು ನಮ್ಮ ಜೊತೇನೇ ಇರುತ್ತೀರಲ್ವಾ?'

'ನಾನು ಚೆನ್ನಾಗಿದ್ದಾಗಲೇ ಭಾಗ ಕೇಳಿದವರು, ನಾಳೆ ನನ್ನನ್ನು ಒದ್ದು ಹೊರ ಹಾಕಲಾರಿರಿ ಎಂಬ ಗ್ಯಾರಂಟಿ ಏನ್ರೋ? ಅದಕ್ಕೆ ನನ್ನ ಪಾಲು ನನಗಿರಲಿ. ನಿಮ್ಮ ಗೊಡವೆಯೂ ಬೇಡ. ನಾನು ಹೋಗುತ್ತಿದ್ದೇನೆ. ನೀವು ಸುಖವಾಗಿರಿ.'

ಅಪ್ಪನ ಮನಸ್ಸನ್ನು ನೋಯಿಸಿದೆವಾ ಎಂಬ ಪಶ್ಚಾತ್ತಾಪ ಇಬ್ಬರ ಮುಖದಲ್ಲೂ ಒಮ್ಮೆಲೇ ಮೂಡಿ ಮಡುಗಟ್ಟಿತು. 'ಎಲ್ಲಿ ಹೋಗ್ತೀರಪ್ಪಾ? ಎಲ್ಲೂ ಹೋಗಬೇಡಿ. ಇಲ್ಲೇ ಇರಿ.' ಆರ್ತತೆ ಇತ್ತು ಮಕ್ಕಳ ಧ್ವನಿಯಲ್ಲಿ.

'ಬೇಡಪ್ಪಾ, ಇನ್ನು ನಿಮ್ಮ ಹಂಗಿನಲ್ಲಿ ಬದುಕಲು ನನ್ನಿಂದಾಗದು. ನಾನು ಎಲ್ಲೋ ಹೋಗುತ್ತೇನೆ, ನನ್ನ ಚಿಂತೆ ಬಿಡಿ. ದೇವರು ನಿಮಗೆ ಒಳ್ಳೆಯದು ಮಾಡಲಿ.'

*****

ಹೇಳದೇ ಕೇಳದೆ ಹೊರಬಂದ ಕರುಣಾಕರನ ಚಿತ್ತ ವೃದ್ಧಾಶ್ರಮದ ಕಡೆಗೆ ಹರಿದಿತ್ತು. ವೃದ್ಧನಂತೆಂದೂ ಕಾಣುತ್ತಿರಲಿಲ್ಲ. ಲವಲವಿಕೆಯ ಮನುಷ್ಯ, ಚೈತನ್ಯದ ಚಿಲುಮೆಯಾಗಿದ್ದ ಕರುಣಾಕರ, ಹೆಂಡತಿ ಹೋದ ಮೇಲೆ ಕೊಂಚ ಮಂಕಾಗಿದ್ದು ನಿಜ. ಹಾಗೆಂದು ಆತ ತನ್ನ ಜೀವನ ಪ್ರೀತಿಯನ್ನು ಕಳೆದುಕೊಂಡವನಲ್ಲ, ಮನಸಿನ ಉತ್ಸಾಹವನ್ನು ಬದಿಗೊತ್ತಿದವನಲ್ಲ. ಬರುವ ಪಿಂಚಣಿಯಲ್ಲಿ ಬಹಳ ಉನ್ನತ ಮಟ್ಟದ ಜೀವನ ಸಾಗಿಸಬಹುದು ಕರುಣಾಕರ.

ತನಗೆಂದೇ ಶುಚಿಗೊಳಿಸಿದ ಕೊಠಡಿ ಹೊಕ್ಕವನಿಗೆ ಮನಸ್ಸು ಪಿಚ್ಚೆನಿಸಿತು. ತಾನೇಕೆ ಹೀಗೆ ಎಲ್ಲರನ್ನೂ ತೊರೆದು ಒಂಟಿಯಾಗಿ ಹೊರಬಂದುಬಿಟ್ಟೆ? ಸರಿಯೇ ತಾನು ಮಾಡಿದ್ದು? ಮಕ್ಕಳ ಮನಸ್ಸನ್ನು ನೋಯಿಸಿದೆನೇ? ಕಪ್ಪು ಮೋಡ ಮನಸಿನ ತುಂಬ ಮುಸುಕಿ ತಿರುಗುತ್ತಿರುವ ಫ್ಯಾನ್ ಗಾಳಿಗೆ ಆ ಮೋಡಗಳನ್ನು ಚದುರಿಸುವ ಶಕ್ತಿಯಿಲ್ಲ ಅನಿಸಿ, ತನಗೆ ತಾನೇ ನಕ್ಕನು. ಮನಸಿನ ಚಿಂತೆಗಳನ್ನು ಈ ಹೊರಗಿನ ಆಡಂಬರಗಳು ಮರೆಸುವಂತಿದ್ದರೆ ಜೀವನ ಅದೆಷ್ಟು ಸುಖವಾಗಿರುತ್ತಿತ್ತು ಅನಿಸಿ ಹಾಗೇ ಮಂಚದ ತುದಿಗೆ ಉರುಳಿಕೊಂಡನು. ಇಲ್ಲಿ ಸಕಲ ಸೌಕರ್ಯಗಳೂ ಇವೆ. ಒಂದೇ ಸಮುದಾಯಕ್ಕಾಗಿ ಕಟ್ಟಿರುವ ವೃದ್ಧಾಶ್ರಮ. ಎಲ್ಲರ ಜೀವನ ವಿಧಾನಗಳೂ ಒಂದೇ ಆಗಿವೆ. ತಾನಿಲ್ಲಿಗೆ ಸೇರಿಕೊಂಡಿದ್ದೇ ಒಳ್ಳೆಯದಾಯಿತು. ತಾನು ತನ್ನ ಮಕ್ಕಳಿಗೆ ಪರಕೀಯನಾದ ಮೇಲೆ ಅಲ್ಲಿರುವುದು ಸೂಕ್ತವಲ್ಲ ಅನಿಸಿದ್ದೇ ಸರಿ. ಸದ್ಯಕ್ಕೆ ಬೇಸರ ಮಾಡಿಕೊಳ್ಳುತ್ತಾರೆ, ಮಾಡಿಕೊಳ್ಳಲಿ. ಎಷ್ಟುದಿನ? ಈಗ ಕರುಣಾಕರ ನೆಮ್ಮದಿಯ ನಿಟ್ಟುಸಿರುಗರೆದನು. ಒಂದೆರಡು ವಾರ ಕಳೆಯುವಷ್ಟರಲ್ಲಿ ಎಲ್ಲರೂ ಚಿರಪರಿಚಿತರಾದರು. ಒಬ್ಬೊಬ್ಬರ ಕಷ್ಟ ಸುಖಗಳೂ ಬಹು ತೆರನಾದವು. ಎಲ್ಲರನ್ನೂ ಅರಿತುಕೊಳ್ಳುವಲ್ಲಿ ಕರುಣಾಕರ ಗೆದ್ದನು. ಕಾರಣ ಅವನ ಗ್ರಹಣ ಶಕ್ತಿ ಅದ್ಭುತವಾದದ್ದು. ಸಾಕಷ್ಟು ಮಂದಿ ಮಹಿಳೆಯರು, ಪುರುಷರು ಆತ್ಮೀಯರಾದರು.

ಒಂದು ದಿನ ಮಧ್ಯಾಹ್ನ, ಊಟದ ಕೊಠಡಿಯೆಡೆಗೆ ಹೆಜ್ಜೆ ಹಾಕುವಾಗ, ತನಗೆ ಸುಪರಿಚಿತರಾಗಿದ್ದ ಮಾಲಿನಿ ಒಬ್ಬರೇ ದಾಸವಾಳದ ಗಿಡದ ಕೆಳಗೆ ಕುಳಿತಿರುವುದು ಕಾಣಿಸಿತು. ಕಲ್ಲುಬೆಂಚಿನಲಿ ಕುಳಿತ ಆಕೆಗೆ, ಆ ನೆರಳು ತಲೆಗೆ ಮಾತ್ರ ಬೀಳುತ್ತಿದ್ದು, ಮೈಯೆಲ್ಲ ಬಿರುಬೇಸಿಗೆಗೆ ಕಾವೆಬ್ಬಿಸಿಬಿಟ್ಟರ ಬೇಕೆನಿಸಿತು ಕರುಣಾಕರನಿಗೆ, ಊಟದ ಹಾಲ್‌ಗೆ ಹೋಗುತ್ತಿದ್ದವನು, ಮಾಲಿನಿಯ ಬಳಿ ಬಂದು, 'ಯಾಕೆ ಹೀಗೆ ಒಬ್ಬರೇ ಕುಳಿತಿದ್ದೀರಿ? ಬನ್ನಿ ಊಟ ಮಾಡೋಣ'

'ಕರುಣಾಕರ್ ನನಗೆ ಊಟವೇಕೋ ಇವತ್ತು ಬೇಡವೆನಿಸಿದೆ. ಮಕ್ಕಳು ನೆನಪಾಗುತ್ತಿದ್ದಾರೆ.' 'ಅವರು ನಿಮ್ಮನ್ನು ನೆನೆಯುತ್ತಾರೋ ಇಲ್ಲವೋ, ನೀವೇಕೆ ಹೀಗೆ ಕೊರಗುತ್ತೀರಿ?" ಮಾಲಿನಿಯ ಕಣ್ಣುಗಳು ತುಂಬಿದವು. ಫಳಕ್ಕೆಂದು ಎರಡು ಹನಿ ಸೀರೆಯ ಮೇಲುರುಳಿದವು. ಕರುಣಾಕರ ಕೊಂಚವೂ ಹಿಂದೆ ಮುಂದೆ ಯೋಚಿಸದೆ, ಮಾಲಿನಿಯ ತೋಳು ಹಿಡಿದು ಬಲವಂತವಾಗಿ ಎಬ್ಬಿಸಿ, 'ನಡೆಯಿರಿ' ಎಂದು ಕೈ ಹಿಡಿದೇ ಎಳೆತಂದನು. ಇಬ್ಬರೂ ಪಕ್ಕದಲ್ಲೇ ಕುಳಿತು ದಕ್ಕಿದಷ್ಟು ತಿಂದರು. ಮಾಲಿನಿ ಕರುಣಾಕರನನ್ನು ನೆಟ್ಟನೋಟದಿಂದ ನೋಡಿದಳು. ಕರುಣಾಕರ ಪ್ರಶ್ನಾರ್ಥಕವಾಗಿ ಅವಳನ್ನೇ ನೋಡಿದ. ಮಾತಿಲ್ಲದ ಆ ಭಾವದಲ್ಲಿ ನೂರೆಂಟು ಬಗೆಯ ಅನಿಸಿಕೆಗಳು ಮೈತಳೆದವು. ಅಂದಿನಿಂದ ಪರಸ್ಪರರು ಹತ್ತಿರಾದರು. ಊಟ, ತಿಂಡಿ, ಆಶ್ರಮದ ಪರಿಸರದಲ್ಲೇ ಜೊತೆಯಾಗಿ ಪುಟ್ಟ ನಡಿಗೆ, ನಗು-ಅಳು, ಎಲ್ಲದಕ್ಕೂ ಜೊತೆಯಾದ ಇವರನ್ನು ಆಶ್ರಮದ ಇತರರು ಮತ್ಸರದಿಂದ ಗಮನಿಸತೊಡಗಿದರು. ಅವರು ಇವರನ್ನು ದೂರವಿಟ್ಟರೋ, ಇವರೇ ಅವರಿಂದ ದೂರವುಳಿದರೋ, ಒಟ್ಟು ಅಂತರವೊಂದು ಸೃಷ್ಟಿಯಾಯಿತು. ಕಛೇರಿಯವರೂ ಇವರಿಬ್ಬರನ್ನು ಗಮನಿಸತೊಡಗಿ, ಕರುಣಾಕರ ಒಂದು ನಿರ್ಧಾರಕ್ಕೆ ಬಂದನು.

ಒಂದು ದಿನ, 'ಮಾಲಿನಿಯವರೇ, ನೀವು ಏನೆಂದು ನನಗರ್ಥವಾಗಿದ್ದೀರಿ.. ನಾನು ಏನೆಂದು ನಿಮಗರ್ಥವಾಗಿದ್ದೇನೆ ಅಂದುಕೊಳ್ಳೇನೆ. ನಾವಿಬ್ಬರೂ ಪರಸ್ಪರ ಒಟ್ಟಿಗೆ ಜೀವನ ನಡೆಸಬಾರದೇಕೆ?' ಅವನ ನೇರ ಪ್ರಶ್ನೆ, ನೇರ ನೋಟಕ್ಕೆ ಮಾಲಿನಿ ಕ್ಷಣ ತತ್ತರಿಸಿದಳು. 'ಅದು ಹೇಗೆ ಸಾಧ್ಯ?' 'ಮದುವೆಯಾಗುವುದರ ಮೂಲಕ' ಅಲ್ಲಿಂದ ಇಬ್ಬರೂ ತಡ ಮಾಡಲಿಲ್ಲ. ಒಂದುದಿನ ಇಬ್ಬರೂ ಕಛೇರಿಯಿಂದ ಅನುಮತಿ ಪಡೆದು ಹೊರಗೆ ಹೋಗಿ ಬಂದರು. ಸಂಜೆ ಅವರು ವಾಪಸ್ಸು ಬಂದಾಗ ಅವರ ಚೀಲಗಳ ತುಂಬ. ಹಣ್ಣು-ಹೂವು ಸಿಹಿಗಳಿದ್ದವು. ಎಲ್ಲರಿಗೂ ಹಂಚಿದ್ದಲ್ಲದೆ, ಸಂತೋಷದಿಂದ ತಿನ್ನಿಸಿ, ತಾವು ದೇವಸ್ಥಾನದಲ್ಲಿ ಮದುವೆಯಾದ ವಿಷಯವನ್ನು ಅರುಹಿದರು. ಎಲ್ಲರೂ ಬಾಯ ಮೇಲೆ ಬೆರಳಿಟ್ಟುಕೊಂಡರು. ಇದು ಸಾಧ್ಯವೇ? ಊರು ಹೋಗು ಅನ್ನುವ ವಯಸ್ಸಿನಲ್ಲಿ? ಎಂದು ಚಿಂತಿಸುತ್ತಿರುವಾಗಲೇ ಕರುಣಾಕರ ಹೇಳಿದ, 'ನಮ್ಮಿಬ್ಬರಿಗೂ ಒರಗಲು ಒಂದು ಹೆಗಲು ಬೇಕಿತ್ತು. ನಿನಗಾಗಿ ನಾನಿದ್ದೇನೆ ಎನ್ನುವ ಜೀವ ಬೇಕಿತ್ತು. ಇಬ್ಬರೂ ಹೀಗೆ ಮನಸ್ಸು ಮಾಡಿದೆವು. ನಿಮಗೆ ನೋವಾಗಿದ್ದರೆ ಕ್ಷಮಿಸಿ' ಕೈ ಮುಗಿದರು ಇಬ್ಬರೂ. ಎಲ್ಲರ ಬಾಯಲ್ಲೂ ಏಕಕಾಲಕ್ಕೆ 'ಸುಖವಾಗಿರಿ' ಎಂಬ ಹರಸುವಿಕೆ ತಂತಾನೇ ಹೊರಬಂದಿತು. ಇಬ್ಬರೂ ನಗುತ್ತಾ, 'ನಮಗಿನ್ನೂ ಊರು ಹೋಗು ಅನ್ನುತ್ತಿಲ್ಲ.' ಎಂದಾಗ ಎಲ್ಲರ ಮುಖದಲ್ಲೂ ಮಂದಹಾಸ ಮೂಡಿತು.

ಗಂಡ ಸತ್ತ ಮಾಲಿನಿ, ಹೆಂಡತಿಯಿಲ್ಲದ ಕರುಣಾಕರ ಪರಸ್ಪರ ಒಪ್ಪಿ, ಸಮಾಜಕ್ಕೆ ಎದುರಾಗಿ ನಿಂತರೂ ಸುಖಜೀವನವನಕ್ಕೆ ಹೆಜ್ಜೆಯಿಟ್ಟರು. 'ಮಾಲೂ, ನಿನಗಾಗಿ ನಾನು, ನನಗಾಗಿ ನೀನು. ಯಾರ ಮಾತಿಗೂ ಅಂಜುವುದು ಬೇಡ. ನಮ್ಮ ಬದುಕು ಮಾತ್ರ ನಮ್ಮದು.' ತನ್ನ ಭುಜಕ್ಕೊರಗಿದ ಮಾಲಿನಿಯನ್ನು ಮತ್ತೆ ಸಂತೈಸುವವನಂತೆ ನುಡಿದ ಕರುಣಾಕರನ ಕೈ ಹಿಡಿದ ಮಾಲಿನಿ, 'ವಯಸ್ಸಾದ ನಮ್ಮಿಬ್ಬರಿಗೂ ಇಂತದೊಂದು ಆಸರೆಯ ಅವಶ್ಯಕತೆಯಿತ್ತು ಕರುಣಾ. ನೀನು ಜೊತೆಗಿರು ಸಾಕು. ಏನನ್ನಾದರೂ ನಿಭಾಯಿಸಬಲ್ಲೆ.' ಇಬ್ಬರ ಕೈ ಬೆರಳುಗಳೂ ಹೆಣೆದು ಕೊಂಡವು. ಕೂಡಿದ ನೋಟಗಳಲ್ಲಿ ಆನಂದಬಾಷ್ಪ ಉಕ್ಕಿತು. ಕಾಮವಿಲ್ಲದ ಪ್ರೇಮದಲ್ಲಿ ಇಬ್ಬರೂ ಮೈಮರೆತರು.

> ಗಂಡ ಸತ್ತ ಮಾಲಿನಿ, ಹೆಂಡತಿಯಿಲ್ಲದ ಕರುಣಾಕರ ಪರಸ್ಪರ ಒಪ್ಪಿ, ಸಮಾಜಕ್ಕೆ ಎದುರಾಗಿ ನಿಂತರೂ ಸುಖಜೀವನವನಕ್ಕೆ ಹೆಜ್ಜೆಯಿಟ್ಟರು. 'ಮಾಲೂ, ನಿನಗಾಗಿ ನಾನು, ನನಗಾಗಿ ನೀನು. ಯಾರ ಮಾತಿಗೂ ಅಂಜುವುದು ಬೇಡ. ನಮ್ಮ ಬದುಕು ಮಾತ್ರ ನಮ್ಮದು.' ತನ್ನ ಭುಜಕ್ಕೊರಗಿದ ಮಾಲಿನಿಯನ್ನು ಮತ್ತೆ ಸಂತೈಸುವವನಂತೆ ನುಡಿದ ಕರುಣಾಕರನ ಕೈ ಹಿಡಿದ ಮಾಲಿನಿ, 'ವಯಸ್ಸಾದ ನಮ್ಮಿಬ್ಬರಿಗೂ ಇಂತದೊಂದು ಆಸರೆಯ ಅವಶ್ಯಕತೆಯಿತ್ತು ಕರುಣಾ. ನೀನು ಜೊತೆಗಿರು ಸಾಕು. ಏನನ್ನಾದರೂ ನಿಭಾಯಿಸಬಲ್ಲೆ.' ಇಬ್ಬರ ಕೈ ಬೆರಳುಗಳೂ ಹೆಣೆದು ಕೊಂಡವು. ಕೂಡಿದ ನೋಟಗಳಲ್ಲಿ ಆನಂದಬಾಷ್ಪ ಉಕ್ಕಿತು. ಕಾಮವಿಲ್ಲದ ಪ್ರೇಮದಲ್ಲಿ ಇಬ್ಬರೂ ಮೈಮರೆತರು.

'ಮೈಸೂರು ಮಿತ್ರ' ವಾರ್ಷಿಕ ಕಥಾ ಸ್ಪರ್ಧೆ-2026

ಪ್ರಥಮ ಬಹುಮಾನ



ಬಿ.ಕೆ.ಮೀನಾಕ್ಷಿ
#1580, ಶ್ರೀ ನರಸಿಂಹ,
8ನೇ ಕ್ರಾಸ್, ಶಾರದಾದೇವಿನಗರ,
ಮೈಸೂರು-570022
ಮೊ: 98442 27225

ತೀರ್ಪುಗಾರರ ಅಭಿಪ್ರಾಯ...

'ಮೈಸೂರು ಮಿತ್ರ' ವಾರ್ಷಿಕೋತ್ಸವ ಕಥಾ ಸ್ಪರ್ಧೆ" ಎಂದ ತಕ್ಷಣ ಸಾಮಾನ್ಯವಾಗಿ ಕಥೆಗಾರರ ಅರ್ಥಾತ್ ಕಥೆಗಾರ್ತಿಯರ ಕಿವಿ ನೆಟ್ಟಗಾಗುತ್ತದೆ. ಅಷ್ಟರಮಟ್ಟಿಗೆ ಕಥಾ ಕ್ಷೇತ್ರದಲ್ಲಿ 'ಮೈಸೂರು ಮಿತ್ರ' ದಿನಪತ್ರಿಕೆ ಅಪಾರ ಕುತೂಹಲ ಕಾಯ್ದಿರಿಸಿಕೊಂಡಿದೆ.

ಈ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗೆಲ್ಲುವುದು ಎಲ್ಲರಿಗೂ ಅತ್ಯಂತ ಪ್ರತಿಷ್ಠೆಯ ವಿಷಯವಾಗಿದ್ದು ಇದುವರೆಗೆ ನೂರಾರು ಮಂದಿ ಇಂಥ ಪ್ರತಿಷ್ಠೆಗೆ ಒಳಗಾಗಿದ್ದಾರೆ. ಇದಕ್ಕಾಗಿ ಪೆನ್ನು ಹಿಡಿದುಕೊಂಡು ಘಟಾನುಘಟಿ ಕಥೆಗಾರರೇ ಹಾತೊರೆಯುತ್ತಾರೆ ಕೂಡ. ಸಣ್ಣ ಪತ್ರಿಕೆಯೊಂದು ನೋಡ ನೋಡುತ್ತಿದ್ದಂತೆಯೇ ಬಹು ದೊಡ್ಡದಾಗಿ ಬೆಳೆದು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಈ ರೀತಿ ಹವಾ ಸೃಷ್ಟಿ ಮಾಡಿರುವುದು ಪತ್ರಿಕೋದ್ಯಮದ ಇತಿಹಾಸದಲ್ಲೇ ಬಹಳ ಅಪರೂಪವೆನ್ನಬಹುದು. ಇದಕ್ಕೆ ಮೂಲ ಕಾರಣ ಪತ್ರಿಕೋದ್ಯಮವನ್ನೇ ಉಸಿರಾಗಿಸಿಕೊಂಡಿದ್ದ ಕೆಬಿಜಿ ಎಂದೇ ಹೆಸರಾಗಿದ್ದ ಕೆ.ಬಿ.ಗಣಪತಿಯವರು.



ಬನ್ನೂರು ಕೆ.ರಾಜು

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಜನಕರಾದ ಪರಿಶುದ್ಧ ಮನಸ್ಸಿನ ಸಹೃದಯಿ ಕೆಬಿಜಿಯವರು ಮೈಸೂರು ಭಾಗದಿಂದ ಕಥೆ ಬರೆಯುವವರನ್ನು ಪ್ರೋತ್ಸಾಹಿಸಿ ಬೆಳೆಸುವ ದೃಷ್ಟಿಯಿಂದ ಈ ಕಥಾ ಸ್ಪರ್ಧೆಯನ್ನು ಹುಟ್ಟು ಹಾಕಿದರು. ಸದುದ್ದೇಶದ ಹುಟ್ಟು ಸಾಮಾನ್ಯವೇ ಆದರೂ ಇದರ ಬೆಳವಣಿಗೆ ಕೆಬಿಜಿ ಅವರ ಹೃದಯ ವೈಶಾಲ್ಯತೆಯಂತೆ ಆಲವಾಗಿ ಬೆಳೆಯಿತು. ಇದರ ತಂಪಿನಲ್ಲಿ ಬರೆದ ಕಥೆಗಾಗಿ ಬಹುಮಾನ ಪಡೆದು ಖುಷಿ ಪಟ್ಟವರಿಗೆ ಈಗ ಲೆಕ್ಕವಿಲ್ಲ. ಇದೆಲ್ಲದರ ಕ್ರೆಡಿಟ್ ಸಂಪೂರ್ಣ ಕೆಬಿಜಿ ಅವರಿಗೇ ಸಲ್ಲಬೇಕು.

ಒಂದು ಕೈನಲ್ಲಿ ಕೊಟ್ಟಿದ್ದು ಮತ್ತೊಂದು ಕೈಗೆ ಗೊತ್ತಾಗದ ರೀತಿ ಬಾಳಿ ಬದುಕಿದ್ದ ಕೆಬಿಜಿಯವರು ಎಲ್ಲದರಲ್ಲೂ ಕರ್ಣನ ತಮ್ಮನಂತಿದ್ದವರು. ಹಾಗಾಗಿ ಇವರಿಂದ ಉಪಕೃತರಾದವರು ಬಹಳ. ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ 'ಮಿತ್ರ'ನಂತೆ ಇದ್ದವರು ಇವರು. ಆದ್ದರಿಂದಲೇ ಇಡೀ ರಾಜ್ಯವೇ ತಿರುಗಿ ನೋಡುವಂತಹ 'ಮೈಸೂರು ಮಿತ್ರ' ದಿನಪತ್ರಿಕೆಯಂತಹ ಪತ್ರಿಕೆಯನ್ನು ಸಾಂಸ್ಕೃತಿಕ ನಗರಿಯಲ್ಲಿ ಎಲ್ಲರೂ ಬಾಯ್ಮೇಲೆ ಬೆರಳಿಟ್ಟು ಕೊಳ್ಳುವಂತೆ ಕಟ್ಟಲು ಸಾಧ್ಯವಾದದ್ದು. ಈಗ ಕೆಬಿಜಿ ಅವರ ಕನಸಿನ ಕೂಸು 'ಮೈಸೂರು ಮಿತ್ರ' ದಿನಪತ್ರಿಕೆಗೆ 47ನೇ ವಾರ್ಷಿಕೋತ್ಸವ ಸಂಭ್ರಮ ಜೊತೆಗೆ ಇದರ ದ್ಯೋತಕವಾಗಿ ಕಥಾಸ್ಪರ್ಧೆ.

ಇದು ಕೆಬಿಜಿ ಅವರಿಲ್ಲದೆ ನಡೆಯುತ್ತಿರುವ ಮೊದಲ ಕಥಾಸ್ಪರ್ಧೆ. ಆದರೇನಂತೆ ಅವರ ಆಶಯ, ಪ್ರೋತ್ಸಾಹ ಜೊತೆಯಲ್ಲಿ ಯಾವತ್ತೂ ಇದ್ದೇ ಇದೆ. ಕೊಡಗಿನ ಜೀವನದಿ ಕಾವೇರಿಯಂತೆ ನಿತ್ಯ ನಿನದವಾಗಿರುತ್ತದೆ. ಕೆಬಿಜಿ ಅವರೆಂದರೆ ಹಾಗೇನೆ ಅಕ್ಷರಶಃ ಕಾವೇರಿ ನದಿಯಂತೆ! ಎಂದಿನಂತೆ ಅತ್ಯುತ್ಸಾಹದಿಂದ ಸ್ಪರ್ಧೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಥೆಗಳನ್ನು ಬರೆದು ಕಳುಹಿಸಿರುವ ಕಥೆಗಾರರು, ಕಥೆಗಾರ್ತಿಯರು ನಿಜಕ್ಕೂ ಅಭಿನಂದನಾರ್ಹರು. ಬಹುಮಾನ ಬರುವುದು ಬಿಡುವುದು ಬೇರೆ ವಿಷಯ, ಆದರೆ ಭಾಗವಹಿಸುವುದು ಮುಖ್ಯವಾಗಬೇಕು. ಆದರೆ ಈ ಸ್ಪರ್ಧಾತ್ಮಕ ಗುಣ ಸ್ಪರ್ಧಿಗಳಲ್ಲಿ ಕಂಡು ಬಂದಿರುವುದಕ್ಕೆ ಮತ್ತೊಮ್ಮೆ ಅಭಿನಂದನೆಗಳು. ಕಥಾ ವಸ್ತುವಿನ ಆಯ್ಕೆ, ಭಾಷಾ ದೃಷ್ಟಿ, ನಿರೂಪಣಾ ಶೈಲಿಯಿಂದ ಇಲ್ಲಿ ಬಂದಿರುವ ಸಾಕಷ್ಟು ಕಥೆಗಳು ಉತ್ತಮವಾಗಿದ್ದು, ಅವುಗಳಲ್ಲಿ ಎಲ್ಲಾ ವಿಷಯಗಳಲ್ಲೂ ಒಂದಕ್ಕಿಂತ ಒಂದು ವಿಭಿನ್ನವೆನಿಸುವ ಜನೋಪಯೋಗಿಯಾದ ಅತ್ಯುತ್ತಮ ಕಥೆಗಳನ್ನು ಆಯ್ಕೆ ಮಾಡಲಾಗಿದೆ. ಪ್ರಥಮ ಬಹುಮಾನಕ್ಕೆ 'ನನಗೆ ನೀನು ನಿನಗೆ ನಾನು' ಕಥೆಯನ್ನು, ದ್ವಿತೀಯ ಬಹುಮಾನಕ್ಕೆ 'ಕತ್ತಲೆಯ ಕಣು' ಕಥೆಯನ್ನು ತೃತೀಯ ಬಹುಮಾನಕ್ಕೆ 'ಕಮ್ಲಿ' ಕಥೆಯನ್ನು, ಹಾಗೂ ಪ್ರೋತ್ಸಾಹಕರ ಬಹುಮಾನಕ್ಕೆ "ಆಮೆ" ಹಾಗೂ "ಮರಳಿ ಗೂಡಿಗೆ" ಕಥೆಗಳು ಸೇರಿದಂತೆ ಒಟ್ಟು ಐದು ಕಥೆಗಳನ್ನು ಆಯ್ಕೆ ಮಾಡಲಾಗಿದೆ. ವಿಜೇತರೆಲ್ಲರಿಗೂ ಅಭಿನಂದನೆಗಳು.

-ಬನ್ನೂರು ಕೆ.ರಾಜು,
ಅಂಕಣಕಾರರು, ಹಿರಿಯ ಸಾಹಿತಿ


ದ್ವಿತೀಯ ಬಹುಮಾನ

ಕತ್ತಲೆಯ ಕಣ್ಣು
ಎನ್. ರಾಜಶೇಖರ ಆರಾಧ್ಯ
(ಎನ್.ಆರ್. ಆರಾಧ್ಯ ನೆಬೆ)
ಕೇರಾಫ್ ಅರ್ಚನಾ ಟ್ರೇಡರ್ಸ್
ಬಿಳಿಕೆರೆ, ಹುಣಸೂರು ತಾಲೂಕು
ಮೈಸೂರು-03
ಮೊ : 73489 10224
97406 33092



ತೃತೀಯ ಬಹುಮಾನ

ಕಮ್ಲೀ
ಜಿ.ಸಿ. ಮಧುಸೂದನ
ನಂ. 179, 6ನೇ ಕ್ರಾಸ್, ನವಿಲು ರಸ್ತೆ,
ಎ ಮತ್ತು ಬಿ ಬ್ಲಾಕ್, ಕುವೆಂಪುನಗರ,
ಮೈಸೂರು-23
ಮೊ : 9900718762



ಸಮಾಧಾನಕರ ಬಹುಮಾನ

ಆಮೆ
ಡಾ. ಎಸ್.ವಿ. ಗೌರಿ
ಮನೆ ನಂ. 51, ಭಾರತಿ ಎನ್‌ಕ್ಲೇವ್,
ವಿಸ್ಪರಿಂಗ್ ವಿಂಡ್ಸ್ ಅಪಾರ್ಟ್‌ಮೆಂಟ್
ಎದುರು, ಗದ್ದಿಗೆ ಮೇನ್ ರೋಡ್,
ಬೋಗಾದಿ ಮೈಸೂರು-26.
ಮೊ. 9480085110, 7975599007



ಸಮಾಧಾನಕರ ಬಹುಮಾನ

ಮರಳಿ ಗೂಡಿಗೆ
ಸುಹಾಸಿನಿ ಗಣಪತಿ ಹೆಗಡೆ ಮೂರೂರು
ನೃಪತುಂಗ ರಸ್ತೆ, ಡಿಪೋ ಸರ್ಕಲ್ ಹತ್ತಿರ,
ಕುವೆಂಪುನಗರ, ಮೈಸೂರು-23.
ಮೊ. 7338350525



ಏನ್ ಶಾಸಕರೇ... ಹೇಗಿದ್ದೀರಾ..!

ಕೊಳ್ಳೇಗಾಲಕ್ಕೆ 500 ಕೋಟಿ ಅನುದಾನ

–ಎ.ಆರ್.ಕೃಷ್ಣಮೂರ್ತಿ,
ಶಾಸಕರು, ಕೊಳ್ಳೇಗಾಲ ಕ್ಷೇತ್ರ

●ಯಳಂದೂರಲ್ಲಿ 100 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ 35 ಕೋಟಿ ●ಕೊಳ್ಳೇಗಾಲ ಆಸ್ಪತ್ರೆ, 250 ಹಾಸಿಗೆಯ ಜಿಲ್ಲಾಸ್ಪತ್ರೆಯಾಗಿ ಮೇಲ್ದರ್ಜೆಗೆ ●ಸುವರ್ಣಾವತಿ ಜಲಾಶಯ ಅಚ್ಚುಕಟ್ಟು ಪ್ರದೇಶಕ್ಕೆ 70 ಕೋಟಿ ●ಗುಂಡಾಲ್ ಜಲಾಶಯಕ್ಕೆ 50 ಕೋಟಿ ●ರೇಷ್ಮೆ ಇಲಾಖೆ ಪುನಶ್ಚೇತನಕ್ಕೆ 15 ಕೋಟಿ ●ಮುಡಿಗುಂಡ ಬಳಿ ನೂತನ ಸೇತುವೆ ನಿರ್ಮಾಣಕ್ಕೆ 15 ಕೋಟಿ



ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ಸರ್ಕಾರದ ಕಾರ್ಯವೈಖರಿ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ 'ಮೈಸೂರು ಮಿತ್ರ'ನೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ.



ಜನಸಾಮಾನ್ಯರ ದೃಷ್ಟಿಯಲ್ಲಿಟ್ಟುಕೊಂಡು ಸಿದ್ದರಾಮಯ್ಯ ಅವರು ಆಡಳಿತ ನಡೆಸುತ್ತಿದ್ದಾರೆ. 2013ರಿಂದ 2018ರವರೆಗೆ ಜನರಿಗೆ ಭಾಗ್ಯಗಳ ಭಾಗ್ಯವನ್ನು ಕೊಟ್ಟಂತಹವರು. ಅದನ್ನು ಮೆಚ್ಚಿ ರಾಜ್ಯದ ಜನರು 2023 ರಲ್ಲೂ ಅಧಿಕಾರಕ್ಕೆ ತಂದರು. ಮತ್ತೆ ಅಧಿಕಾರಕ್ಕೆ ಬರುತ್ತಿದ್ದಂತೆ ಐದು ಪ್ರಮುಖ ಗ್ಯಾರಂಟಿ ಯೋಜನೆಗಳನ್ನು ನೀಡಿ, ರಾಜ್ಯದ ಅಭಿವೃದ್ಧಿಗೂ ಆದ್ಯತೆ ನೀಡಿದ್ದಾರೆ. ಹಾಗಾಗಿ ಶಿಕ್ಷಣ, ಆರೋಗ್ಯ ಮೊದಲಾದ ಕ್ಷೇತ್ರಕ್ಕೆ ಆದ್ಯತೆ ನೀಡಿದ್ದಾರೆ.

ಮೈಸೂರು ಮಿತ್ರ : ರಾಜ್ಯ ಸರ್ಕಾರದ ಮೂರು ವರ್ಷದ ಆಡಳಿತ ನಿಮಗೆ ತೃಪ್ತಿ ತಂದಿದೆಯೇ?

ಎ.ಆರ್.ಕೃಷ್ಣಮೂರ್ತಿ : ಹೌದು, ಕ್ಷೇತ್ರದ ಜನರು ಬಹಳ ವರ್ಷಗಳ ನಂತರ ಪುನರ್ ಆಯ್ಕೆ ಮಾಡಿ, ಸೇವೆ ಮತ್ತು ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ನಮ್ಮ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಇಲ್ಲಿಯವರೆಗೆ 1.25 ಕೋಟಿ ವೆಚ್ಚ ಮಾಡಿದೆ.ಇದರ ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಅನುದಾನವನ್ನು ಕಲ್ಪಿಸುತ್ತಿದೆ. ನನ್ನ ಕ್ಷೇತ್ರಾದ್ಯಂತ ಅಭಿವೃದ್ಧಿ ಕೆಲಸಗಳು ಸಾಕಷ್ಟು ನಡೆಯುತ್ತಿರುವುದು ತೃಪ್ತಿ ತಂದಿದೆ. ಎಲ್ಲರಿಗೂ ಆಶ್ಚರ್ಯ ಏನೆಂದರೆ ಈ ಕ್ಷೇತ್ರದಲ್ಲಿ ಇಷ್ಟೊಂದು ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ. ಈ ಅನುದಾನ ಎಲ್ಲಿಂದ ಬಂತು?

ಮಿತ್ರ : ನಿಮ್ಮ ಕ್ಷೇತ್ರಕ್ಕೆ ಮೂರು ವರ್ಷದ ಅವಧಿಯಲ್ಲಿ ಎಷ್ಟು ಅನುದಾನ ಬಂದಿದೆ?

ಎ.ಆರ್.ಕೃಷ್ಣಮೂರ್ತಿ: ನನ್ನ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಚಾಲನೆ ನೀಡಿರುವ ಕಾಮಗಾರಿಗಳು ಹಾಗೂ ಚಾಲನೆ ನೀಡಬೇಕಾಗಿರುವ ಕಾಮಗಾರಿಗಳು ಸೇರಿ ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಸುಮಾರು 500 ಕೋಟಿಯಷ್ಟು ಅನುದಾನ ಬಂದಿದೆ.

ಮಿತ್ರ : ನಿಮ್ಮ ಕ್ಷೇತ್ರದಲ್ಲಿ ಕೈಗೊಂಡಿರುವ ಮಹತ್ವದ ಕಾಮಗಾರಿಗಳು ಯಾವುವು?


ಎ.ಆರ್.ಕೃಷ್ಣಮೂರ್ತಿ: ಯಳಂದೂರು ಪಟ್ಟಣದಲ್ಲಿ ಆರೋಗ್ಯ ಇಲಾಖೆಯ 100 ಹಾಸಿಗೆ ಸಾಮರ್ಥ್ಯವುಳ್ಳ ಆಸ್ಪತ್ರೆ, ಕೊಳ್ಳೇಗಾಲ ದಲ್ಲಿ 250 ಹಾಸಿಗೆ ಸಾಮರ್ಥ್ಯದ ಹೆಚ್ಚುವರಿ ಜಿಲ್ಲಾಸ್ಪತ್ರೆ, ಮುಡಿಗುಂಡ ಸೇತುವೆ, ಹೊಂಗನೂರು ಹಿರಿಕೆರೆಯ ಕೆರೆ ಅಭಿವೃದ್ಧಿ, ಅಲ್ಪಸಂಖ್ಯಾತರಿಗಾಗಿ ಮೊರಾರ್ಜಿ ವಸತಿ ಶಾಲೆಗಳು, ಕೆಪಿಎಸ್ ಶಾಲೆಗಳು, ಪಶು ಆಸ್ಪತ್ರೆಗಳು, ರಸ್ತೆಗಳ ಅಭಿವೃದ್ಧಿ, ಯಳಂದೂರು ಸಮೀಪದ ಮೆಳ್ಳಹಳ್ಳಿ ಗೇಟ್ ಬಳಿ ಅಗ್ನಿ ಶಾಮಕ ಠಾಣೆ ಇನ್ನೂ ಅನೇಕ ಕಾಮಗಾರಿಗಳನ್ನು ಕೊಟ್ಟಿದ್ದಾರೆ.

ಮಿತ್ರ : ಮುಂದಿನ ಎರಡು ವರ್ಷ ಕ್ಷೇತ್ರಕ್ಕೆ ನಿಮ್ಮ ಆದ್ಯತೆಗಳೇನು.?

ಎ.ಆರ್.ಕೃಷ್ಣಮೂರ್ತಿ: ಬಡ ಸಮುದಾಯಕ್ಕೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಸ್ವಾವಲಂಬನೆ ಜೀವನವನ್ನು ಕಲ್ಪಿಸುವುದು. ಮಕ್ಕಳ ಹಿತಕ್ಕಾಗಿ ವಿಶೇಷ ಕಾರ್ಯಕ್ರಮ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಪಡಿಸುವ ಗುರಿ ಹೊಂದಿದ್ದೇನೆ.

ಮಿತ್ರ: ಗ್ಯಾರಂಟಿ ಯೋಜನೆಗಳು ಮುಂದಿನ ದಿನಗಳಲ್ಲಿ ನಿಮ್ಮ ಕೈ ಹಿಡಿಯುತ್ತದೆ ಎಂಬ ವಿಶ್ವಾಸವಿದೆಯೇ?

ಎ.ಆರ್.ಕೃಷ್ಣಮೂರ್ತಿ: ಹೌದು, ಖಂಡಿತ. ಏಕೆಂದರೆ ಎಲ್ಲಾ ಧರ್ಮದ, ಪ್ರತಿ ವರ್ಗದ ಸಮುದಾಯದ ಜನರಿಗೆ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಸದ್ಬಳಕೆಯಾಗುತ್ತಿವೆ. ಟೀಕೆ ಮಾಡುತ್ತಿರುವ ವಿರೋಧ ಪಕ್ಷದ ಕುಟುಂಬದವರು ಕೂಡ ಸಿದ್ದರಾಮಯ್ಯ ಸರ್ಕಾರದ ಗ್ಯಾರಂಟಿ ಯೋಜನೆಯ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕುಟುಂಬದ ಮಹಿಳೆಯರು ಸಿದ್ದರಾಮಯ್ಯ ಸರ್ಕಾರವನ್ನು ಹೊಗಳುತ್ತಿದ್ದಾರೆ.


ಮೈಸೂರು ಮಿತ್ರ
47
ಬೆಳಗಿನ ದಿನಪತ್ರಿಕೆ
ಮೈಸೂರು ಮಿತ್ರನಿಗೆ
47ನೇ ವಾರ್ಷಿಕೋತ್ಸವದ
ಶುಭಾಶಯಗಳು
ಶುಭಕೋರುವವರು
ಸಿ.ಪುಟ್ಟರಂಗಶೆಟ್ಟಿ
ಮಾಜಿ ಸಚಿವರು, ಹಾಲಿ ಶಾಸಕರು
ಹಾಗೂ ಅಧ್ಯಕ್ಷರು,
ಎಂಎಸ್‌ಐಎಲ್ ಚಾಮರಾಜನಗರ


ಅತೀ ಹೆಚ್ಚು ಓದುಗರನ್ನು ಹೊಂದಿರುವ ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಮೈಸೂರು ಮಿತ್ರ
47 ನೇ
ವಾರ್ಷಿಕೋತ್ಸವದ ಶುಭಾಶಯಗಳು
ಡಾ. ಹೆಚ್.ಸಿ.ಮಹದೇವಪ್ಪ
ಸಮಾಜ ಕಲ್ಯಾಣ ಹಾಗೂ
ಜಿಲ್ಲಾ ಉಸ್ತುವಾರಿ ಸಚಿವರು
ಸುನೀಲ್ ಬೋಸ್
ಸಂಸದರು ಚಾಮರಾಜನಗರ
ಲೋಕಸಭಾ ಕ್ಷೇತ್ರ


47
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಅನಿಲ್ ಚಿಕ್ಕಮಾದು
ಶಾಸಕರು, ಎಚ್ ಡಿ ಕೋಟೆ ವಿಧಾನಸಭಾ ಕ್ಷೇತ್ರ,
ಅಧ್ಯಕ್ಷರು, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮ
ಕರ್ನಾಟಕ ಸರ್ಕಾರ


ಮೈಸೂರು ಮಿತ್ರ
ಸ್ಥಾಪನೆ: 1980
47
ಅತ್ಯುತ್ತಮ ಪತ್ರಿಕೋದ್ಯಮ
47ನೇ ವರ್ಷಕ್ಕೆ
ಪದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು

47
ಮೈಸೂರು ಮಿತ್ರ
ವಾರ್ಷಿಕ ವಿಶೇಷಾಂಕ 2026
16-04-2026
ಗುರುವಾರ

ಮೈಸೂರಲ್ಲಿದೆ ದಶ ಶ್ವಾನಗಳ ಪಡೆ



● ಗಣೇಶ್.ಎ

ಅಪರಾಧ ಪ್ರಕರಣ, ಸ್ಫೋಟಕ, ಮಾದಕ ವಸ್ತು ಪತ್ತೆಯಲ್ಲಿ ಪೊಲೀಸರಿಗೆ ಬಲ







ಶ್ವಾನದಳ ಪೊಲೀಸ್ ಇಲಾಖೆಯ ಅವಿಭಾಜ್ಯ ಅಂಗ. ಅಪರಾಧ ಪ್ರಕರಣ ಪತ್ತೆ, ಸ್ಫೋಟಕಗಳ ಪತ್ತೆ ಸೇರಿದಂತೆ ಹಲವು ಕಾರ್ಯಾಚರಣೆಗಳಲ್ಲಿ ಶ್ವಾನದಳವು ಪೊಲೀಸರಿಗೆ ನೆರವಾಗುತ್ತದೆ. ಪೊಲೀಸರಿಗೆ ಸವಾಲಾಗಿ ಪರಿಣಮಿಸುವ ಪ್ರಕರಣಗಳನ್ನು ಭೇದಿಸುವಲ್ಲಿ ಶ್ವಾನದಳ ಮಹತ್ವದ ಪಾತ್ರ ವಹಿಸುತ್ತದೆ. ಸಮಾಜದ ರಕ್ಷಣೆ, ಸುರಕ್ಷತೆಗಾಗಿ ಹಗಲಿರುಳು ಸಿದ್ಧವಾಗಿರುವ ಶ್ವಾನದಳ, ವೃತ್ತಿ ಆಧಾರಿತ ಸಾಹಸಮಯ ಕ್ರೀಡೆಗಳಲ್ಲೂ ಸೈ ಎನಿಸಿಕೊಂಡಿದೆ.

ಮೈಸೂರು ನಗರ ಪೊಲೀಸ್ ಕಮಿಷ್ನರೇಟ್ ವ್ಯಾಪ್ತಿಯಲ್ಲೂ ಶ್ವಾನದಳ ಮಹತ್ವದ ಪಾತ್ರ ವಹಿಸಿದೆ. ಒಟ್ಟು ಹತ್ತು ಶ್ವಾನಗಳು ವಿವಿಧ ವಿಭಾಗಗಳಲ್ಲಿ ಚಾಕಚಕ್ಯತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಅಪರಾಧ ಪತ್ತೆ, ಸ್ಫೋಟಕ, ಮಾದಕ ವಸ್ತು ಪತ್ತೆ, ಕೊಲೆ, ಕಳ್ಳತನ, ದರೋಡೆ ಪ್ರಕರಣಗಳಲ್ಲಿ ಸಾಕ್ಷ್ಯ ಪತ್ತೆಯಂತಹ ಹತ್ತು-ಹಲವು ಕಾರ್ಯಾಚರಣೆಗಳಲ್ಲಿ ನೆರವಾಗುತ್ತಿವೆ. ಜೊತೆಗೆ ಪೊಲೀಸ್ ಕ್ರೀಡಾಕೂಟಗಳಲ್ಲೂ ಭಾಗವಹಿಸಿ, ಪದಕ ಗೆಲ್ಲುವ ಮೂಲಕ ವೃತ್ತಿ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಿವೆ.

ಲ್ಯಾಬ್ರಡಾರ್ ತಳಿಯ ಐದು ವರ್ಷದ ಗಂಡು ಶ್ವಾನ **'ಅರ್ಜುನ'** ಮಾದಕ ವಸ್ತು ಪತ್ತೆ ಹಚ್ಚುವಲ್ಲಿ ವಿಶೇಷ ಪರಿಣಿತಿ ಪಡೆದಿದೆ. ನಗರದಲ್ಲಿ ಮಾದಕ ವಸ್ತು ಸಂಗ್ರಹ ಮತ್ತು ಮಾರಾಟ ಜಾಲವನ್ನು ಹತ್ತಿಕ್ಕುವಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ.

ಯಾವುದೇ ಮೂಲೆಯಲ್ಲಿ, ಯಾವುದೇ ಮಾದರಿಯ ಮಾದಕ ವಸ್ತು ಬಚ್ಚಿಟ್ಟಿದ್ದರೂ ಅರ್ಜುನ ಪತ್ತೆ ಹಚ್ಚುತ್ತಾನೆ. ಸದ್ಯ ಎಆರ್‌ಎಸ್ಐ ಮಣಿಕಂಠ ಹಾಗೂ ಎಹೆಚ್‌ಸಿ ಪುರುಷೋತ್ತಮ್ ಈ ಶ್ವಾನದ ನಿರ್ವಾಹಕರಾಗಿದ್ದಾರೆ. 2023ರ ಪೊಲೀಸ್ ಕ್ರಿಡಾಕೂಟದಲ್ಲಿ ಜಿಲ್ಲಾ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಹಾಗೂ 2025ರ ಪೊಲೀಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಪಡೆದಿದೆ.

ಬೆಲ್ಜಿಯನ್ ಮಲಿನೊಯಿಸ್ ತಳಿಯ 5 ವರ್ಷ 1 ತಿಂಗಳು ವಯಸ್ಸಿನ ಗಂಡು ಶ್ವಾನ **'ಯೋಧ'**, ಸ್ಫೋಟಕ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮಂಜು ಮತ್ತು ಸುನೀಲ್ ಈ ಶ್ವಾನದ ನಿರ್ವಾಹಕರಾಗಿದ್ದಾರೆ. ಇದು 2024ರಲ್ಲಿ ಚಿನ್ನದ ಪದಕ ಪಡೆದಿದೆ. 4 ವರ್ಷ 7 ತಿಂಗಳು ವಯಸ್ಸಿನ ಲ್ಯಾಬಡಾರ್ ಶ್ವಾನ **'ಕೃಷ್ಣ'** ಸ್ಫೋಟಕ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸ್ಫೋಟಕ ಪತ್ತೆಯಲ್ಲಿ ನೈಪುಣ್ಯತೆ ಹೊಂದಿರುವ ಈ ಶ್ವಾನ, ದಿನವಹಿ ತಪಾಸಣೆಯಲ್ಲೂ ಸಕ್ರಿಯವಾಗಿದೆ. ನಾಗೇಂದ್ರಚಾರಿ ಮತ್ತು ಶ್ರೀನಿವಾಸ್ ಈ ಶ್ವಾನದ ನಿರ್ವಾಹಕರಾಗಿದ್ದು, 2023 ಹಾಗೂ 2025ರಲ್ಲಿ ಕೃಷ್ಣ ಚಿನ್ನದ ಪದಕ ಪಡೆದುಕೊಂಡಿದೆ.

ಅತ್ಯಂತ ಬುದ್ಧಿವಂತ, ಚುರುಕಾದ, ನಿಷ್ಠಾವಂತ ಹಾಗೂ ಬಲಿಷ್ಠ ಮೈಕಟ್ಟಿನಿಂದ ಆಕರ್ಷಿಸುವ ಡಾಬರ್‌ಮನ್ ತಳಿಯ 2 ವರ್ಷ 10 ತಿಂಗಳ ಗಂಡು ಶ್ವಾನ **'ಕುಶಾ'** ಅಪರಾಧ ಪತ್ತೆ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಳ್ಳತನ, ಸುಲಿಗೆ, ಕೊಲೆ ಇನ್ನಿತರ ಅಪರಾಧ ಪ್ರಕರಣಗಳನ್ನು ಭೇದಿಸುವಲ್ಲಿ ಕುಶಾ ಮಹತ್ವದ ಪಾತ್ರ ವಹಿಸುತ್ತಿದೆ.

ಮಧುಚಂದ್ರ, ಕುಶಾ ಶ್ವಾನದ ನಿರ್ವಾಹಕರಾಗಿದ್ದು, ಇದು 2025ರಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದೆ. ಜರ್ಮನ್ ಶಫರ್ಡ್ ತಳಿಯ 11 ವರ್ಷದ ಹಿರಿಯ ಹೆಣ್ಣು ಶ್ವಾನ **'ರಶ್ಮಿ'** ಕೂಡ ಅಪರಾಧ ವಿಭಾಗದಲ್ಲಿ ಕುಶಾ ಜೊತೆಗೂಡಿ ಕಾರ್ಯನಿರ್ವಹಿಸುತ್ತಿದೆ. ವಸಂತಕುಮಾರ್ ಮತ್ತು ಭಾಸ್ಕರ್ ಇದರ ನಿರ್ವಹಣೆ ನೋಡಿಕೊಳ್ಳುತ್ತಿದ್ದು, 2022ರಲ್ಲಿ ರಶ್ಮಿ ಬೆಳ್ಳಿ ಪದಕ ಗೆದ್ದಿದೆ.

ಲ್ಯಾಬ್ರಡಾರ್ ತಳಿಯ 3 ವರ್ಷ 10 ತಿಂಗಳ ಗಂಡು ಶ್ವಾನ **'ಗರುಡ'** ಮಾದಕ ವಸ್ತು ಪತ್ತೆ ಕಾರ್ಯದಲ್ಲಿ ನಿಪುಣನಾಗಿದ್ದಾನೆ. ಪವನ್ ಮತ್ತು ಪ್ರಸಾದ್ ಇದರ ನಿರ್ವಾಹಕರಾಗಿದ್ದಾರೆ. ಜರ್ಮನ್ ಶಫರ್ಡ್ ತಳಿಯ 3 ವರ್ಷ 9 ತಿಂಗಳ ಹೆಣ್ಣು ಶ್ವಾನ **'ಗಂಗಾ'** ಅಪರಾಧ ವಿಭಾಗದಲ್ಲಿದ್ದು, ಆಶಿಭಾ ಮತ್ತು ನಿಂಗಣ್ಣ ಜರಟಗಿ ಈ ಶ್ವಾನದ ನಿರ್ವಹಣೆ ನಿಭಾಯಿಸುತ್ತಿದ್ದಾರೆ. ಡಾಬರ್‌ಮನ್ ತಳಿಯ 2 ವರ್ಷ 10 ತಿಂಗಳ **'ಲಾವಾ'** ಗಂಡು ಶ್ವಾನ ಅಪರಾಧ ವಿಭಾಗದಲ್ಲಿ ಬಸಂತ್ ಕುಮಾರ್ ಮತ್ತು ಮಧುಚಂದನ್ ನಿರ್ವಹಣೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ.

ಲ್ಯಾಬ್ರಡಾರ್ ತಳಿಯ 9 ವರ್ಷ 7 ತಿಂಗಳ ಗಂಡು ಶ್ವಾನ **'ದತ್ತ'** ಸ್ಫೋಟಕ ಪತ್ತೆಯಲ್ಲಿ ನೈಪುಣ್ಯತೆ ಹೊಂದಿದ್ದು, ಇದರ ನಿರ್ವಾಹಕರು ಮಹೇಶ್.

> **"ಶ್ವಾನದಳವು ಪೊಲೀಸ್ ಕುಟುಂಬದ ಒಂದು ಭಾಗ. ಮೈಸೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿರುವ ಎಲ್ಲಾ ಶ್ವಾನಗಳು ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿವೆ. ಜೊತೆಗೆ ಕ್ರೀಡಾಕೂಟಗಳಲ್ಲೂ ವಿವಿಧ ಪದಕಗಳನ್ನು ತಮ್ಮದಾಗಿಸಿಕೊಂಡಿದೆ.**
> **-ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತೆ**

11 ವರ್ಷ ಪೂರೈಸಿರುವ ಮತ್ತೊಂದು ಹಿರಿಯ ಶ್ವಾನ ಲ್ಯಾಬ್ರಡಾರ್ **'ರಶ್ಮಿ'** ಸ್ಫೋಟಕ ಪತ್ತೆ ಕಾರ್ಯದಲ್ಲಿ ಸಕ್ರಿಯವಾಗಿದ್ದು, ಸಿದ್ದರಾಜು ನಿರ್ವಹಣೆ ನೋಡಿಕೊಳ್ಳುತ್ತಿದ್ದಾರೆ. ಪ್ರತಿನಿತ್ಯವೂ ಶ್ವಾನಗಳು ಅರಮನೆ, ಏರ್ ಪೋರ್ಟ್, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳದಲ್ಲಿ ತಪಾಸಣೆ ನಿರ್ವಹಿಸುತ್ತವೆ. ಇನ್ನು ಗಣ್ಯ ವಕ್ತಿಗಳ ಭೇಟಿ, ವಿಶೇಷ ಕಾರ್ಯಕ್ರಮ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಕ್ರಮ ವಹಿಸುವ ನಿಟ್ಟಿನಲ್ಲಿ ಶ್ವಾನದಳದ ಮೂಲಕ ತಪಾಸಣೆ ನಡೆಸಲಾಗುತ್ತದೆ.

ಪೌಷ್ಟಿಕ ಆಹಾರ: ಇಲಾಖೆಯಿಂದ ಶ್ವಾನಗಳಿಗೆ ಪ್ರತಿದಿನ ಎರಡು ಹೊತ್ತು ಪೌಷ್ಟಿಕ ಆಹಾರ ನೀಡಲಾಗುತ್ತದೆ. ಬೆಳಗ್ಗೆ 4 ಲೀಟರ್ ಹಾಲು, 1 ಮೊಟ್ಟೆ 10 ಎಂಎಲ್ ಮಿಟಮಿನ್ ಸಿರಪ್, 10 ಎಂಎಲ್ ಕ್ಯಾಲ್ಸಿಯಂ ಸಿರಪ್ ನೀಡಲಾಗುವುದು. ಜೊತೆಗೆ ರವೆ, ಬಾರ್ಲಿ, ಸಿಮೇ ಅಕ್ಕಿ, ಶಾವಿಗೆಯನ್ನು ಒಂದೊಂದು ದಿನ ಒಂದರಂತೆ 200 ಗ್ರಾಂ ಕೊಡಲಾಗುವುದು. ಸಂಜೆ 200 ಗ್ರಾಂ ಅನ್ನ, 200 ಗ್ರಾಂ ರಾಗಿ ಹಿಟ್ಟು 500 ಗ್ರಾಂ ಮಾಂಸ ಕೊಡಲಾಗುತ್ತದೆ. ಅದರಲ್ಲೂ ರಾಗಿ ಮತ್ತು ಅನ್ನವನ್ನು ಬೇಯಿಸಿ ಗಂಜಿ ಮಾಡಿ ಹಾಗೂ ಮಾಂಸವನ್ನು ಸೂಪ್ ಮಾದರಿಯಲ್ಲಿ ನೀಡಲಾಗುತ್ತದೆ.

ಆಯ್ಕೆ ಹೇಗೆ?: ಪೊಲೀಸ್ ಇಲಾಖೆ ಶ್ವಾನಗಳನ್ನು ಆಯ್ಕೆ ಮಾಡುವಾಗ ಸಾಕಷ್ಟು ಮುಂಜಾಗ್ರತೆ ವಹಿಸುತ್ತದೆ. ಆರೋಗ್ಯ ಹಾಗೂ ದೈಹಿಕ ಸಾಮರ್ಥ್ಯದ ವಿಚಾರದಲ್ಲಿ ಯಾವುದೇ ರಾಜೀ ಇರುವುದಿಲ್ಲ. ಯಾವುದೇ ಸಂಘ-ಸಂಸ್ಥೆ, ವ್ಯಕ್ತಿಯಿಂದ ನೇರವಾಗಿ ಶ್ವಾನವನ್ನು ಖರೀದಿಸುವುದಿಲ್ಲ. ಅಧಿಕೃತವಾಗಿರುವ ಕೆನ್ನೆಲ್ ಕ್ಲಬ್ ಆಫ್ ಇಂಡಿಯಾ(ಕೆಸಿಐ) ಸಂಸ್ಥೆ ಅಡಿಯಲ್ಲಿ ನೋಂದಾಯಿತಗೊಂಡಿರುವ ಸಂಸ್ಥೆ ಅಥವಾ ವ್ಯಕ್ತಿಗಳಿಂದ 45 ದಿನ ಅಥವಾ 3 ತಿಂಗಳ ಮರಿ ಇರುವಾಗ ಮಾತ್ರ ಶ್ವಾನವನ್ನು ಖರೀದಿಸಲಾಗುತ್ತದೆ. ನಂತರ ಸರ್ಕಾರಿ ಪಶು ಚಿಕಿತ್ಸಾಲಯಕ್ಕೆ ತೆಗೆದುಕೊಂಡು ಹೋಗಿ ಎಲ್ಲಾ ರೀತಿಯ ಆರೋಗ್ಯ ತಪಾಸಣೆ ಮಾಡಿಸಿ, ಪಪ್ಪಿ ಡಿಪ್ ಲಸಿಕೆ, ವ್ಯಾಕ್ಸಿನೇಷನ್, ರೇಬಿಸ್ ಲಸಿಕೆ ಹಾಕಿಸಿ, ಎಲ್ಲಾ ರೀತಿಯ ಪರೀಕ್ಷೆಗಳ ಮೂಲಕ ಆರೋಗ್ಯವಾಗಿದೆ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ.

ನಿರ್ವಾಹಕರು-ಶ್ವಾನದ ಬಾಂಧವ್ಯ: ಶ್ವಾನದಳದ ಸಮರ್ಪಕ ಕಾರ್ಯ ನಿರ್ವಹಣೆಯು ಶ್ವಾನಗಳು ಹಾಗೂ ಅವುಗಳ ನಿರ್ವಾಹಕರ ನಡುವಿನ ಬಾಂಧವ್ಯದ ಮೇಲೆ ಅವಲಂಬಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ 3 ತಿಂಗಳ ಮರಿಯನ್ನು ಇಬ್ಬರು ನಿರ್ವಾಹಕರಿಗೆ ವಹಿಸಲಾಗುತ್ತದೆ. ಅವರು ತಮ್ಮ ಮಕ್ಕಳಂತೆ ಆತ್ಮೀಯತೆ ಹಾಗೂ ಪ್ರೀತಿಯಿಂದ ಲಾಲನೆ-ಪಾಲನೆ ಮಾಡುತ್ತಾರೆ. ಶ್ವಾನಕ್ಕೆ ಇಷ್ಟವಾಗುವ ಆಟಿಕೆ, ತಿಂಡಿ-ತಿನಿಸುಗಳನ್ನು ನೀಡಿ ಬಾಂಧವ್ಯ ಗಟ್ಟಿ ಮಾಡಿಕೊಳ್ಳುತ್ತಾರೆ. ಆಟದ ಜೊತೆ ಜೊತೆಗೆ ವೃತ್ತಿಯಾಧಾರಿತ ತರಬೇತಿಯನ್ನೂ ಆರಂಭಿಸುತ್ತಾರೆ. ನಿರ್ವಾಹಕರ ಮೇಲಿನ ಪ್ರೀತಿ, ವಿಶ್ವಾಸದ ಪರಿಣಾಮ ಶ್ವಾನಗಳು ಅವರ ಸೂಚನೆಗಳನ್ನು ಚಾಚೂತಪ್ಪದೆ ಪಾಲಿಸುತ್ತವೆ.

ವಾಸನೆ ಗ್ರಹಿಸುವ ಶಕ್ತಿ ವೃದ್ಧಿ: ಪ್ರಾಥಮಿಕ ತರಬೇತಿ ನೀಡಿದ ನಂತರ ನಿರ್ವಾಹಕರನ್ನು ಶ್ವಾನವೂ ಹೇಗೆ ನೆನಪಿಟ್ಟುಕೊಂಡಿದೆ ಎಂಬ ಪರೀಕ್ಷೆ ನಡೆಸಲಾಗುತ್ತದೆ. ಮೊದಲು ನಿರ್ವಾಹಕರು ಧರಿಸಿರುವ ಸಾಕ್ಸ್ ಅನ್ನು ಅವುಗಳ ಮೂಗಿಗೆ ಹಿಡಿದು ಆ ವಾಸನೆಯನ್ನು ಗ್ರಹಿಸುವಂತೆ ಮಾಡುತ್ತಾರೆ. ನಂತರ ಆ ಸಾಕ್ಸ್ ಅನ್ನು ಒಂದು ಕಡೆ ಬಚ್ಚಿಟ್ಟು, ಅದನ್ನು ಪತ್ತೆ ಮಾಡುವಂತೆ ಸೂಚನೆ ನೀಡುತ್ತಾರೆ. ನಂತರದಲ್ಲಿ ಮೂರ್‍ನಾಲ್ಕು ಸಾಕ್ಸ್‌ಗಳನ್ನು ನಿರ್ವಾಹಕರ ಸಾಕ್ಸ್‌ನೊಂದಿಗೆ ಸೇರಿಸಿ ಶ್ವಾನದ ಮುಂದಿಟ್ಟು, ತಮ್ಮ ಸಾಕ್ಸ್ ಅನ್ನು ಪತ್ತೆ ಮಾಡುವಂತೆ ಸೂಚಿಸಲಾಗುತ್ತದೆ. ಇಂತಹ ಹಲವು ಕ್ರಮಗಳ ಮೂಲಕ ಶ್ವಾನಗಳಲ್ಲಿ ವಾಸನೆ ಗ್ರಹಿಸುವ ಶಕ್ತಿ ವೃದ್ಧಿಯಾಗುವಂತೆ ನೋಡಿಕೊಳ್ಳಲಾಗುತ್ತದೆ.

ಇಲಾಖೆ ತರಬೇತಿ: ಈ ರೀತಿ ಪ್ರಾಥಮಿಕ ತರಬೇತಿ ನಂತರ ಶ್ವಾನವನ್ನು ಬೆಂಗಳೂರಿನ ಆಡುಗೋಡಿಯ ಕರ್ನಾಟಕ ರಾಜ್ಯ ಶ್ವಾನಗಳ ತರಬೇತಿ ಕೇಂದ್ರಕ್ಕೆ ಕಳುಹಿಸಲಾಗುತ್ತದೆ. ಪ್ರತಿ ಶ್ವಾನದೊಂದಿಗೆ ಇಬ್ಬರು ಸಿಎಆರ್ ಸಿಬ್ಬಂದಿಯೂ ತೆರಳುತ್ತಾರೆ. ಶ್ವಾನಗಳು ಹಾಗೂ ಅವುಗಳ ನಿರ್ವಾಹಕರಿಗೆ ತರಬೇತಿ ನೀಡಲಾಗುತ್ತದೆ. ಸಿಟ್, ಅಪ್, ರೋಲ್, ಜಂಪ್, ಇಂತಹ ಸೂಚನೆಗಳನ್ನು ಪಕ್ವತೆಯಿಂದ ಪಾಲಿಸುವುದರ ಜೊತೆಗೆ ವೃತ್ತಿ ಸಂಬಂಧಿತ ತರಬೇತಿಯನ್ನೂ ನೀಡಲಾಗುತ್ತದೆ.

ವೃತ್ತಿ ಸಾಫ್ಟ್‌ವೇರ್ ಇಂಜಿನಿಯರ್

ಪ್ರವೃತ್ತಿ ಕುಂದಣ ಕಲೆ



● ಎಂ.ಟಿ.ಯೋಗೇಶ್ ಕುಮಾರ್

ಮೈಸೂರಿನ ಸಾಂಪ್ರದಾಯಿಕ ಕಲೆಗಳಲ್ಲಿ ಒಂದಾದ 'ಮೈಸೂರು ರೋಸ್ ವುಡ್ ಕುಂದಣ ಕಲೆ'ಗೆ ದೇಶ-ವಿದೇಶದಲ್ಲೂ ವ್ಯಾಪಕ ಬೇಡಿಕೆ ವ್ಯಕ್ತವಾಗುತ್ತಿದ್ದು, ಮೈಸೂರಿನ ಸಾಫ್ಟ್‌ವೇರ್ ಇಂಜಿನಿಯರ್‌ವೊಬ್ಬರು ಕುಂದಣ ಕಲೆಯನ್ನು ಕರಗತಮಾಡಿಕೊಂಡು ನಯನ ಮನೋಹರ ಕಲೆಯನ್ನು ರಚಿಸುವ ಮೂಲಕ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದರೂ ಕುಂದಣ(ಇನ್ಲೆ) ಕಲೆಯ ಮೇಲೆ ಆಸಕ್ತಿ ಹೊಂದಿದ್ದ ಮೈಸೂರಿನ ಎನ್.ಆರ್.ಮೊಹಲ್ಲಾದ ನಿವಾಸಿ ಮೋಹನ್ ಕುಮಾರ್ ಇದೀಗ ಇನ್ಲೆ ಕಲಾವಿದನಾಗಿಯೂ ಹೊರಹೊಮ್ಮಿದ್ದು, ಸುಂದರ ಕುಂದಣ ಕಲಾಪ್ರಕಾರದಲ್ಲಿ ರೂಪಿಸಿ ಸಾವಿರಾರು ಚಿತ್ರವನ್ನು ಮರದ ತುಂಡುಗಳಿಂದ ರಚಿಸಿ ಪ್ರದರ್ಶನ ಮತ್ತು ಮಾರಾಟ ಮಾಡುವ ಮೂಲಕ ಸೈ ಎನಿಸಿಕೊಂಡಿದ್ದಾರೆ. ಚಿಕ್ಕಂದಿನಿಂದಲೂ ಕುಂದಣ ಕಲೆ ಮೇಲೆ ಒಲವು ಹೊಂದಿದ್ದ ಮೋಹನ್‌ಕುಮಾರ್ ಸತತ ಪ್ರಯತ್ನ ಹಾಗೂ ಮಾರ್ಗದರ್ಶನ ನೀಡಲು ಸಿಕ್ಕ ಹಿರಿಯ ಕಲಾವಿದರ ಪ್ರೋತ್ಸಾಹದಿಂದ ಇದೀಗ ಪೂರ್ಣಪ್ರಮಾಣದ, ಪರಿಪಕ್ವ ಕುಂದಣ ಕಲೆಗಾರನಾಗಿ ಹೊರಹೊಮ್ಮಿದ್ದು ಸಾಧನೆಯ ಹಾದಿಯಲ್ಲಿ ಯಶಸ್ಸಿನ ದಾಪುಗಾಲಿಡುತ್ತಿದ್ದಾರೆ.

ಕಲೆ ಕಲಿಯಲು ಪ್ರೇರಣೆ: ಚಿಕ್ಕಂದಿನಿಂದಲೂ ಕುಂದಣ ಕಲೆಯ ಬಗ್ಗೆ ಆಸಕ್ತಿ ಹೊಂದಿದ್ದ ಮೋಹನ್ ಹಿರಿಯ ಕಲಾವಿದರು ಬರೆಯುವ ಚಿತ್ರ ವೀಕ್ಷಿಸುವ ಹಾಗೂ ಕುಂದಣ ಕಲಾ ರಚನೆಯನ್ನು ನೋಡುತ್ತಾ ಕೊನೆ ಕೊನೆ ತಾನೇ ಕಲಾವಿದನಾಗಿ ಹೊರಹೊಮ್ಮಿದ್ದಾರೆ. ಈ ನಡುವೆ ಕೆಲ ಹಿರಿಯ ಕಲಾವಿದರಿಂದಲೂ ಸಲಹೆ, ಸಹಾಯ ಪಡೆದು ಪರಿಪಕ್ವ ಇನ್ಲೆ ಕಲಾವಿದನಾಗಿ ರೂಪುಗೊಂಡಿದ್ದಾರೆ.

ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್; ಪ್ರವೃತ್ತಿಯಲ್ಲಿ ಕುಂದಣ ಕಲಾವಿದ: ಮೋಹನ್ ಅವರು ಇಂಜಿನಿಯರಿಂಗ್ ಪದವಿ ಪಡೆದಿದ್ದು, ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲಸದ ಜೊತೆಗೆ ಪ್ರವೃತ್ತಿಯಾಗಿ ಕಳೆದ 7 ವರ್ಷಗಳಿಂದ ಇನ್ಲೆ ಕಲಾ ರಚನೆಯಲ್ಲಿ ತೊಡಗಿದ್ದಾರೆ. ಇದೀಗ ಎಂ.ಕೆ.ಎಂಟರ್‌ಪ್ರೈಸಸ್ ಸಂಸ್ಥೆಯೊಂದನ್ನು ಹುಟ್ಟು ಹಾಕಿ ಕೆಲ ಕಲಾವಿದರೊಂದಿಗೆ ಸೇರಿ ಇನ್ಲೆ ಕಲಾ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ವಾಚ್ ಡಯಲ್‌ಗೆ ಫ್ರಾನ್ಸ್‌ಗೆ ರವಾನೆಯಾದ ಚಿಕ್ಕ ಇನ್ಲೆ ಆರ್ಟ್

ಇನ್ಲೆ ಕಲಾವಿದ ಬಿ.ಮೋಹನ್ ಕುಮಾರ್ ಅವರ ಇನ್ಲೆ ಆರ್ಟ್ ನೋಡಿ ಫ್ರಾನ್ಸ್ ವಾಚ್ ಕಂಪನಿಯೊಂದು ವಾಚ್ ಡಯಲ್‌ಗೆ 30 ಎಂಎಂ ಅಳತೆಯ ಕಲೆ ರಚನೆಯ ಬೇಡಿಕೆಯಿಟ್ಟಿದೆ. ಈಗಾಗಲೇ ಒಂದೂಕಾಲು ಇಂಚ್ ಅಳತೆಯ ಒಂದು ಇನ್ಲೆ ಆರ್ಟ್ ಕಳುಹಿಸಿರುವ ಮೋಹನ್ ಅವರು, ಇದೀಗ ಮತ್ತೊಂದು ಇನ್ಲೆ ಆರ್ಟ್ ರಚಿಸುತ್ತಿದ್ದಾರೆ. ಅದನ್ನು ವಾಚ್ ಡಯಲ್‌ಗೆ ಮುದ್ರಿಸುವ ಪ್ರಕ್ರಿಯೆ ನಡೆಯುತ್ತಿದೆ.





ಗುಣಮಟ್ಟದ ಕುಂದಣ ಕಲಾ ರಚನೆ: ಕಲಾವಿದ ಬಿ.ಮೋಹನ್‌ಕುಮಾರ್ 'ಮೈಸೂರು ಮಿತ್ರ'ನ ಜೊತೆ ಮಾತನಾಡಿ, ಮೈಸೂರಿನ ಸಾಂಪ್ರದಾಯಿಕ ಕಲೆಗಳಲ್ಲಿ ಒಂದಾಗಿರುವ ಕುಂದಣ ಕಲೆ(ಮೈಸೂರು ರೋಸ್‌ವುಡ್ ಇನ್ಲೆ ಆರ್ಟ್)ಯೂ ಒಂದಾಗಿದೆ. ಇದಕ್ಕೆ ಆಧುನಿಕ ಸ್ಪರ್ಶ (ಮಾಡ್ರನ್ ಟಚ್) ನೀಡಿ ಕಲಾ ರಚನೆ ಮಾಡಲಾಗುತ್ತಿದೆ. ಮೈಸೂರಿಗೆ ಬರುವ ಪ್ರವಾಸಿಗರಿಗೆ ಉತ್ತಮ, ಗುಣಮಟ್ಟದ ಇನ್ಲೆ ಕಲೆ ದೊರಕಬೇಕೆಂಬ ಉದ್ದೇಶದಿಂದ ಇನ್ಲೆ ಕಲಾ ರಚನೆಯಲ್ಲಿ ತೊಡಗಿದ್ದು, ಇದಕ್ಕೆ ಹಿರಿಯ ಕಲಾವಿದರಾದ ಪುಟ್ಟರಾಜು ಅವರ ಕಲ್ಪನಾ ಚಿತ್ರಗಳನ್ನು ಬಳಸಿಕೊಂಡು ಇನ್ಲೆ ಕಲೆ ರಚಿಸುತ್ತಿರುವುದಾಗಿ ತಿಳಿಸಿದರು.

ದೇಶ-ವಿದೇಶಗಳಲ್ಲೂ ಪ್ರದರ್ಶನ: ಕಳೆದ 7 ವರ್ಷಗಳಿಂದ ಕುಂದಣ ಕಲಾ ರಚನೆಯಲ್ಲಿ ತೊಡಗಿದ್ದು, ಸಾವಿರಾರು ಕಲಾ ರಚನೆ ಮಾರಾಟವಾಗಿವೆ. ಅಲ್ಲದೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ನೂರಾರು ಪ್ರದರ್ಶನಗಳಲ್ಲಿ ಕುಂದಣ ಕಲೆಯ ರಚನೆಯನ್ನು ಪ್ರದರ್ಶಿಸಿದ್ದೇನೆ. ಅಲ್ಲದೆ, ಯುಎಸ್, ಇಟಲಿ, ಪ್ಯಾರಿಸ್, ಲಂಡನ್,

● ದೇಶ-ವಿದೇಶಗಳಲ್ಲಿ ಇನ್ಲೆ ಆರ್ಟ್ ಪ್ರದರ್ಶಿಸಿ ಸೈ ಎನಿಸಿಕೊಂಡ ಮೈಸೂರಿನ ಯುವಕ

● ಮೈಸೂರು ರೋಸ್‌ವುಡ್ ಇನ್ಲೆ ಕಲೆಗೆ ಆಧುನಿಕ ಟಚ್ ನೀಡಿದ ಉತ್ಸಾಹಿ

● ಒಂದುಕಾಲು ಇಂಚಿನಿಂದ 17 ಅಡಿ ಉದ್ದದ ಕುಂದಣ ಕಲೆ ರಚನೆ


ಯುರೋಪ್‌ನ ಕೆಲವು ದೇಶಗಳಾದ, ಲಂಡನ್, ಸ್ವಿಟ್ಜರ್ಲೆಂಡ್, ದುಬೈ ಸೇರಿದಂತೆ ಮತ್ತಷ್ಟು ದೇಶಗಳಲ್ಲಿ ನಡೆದ ಕಲಾ ಪ್ರದರ್ಶನಗಳಲ್ಲಿ ನಾನು ರಚಿಸಿರುವ ಇನ್ಲೆ ಆರ್ಟ್ ಪ್ರದರ್ಶನಗೊಂಡಿವೆ. ಇನ್ಲೆ ಆರ್ಟ್‌ಗೆ ಜಿಐ ಟ್ಯಾಗ್ ಹೊಂದಿರುವುದರಿಂದ ಮಹತ್ವ ಪಡೆದಿದೆ. ಮೈಸೂರಲ್ಲಿ ಮಾತ್ರ ಮರದ ಮೇಲೆ ಎನ್‌ಗ್ರೇವಿಂಗ್ ಮಾಡಲಾಗುತ್ತದೆ. ಬೇರೆ ಕಡೆ ಲೋಹದ ಮೇಲೆ ಎನ್‌ಗ್ರೇವಿಂಗ್ ಮಾಡುತ್ತಾರೆ. ಇದರಿಂದ ಮೈಸೂರಿನ ಕುಂದಣ ಕಲೆಗೆ ದೇಶ-ವಿದೇಶದಲ್ಲೂ ಬೇಡಿಕೆ ಇದೆ. ಈ ಕಲಾ ರಚನೆಗೆ ನಾವು ಹುಣಸೆಮರ, ಹಲಸಿನ ಮರ, ಬಡಾಕ್ ಮರ, ಪರಿಮಗಂ ಮರ, ಮಡ್ಡಿ ಮರ, ಖಡ್ಗ ಮರ ಸೇರಿದಂತೆ ಎಲ್ಲಾ ವಿಧದ ಮರ ಹಾಗೂ ಎಲ್ಲಾ ಬಣ್ಣದ ಮರ ಬಳಕೆ ಮಾಡುತ್ತೇವೆ. **ಮರದ ತುಂಡಿಗೆ ಜೀವ ಕೊಡುವ ಕಲೆಯೇ ಕುಂದಣ ಕಲೆ** ಎಂದರು.


ವಿವಿಧ ಹಂತಗಳಲ್ಲಿ ಕಲಾ ರಚನೆ: ಇನ್ಲೆ ಕಲಾ ರಚನಾ ಪ್ರಕ್ರಿಯೆ ವಿವಿಧ ಹಂತಗಳಲ್ಲಿ ನಡೆಯುತ್ತದೆ. ಕಲ್ಪನಾ ಅಥವಾ ಚಿತ್ರ ರಚನೆ ಮಾಡಿದ ಬಳಿಕ ಅದನ್ನು ಟ್ರೇಸಿಂಗ್ ಮಾಡಲಾಗುತ್ತದೆ. ಮರ ಆಯ್ಕೆ ಮಾಡಿಕೊಂಡು, ಅದರ ಮೇಲೆ ಚಿತ್ರ ಅಂಟಿಸಿ, ಸ್ಕೆಚ್ ಮಾಡಲಾಗುತ್ತದೆ. ಸ್ಕೆಚ್ ಮಾಡಿದ ನಂತರ ಚಿತ್ರದ ಬಿಡಿ ಭಾಗಕ್ಕಾಗಿ ಮರವನ್ನು ತುಂಡು ತುಂಡಾಗಿ ಕತ್ತರಿಸಿಕೊಳ್ಳುತ್ತೇವೆ. ಮತ್ತೆ ತುಂಡರಿಸಿದ ಮರದ ಪೀಸ್ ಅನ್ನು ಜೋಡಣೆ ಮಾಡಲಾಗುತ್ತದೆ. ಪ್ರೆಸ್ಸಿಂಗ್, ಬಫಿಂಗ್, ಪಾಲಿಶ್, ಎನ್‌ಗ್ರೇವಿಂಗ್ ಮಾಡಿ ವ್ಯಾಕ್ಸ್ ಹಾಕಿ ಕಂಪ್ಲೀಟ್ ಮಾಡಲಾಗುತ್ತದೆ ನಂತರ ಫ್ರೇಮ್ ಅಳವಡಿಸಿದ ಬಳಿ ಒಂದು ಇನ್ಲೆ ಆರ್ಟ್ ಪ್ರದರ್ಶನ ಅಥವಾ ಮಾರಾಟಕ್ಕೆ ಸಿದ್ಧಗೊಳ್ಳಲಿದೆ ಎಂದು ತಿಳಿಸಿದರು.

ಮಾರಾಟ: ಮೈಸೂರಿನ ಎನ್.ಆರ್. ಮೊಹಲ್ಲಾದ ಲಿಂಕ್ ರಸ್ತೆಯಲ್ಲಿ ಇನ್ಲೆ ಕಲಾ ರಚನೆಯ ಮಾರಾಟ ಮಳಿಗೆಯನ್ನೂ ತೆರೆದಿದ್ದೇನೆ. ಅಲ್ಲದೆ, ವಿದೇಶಗಳಿಗೂ ರಫ್ತು ಮಾಡಿದ್ದೇನೆ. ನಮ್ಮಲ್ಲಿ ತಯಾರಾದ ಇನ್ಲೆ ಆರ್ಟ್‌ಗೆ ವಿವಿಧೆಡೆಯಿಂದ ಪ್ರಶಂಸೆಯೂ ವ್ಯಕ್ತವಾಗಿದ್ದು, ಸಾಕಷ್ಟು ಮಂದಿ ಕಲಾಪ್ರೇಮಿಗಳು ಖರೀದಿಸಿದ್ದಾರೆ. ಮತ್ತಷ್ಟು ಮಂದಿ ತಮ್ಮ ಇಚ್ಛೆ ಅನುಸಾರ ಚಿತ್ರ ನೀಡಿ, ಅದನ್ನು ಇನ್ಲೆ ಕಲಾ ರಚನೆಯಲ್ಲಿ ಚಿತ್ರಿಸಿ ಕೊಡುವಂತೆ ಕೋರಿದ್ದಾರೆ ಎಂದು ವಿವರಿಸಿದರು.










ನಂಜನಗೂಡಲ್ಲಿ ದರ್ಶನ್ ಧ್ರುವನಾರಾಯಣ್ ಅಭಿವೃದ್ಧಿ ಪರ್ವ

ನಂಜನಗೂಡನ್ನು ಮಾದರಿ ಕ್ಷೇತ್ರವನ್ನಾಗಿಸುವತ್ತ ಶಾಸಕ ದರ್ಶನ್ ಚಿತ್ತ



ನಂಜನಗೂಡು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕ ದರ್ಶನ್ ಧ್ರುವನಾರಾಯಣ್ ರವರು ಕಳೆದ ಮೂರು ವರ್ಷದ ಅವಧಿಯಲ್ಲಿ ಕ್ಷೇತ್ರಕ್ಕೆ ಸುಮಾರು 360 ಕೋಟಿಗಿಂತಲೂ ಅಧಿಕ ಮೊತ್ತದ ಅನುದಾನವನ್ನು ತಂದು ನಂಜನಗೂಡಿನಲ್ಲಿ ಅಭಿವೃದ್ಧಿಯ ಬರುವ ಆರಂಭಿಸುವ ಮೂಲಕ ಭರವಸೆಯ ಅಭಿವೃದ್ಧಿಯ ಹರಿಕಾರರೆಂದು ಜನಮನ್ನಣೆ ಗಳಿಸಿದ್ದಾರೆ.

ಅನಿರೀಕ್ಷಿತವಾಗಿ ರಾಜಕೀಯಕ್ಕೆ ಬಂದ ದರ್ಶನ್ ರವರು ಪಬ್ಲಿಕ್ ಪಾಲಿಸಿ ವಿಷಯದಲ್ಲಿ ಯುನೈಟೆಡ್ ಕಿಂಗ್ ಗೇಮ್‌ನ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರುವ ದರ್ಶನ್ ತಮ್ಮ ಕೌಶಲ್ಯದ ಜ್ಞಾನವನ್ನು ಬಳಸಿಕೊಂಡು ಕ್ಷೇತ್ರದ ವಿವಿಧ ಗ್ರಾಮಗಳಿಗೆ ಖುದ್ದಾಗಿ ತೆರಳಿ ಅಲ್ಲಿನ ಸಮಸ್ಯೆಗಳಿಗೆ ಪೂರಕವಾದ ಕಾಮಗಾರಿಗಳನ್ನು ಮಂಜೂರು ಮಾಡುವ ಮೂಲಕ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ಮುಂದಾಗಿದ್ದಾರೆ.

ಪ್ರಥಮ ಬಾರಿಗೆ ಎಪಿಎಂಸಿ ಆವರಣದಲ್ಲಿ 3 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯವನ್ನು ಆರಂಭಿಸಿದ ಶಾಸಕ ದರ್ಶನ್, ಮುಖ್ಯಮಂತ್ರಿಗಳ ಮನವೊಲಿಸಿ 25 ಕೋಟಿ ವಿಶೇಷ ಅನುದಾನವನ್ನು ತಂದು ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡಿದ್ದಾರೆ, ಅಲ್ಲದೆ ಲೋಕೋಪಯೋಗಿ ಇಲಾಖೆಯಿಂದ ಸುಮಾರು 40 ಕೋಟಿ ಅನುದಾನ ತಂದು 25 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ತಾಲೂಕಿನ ದೇವರಸನಹಳ್ಳಿ ಮುಖ್ಯ ರಸ್ತೆ 10 ಕೋಟಿ ವೆಚ್ಚದಲ್ಲಿ ಮತ್ತು 10 ಕೋಟಿ ವೆಚ್ಚದಲ್ಲಿ ರಾಜೂರು ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಶಾಶ್ವತ ಪರಿಹಾರಕ್ಕೆ ಮುಂದಾಗಿದ್ದಾರೆ. ನೀರಾವರಿ ಇಲಾಖೆಯ ವತಿಯಿಂದ 60 ಕೋಟಿ ವೆಚ್ಚದಲ್ಲಿ ಕಪ್ಪಸೋಗೆ ಸೇತುವೆ ನಿರ್ಮಾಣ, 42 ಕೋಟಿ ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿ ಕೆಲಸಗಳು ನಡೆದಿದ್ದು ಹೊಸದಾಗಿ 85 ಕೋಟಿ ಅನುದಾನಕ್ಕೆ ಸಚಿವ ಸಂಪುಟದ ಒಪ್ಪಿಗೆ ದೊರಕಿದ್ದು ಶೀಘ್ರದಲ್ಲಿ ಬಿಡುಗಡೆಯಾಗಲಿದೆ.

ನಂಜನಗೂಡಿನ ಯುಜಿಡಿ ಕಾಮಗಾರಿಗೆ ಹೊಸದಾಗಿ 22 ಕೋಟಿ, ಪಂಚಾಯತ್‌ರಾಜ್ ಇಲಾಖೆಯಿಂದ 10 ಕೋಟಿ, ಸಣ್ಣ ನೀರಾವರಿ ಇಲಾಖೆಯಿಂದ 10 ಕೋಟಿ, ಅಲ್ಪಸಂಖ್ಯಾತ ಇಲಾಖೆ ವತಿಯಿಂದ 8 ಕೋಟಿ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ 7.5 ಕೋಟಿ ವೆಚ್ಚದಲ್ಲಿ





ಸಮುದಾಯ ಭವನಗಳ ಅಭಿವೃದ್ಧಿ, ಎಸಿಪಿ, ಟಿಎಸ್‌ಪಿ ಯೋಜನೆಯಡಿ ಸುಮಾರು 10 ಕೋಟಿ ರೂ. ಕ್ಷೇತ್ರಕ್ಕೆ ತಂದು ರಸ್ತೆ ಚರಂಡಿ ಅಭಿವೃದ್ಧಿಯ ಕಾರ್ಯಗಳನ್ನು ನಡೆಸಿದ್ದಾರೆ, ಅಲ್ಲದೆ 2025–26ನೇ ಸಾಲಿಗೆ ಹೊಸದಾಗಿ ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ 50 ಕೋಟಿ ಮಂಜೂರಾತಿ ಮಾಡಿಸಿದ್ದು ಈಗಾಗಲೇ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ರೂಪರೇಷೆಗಳು ಸಿದ್ಧವಾಗಿದೆ. ಅಲ್ಲದೆ ಈಗಾಗಲೇ ನಗರ ಪ್ರದೇಶದ ವಿವಿಧ ಬಡಾವಣೆಗಳಿಗೆ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ 10 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಗಳನ್ನು ನಡೆಸಿದ್ದಾರೆ. ಇನ್ನು ಆಸ್ಪತ್ರೆಗಳ ಅಭಿವೃದ್ಧಿಗೆ ಶಾಲೆಗಳ ದುರಸ್ತಿಗಾಗಿ ಹಲವಾರು ಕೋಟಿ ರೂಗಳ ಅನುದಾನವನ್ನು ತಂದು ಸೌಕರ್ಯ ಒದಗಿಸುವ ಜೊತೆಗೆ ಅಂಬೇಡ್ಕರ್, ವಾಲ್ಮೀಕಿ, ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ನಿಗಮಗಳ ಅಡಿಯಲ್ಲಿ ಜನರಿಗೆ ಸವಲತ್ತುಗಳನ್ನು ಒದಗಿಸುವ ಮೂಲಕ ಅಭಿವೃದ್ಧಿಯ ಹರಿಕಾರರೆಂದು ಹೆಸರುವಾಸಿಯಾಗಿದ್ದಾರೆ.

ದೊಡ್ಡ ಕವಲಂದೆ ಹೋಬಳಿ ಹಸಿರೀಕರಣ ಮಾಡಲು ಪಣ

ಶಾಶ್ವತ ಬರಪೀಡಿತ ಪ್ರದೇಶ ಎಂಬ ಹಣೆ ಪಟ್ಟಿಯನ್ನು ಹೊಂದಿರುವ ತಾಲೂಕಿನ ದೊಡ್ಡ ಕವಲಂದೆ ವ್ಯಾಪ್ತಿಯ ಗ್ರಾಮೀಣ ಪ್ರದೇಶದ ಕೆರೆಗಳಿಗೆ ಕಪಿಲಾ ನದಿಯಿಂದ ನೀರು ತುಂಬಿಸುವ ಮೂಲಕ ಈ ಭಾಗವನ್ನು ಹಸರೀಕರಣ ಗೊಳಿಸಬೇಕು ಎಂಬ ತಂದೆಯ ಆಸೆಯನ್ನು ನೆನಸಾಗುವ ಸುವತ್ತ ಕ್ರಮ ಕೈಗೊಂಡು ಕಳೆದ ವರ್ಷದ ಬಜೆಟ್ ನಲ್ಲಿ ಸುಮಾರು 90 ಕೋಟಿ ಅನುದಾನ ಬಿಡುಗಡೆಗೊಳಿಸಿದ್ದಾರೆ, ಇದು ಟೆಂಡರ್ ಪ್ರಕ್ರಿಯೆಯಲ್ಲಿ ಇದ್ದು ಕೆಲವೇ ದಿನಗಳಲ್ಲಿ ಕಾಮಗಾರಿಗೆ ಚಾಲನೆ ದೊರಕಲಿದೆ. ಆ ಮೂಲಕ ಚುನಾವಣಾ ಪೂರ್ವದಲ್ಲಿ ಮತದಾರರಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿ ನಂಜನಗೂಡು ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ರಾಜ್ಯದಲ್ಲಿಯೇ ಮುಂಚೂಣಿ ಸ್ಥಾನದಲ್ಲಿ ಕಾಯ್ದುಕೊಂಡಿರುವ ಕೀರ್ತಿಗೆ ಯುವ ಶಾಸಕ ದರ್ಶನ್ ಭಾಜನರಾಗಿದ್ದು, ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿಲ್ಲ ಎಂಬುದನ್ನು ತಮ್ಮ ಅಭಿವೃದ್ಧಿ ಕಾರ್ಯಗಳ ಮೂಲಕವೇ ವಿಪಕ್ಷಗಳಿಗೆ ಉತ್ತರ ಕೊಟ್ಟಿದ್ದಾರೆ.

ಜನಪರ ಕಾಳಜಿಯ ಯುವ ನಾಯಕ

ಬಡವರು, ರೈತರು, ಕಾರ್ಮಿಕರು, ದುಡಿಯುವ ವರ್ಗದ ಜೀವನ ಮಟ್ಟವನ್ನು ಸುಧಾರಿಸಲು ಹಂಬಲಿಸುವ ಅವರು ಯುವಕರಿಗೆ ಉದ್ಯೋಗ ದೊರಕಿಸುವ ಕೊಡುವ ಸಲುವಾಗಿ ತಮ್ಮ ತಂದೆ ಆರ್.ಧ್ರುವನಾರಾಯಣ್ ರವರ ಹುಟ್ಟು ಹಬ್ಬದ ಅಂಗವಾಗಿ ಪ್ರತಿ ವರ್ಷ ಉದ್ಯೋಗ ಮೇಳಗಳನ್ನು ಆಯೋಜಿಸುವ ಮೂಲಕ ಯುವಜನರ ಕಣ್ಮಣಿಯಾಗಿದ್ದಾರೆ.

ದೇಶದಲ್ಲೇ ಪ್ರಥಮ ಬಾರಿಗೆ ಕ್ಯೂಆರ್ ಕೋಡ್ ಅಳವಡಿಕೆ

ನಗರಸಭೆಯ ಆಡಳಿತವನ್ನು ಪಾರದರ್ಶಕವಾಗಿಸುವ ಸಲುವಾಗಿ ದೇಶದಲ್ಲೇ ಪ್ರಥಮ ಬಾರಿಗೆ ಎಲ್ಲಾ ಬಡಾವಣೆಗಳ ಮುಖ್ಯರಸ್ತೆಗಳಲ್ಲಿ ಕ್ಯೂಆರ್ ಕೋಡ್ ಅಳವಡಿಕೆ ಮಾಡಿ ಬಡಾವಣೆಗಳ ಸಮಸ್ಯೆಗಳನ್ನು ಸಾರ್ವಜನಿಕರೇ ಕ್ಯೂಆರ್ ಕೋಡ್‌ಗಳ ಸ್ಕ್ಯಾನ್ ಮಾಡುವ ಮೂಲಕ ದೂರು ದಾಖಲಿಸುವ ವ್ಯವಸ್ಥೆ ಕಲ್ಪಿಸಿ, ಆ ಸಮಸ್ಯೆಗಳಿಗೆ ಅಧಿಕಾರಿಗಳೇ ನೇರವಾಗಿ ಪರಿಹಾರ ದೊರಕಿಸುವ ವ್ಯವಸ್ಥೆಯನ್ನು ಕಲ್ಪಿಸಿ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಹೇಗೆ ಸಮಸ್ಯೆ ಪರಿಹರಿಸಬಹುದು ಎಂಬುದನ್ನು ತಿಳಿಸಿದ್ದಾರೆ.

ಫುಡ್ ಸ್ಟ್ರೀಟ್ ನಿರ್ಮಾಣ

ನಗರ ಪ್ರದೇಶದ ಸಂಚಾರ ಒತ್ತಡವನ್ನು ಕಡಿಮೆಗೊಳಿಸಿ ಖಾದ್ಯ ಪ್ರಿಯರಿಗೆ ಸ್ವಚ್ಛಂದವಾದ ಪರಿಸರದಲ್ಲಿ ಆಹಾರ ಸೇವಿಸುವ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಹೊಸದಾಗಿ ನಗರದ ಹುಲ್ಲಹಳ್ಳಿ ನಾಲೆಯ ಕವರ್ ಡೆಕ್ ಮೇಲೆ ಫುಡ್ ಸ್ಟ್ರೀಟ್ ನಿರ್ಮಾಣ ಮಾಡಿ ಬೀದಿ ಬದಿಯಲ್ಲಿ ಫಾಸ್ಟ್ ಫುಡ್ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳಿಗೆ ನೆಲೆ ಕಲ್ಪಿಸಿಕೊಟ್ಟಿರುವುದು ಅವರ ಅಭಿವೃದ್ಧಿ ಚಿಂತನೆಗೆ ಸಾಕ್ಷಿಯಾಗಿದೆ.

ಗರಳ ಪುರಿ ಉತ್ಸವದ ಮೂಲಕ ಜನರನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸುವ ಪ್ರಯತ್ನ



ಅಧಿಕಾರ ಶಾಶ್ವತವಲ್ಲ, ಜನರ ಪ್ರೀತಿ ವಿಶ್ವಾಸ ಶಾಶ್ವತ ಎಂಬ ನಂಬಿಕೆಯನ್ನು ಹೊಂದಿರುವ ಶಾಸಕರು, ನಂಜನಗೂಡಿನ ಇತಿಹಾಸದಲ್ಲೇ ಪ್ರಥಮ ಬಾರಿಗೆ ಶ್ರೀಕಂಠೇಶ್ವರಸ್ವಾಮಿಯವರ ಜಾತ್ರಾ ಮಹೋತ್ಸವದ ಅಂಗವಾಗಿ ಐತಿಹಾಸಿಕ ಗರಳಪುರಿ ಉತ್ಸವ ಎಂಬ ಕಾರ್ಯಕ್ರಮವನ್ನು ಆಯೋಜಿಸಿ ಸ್ಥಳೀಯ ಕಲಾವಿದರಿಗೆ ಮತ್ತು ಕ್ಷೇತ್ರದ ಜನತೆಗೆ ವೇದಿಕೆಗಳನ್ನು ಕಲ್ಪಿಸಿಕೊಡುವ ಮೂಲಕ ಪಕ್ಷಾತೀತವಾಗಿ, ಜಾತ್ಯಾತೀತವಾಗಿ, ಜನರನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಅಲ್ಲದೆ ನಂಜನಗೂಡಿನ ಕ್ರೀಡಾ ಇತಿಹಾಸವನ್ನು ಮರು ಸ್ಥಾಪಿಸುವ ಉದ್ದೇಶದೊಂದಿಗೆ ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾವಳಿಯನ್ನು ಆಯೋಜಿಸಿದ್ದಾರೆ. ಜೊತೆಗೆ ತಾಲೂಕಿನ ಯುವ ಜನರನ್ನು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸುವ ಸಲುವಾಗಿ ಯೋಗ, ಮತ್ತು ಚೆಸ್, ಕ್ರಿಕೆಟ್ ಪಂದ್ಯಾವಳಿ ಸೇರಿದಂತೆ ಕ್ರೀಡೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿ ಯುವಕರ ನೆಚ್ಚಿನ ಶಾಸಕರೆಂಬ ಕೀರ್ತಿಗೆ ಭಾಜನರಾಗಿದ್ದಾರೆ. ಕ್ಷೇತ್ರದ ಜನತೆಯಲ್ಲಿಯೇ ತಂದೆ ತಾಯಿಯನ್ನು ಕಾಣುವ ಶಾಸಕ ದರ್ಶನ್ ಧ್ರುವನಾರಾಯಣ್ ಬಹುತೇಕ ಸಮಯವನ್ನು ಕ್ಷೇತ್ರದ ಜನರ ಜೊತೆಯೇ ಕಳೆದು ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಮೂಲಕ ಜನಪರ ಕಾಳಜಿಯ ಭವಿಷ್ಯದ ನಾಯಕರಾಗಿ ರೂಪುಗೊಂಡಿದ್ದಾರೆ.



ದರ್ಶನ್ ಧ್ರುವನಾರಾಯಣ್

ಶಿಕ್ಷಣಕ್ಕೆ ಹೆಚ್ಚಿನ ಒತ್ತು



ಆರ್. ಧ್ರುವನಾರಾಯಣ್ ರವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಕೆಲಸ ಮಾಡಿದ್ದರು, ತಂದೆಯ ಆಶಯದಂತೆಯೇ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿರುವ ಶಾಸಕ ದರ್ಶನ್ ರವರು ತನ್ನ ತಂದೆ ಹೆಸರಿನಲ್ಲಿ ಆರ್.ಧ್ರುವನಾರಾಯಣ್ ಎಜುಕೇಶನಲ್ ಎಂಬ ಟ್ರಸ್ಟ್ ಸ್ಥಾಪಿಸಿ ನಂಜನಗೂಡಿನಲ್ಲಿ ಜರುಗುವ ಹಲವಾರು ಮಹನೀಯರ ಜಯಂತಿಯಲ್ಲಿ ತಾಲೂಕಿನ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಕಾರ್ಯಕ್ರಮ ಏರ್ಪಡಿಸಿ ವೈಯಕ್ತಿಕವಾಗಿ ಬಹುಮಾನವಾಗಿ ಲ್ಯಾಪ್ ಟಾಪ್ ಮತ್ತು ಟ್ಯಾಬ್ ಗಳನ್ನು ವಿತರಿಸುತ್ತಾರೆ, ಅಲ್ಲದೆ ಮೈಸೂರು ಜಿಲ್ಲೆ ಮತ್ತು ತಾಲೂಕುಗಳ ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ ನಂತರ ಪಿಯುಸಿ ನಂತರ ಪದವಿ ನಂತರ ಮುಂದೆ ಏನು ಎಂಬ ಶೀರ್ಷಿಕೆಯಡಿ ಎಜುಕೇಶನ್ ಎಕ್ಸ್ ಪೋ ಎಂಬ ಕಾರ್ಯಕ್ರಮ ಆಯೋಜನೆ ಮಾಡಿರುವುದಲ್ಲದೆ, ಆರ್. ಧ್ರುವನಾರಯಣ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಿಇಟಿ/ನೀಟ್, ಉಚಿತ ತರಭೇತಿ ಕಾರ್ಯಕ್ರಮ ಏರ್ಪಡಿಸಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ.



ಭವಿಷ್ಯದ ನಾಯಕ

ಪ್ರಭಾವಿ ರಾಜಕಾರಣಿಯಾಗಿದ್ದ ಆರ್.ಧ್ರುವನಾರಾಯಣ್ ರವರ ಪುತ್ರರಾಗಿರುವ ಶಾಸಕ ದರ್ಶನ್ ಧ್ರುವನಾರಾಯಣ್ ಸದಾಕಾಲ ಜನಪರ ಕಾಳಜಿಯ ಪ್ರಶ್ನಾತೀತ ನಾಯಕರಾಗಿ ಗುರುತಿಸಿಕೊಂಡಿದ್ದು, ಕ್ಷೇತ್ರದ ಜನರ ಆಶಯಗಳಿಗೆ ಪಕ್ಷಾತೀತವಾಗಿ ಸ್ಪಂದಿಸುವ ಮೂಲಕ ಹಳೆ ಮೈಸೂರು ಪ್ರಾಂತ್ಯದಲ್ಲಿ ಭವಿಷ್ಯದ ಪ್ರಬಲ ರಾಜಕಾರಣಿಯಾಗಿ ಗುರುತಿಸಿಕೊಳ್ಳುವ ಎಲ್ಲಾ ಅರ್ಹತೆಯನ್ನು ಪಡೆದುಕೊಂಡಿದ್ದು, ಮುಖ್ಯವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸೇರಿದಂತೆ ಕಾಂಗ್ರೆಸ್ ಪಕ್ಷದ ಹಲವು ವರಿಷ್ಠರ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ತಂದೆಯ ಹಾದಿಯಲ್ಲಿ ಸಾಗಿ ದಿನದ 24 ಗಂಟೆಗಳು ಸಹ ಕ್ಷೇತ್ರದ ಮತದಾರರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗುತ್ತಾರೆ, ಇದರಿಂದಲೇ ಜನಸಾಮಾನ್ಯರ ಕೈಗೆ ಸುಲಭವಾಗಿ ಸಿಗುವ ಶಾಸಕರೆಂದು ಜನಮನ್ನಣೆ ಗಳಿಸಿರುವುದಲ್ಲದೆ, ತಂದೆಯ ಆದರ್ಶ ಗುಣ ಮತ್ತು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ರವರ ಮಾರ್ಗದರ್ಶನದಲ್ಲಿ ಕ್ಷೇತ್ರದ ಎಲ್ಲಾ ವರ್ಗದ ಮುಖಂಡರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಮೂಲಕ ಅತಿ ಚಿಕ್ಕ ವಯಸ್ಸಿನಲ್ಲಿಯೇ ರಾಜಕೀಯ ಪ್ರಬುದ್ಧತೆಯನ್ನು ಗಳಿಸಿ ಹಳೆ ಮೈಸೂರು ಭಾಗದ ಜನಪ್ರಿಯ ಶಾಸಕರೆಂದು ಗುರುತಿಸಿಕೊಂಡಿರುವುದು ವಿಶೇಷವಾಗಿದೆ.

ಮಾನವ ಪ್ರಾಣಿ ಸಂಘರ್ಷದ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿಕೊಟ್ಟ ಧೀಮಂತ ನಾಯಕ



ಕಾಡು ಪ್ರಾಣಿಗಳ ಉಪಟಳದಿಂದ ನೊಂದು ಬಸವಳಿದಿದ್ದ ಕಾಡಂಚಿನ ಪ್ರದೇಶದ ರೈತರ ಸಮಸ್ಯೆಯನ್ನು ಆಲಿಸಲು ಹೊಸದಾಗಿ ಶಾಸಕರಾಗಿ ಆಯ್ಕೆಯಾದ ನಂತರ ರಾತ್ರಿ ಸಮಯದಲ್ಲಿ ಕಾಡಿನಲ್ಲಿ ರೈತರ ಜೊತೆಗೆ ಅವರ ಜಮೀನುಗಳಲ್ಲಿ ಕಾಲ ಕಳೆಯುವ ಮೂಲಕ ಸ್ವತಹ ಕಾಡುಪ್ರಾಣಿಗಳಿಂದ ರೈತರಿಗೆ ಆಗುತ್ತಿರುವ ತೊಂದರೆಯನ್ನು ಅರಿತುಕೊಂಡು, ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ ರವರನ್ನು ಕಾಡಂಚಿನ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಸಮಸ್ಯೆಯನ್ನು ತೋರಿಸಿ ಮಾನವ ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸುವಂತೆ ಮನವಿ ಮಾಡಿದ್ದರು ಪರಿಣಾಮವಾಗಿ 13 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೆಡ್ ಅಳವಡಿಕೆ ಕಾಮಗಾರಿಯನ್ನು ನಡೆಸಲಾಗಿತ್ತು ನಂತರ ಹೊಸದಾಗಿ 4 ಕೋಟಿ ವೆಚ್ಚದಲ್ಲಿ ಮೆಸ್ ಅಳವಡಿಕೆ ಮಾಡಿದ್ದಾರೆ ಅಲ್ಲದೆ ಓಂಕಾರ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಪ್ರದೇಶಗಳಿಗೆ ಸುಮಾರು 8 ಕಿ.ಮೀ ಗೆ ಹೊಸದಾಗಿ ರೈಲ್ವೆ ಬ್ಯಾರಿಕೆಡ್ ಮತ್ತು ಚೈನ್ ಲಿಂಕ್ ಮೆಸ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದ್ದು ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ, ಈ ಕಾಮಗಾರಿಗಳ ಮೂಲಕ ಮಾನವ ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರವನ್ನು ದೊರಕಿಸಿಕೊಟ್ಟು ಜನಪರ ಕಾಳಜಿಯ ಭರವಸೆಯ ಅಭಿವೃದ್ಧಿಯ ಹರಿಕಾರರೆಂದು ಗುರುತಿಸಿಕೊಂಡಿದ್ದಾರೆ.

ಗ್ಯಾರಂಟಿಗಳಿಂದೇನು ಅಭಿವೃದ್ಧಿ ಕುಂಠಿತವಾಗಿಲ್ಲ

●ರಂಗಸ್ವಾಮಿ

ಗ್ಯಾರಂಟಿ ಯೋಜನೆಗಳ ಜೊತೆ ಜೊತೆಗೆ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳು, ನಿಯೋಜಿತ ಅಭಿವೃದ್ಧಿ ಕಾರ್ಯಕ್ರಮಗಳು ಹಂತ ಹಂತವಾಗಿ ಸಾಕಾರಗೊಳ್ಳುತ್ತಿದ್ದು, ಜನಪ್ರತಿನಿಧಿಯಾಗಿ ಕಳೆದ ಮೂರು ವರ್ಷಗಳು ಜನರೊಂದಿಗೆ ಬೆರೆತ ನೂರು ಅನುಭವ ನೀಡಿದೆ. ಹಿರಿಯರ ದಾರಿಯಲ್ಲಿ ಸಾಗುತ್ತಿದ್ದೇನೆ ಎಂಬ ಆಶಾ ಭಾವ ಮೂಡಿದೆ...

ಇದು ನಂಜನಗೂಡು ವಿಧಾನಸಭಾ ಮೀಸಲು ಕ್ಷೇತ್ರದಿಂದ ಮೊಟ್ಟ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ವಕೀಲ ಹಾಗೂ ಯುವ ಶಾಸಕ ದರ್ಶನ್ ಧ್ರುವನಾರಾಯಣ್ ಅವರ ಮಾತುಗಳು. 'ಮೈಸೂರು ಮಿತ್ರ' ನೊಂದಿಗೆ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಸಾಧಕ–ಬಾಧಕಗಳು, ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕಾಮಗಾರಿಗಳು, ಹೊಸ ಯೋಜನೆಗಳ ಕುರಿತು ಅವರ ಪ್ರತಿಕ್ರಿಯೆ.

ಪಂಚ ಗ್ಯಾರಂಟಿ ಜೊತೆಗೆ ಅಭಿವೃದ್ಧಿಗೂ ರಾಜ್ಯ ಸರ್ಕಾರ ಸಾಕಷ್ಟು ಅನುದಾನ ನೀಡಿದೆ. ಮಹತ್ವದ ಪಂಚ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದ ಜೊತೆಗೆ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಸುಮಾರು 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಂತಹ ಹಲವು ರಸ್ತೆಗಳ ಅಭಿವೃದ್ಧಿಯಾಗಿದೆ. ರಾಜೀವ್ ರಸ್ತೆ, ದೇವರಸನಹಳ್ಳಿ ರಸ್ತೆ, ಹುರ ರಸ್ತೆ, ದುಗ್ಗಳ್ಳಿ ರಸ್ತೆ ಸೇರಿದಂತೆ ಅನೇಕ ಪ್ರಮುಖ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ನಂಜನಗೂಡು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿರುವುದರಿಂದ ಉತ್ತಮ ಕೆಲಸಗಳನ್ನು ಮಾಡಲು ಸಾಧ್ಯವಾಗಿದೆ. ಕಳೆದ ಬಾರಿ ನೀಡಿದ್ದ 25 ಕೋಟಿ ರೂ. ಅನುದಾನವನ್ನು ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ವಿನಿಯೋಗಿಸಲಾಗಿದೆ. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿಯಲ್ಲಿ 10 ಕೋಟಿ ರೂ.ಗೂ ಹೆಚ್ಚು ಅನುದಾನ ಬಂದಿದೆ. ಆ ಹಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿರುವ ಬೀದಿಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿವೆ.

ಡಾ.ಬಿ.ಆರ್. ಅಂಬೇಡ್ಕರ್ ಭವನಗಳ ಅಭಿವೃದ್ಧಿಗೆ ಸರ್ಕಾರ ಸುಮಾರು 7.50 ಕೋಟಿ ಹಣ ನೀಡಿದೆ. ನೀರಾವರಿ ಇಲಾಖೆಯಿಂದ 30 ಕೋಟಿ ರೂ.ಗಳ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಅವುಗಳು ಟೆಂಡರ್ ಹಂತದಲ್ಲಿವೆ. ಐದು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹುರಾ ಏತ ನೀರಾವರಿ ಯೋಜನೆಯಡಿ 28 ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಮುಂದಿನ ತಿಂಗಳು ಆರಂಭವಾಗಲಿದೆ. ಸುಮಾರು 80 ಕೋಟಿ ರೂ. ವೆಚ್ಚದಲ್ಲಿ ಬದನವಾಳು ಏತ ನೀರಾವರಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ನರಸಾಂಬುದಿ ಕೆರೆ ತುಂಬಿಸುವ ಯೋಜನೆಗೆ ಟೆಂಡರ್ ಆಗಿದ್ದು, ಅತೀ ಶೀಘ್ರದಲ್ಲೇ ಗುದ್ದಲಿಪೂಜೆ ನೆರವೇರಿಸಲಾಗುವುದು.

> ನಂಜನಗೂಡು ಟೌನ್‌ನಲ್ಲಿ ರೆವಿನ್ಯೂ ಬಡಾವಣೆಗಳು ಸಾಕಷ್ಟಿರುವುದರಿಂದ ಅಲ್ಲಿ ರಸ್ತೆ, ಚರಂಡಿ ಸೇರಿದಂತೆ ಸಮರ್ಪಕ ಮೂಲ ಸೌಲಭ್ಯ ಕಲ್ಪಿಸಬೇಕಿದೆ. ಸದ್ಯಕ್ಕೆ 30 ಕೋಟಿ ರೂ. ಅಂದಾಜು ಮೊತ್ತದಲ್ಲಿ ಯುಜಿಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಟೆಂಡರ್ ಹಂತದಲ್ಲಿದೆ. ಕ್ಷೇತ್ರದಲ್ಲಿ ಆಗಬೇಕಿರುವ ಸಾಕಷ್ಟು ಕೆಲಸಗಳಿಗೆ ಸರ್ಕಾರ ಇದೇ ರೀತಿ ನೆರವು ನೀಡುವ ವಿಶ್ವಾಸವಿದೆ.
>
> – ದರ್ಶನ್ ಧ್ರುವನಾರಾಯಣ್

ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದ ಅಭಿವೃದ್ಧಿಗೆ 40 ಕೋಟಿ ರೂ. ಅನುದಾನ ನೀಡಲು ಸಚಿವ ಸಂಪುಟ ನಿರ್ಧಾರ ಕೈಗೊಂಡಿದ್ದು, ಮೊದಲ ಹಂತದಲ್ಲಿ ಸುಮಾರು 20 ಕೋಟಿ ರೂ. ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗುತ್ತಿದೆ. ಹೀಗೆ ಚುನಾವಣೆ ವೇಳೆ ಜನರಿಗೆ ನೀಡಿದ್ದ ಭರವಸೆಯಂತೆ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳು ಸಾಗುತ್ತಿರುವ ಬಗ್ಗೆ ತೃಪ್ತಿ ಇದೆ.

ಅಭಿವೃದ್ಧಿಯಲ್ಲಿ ಹಿನ್ನಡೆಯಾಗಿಲ್ಲ: ಪಂಚ ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿವೃದ್ಧಿಯಲ್ಲಿ ಹಿನ್ನಡೆಯಾಗಿದೆ. ಕ್ಷೇತ್ರಗಳಿಗೆ ಅನುದಾನ ನೀಡುತ್ತಿಲ್ಲ ಎಂಬುದೆಲ್ಲಾ ಸತ್ಯಕ್ಕೆ ದೂರವಾದ ಮಾತುಗಳು. ನಂಜನಗೂಡು ಕ್ಷೇತ್ರದ ಅಭಿವೃದ್ಧಿ ನಿಟ್ಟಿನಲ್ಲಿ ಯಾವುದೇ ಜನಪರ ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡರು ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ದೊರೆಯುತ್ತಿದೆ. ಕ್ಷೇತ್ರದ ಜನರ ಅಪೇಕ್ಷೆಯಂತೆ ಕೆಲಸ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು ನಮ್ಮೂರ ಆದರ್ಶಪ್ರಾಯರು ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ನಮ್ಮ 'ಮೈಸೂರಿನ ಅಸಾಮಾನ್ಯರು' ಮೊದಲ ಲೇಖನ ಪ್ರಕಟವಾದ ಕೂಡಲೇ ಕೆಲವು ಪ್ರಕಾಶಕರು ಆ 50 ಲೇಖನಗಳನ್ನು ಪುಸ್ತಕ ರೂಪದಲ್ಲಿ ತರಲು ಅನುಮತಿ ಕೋರಿದರು. ಬಹಳ ಮಂದಿ ಓದುಗರು ಇದೇ ಸಲಹೆ ಮಾಡಿದರು. ಈಗ ಅದು 'ಮೈಸೂರಿನ ಅಸಾಮಾನ್ಯರು' ಹೆಸರಿನಲ್ಲಿ ಹೊರಬಂದಿದೆ. 18ನೆಯ ಶತಮಾನದಿಂದೀಚೆಗೆ ಮೈಸೂರಿನಲ್ಲಿ ವಿಶೇಷವಾಗಿ ಸೇವೆ ಸಲ್ಲಿಸಿ ಇಂದು ಜನನೆನಪಿನಿಂದ ಮರೆಯಾಗಿರುವ ಈ 50 ಗಣ್ಯರು ಹೆಚ್ಚಿನ ವಿವರ ಮತ್ತು ಛಾಯಾಚಿತ್ರಗಳಿಂದ ಪುಸ್ತಕದಲ್ಲಿ ಉಳಿದುಬಂದಿರುವುದು ನನಗಂತೂ ತುಂಬಾ ಸಂತೋಷ, ತೃಪ್ತಿಯ ಮಾತು. ಈಗಿನಿಂದ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗುತ್ತಿರುವುದು ಶುಭಾರಂಭವೇ ಹೌದು.

ಮಹಾ ಮಹೋಪಾಧ್ಯಾಯ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685



ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು



ವಿರೂಪಾಕ್ಷ ಶಾಸ್ತ್ರಿಗಳ ಸಮಾಧಿ ಸ್ಥಳ.



> ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೂ ವಿರೂಪಾಕ್ಷ ಶಾಸ್ತ್ರಿಗಳಿಗೂ ಅನ್ಯೋನ್ಯ ಬಾಂಧವ್ಯವಿತ್ತು. ಅವರನ್ನು ಆಸ್ಥಾನ ವಿದ್ವಾಂಸರಾಗಿ ನೇಮಿಸಿ ಕೊಂಡು ಮಹಾರಾಜರು ಅವರ ವಿದ್ವತ್ತಿನ ಪ್ರಯೋಜನ ಪಡೆದುಕೊಳ್ಳುತ್ತಿದ್ದರು. ಅವರಿಗೆ 'ವಿದ್ಯಾನಿಧಿ' ಬಿರುದನ್ನು ಕೊಟ್ಟು ಗೌರವಿಸಿದ್ದರು. ಭಾರತ ಸರ್ಕಾರ 'ಮಹಾ ಮಹೋಪಾಧ್ಯಾಯ' ಬಿರುದನ್ನೂ ನೀಡಿತ್ತು. ಪಂಡಿತ ಮದನಮೋಹನ ಮಾಳವೀಯ ಅವರು ವಿರೂಪಾಕ್ಷಶಾಸ್ತ್ರಿಗಳನ್ನು ಮೇರುಮಟ್ಟದ ವಿದ್ವಾಂಸ ಎಂದು ಪ್ರಶಂಸಿಸಿದ್ದರು. ಶಾಸ್ತ್ರಿಗಳು ಕಾಶಿಗೆ ಹೋಗಿದ್ದಾಗ ಅವರಿಗೆ 'ನ್ಯಾಯ ಪಂಚಾನನ' ಬಿರುದನ್ನು ನೀಡಿ ಗೌರವಿಸಲಾಯಿತು.

ಮೈಸೂರಿನ ಮಹಾರಾಜರ ಕಾಲದಲ್ಲಿ ಅವರ ರಾಜಧಾನಿ ಹಲವು ಮಹಾಮಹಿಮರಿಗೆ ಆಶ್ರಯ ನೀಡಿತ್ತು. ಅವರು ವೇದ-ವೇದಾಂತಗಳಲ್ಲಿ ಪಾರಂಗತರಾಗಿ ಮಹಾನ್ ವಿದ್ವಾಂಸರಾಗಿದ್ದರು. ಕೆಲವರು ಸನ್ಯಾಸ ಸ್ವೀಕಾರ ಮಾಡಿ ಆತ್ಮ ತೃಪ್ತಿ ಕಂಡುಕೊಂಡರು. ಹಲವಾರು ಶಿಷ್ಯರಿಗೆ ಮಾರ್ಗದರ್ಶನ ಮಾಡಿ ವೇದ-ಉಪನಿಷತ್ತುಗಳಲ್ಲಿನ ಅಂತರ್ಗತ ಸಾರವನ್ನು ಮನದಟ್ಟು ಮಾಡಿಕೊಟ್ಟು ಕೃತಾರ್ಥರನ್ನಾಗಿ ಮಾಡಿದರು. ಅಂತಹವರ ಒಂದಿಬ್ಬರ ಸ್ಮಾರಕಗಳು ನಗರದಲ್ಲಿಯೇ ಇದ್ದರೂ ಅವರ ಕೊಡುಗೆ, ಮಹಿಮೆಯನ್ನು ಇಂದು ಮರೆತಿದ್ದೇವೆ.

ಅಂತಹ ಪೂಜ್ಯರಲ್ಲಿ ಒಬ್ಬರು **ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು**. ಮುಂದೆ ಕೂಡಲಿ ಮಠದ ಯತಿಗಳಾದವರು. 1873ರಲ್ಲಿ ಜನಿಸಿದ ಇವರು ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ದಿವಾನ್ ಶೇಷಾದ್ರಿ ಅಯ್ಯರ್ ಅವರ 'ಕುಮಾರ ಭವನ'ದಲ್ಲಿ ಪುರಾಣ ವಾಚನ ಮಾಡುತ್ತಿದ್ದರು. ಪುರಾಣ ಕೇಳುತ್ತಿದ್ದ ದಿವಾನರು ವಿರೂಪಾಕ್ಷ ಶಾಸ್ತ್ರಿಗಳ ವಿದ್ವತ್ ಗಮನಿಸಿ ಅಂಥಹ ಒಳ್ಳೆಯ ವಿದ್ವಾಂಸರು ಜಗದ್ಗುರುಗಳ ಪ್ರೋತ್ಸಾಹಕ್ಕೆ ಅರ್ಹರೆಂದು ಶಿಫಾರಸು ಮಾಡಿ ಶೃಂಗೇರಿ ಶ್ರೀಗಳಿಗೆ ಪತ್ರ ಬರೆದರು. ದಿವಾನರ ಶಿಫಾರಸ್ಸಿನಿಂದಾಗಿ ವಿರೂಪಾಕ್ಷ ಶಾಸ್ತ್ರಿಗಳು 33ನೇ ಜಗದ್ಗುರುಗಳಾದ ಪ್ರಸಿದ್ಧ ಶ್ರೀ ಸಚ್ಚಿದಾನಂದ ಶಿವಾನುಭವ ನೃಸಿಂಹ ಭಾರತೀ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು. ಸ್ವಾಮಿಗಳ ಸನ್ನಿಧಿಯಲ್ಲಿ ವೇದಾಂತ ಶಾಸ್ತ್ರಗಳನ್ನು ಕಲಿಯಲಾರಂಭಿಸಿ ದರು. ಅದುವರೆಗೆ ತರ್ಕಶಾಸ್ತ್ರದಲ್ಲಿ ನಿಷ್ಣಾತರಾಗಿ 'ತರ್ಕ ಪಂಚಾನನ' ಎಂದು ಹೆಸರು ಪಡೆದಿದ್ದ ಅವರು ಈಗ ವೇದಾಂತ ಶಾಸ್ತ್ರದಲ್ಲಿಯೂ ಆಸಕ್ತಿ ಹೊಂದು ವಂತಾಯಿತು.. ಆ ಮಹಾಮಹಿಮರ ಮಾರ್ಗದರ್ಶನದಲ್ಲಿ ವೇದಾಂತವನ್ನು ಚೆನ್ನಾಗಿ ಅಭ್ಯಾಸ ಮಾಡಿ ವೇದಾಂತಶಾಸ್ತ್ರ ಪಾರಂಗತರಾದರು. ನಂತರ 1920ರಲ್ಲಿ ಬೆಂಗಳೂರಿನಲ್ಲಿ ವಾಸವಿದ್ದು ಅಲ್ಲಿನ **ಶಂಕರ** ಮಠದಲ್ಲಿ ಅದ್ವೈತ ವೇದಾಂತ ಮತ್ತು ತರ್ಕಶಾಸ್ತ್ರಗಳನ್ನು ಶಿಷ್ಯರಿಗೆ ಬೋಧಿಸುತ್ತಿದ್ದರು. ಅವರ ಶಿಷ್ಯರ ಪೈಕಿ ಅನೇಕರು ನಂತರ ವೇದಾಂತದ ವಿಚಾರದಲ್ಲಿ ಗಣ್ಯರಾದರು.

ವಿರೂಪಾಕ್ಷ ಶಾಸ್ತ್ರಿಗಳು ಮಹಾರಾಜ ಸಂಸ್ಕೃತ ಪಾಠ ಶಾಲೆಯಲ್ಲಿ ಅದ್ವೈತ ವೇದಾಂತದ ಪ್ರಾಧ್ಯಾಪಕರಾಗಿದ್ದರು. ಅವರ ಬೋಧನಾ ಕ್ರಮ ಸಂಪೂರ್ಣವಾಗಿ ಸಾಂಪ್ರದಾಯಿಕ ಕ್ರಮಗಳನ್ನು ಅನುಸರಿಸಿ ಹೇಳಿಕೊಡುವುದಾಗಿತ್ತು. ಶಿಷ್ಯರು ವೇದಾಂತ ಮತ್ತು ತರ್ಕ ವಿಚಾರಗಳ ಸಮಷ್ಟಿ ಅಧ್ಯಯನ ಮಾಡುವಂತೆ ತಿಳಿಸಿಕೊಡುತ್ತಿದ್ದರು. ವೇದಾಂತ ವಿಚಾರಗಳನ್ನು ಹೇಳಿ ಕೊಡುವಾಗ ಸಾಂಖ್ಯ ಮತ್ತು ವೈಶೇಷಿಕ ಲಕ್ಷಣಗಳನ್ನೂ ತಿಳಿಸಿಕೊಡುತ್ತಿದ್ದರು. ಗುರುಪರಂಪರೆಗೆ ಮಹತ್ವ ನೀಡುತ್ತಿದ್ದರು. ಗುರುವಂದನೆಯ ನಂತರವೇ ಪಾಠ, ಬೋಧನೆ. ಶಿಷ್ಯರು ಅದನ್ನು ತಪ್ಪದೆ ಅನುಸರಿಸುವಂತೆ ನೋಡಿಕೊಳ್ಳುತ್ತಿದ್ದರು. ಅವರು ಶಂಕರಾದ್ವೈತಕ್ಕೆ ಯಾವುದೇ ಅಪಚಾರವಾಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಹಾಗೆ ಅಪಚಾರವಾಗುವುದನ್ನು ಅವರು ಸಹಿಸದ ಖಂಡಿತವಾದಿಗಳಾಗಿದ್ದರು. ಅವರ ಪಾಂಡಿತ್ಯಪೂರ್ಣ ಪಾಠವನ್ನು ಕೇಳಲು ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು.

ಹಿರಿಯರಾದ ಡಿ.ವಿ.ಗುಂಡಪ್ಪನವರು ತಮ್ಮ ಜ್ಞಾಪಕ ಚಿತ್ರಶಾಲೆಯಲ್ಲಿ ವಿರೂಪಾಕ್ಷ ಶಾಸ್ತ್ರಿಗಳ ಸಂಪ್ರದಾಯ ಶ್ರದ್ಧೆ ಮತ್ತು ವ್ಯಾಸಂಗ ನಿಷ್ಠೆಯನ್ನು ಸುದೀರ್ಘವಾಗಿ ವಿವರಿಸಿದ್ದಾರೆ. ಶಾಸ್ತ್ರಿಗಳು ಪಾಠಪ್ರವಚನ ವಿಷಯದಲ್ಲಿ ಪರಮ ಪ್ರಾಮಾಣಿಕರು ಮತ್ತು ಸದಾಚಾರ ಸಂಪನ್ನರು. ಶಾಸ್ತ್ರಬೋಧನೆಯಲ್ಲಿ ಅವರ ಕ್ರಮವು ಪರಿಷ್ಕಾರವಾದದ್ದು. ಅಚ್ಚಾದ ಪುಸ್ತಕದಲ್ಲಿ ಅವರಿಗೆ ಆದರವಿಲ್ಲದಿದ್ದರೂ, ಪುಸ್ತಕದ ವಿಷಯದಲ್ಲಿ ದೊಡ್ಡ ಗೌರವ. ಪುಸ್ತಕವನ್ನು ನೆಲದ ಮೇಲೆ ಇಡುವಂತಿಲ್ಲ. ನೆಲದ ಮೇಲೆ ಇಟ್ಟರೆ ಪಾಠ ನಿಂತು ಹೋಗುತ್ತಿತ್ತು. ಪತ್ನಿ ಬೇಗನೇ ಕಾಲವಾಗಿದ್ದು, ಮನೆಯಲ್ಲಿ ಯಾವಾಗಲೂ ಇಬ್ಬರು-ಮೂವರು ವಿದ್ಯಾರ್ಥಿಗಳಿರುತ್ತಿದ್ದರು. ಸ್ನಾನ, ಭೋಜನ, ಪೂಜಾ ಕಾಲದಲ್ಲಿಯೂ ಪಾಠ ನಡೆಯುತ್ತಲೇ ಇತ್ತು. ಅವರು ಅಧ್ಯಯನಕ್ಕೆ ಕುಳಿತಾಗ ಘನಪಾಠಿಗಳೆಂದೇ ತೋರುತ್ತಿತ್ತು. ಅಷ್ಟು ಶುದ್ಧವಾಗಿತ್ತು ಅವರ ಕಂಠಸ್ವರ ಮತ್ತು ಉಚ್ಚಾರ.

ತಾವಾದರೋ ಸದಾ ಕಾಲ ಆಧ್ಯಾತ್ಮಿಕ ಅಭ್ಯಾಸಗಳಲ್ಲಿ, ಅಧ್ಯಯನಗಳಲ್ಲಿ ನಿರತರಾಗಿರುತ್ತಿದ್ದರು. ಧರ್ಮನಿಷ್ಠರಾಗಿ ಬದುಕು ನಡೆಸುತ್ತಿದ್ದರು. ಎಷ್ಟು ಕಷ್ಟ ಬಂದರೂ ಪ್ರಾಮಾಣಿಕತೆಗೆ ಕುಂದುಂಟು ಮಾಡದೆ ಸತ್ಯದ ಹಾದಿಯನ್ನು ದಿನ ನಿತ್ಯದ ಬದುಕಿನಲ್ಲಿ ಧರ್ಮವನ್ನಾಗಿ ಪರಿಪಾಲಿಸುತ್ತಿದ್ದರು. ಬಡತನ, ಕಷ್ಟ ಕಾರ್ಪಣ್ಯಗಳ ಬದುಕನ್ನು ಕಂಡಿದ್ದರು. ರೋಗ ವಿಯೋಗಗಳನ್ನು ಕಂಡಿದ್ದರು. ಇತರರ ಬಗ್ಗೆ ಹೆಚ್ಚಿನ ಅನುಕಂಪ ಹೊಂದಿರುತ್ತಿದ್ದರು. ಉದಾತ್ತ ಗುಣಗಳು ಸಮ್ಮಿಳನಗೊಂಡು ಆದರ್ಶ ಪುರುಷರಾಗಿದ್ದರು.

ಅವರ ದಿನನಿತ್ಯದ ಬದುಕೂ ಅಷ್ಟೇ ಧರ್ಮಪರಿಪಾಲನೆಯದಾಗಿತ್ತು. ಆ ಕ್ರಮದಲ್ಲಿ ಯಾವುದೇ ಲೋಪ ಉಂಟಾಗದಂತೆ ನಿತ್ಯದ ಬದುಕನ್ನು ಅನುಸರಿಸುತ್ತಿದ್ದರು. ಮೂರು ಹೊತ್ತು ದೇವರ ಪೂಜೆ, ಭಾನುವಾರದ ದಿನ ಸೂರ್ಯ ನಮಸ್ಕಾರ, ಸೋಮವಾರ ಏಕಾದಶವಾರ ರುದ್ರಾಭಿಷೇಕ ಹೀಗೆ ಕ್ರಮಬದ್ಧವಾಗಿ ಸಾಗುತ್ತಿತ್ತು. ಪ್ರತಿ ವರ್ಷ ತಪ್ಪದೆ ಶೃಂಗೇರಿಗೆ ಮತ್ತು ಕಾಲಡಿಗೆ ಹೋಗಿ ಬರುತ್ತಿದ್ದರು. ಅರಸೀಕೆರೆಯಲ್ಲಿ ರೈಲು ನಿಂತಾಗ ಶಾಸ್ತ್ರಿಗಳು ರೈಲಿನಿಂದ ಇಳಿದು, ಬಾವಿಯ ಹತ್ತಿರ ಹೋಗುವ ಹೊತ್ತಿಗೆ ಸರಿಯಾಗಿ ಅಲ್ಲಿನ ನೌಕರ ಅವರಿಗೆ ಬೇಕಾದ ಬಿಂದಿಗೆ, ಹಗ್ಗ, ತಾಮ್ರದ ಚೊಂಬು, ಸ್ವಲ್ಪ ಹುಣಸೇಹಣ್ಣು ಮತ್ತು ಮೃತ್ತಿಕೆಯನ್ನು ಅಲ್ಲಿ ಸಿದ್ಧ ಮಾಡಿಡುತ್ತಿದ್ದ. ವಿರೂಪಾಕ್ಷ ಶಾಸ್ತ್ರಿಗಳು ಬಿಂದಿಗೆಯಲ್ಲಿ ನೀರು ಸೇದಿ, ಪಾತ್ರೆಗಳನ್ನು ತೊಳೆದು, ಮತ್ತೆ ನೀರು ಸೇದಿ ಸಂಧ್ಯಾವಂದನೆ ಮಾಡುತ್ತಿದ್ದರು. ಅರ್ಘ್ಯವನ್ನು ಅರ್ಪಿಸಿದ ನಂತರ ಹಿಂತಿರುಗಿ ಬಂದು ರೈಲನ್ನು ಹತ್ತಿ ಕುಳಿತುಕೊಳ್ಳುತ್ತಿದ್ದರು. ಇಂತಹ ನಿಷ್ಠಾವಂತ ಬದುಕು ಅವರದು

ವಿರೂಪಾಕ್ಷ ಶಾಸ್ತ್ರಿಗಳು 'ಮೀಮಾಂಸಕಂಠೀರವ' ವೈದ್ಯನಾಥ ಶಾಸ್ತ್ರಿ ಮುಂತಾದ ಪ್ರಕಾಂಡ ಪಂಡಿತರೊಂದಿಗೆ ಅನ್ಯೋನ್ಯ ಸಂಪರ್ಕ ಹೊಂದಿದ್ದರು. ವೈದ್ಯನಾಥ ಶಾಸ್ತ್ರಿಗಳು, ವಿರೂಪಾಕ್ಷ ಶಾಸ್ತ್ರಿಗಳ ಜೊತೆ ಶಂಕರ ಮಠದಲ್ಲಿ ಪೂರ್ವ ಮೀಮಾಂಸವನ್ನು ಶಿಷ್ಯರಿಗೆ ತಿಳಿಸಿ ಕೊಡುತ್ತಿದ್ದರು. ಇಬ್ಬರೂ ಸಾಹಿತ್ಯ, ತರ್ಕ, ವ್ಯಾಕರಣ ಮತ್ತು ವೇದದಲ್ಲಿ ಉದ್ದಾಮ ಸಾಧಕರು. ಒಬ್ಬರು ಕಾಂಚನಗಂಗ ಪರ್ವತ, ಇನ್ನೊಬ್ಬರು ಗೌರೀ ಶಂಕರ ಪರ್ವತ ಎನ್ನುತ್ತಾರೆ ಡಿ. ವಿ. ಜಿ. ಅವರು.

ವಿರೂಪಾಕ್ಷ ಶಾಸ್ತ್ರಿಗಳಲ್ಲಿ ವೇದಾಂತ ಭಾಷ್ಯವನ್ನು ಕಲಿಯಲು ಪ್ರಾರಂಭಿಸಿದ್ದನ್ನು ಡಿ.ವಿ.ಜಿ. ಅವರು ನೆನೆಯುತ್ತಾ ಕೆಲವು ಸ್ವಾರಸ್ಯ ಪ್ರಸಂಗಗಳನ್ನು ವಿವರಿಸಿದ್ದಾರೆ. ಅವು ವಿರೂಪಾಕ್ಷ ಶಾಸ್ತ್ರಿಗಳ ಬೋಧನಾ ಕ್ರಮ, ಪಾಂಡಿತ್ಯಕ್ಕೆ ನಿದರ್ಶನವಾಗಿವೆ. ವಿರೂಪಾಕ್ಷ ಶಾಸ್ತ್ರಿಗಳು ತರ್ಕಶಾಸ್ತ್ರದಲ್ಲಿ ಉದ್ದಾಮ ಪಂಡಿತರೆಂದು ದೇಶವಿದೇಶಗಳಲ್ಲೂ ಪ್ರಖ್ಯಾತಿ ಪಡೆದಿದ್ದರು. ತಾರ್ಕಿಕರೆಂದೇ ಪ್ರಸಿದ್ಧರಾಗಿ **'ತರ್ಕಪಂಚಾನನ'** ಬಿರುದು ಪಡೆದಿದ್ದರು. ಜಗದ್ಗುರುಗಳ ಪ್ರಭಾವದಿಂದ ತರ್ಕಕ್ಕಿದ್ದ ಸ್ಥಾನ ವೇದಾಂತಕ್ಕೆ ದೊರೆತು, ಎರಡರಲ್ಲೂ ಮಹಾಪಂಡಿತರಾಗಿದ್ದರು.

ಡಿ.ವಿ.ಜಿ. ಅವರು ವಿವರಿಸಿರುವ ಪ್ರಸಂಗಗಳಲ್ಲಿ ಒಂದು ಶಾಸ್ತ್ರಿಗಳು ತಾವು ಮಾಡುತ್ತಿದ್ದ ಅಧ್ಯಯನಕ್ಕೆ ಸಂಬಂಧಪಟ್ಟಿದ್ದಾಗಿದೆ. ವಿಷಯ ಸಂಪೂರ್ಣವಾಗಿ ಮನದಟ್ಟಾಗುವಂತೆ ಅವರು ವ್ಯಾಸಂಗ ಮಾಡುತ್ತಿದ್ದರು. ಒಂದು ಪುಟದ ನಂತರ ಇನ್ನೊಂದು ಪುಟದ ವಿಷಯವನ್ನು ಬಾಯಿಂದ ಹೇಳಿಕೊಂಡು ಶತಪಥ ನಡೆಯುತ್ತಿದ್ದಾಗ ಗ್ರಂಥವಾಕ್ಯ ನೆನಪಿಗೆ ಬರದೆ ಹೋದರೆ, ಶಾಸ್ತ್ರಿಗಳು ಬಲಗೈಯಿಂದ ತಮ್ಮ ಮೂಗನ್ನು ಹಿಡಿದುಕೊಂಡು, ಎರಡು ಕೆನ್ನೆಗಳ ಮೇಲೂ ಫಟೀರೆಂದು ಬಡಿದುಕೊಳ್ಳುತ್ತಿದ್ದರು. ಗ್ರಂಥವಾಕ್ಯವು ತಪ್ಪದೆ ಸರಾಗವಾಗಿ ಬಾಯಿಗೆ ಬಂದಾಗ ಶಾಸ್ತ್ರಿಗಳು 'ಎಲಾ ವಾಮನ! ಏನು ವಿದ್ವಾಂಸನಾಗಿಬಿಟ್ಯೋ'! ಎಂದು ತಮ್ಮನ್ನು ತಾವೇ ಪ್ರೋತ್ಸಾಹಿಸಿಕೊಳ್ಳುವರು. ಹಾಗಿಲ್ಲದೆ ಹೋದಾಗ 'ಎಲಾ ವಾಮನ! ಏನು ಮೂರ್ಖ ಹುಟ್ಟಿದೆಯೋ' ಎಂದು ತಮ್ಮನ್ನು ತಾವೇ ದಂಡಿಸಿಕೊಳ್ಳುವರು. ಹೇಗೆ ಮನುಷ್ಯನು ತನ್ನೊಳಗಿನ ಮೌಢ್ಯದಿಂದ ತಾನು ತಾನಲ್ಲದೆ ಬೇರೆ ಯಾರೋ ಎಂಬಂತೆ ನಡೆದುಕೊಳ್ಳುತ್ತಾನೆ ಎಂಬುದನ್ನು ನಿದರ್ಶನ ಪಡಿಸುವುದಕ್ಕಾಗಿ ವೇದಾಂತ ಪಾಠಕಾಲದಲ್ಲಿ ಹೇಳಿದ ಕಥೆ ಇದು ಎನ್ನುತ್ತಾರೆ.

ವಿರೂಪಾಕ್ಷ ಶಾಸ್ತ್ರಿಗಳು ಎಲ್ಲ ವಿಷಯಗಳಲ್ಲೂ ಪ್ರಾಮಾಣಿಕರು, ಆಚಾರ ಪಾಲಕರು ಮತ್ತು ಪರಿಶುದ್ಧ ವೃತ್ತರು. ಅಹಂಕಾರದಿಂದಾಗಲೀ ಮಾತ್ಸರ್ಯ ಕ್ರೋಧಗಳಿಂದಾಗಲೀ ಮಾತನಾಡುವವರಲ್ಲ. ತಮ್ಮ ಅಂತರಂಗದಲ್ಲಿದ್ದ ಸತ್ಯವನ್ನು ನುಡಿಯಬೇಕು. ನಿರ್ಭೀತರಾಗಿ ನುಡಿಯಬೇಕು. ಇದು ಅವರ ಸ್ವಭಾವ. ಸತ್ಯವಚನ ಪ್ರಸಕ್ತಿಯಲ್ಲಿ ಅವರು ಬೇರೆ ಯಾವ ಅಧಿಕಾರಕ್ಕೂ ತಲೆಬಾಗರು. ಇದನ್ನು ಎಲ್ಲರೂ ತಿಳಿದುಕೊಂಡಿದ್ದರಿಂದ ಅವರ ವಿಷಯದಲ್ಲಿ ಯಾರಿಗೂ ಅಸಮಾಧಾನ ಬರುತ್ತಿರಲಿಲ್ಲ. ಎಲ್ಲರೂ ಭಕ್ತಿಗೌರವಗಳನ್ನಿರಿಸಿಕೊಂಡಿದ್ದರು. ಅವರಿಗೆ ಯಾವುದೇ ಗ್ರಂಥಗಳನ್ನು ಬರೆದಿಡಬೇಕೆಂಬ ಅಪೇಕ್ಷೆ ಇದ್ದಂತೆ ಕಂಡುಬರುವುದಿಲ್ಲ. ಇದರಿಂದಾಗಿ ಅವರ ಗ್ರಂಥಗಳು ಯಾವುವೂ ಕಂಡುಬರುವುದಿಲ್ಲ.

ಪೂಜ್ಯ ವಿರೂಪಾಕ್ಷ ಶಾಸ್ತ್ರಿಗಳು 1932ರಲ್ಲಿ ಸನ್ಯಾಸ ಸ್ವೀಕಾರ ಮಾಡಿ ಶಿವಮೊಗ್ಗ ಸಮೀಪದ ಕೂಡಲಿ ಶಂಕರ ಮಠದ ಯತಿಗಳಾದರು. ಶ್ರೀವಿದ್ಯಾಭಿನವ ವಾಲುಕೇಶ್ವರ ಭಾರತೀ ಸ್ವಾಮಿಗಳಾಗಿ 1936ರವರೆಗೆ ಪೀಠಸ್ಥರಾಗಿದ್ದು, ಆ ವರ್ಷದ ಏಪ್ರಿಲ್ 10ನೇ ತಾರೀಖು ಮೈಸೂರಲ್ಲಿ ಮಹಾಸಮಾಧಿ ಪಡೆದರು. ಅವರ ನಂತರ ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು ಪೀಠಕ್ಕೆ ಬಂದರು. ಶ್ರೀವಿರೂಪಾಕ್ಷ ಶಾಸ್ತ್ರಿಗಳ ಸಮಾಧಿ ಸ್ಥಳ ಮಹಾರಾಜ ಸಂಸ್ಕೃತ ಪಾಠ ಶಾಲೆಯ ಪಕ್ಕದ ಜಾಗದಲ್ಲಿದ್ದು, ಈ 'ಗುರು ಸನ್ನಿಧಿ'ಯಲ್ಲಿ ಅವರ ವಂಶಸ್ಥರಿಂದ ಈಗಲೂ ಪೂಜೆ-ವಿಶೇಷ ಪೂಜೆಗಳು ಮುಂದುವರಿಯುತ್ತಿವೆ. ಆದರೆ ಈ ಜಾಗದ ಮಹತ್ವ-ಪಾವಿತ್ರ್ಯತೆ ಬಹಳ ಜನರಿಗೆ ತಿಳಿಯದೆ, ಅಲ್ಲಿಗೆ ಹೋಗುವವರ ಸಂಖ್ಯೆಯೂ ಬೆರಳೆಣಿಕೆಯಷ್ಟು ಮಾತ್ರ ಇದೆ.

ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೂ ವಿರೂಪಾಕ್ಷ ಶಾಸ್ತ್ರಿಗಳಿಗೂ ಅನ್ಯೋನ್ಯ ಬಾಂಧವ್ಯವಿತ್ತು. ಅವರನ್ನು ಆಸ್ಥಾನ ವಿದ್ವಾಂಸರಾಗಿ ನೇಮಿಸಿಕೊಂಡು ಮಹಾರಾಜರು ಅವರ ವಿದ್ವತ್ತಿನ ಪ್ರಯೋಜನ ಪಡೆದುಕೊಳ್ಳುತ್ತಿದ್ದರು. ಅವರಿಗೆ **'ವಿದ್ಯಾನಿಧಿ'** ಬಿರುದನ್ನು ಕೊಟ್ಟು ಗೌರವಿಸಿದ್ದರು. ಭಾರತ ಸರ್ಕಾರ **'ಮಹಾ ಮಹೋಪಾಧ್ಯಾಯ'** ಬಿರುದನ್ನೂ ನೀಡಿತ್ತು ಪಂಡಿತ ಮದನಮೋಹನ ಮಾಳವೀಯ ಅವರು ವಿರೂಪಾಕ್ಷ ಶಾಸ್ತ್ರಿಗಳನ್ನು ಮೇರುಮಟ್ಟದ ವಿದ್ವಾಂಸ ಎಂದು ಪ್ರಶಂಸಿಸಿದ್ದರು. ಶಾಸ್ತ್ರಿಗಳು ಕಾಶಿಗೆ ಹೋಗಿದ್ದಾಗ ಅವರಿಗೆ **'ನ್ಯಾಯ ಪಂಚಾನನ'** ಬಿರುದನ್ನು ನೀಡಿ ಗೌರವಿಸಲಾಯಿತು. ವಿರೂಪಾಕ್ಷ ಶಾಸ್ತ್ರಿಗಳ ಸಮಾಧಿ ಸ್ಥಳ ಅರಮನೆಯಿಂದ ಕಾಣಬೇಕೆಂಬ ಅಭಿಲಾಷೆಯಿಂದ ಮಹಾರಾಜರು ಅವರ ಸಮಾಧಿ ಸ್ಥಳ ಈಗಿರುವ ಜಾಗದಲ್ಲಿ ಏರ್ಪಡಿಸಿದರಂತೆ.

ಅಪಾರ ಪಾಂಡಿತ್ಯ ಹೊಂದಿದ್ದ ಮಹಾ ಮಹೋಪಾಧ್ಯಾಯ ವಿದ್ಯಾನಿಧಿ ವಿರೂಪಾಕ್ಷ ಶಾಸ್ತ್ರಿಗಳು ಶೃಂಗೇರಿಯ 34ನೇ ಪೀಠಾಧಿಪತಿಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳಿಗೆ ಗುರುಗಳಾಗಿದ್ದರು. ಸಾಮಾನ್ಯ ವಿದ್ಯಾರ್ಥಿಗಳು ಆರೆಂಟು ವರ್ಷಗಳು ಸತತ ಅಭ್ಯಾಸ ಮಾಡಿದರೂ ಜೀರ್ಣಿಸಿಕೊಳ್ಳಲಾಗದ ವೇದಾಂತ ಪಾಠವನ್ನು ಶ್ರೀಚಂದ್ರಶೇಖರ ಭಾರತೀ ಸ್ವಾಮಿಗಳಿಗೆ ಎರಡೇ ವರ್ಷಗಳಲ್ಲಿ ಬೋಧಿಸಿ ಮನದಟ್ಟು ಮಾಡಿಕೊಟ್ಟರಂತೆ. ಅವರದು ಅಂತಹ ಪಾಂಡಿತ್ಯ. ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು ಮಹಾಮಹೋಪಾಧ್ಯಾಯರು, ಸನ್ಯಾಸಾನಂತರದ ಶ್ರೀವಿದ್ಯಾಭಿನವ ವಾಲುಕೇಶ್ವರ ಭಾರತೀ ಸ್ವಾಮಿಗಳು.



ನಗೆ ಬುಗ್ಗೆ

ಪೂಜಾರಿ: ಮಂಗಳಾರತಿ ಯಾರ ಹೆಸರಿಗೆ ಮಾಡಲಿ?
ಗೋಪಿ: ನನ್ನ ಹೆಂಡತಿ ಹೆಸರಿಗೆ ಮಾಡಿ.
ಪೂಜಾರಿ : ನಿಮ್ಮ ಹೆಸರಿಗೆ ಬೇಡವಾ ಸರ್?
ಗೋಪಿ: ಬೇಡ, ಅದು ಈಗಾಗಲೇ ಮನೆಯಲ್ಲೇ ಆಗಿದೆ

ಹೆಂಡತಿ: ರೀ, ಚಪಾತಿ ಜೊತೆ ಜೇನು ತುಪ್ಪ ಕೊಡ್ಲಾ?
ಗಂಡ : ಛೀ ಬೇಡ ಕಣೆ, ಅದು ಜೇನು ಹುಳದ ಬಾಯಿಂದ ಬರುತ್ತೆ... ನಾನು ಬಾಯಿಯಿಂದ ಬಂದಿರೋದನ್ನ ತಿನ್ನಲ್ಲ
ಹೆಂಡತಿ: ಹಾಗಾದರೆ ಕೋಳಿ ಮೊಟ್ಟೆ ಕೊಡ್ಲಾ..?!

ಹುಡುಗಿ: ಯಾಕೋ ಹಾಗ್ ನೋಡ್ತಾ ಇದಿಯಾ? ನಿನಗೆ ಅಕ್ಕ ತಂಗಿ ಯಾರು ಇಲ್ವಾ?
ಹುಡುಗ: ಇರೋದಕ್ಕೆ ನೋಡ್ತಾ ಇರೋದು.
ಹುಡುಗಿ: ಯಾಕೆ?
ಹುಡುಗ: ನನ್ ತಂಗಿಗೆ ಅತ್ತಿಗೆ ಬೇಕಂತೆ ಅದ್ಕೆ

ಗಂಡ: ನಾನು ತಪ್ಪಿಸಿಕೊಂಡ್ರೆ ನೀನೇನು ಮಾಡ್ತಿಯಾ??
ಹೆಂಡತಿ: ಪೇಪರ್‌ನಲ್ಲಿ ಜಾಹೀರಾತು ಕೊಡ್ತಿನಿ
ಗಂಡ: ವ್ಹಾವ್... ಏನಂತ ಕೊಡ್ತಿಯಾ?
ಹೆಂಡತಿ: ಗಂಡ ಬೇಕಾಗಿದ್ದಾನೆ..!


ಒಬ್ಬ ಕುಡುಕ ಇನ್ನೊಬ್ಬ ಕುಡುಕನಿಗೆ ಕೇಳುತ್ತಾನೆ, ಮೇಲಿರೋದು ಸೂರ್ಯನಾ? ಅಥವಾ ಚಂದ್ರನಾ..?
ಇನ್ನೊಬ್ಬ ಕುಡುಕ: ಗೊತ್ತಿಲ್ಲ ಅಣ್ಣಾ, ನಾನು ಈ ಊರಿಗೆ ಹೊಸಬ

ಗುಂಡ: ನನಗೆ ಹದಿನೆಂಟು ಮಕ್ಕಳು
ತಿಮ್ಮ: ಫ್ಯಾಮಿಲಿ ಪ್ಲಾನಿಂಗ್ ಅಂತ ನಿಮ್ಮ ಮನೆಗೆ ಬಂದು ಯಾರೂ ವಿಚಾರಿಸಿಲ್ವಾ..?
ಗುಂಡ: ಒಮ್ಮೆ ಬಂದಿದ್ರು... 'ಅಂಗನವಾಡಿ' ಅನ್ಕೊಂಡು ವಾಪಸ್ಸು ಹೋದ್ರು

ಹೆಂಡತಿ: ರೀ... ನಾನು ಸಾಯ್ತೀನಿ.
ಗಂಡ: ತಗೋ ಡೈರಿ ಮಿಲ್ಕ್
ಹೆಂಡತಿ: ಡೈರಿ ಮಿಲ್ಕ್ ಯಾಕ್ರೀ?
ಗಂಡ: ಒಳ್ಳೆ ಕೆಲಸ ಮಾಡೋ ಮುನ್ನ ಬಾಯಿ ಸಿಹಿ ಮಾಡ್ಬೇಕು

ಸ್ವಾಸ್ಥ್ಯವೇ ಸ್ವಾತಂತ್ರ್ಯ

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ಕಾರ್ಯವ್ಯಾಪ್ತಿ ಮತ್ತು ಕಾರ್ಯಕ್ಷೇತ್ರ ವಿಸ್ತೃತವಾದದ್ದು. ಮನೆಯವರ ಪಾಲನೆಯೊಂದಿಗೆ ಕುಟುಂಬದವರೆಲ್ಲರ ಭಾವನೆಗೆ ಜೊತೆಯಾಗಿ, ಆರ್ಥಿಕ ಸಮಸ್ಯೆಗಳಿಗೂ ಹೆಗಲಾಗಿ, ಸಮಸ್ಯೆಗೆ ಪರಿಹಾರ ಸೂತ್ರವಾಗಿ ತನ್ನ ಸಂಸಾರವನ್ನು ಒಗ್ಗೂಡಿಸಿ ನೆಮ್ಮದಿಯ ವಾತಾವರಣವನ್ನು ನಿರ್ಮಿಸುವಲ್ಲಿ ಪ್ರಮುಖ ಸೂತ್ರಧಾರಿಯೂ... ಪಾತ್ರಧಾರಿಯೂ ಅವಳೇ!



ವಿವಿಧ ಅಧ್ಯಯನಗಳ ಪ್ರಕಾರ ಮಹಿಳೆಯರು ಪರರ ಆರೈಕೆಯ ಒತ್ತಡ, ಸ್ವಾಭಾವಿಕ ಹಂತಗಳಾದ ಹದಿಹರೆಯ, ಗರ್ಭಧಾರಣೆ, ಪ್ರಸವವಾದ ನಂತರದ ಬದಲಾವಣೆಗಳು, ಮೆನೋಪಾಸ್‌ನ ತೊಂದರೆಗಳು ಹೀಗೇ ಒಂದೇ ಎರಡೇ ಎಲ್ಲವೂ ಮಹಿಳೆಯರ ದೇಹದ ಜೊತೆಗೆ ಮನಸ್ಸಿನ ಮೇಲೆಯೂ ಒತ್ತಡ ಬೀರುತ್ತವೆ ! ಇತ್ತೀಚೆಗೆ ಮಹಿಳೆಯರು ತಮ್ಮ ಮಲ್ಟಿಟಾಸ್ಕಿಂಗ್ ಗುಣಗಳಿಂದ ತಾನೊಬ್ಬಳೇ ಎಲ್ಲಾ ಶಾರೀರಿಕ, ಮಾನಸಿಕ, ಆರ್ಥಿಕ ಹಾಗೆಯೇ ಸಾಮಾಜಿಕ ಜವಾಬ್ದಾರಿಗಳನ್ನು ಬಹುಶಃ ಹೆಚ್ಚಾಗಿಯೇ ಹೊತ್ತುಕೊಳ್ಳುತ್ತಿದ್ದಾಳೆ ಎಂದೆನಿಸುತ್ತದೆ. ಇವೆಲ್ಲವೂ ಅವರ ಮಾನಸಿಕ ಒತ್ತಡಕ್ಕೂ ಕಾರಣ ವಾಗುತ್ತಿದ್ದು ಅನಾರೋಗ್ಯ, ಅಸಿಡಿಟಿ, ಹಾರ್ಮೋನಿನ ಏರು-ಪೇರುಗಳು, ಹಲವಾರು ಶಾರೀರಿಕ ನೋವುಗಳು ಮುಂತಾದವುಗಳಿಂದ ಬಳಲುತ್ತಾರೆ.

ಮಹಿಳೆಯರ ಆರೋಗ್ಯ ಕೇವಲ ಅವರ ಹೊಣೆಗಾರಿಕೆಯಲ್ಲ, ಇದನ್ನು ಅವರ ಕುಟುಂಬ, ವೃತ್ತಿಯಲ್ಲಿಯ ಪರಿಸರ, ಸಮಾಜವೂ ಗುರುತಿಸಬೇಕಾಗಿದೆ! ನಿಮ್ಮ ಮನೆಯಲ್ಲಿರುವ ಮಹಿಳೆಯರು ಆಕೆ ತಾಯಿ, ಪತ್ನಿ, ಅಕ್ಕ, ತಂಗಿ, ಅತ್ತಿಗೆ, ನಾದಿನಿ ಯಾರೇ ಆಗಿರಲಿ ಅವರು ಸರಿ ಸಮಯಕ್ಕೆ ಆಹಾರ ಸೇವಿಸುತ್ತಿದ್ದಾರಾ ಆರೋಗ್ಯಕ್ಕಾಗಿ ಸರಿಯಾದ ಔಷಧೋಪಚಾರ ಮಾಡಿಕೊಳ್ಳುತ್ತಿದ್ದಾರಾ ಮನಸ್ಸಿಗೆ ಮತ್ತು ಶರೀರಕ್ಕೆ ಬೇಕಾದ ಯಾವುದೇ ವ್ಯಾಯಾಮ, ಮನರಂಜನೆಯಂತಹ ಹವ್ಯಾಸಗಳಲ್ಲಿ ತೊಡಗಿಸಿಕೊಂಡಿದ್ದಾರಾ ಎಂಬೆಲ್ಲ ಮೂಲಭೂತ (ಬೇಸಿಕ್) ಕುಶಲೋಪಚಾರವನ್ನೂ ಯಾರಾದರೂ ಮಾಡುತ್ತಿದ್ದೀರಾ ಗಮನಿಸಿ, ಇಷ್ಟೇ ಸಾಕು ಈ ಹೆಣ್ಣುಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯವು ಗಟ್ಟಿಯಾಗಿರಲು ! ದೇಹ ಮತ್ತು ಮನಸ್ಸು ಇಬ್ಬರೂ ಪರಸ್ಪರ ಆಪ್ತ ಗೆಳೆಯರು, ಅವರಿಬ್ಬರೂ ಪೂರಕವಾದ ಆಹಾರ, ಸಮರ್ಪಕ ನಿದ್ರೆ, ನಿಯಮಿತ ವ್ಯಾಯಾಮ, ಒಳ್ಳೆಯ ಹವ್ಯಾಸಗಳು, ಯೋಗ, ಧ್ಯಾನ ಮುಂತಾದವನ್ನು ಅಳವಡಿಸಿಕೊಳ್ಳಿರಿ. ಇನ್ನು ಭಾರತದಂತಹ ದೇಶದಲ್ಲಿ ಮಹಿಳೆಯರ ಋತುಚಕ್ರ ಮತ್ತು ಋತುಬಂಧದ ಬಗ್ಗೆ ಅರಿವಿನ ಕೊರತೆ, ಸಂಸ್ಕೃತಿ, ಸಂಪ್ರದಾಯಗಳು, ನಿಯಮಗಳು ಮುಂತಾದವುಗಳ ಕಟ್ಟುಪಾಡುಗಳಿಂದ ಪೆರಿ ಮೆನೋಪಾಸಲ್ ಮತ್ತು ಮೆನೋಪಾಸೆಲ್‌ನಲ್ಲಿಯೇ ದೈಹಿಕ ಮತ್ತು ಮಾನಸಿಕ ಬದಲಾವಣೆಗಳ ಅರಿವಿಲ್ಲದೆಯೇ ಸಹಿಸಿಕೊಂಡು ಜೀವನ ಸಾಗಿಸುತ್ತಾರೆ. ಭಾವನೆಗಳ ಏರಿಳಿತ, ಆತಂಕ, ಯೋಚನೆಯಲ್ಲಿ ದ್ವಂದ್ವತೆ (Duality in thoughts), ನಿದ್ರಾಹೀನತೆ, ತನ್ನನ್ನು ತಾನೇ ಕಳೆದುಕೊಂಡಂತಹ ಖಾಲಿತನದ ಭಾವನೆಯನ್ನು ಎಲ್ಲ ಮಹಿಳೆಯರೂ ಅನುಭವಿಸುತ್ತಾರೆ. ಈ ಸಮಯದಲ್ಲಿಯೂ ಆ ಮಹಿಳೆಯರು ಬೇರೆಯವರ ಬೆಂಬಲವಿಲ್ಲದೇ ತನ್ನೆಲ್ಲ ದೈನಂದಿನ ಕೆಲಸ ಕಾರ್ಯಗಳನ್ನು, ವೃತ್ತಿ ಜೀವನವನ್ನೂ ಜವಾಬ್ದಾರಿಗಳನ್ನು ನಿಭಾಯಿಸುತ್ತಿರುತ್ತಾಳೆ ಇಷ್ಟೆಲ್ಲ ಒತ್ತಡಗಳ ಮಧ್ಯೆ ಆಕೆ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಮತ್ತಷ್ಟು ಕುಗ್ಗುತ್ತಾಳೆ ಇವನ್ನೆಲ್ಲಾ ಮನೆಯವರು ಮತ್ತು ಸಮುದಾಯದವರು ಋತುಬಂಧವೆಂಬುದು ಕೇವಲ ದೈಹಿಕ ಮೈಲಿಗಲ್ಲು ಅಷ್ಟೇ ಅಲ್ಲದೇ ಇದೊಂದು ಭಾವನಾತ್ಮಕ ಮತ್ತು ಮಾನಸಿಕ ಆರೋಗ್ಯದ ಬದಲಾವಣೆಯ ಹಂತ ಕೂಡಾ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಸಮಯದಲ್ಲಿ ವೃತ್ತಿನಿರತ ಮಹಿಳೆಯರಿಗೆ ಫ್ಲೆಕ್ಸಿಬಲ್ ವರ್ಕ್ ಪಾಲಿಸಿ (flexible work policy) ನೀಡಬೇಕು.

ಮೆನೋಪಾಸ್ ಅಂದರೆ ಋತುಬಂಧದ ಸಮಯದಲ್ಲಿ ಕುಂದುವ ಹೆಣ್ತನದ ಹಾರ್ಮೋನುಗಳಾದ ಈಸ್ಟ್ರೋಜನ್ ಮತ್ತು ಪ್ರೊಟೆಸ್ಟಿರಾನ್‌ಗಳು ಚಯಾ ಪಚಯ ಕ್ರಿಯೆಗಳಲ್ಲಾಗುವ ಬದಲಾವಣೆ, ಕೊಬ್ಬು ಶೇಖರಣೆಯಲ್ಲಾಗುವ ವ್ಯತ್ಯಾಸ, ಅಡ್ರಿನಲ್ ಗ್ರಂಥಿಯಲ್ಲಾಗುವ ವ್ಯತ್ಯಾಸವನ್ನುಂಟು ಮಾಡುತ್ತವೆ. ಇದರಿಂದ ಆಕೆಯ ಮನೋದೈಹಿಕ ಸಾಮರ್ಥ್ಯ ಕುಂದುತ್ತಾ, ಅಧಿಕ ರಕ್ತದೊತ್ತಡ, ಮಧುಮೇಹ, ಬೊಜ್ಜಿನ ಸಮಸ್ಯೆಗಳು, ಮೂಳೆಯ ತೊಂದರೆಗಳು ಶುರುವಾಗುತ್ತವೆ. ಕ್ಯಾನ್ಸರ್‌ನಂತಹ ಕಾಯಿಲೆಗಳಿಗೂ ಈ ಸಮಯದಲ್ಲಿ ರೋಗ ನಿರೋಧಕ ಶಕ್ತಿಯು ಕುಂದುವುದರಿಂದ ರಹದಾರಿಯಾಗುತ್ತದೆ.

ಆಯುರ್ವೇದದಲ್ಲಿ ಹೇಳಿರುವ ರಸಾಯನ ಚಿಕಿತ್ಸೆಗಳು, ಮನೋಪ್ರಸಾದನ ಚಿಕಿತ್ಸೆಗಳು, ಯೋಗ, ಧ್ಯಾನ ಮುಂತಾದವುಗಳಿಂದ, ಹಾಗೆಯೇ ತೀವ್ರ ಹಾರ್ಮೋನು ವ್ಯತ್ಯಯಕ್ಕೆ ತಜ್ಞ ವೈದ್ಯರಿಂದ ಹಾರ್ಮೋನ್ ರೀಪ್ಲೇಸ್‌ಮೆಂಟ್ ಥೆರಪಿಯನ್ನು ತೆಗೆದುಕೊಳ್ಳುವುದರಿಂದ ತೊಂದರೆಗಳಿಂದ ಹೊರಬರಬಹುದು. ಇತ್ತೀಚಿನ ಸಂಶೋಧನೆಗಳ ಪ್ರಕಾರ



ಡಾ|| ಸುಧಾ .ಎಂ.ಎಸ್
ಆಯುರ್ವೇದ ಮತ್ತು
ಯೋಗ ತಜ್ಞರು
ಮೊ.: 9448071933.


> **“ ದೇಹ ಮತ್ತು ಮನಸ್ಸು ಇಬ್ಬರೂ ಪರಸ್ಪರ ಆಪ್ತ ಗೆಳೆಯರು, ಅವರಿಬ್ಬರೂ ಪೂರಕವಾದ ಆಹಾರ, ಸಮರ್ಪಕ ನಿದ್ರೆ, ನಿಯಮಿತ ವ್ಯಾಯಾಮ, ಒಳ್ಳೆಯ ಹವ್ಯಾಸಗಳು, ಯೋಗ, ಧ್ಯಾನ ಮುಂತಾದವನ್ನು ಅಳವಡಿಸಿಕೊಳ್ಳಿರಿ. ಇನ್ನು ಭಾರತದಂತಹ ದೇಶದಲ್ಲಿ ಮಹಿಳೆಯರ ಋತುಚಕ್ರ ಮತ್ತು ಋತುಬಂಧದ ಬಗ್ಗೆ ಅರಿವಿನ ಕೊರತೆ, ಸಂಸ್ಕೃತಿ, ಸಂಪ್ರದಾಯಗಳು, ನಿಯಮಗಳು ಮುಂತಾದವುಗಳ ಕಟ್ಟುಪಾಡುಗಳಿಂದ ಪೆರಿ ಮೆನೋಪಾಸಲ್ ಮತ್ತು ಮೆನೋಪಾಸೆಲ್‌ನಲ್ಲೇ ದೈಹಿಕ ಮತ್ತು ಮಾನಸಿಕ ಬದಲಾವಣೆಗಳ ಅರಿವಿಲ್ಲದೆಯೇ ಸಹಿಸಿಕೊಂಡು ಜೀವನ ಸಾಗಿಸುತ್ತಾರೆ.**

ಈಸ್ಟ್ರೋಬೋಲೋಮ್ (Estrobolome)ಗಳನ್ನು ಪೋಷಿಸುವುದರಿಂದ ಮೆನೋಪಾಸ್‌ನ ಸಮಯದಲ್ಲಿ ಹೆಚ್ಚು ಸಹಾಯವಾಗುತ್ತದೆ. ಕರುಳಿನಲ್ಲಿರುವ ಈ ಬ್ಯಾಕ್ಟೀರಿಯಾಗಳ ಗುಂಪಿಗೆ ಈಸ್ಟ್ರೋಬೋಲೋಮ್ ಎನ್ನುತ್ತಾರೆ. ಇವುಗಳು ಸುಮಾರು 60ಕ್ಕೂ ಹೆಚ್ಚು ಗುಂಪುಗಳಿದ್ದು, ಇವುಗಳಿಂದ ಉತ್ಪತ್ತಿಯಾಗುವ ಬೀಟಾ ಗ್ಲುಕರೋನಿಡೇಸ್ (glucuronidase) ಎಂಬ ಕಿಣ್ವವು ಒಳ್ಳೆಯ ಉಪಕಾರಿ ಈಸ್ಟ್ರೋಜನ್ ಜೀವಕೋಶದಲ್ಲಿ ಉತ್ಪಾದಿಸುವುದನ್ನು ಉತ್ತೇಜಿಸಿ ಅವು ಹೊರ ಹೋಗುವುದನ್ನು ತಪ್ಪಿಸುತ್ತವೆ ಮತ್ತು ಅಪಾಯವನ್ನುಂಟು ಮಾಡುವ ಈಸ್ಟ್ರೋಜನ್ ಮಟ್ಟವನ್ನು ಕಡಿಮೆ ಮಾಡಲು ಸಹಕರಿಸುತ್ತದೆ. ಇದಕ್ಕೆ ಪೂರಕವಾದ ಆಹಾರಗಳಾದ ಫೈಟೋ ಈಸ್ಟ್ರೋಜನ್‌ಯುಕ್ತ ಅಗಸೆ, ಮೆಂತ್ಯ, ಕುಂಬಳ ಬೀಜ, ಒಣಹಣ್ಣುಗಳು (ಬಾದಾಮಿ, ಆಕ್ರೋಟ್ ಇತ್ಯಾದಿ), ಹಸಿರು ಸೊಪ್ಪು, ತರಕಾರಿಗಳು ಮುಖ್ಯವಾಗಿ ಕ್ಯಾರೆಟ್, ಕಿತ್ತಳೆಹಣ್ಣು, ಬೀನ್ಸ್, ಬಟಾಣಿ, ಶೇಂಗಾ ಇತ್ಯಾದಿ, ಸುವರ್ಣಗಡ್ಡೆ, ಜೇಷ್ಠಮಧು, ಸಾವಯವ ಸೋಯಾ ಮುಂತಾದವುಗಳೆಲ್ಲ ಈಸ್ಟ್ರೋಬೋಲೋಮ್ ಅನ್ನು ಹೆಚ್ಚಿಸುತ್ತವೆ. ಹೀಗೆ ವೈಜ್ಞಾನಿಕವಾಗಿಯೂ ನಾವು ವಿವಿಧ ಔಷಧ ಪದ್ಧತಿ ಮತ್ತು ಆಹಾರ ವಿಹಾರಗಳ ಮೂಲಕವೂ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

ಸ್ವಸ್ಥ ಕುಟುಂಬಕ್ಕಾಗಿ, ಸ್ವಸ್ಥ ಸಮಾಜಕ್ಕಾಗಿ, ಸ್ವಸ್ಥ ಮಹಿಳೆಯರ ಅವಶ್ಯಕತೆಗಾಗಿ ನಾವೆಲ್ಲರೂ ಒಟ್ಟಾಗಿ ಸೇರಿ ಮುನ್ನಡೆಯಬೇಕಾಗಿದೆ. ಇದುವೇ ಸ್ವಾಸ್ಥ್ಯ ಮತ್ತು ಆರೋಗ್ಯ ಸ್ವಾತಂತ್ರ್ಯವುಳ್ಳ ಸಮಾಜ ಎಂದೆನಿಸುತ್ತದೆ.

ಪಾಕಶಾಲೆ

ಬಾದಾಮಿ ಪಾಯಸ



ಬೇಕಾಗುವ ಪದಾರ್ಥಗಳು...

ಬಾದಾಮಿ-25 ಬೀಜ, ಸಕ್ಕರೆ-1 ಬಟ್ಟಲು, ಹಾಲು-ಅರ್ಧ ಲೀಟರ್, ಶಾವಿಗೆ-ಕಾಲು ಬಟ್ಟಲು, ಬಾದಾಮಿ ಪುಡಿ-2 ಚಮಚ, ಏಲಕ್ಕಿ ಪುಡಿ-ಸ್ವಲ್ಪ, ತುಪ್ಪ-2 ಚಮಚ, ಪಿಸ್ತಾ-ಸ್ವಲ್ಪ, ಬಾದಾಮಿ ಚೂರು-ಸ್ವಲ್ಪ.

ಮಾಡುವ ವಿಧಾನ...

ಬಾದಾಮಿಯನ್ನು ನೀರಿನಲ್ಲಿ ನೆನೆಸಿ, ಸಿಪ್ಪೆ ತೆಗೆದು ನೀರು ಹಾಕಿ ತರಿ ತರಿಯಾಗಿ ರುಬ್ಬಿಕೊಳ್ಳಿ. ಒಂದು ಬಾಣಲೆಗೆ ಸ್ವಲ್ಪ ತುಪ್ಪ ಹಾಕಿ ಶ್ಯಾವಿಗೆಯನ್ನು ಚೆನ್ನಾಗಿ ಹುರಿದು, ಇದಕ್ಕೆ ಒಂದೂವರೆ ಬಟ್ಟಲು ನೀರು ಹಾಕಿ, 5 ನಿಮಿಷ ಚೆನ್ನಾಗಿ ಬೇಯಿಸಿಕೊಳ್ಳಿ. ನಂತರ ರುಬ್ಬಿದ ಬಾದಾಮಿಯನ್ನು ಶ್ಯಾವಿಗೆಗೆ ಹಾಕಿ ಮಿಶ್ರಣ ಮಾಡಿ ನಂತರ ಹಾಲು, ಸಕ್ಕರೆ ಸೇರಿಸಿ ಸಣ್ಣ ಉರಿಯಲ್ಲಿ ಕುದಿಯಲು ಬಿಡಿ. ಅದಕ್ಕೆ ಬಾದಾಮಿಪುಡಿ ಕತ್ತರಿಸಿಟ್ಟುಕೊಂಡ ಪಿಸ್ತಾ, ಬಾದಾಮಿ ಸೇರಿಸಿ 3 ನಿಮಿಷ ಕುದಿಸಿಕೊಂಡರೆ ರುಚಿಕರವಾದ ಬಾದಾಮಿ ಪಾಯಸ ಸವಿಯಲು ಸಿದ್ಧ.



ಶತಮಾನದ ಹೊಸ್ತಿಲಲ್ಲಿ ಯುವರಾಜ ಕಾಲೇಜು

ಭಾರತದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಮೈಸೂರು ವಿಶ್ವವಿದ್ಯಾನಿಲಯ ಹಲವು ಮಹತ್ವಗಳ ಗಣಿ. ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿಯ ಫಲವಾಗಿ, ಸಾಮಾಜಿಕ ನ್ಯಾಯದ ದ್ಯೋತಕವಾಗಿ ಹಾಗೂ ಶೈಕ್ಷಣಿಕ ಸಬಲೀಕರಣದ ಸದುದ್ದೇಶದಿಂದಾಗಿಯೇ ಉದಯಗೊಂಡ ಮೈಸೂರು ವಿವಿ ಇದೀಗ ಶತಮಾನವನ್ನು ಪೂರೈಸಿ ಮುನ್ನಡೆಯುತ್ತಿದೆ. ಈ ಜ್ಞಾನ ದೇಗುಲದಲ್ಲಿ ಪದವಿ ಪಡೆದವರು ದೇಶ ವಿದೇಶಗಳಲ್ಲೂ ಅಸಂಖ್ಯಾತ ಸಂಖ್ಯೆಯಲ್ಲಿದ್ದು, ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಹಾಗೆಯೇ ರಾಜ್ಯ, ರಾಷ್ಟ್ರಮಟ್ಟದ ರಾಜಕಾರಣದಲ್ಲೂ ಮಿಂಚಿದ್ದಾರೆ. ಇಂತಹ ಮೇರು ಸದೃಶವಾದ ಹೆಗ್ಗಳಿಕೆಯಿಂದ ಬೀಗುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಒಂದಾದ ಯುವರಾಜ ಕಾಲೇಜು ತನ್ನ ವೈಶಿಷ್ಟ್ಯಪೂರ್ಣ ಪ್ರಗತಿಯಿಂದ ಮುನ್ನಡೆಯುತ್ತಿದೆ.

1927–28ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಿ ಈಗ 98 ವಸಂತಗಳನ್ನು ಕಂಡಿರುವ ಯುವರಾಜ ಕಾಲೇಜು ಮೈಸೂರು ಅರಸರ ದೂರದೃಷ್ಟಿತ್ವದ ಸಂಕೇತವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಕಾಲೇಜು ಎಂದು ಹೆಸರಾಗಿರುವ ಈ ವಿದ್ಯಾಸಂಸ್ಥೆಯಲ್ಲಿ ಬಿ.ಎಸ್ಸಿ ಮಾತ್ರವಲ್ಲದೇ ಬಿಬಿಎ, ಬಿಸಿಎ, ಎಂಬಿಎ ಪದವಿ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಐವತ್ತು ವರ್ಷಗಳ ಹಿಂದೆಯೇ ವಿಜ್ಞಾನವನ್ನು ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಿದ ಕೀರ್ತಿ ಯುವರಾಜ ಕಾಲೇಜಿಗೆ ಸಲ್ಲುತ್ತದೆ. ತನ್ನ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಮಾತ್ರವಲ್ಲದೆ ಸಾಮಾಜಿಕ ಬದ್ಧತೆಗೂ ಹೆಸರುವಾಸಿಯಾಗಿದೆ. ಸಾಮಾಜಿಕ ನ್ಯಾಯದೊಂದಿಗೆ ಶಿಕ್ಷಣದಲ್ಲಿ ಶ್ರೇಷ್ಠತೆಗೆ ಬದ್ಧವಾಗಿರುವ ಈ ಕಾಲೇಜು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಪ್ರಯೋಜನಗಳನ್ನು ವಿಸ್ತರಿಸಲು ಶ್ರಮಿಸುತ್ತಿದೆ. ಈ ಶಿಕ್ಷಣ ಸಂಸ್ಥೆಯಲ್ಲಿ ಕಲಿತು ಹೊರಬಂದು ವಿಶಾಲ ಜಗತ್ತಿಗೆ ಕಾಲಿಟ್ಟ ವಿದ್ಯಾರ್ಥಿಗಳು ಕಲೆ, ಸಾಹಿತ್ಯ, ವಿಜ್ಞಾನ, ಕಾನೂನು, ವಾಣಿಜ್ಯ, ಆಡಳಿತ, ಕ್ರೀಡೆ, ಪತ್ರಿಕೋದ್ಯಮ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ.

ಮೈಸೂರು ಸಂಸ್ಥಾನದ ಅರಸರು ಎಲ್ಲಾ ಸಮುದಾಯದ ಜನರಿಗೆ ಶಿಕ್ಷಣ ನೀಡಿ ಅವರನ್ನು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ವೈಜ್ಞಾನಿಕ, ಔದ್ಯೋಗಿಕ ಮತ್ತು ಸಾಮಾಜಿಕ ಜೀವನಕ್ಕೆ ಸಜ್ಜುಗೊಳಿಸಬೇಕೆಂಬ ಕನಸು ಕಂಡಿದ್ದರು. ಅಂದಿನ ದೂರದೃಷ್ಟಿಯುಳ್ಳ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರು ಜನರ ಕನಸುಗಳು ಮತ್ತು ಆಶಯಗಳಿಗೆ ಆಕಾರ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಹೀಗಾಗಿ ಕರ್ನಾಟಕ ರಾಜ್ಯದಲ್ಲಿ ಮೊದಲನೆಯ ಮತ್ತು ದೇಶದ ಆರನೆಯ ವಿಶ್ವವಿದ್ಯಾನಿಲಯವಾಗಿ ಮೈಸೂರು ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿತು. ಮೈಸೂರಿನ ಅಂದಿನ ತತ್ವಜ್ಞಾನಿ ದೂರದೃಷ್ಟಿಯ ಮಹಾರಾಜರಾದ ಶ್ರೀಮಾನ್ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1916ರ ಜುಲೈ 27ರಂದು ಈ ವಿಶ್ವವಿದ್ಯಾನಿಲಯವನ್ನು ಅಧಿಕೃತವಾಗಿ ಸ್ಥಾಪಿಸಿದರು. ಮಹಾರಾಜರು ಸ್ವತಃ ವಿಶ್ವವಿದ್ಯಾಲಯದ ಮೊದಲ ಕುಲಾಧಿಪತಿಯಾಗಿದ್ದರು.

ಉದಾರವಾದಿ ಮತ್ತು ಪ್ರಗತಿಪರ ನಿಲುವುಗಳಿಗೆ ಹೆಸರುವಾಸಿಯಾದ ಮೈಸೂರಿನ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಯುವರಾಜ ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದರು. ಆ ಕಟ್ಟಡದ ಅಡಿಪಾಯ ಶಿಲಾನ್ಯಾಸವನ್ನು 1927ರ ಆಗಸ್ಟ್ 8ರಂದು ಪ್ರಖ್ಯಾತ ಚಿಂತಕ ಹಾಗೂ ಬುದ್ಧಿಜೀವಿಯಾಗಿದ್ದ ಆಗಿನ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾದ ರಾಜತಂತ್ರಜ್ಞ ಬ್ರಜೇಂದ್ರನಾಥ ಸೀಲ್ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮೈಸೂರಿನ ದಿವಾನ ಸರ್ ಮಿರ್ಜಾ ಇಸ್ಮಾಯಿಲ್, ಪಂಡಿತ್ ಮೋತಿಲಾಲ್ ನೆಹರು ಮತ್ತು ಮಹಾಮಹೋಪಾಧ್ಯಾಯ ಸಿದ್ಧಾಂತಿ ಶಿವಶಂಕರ ಶಾಸ್ತ್ರಿ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು. ಮುಖ್ಯ ಬ್ಲಾಕ್ ನಿರ್ಮಾಣ ಪೂರ್ಣಗೊಂಡ ನಂತರ 1928ರ ಜೂನ್ 24ರಂದು ಕಲೆ ಮತ್ತು ವಿಜ್ಞಾನ ವಿಭಾಗಗಳಲ್ಲಿ ಎರಡು ವರ್ಷದ ಮಧ್ಯಂತರ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. ಈ ಮೂಲಕ ಯುವರಾಜ ಕಾಲೇಜು ತನ್ನ ಶೈಕ್ಷಣಿಕ ಮತ್ತು ಸಂಸ್ಥಾತ್ಮಕ ಪ್ರಯಾಣವನ್ನು ಅಧಿಕೃತವಾಗಿ ಆರಂಭಿಸಿತು. ಸ್ವಾತಂತ್ರ್ಯ ನಂತರ 1948ರಲ್ಲಿ ಈ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಮೇಲ್ದರ್ಜೆಗೇರಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಆದ ನಿರಂತರ ಹೆಚ್ಚಳಕ್ಕೆ ಅನುಗುಣವಾಗಿ ಸುಸಜ್ಜಿತ ಪ್ರಯೋಗಾಲಯಗಳು ಮತ್ತು ಪ್ರಾವೀಣ್ಯ ಹೊಂದಿದ ಅಧ್ಯಾಪಕರ ನೇಮಕವಾಯಿತು. ಯುವರಾಜ ಕಾಲೇಜು ಮೊದಲಿಗೆ ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಪೂರ್ವ ವೈದ್ಯಕೀಯ ವಿದ್ಯಾರ್ಥಿಗಳು, ಮಹಾರಾಣಿ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹಾಗೂ ಮೈಸೂರಿನ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುವ ಮಹತ್ವದ ಹೊಣೆಗಾರಿಕೆಯನ್ನು ನಿರ್ವಹಿಸಿತು. 1960ರೊಳಗೆ ಕಾಲೇಜಿನಲ್ಲಿ ಎಂ.ಎಸ್ಸಿ. ಕೋರ್ಸ್‌ಗಳು ಸಹ ಯಶಸ್ವಿಯಾಗಿ ನಡೆಯುತ್ತಿದ್ದವು. ಆದರೆ ಶಿಕ್ಷಣ ನೀತಿಗಳಲ್ಲಿ ಉಂಟಾದ ಬದಲಾವಣೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕಂಡುಬಂದ ಗಣನೀಯ ಏರಿಕೆ ಹಿನ್ನೆಲೆ ಹಾಗೂ ಮಾನಸಗಂಗೋತ್ರಿ ನಿರ್ಮಾಣವಾದ ಮೇಲೆ ಅಲ್ಲಿಗೆ ಪಿಜಿ ಕೋರ್ಸ್‌ಗಳು ಸ್ಥಳಾಂತರವಾದವು. ಇಲ್ಲಿ ಬಿ.ಎಸ್ಸಿ ಕೋರ್ಸ್‌ಗಳನ್ನು ಮಾತ್ರ ಮುಂದುವರೆಸಲಾಯಿತು.

1934ರಲ್ಲಿ ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್ ಅವರು ಕಿರಿಯ ಇಂಟರ್ಮೀಡಿಯೇಟ್ ತರಗತಿಗೆ ಸೇರಿದರು. ಭಾರತದ ಒಂದು ಪ್ರತಿಷ್ಠಿತ ಸಂಸ್ಥಾನದ ಭವಿಷ್ಯದ ಆಡಳಿತಗಾರ, ಆಡಳಿತ ಕುಟುಂಬದ ಯುವ ರಾಜಕುಮಾರ ಸಾಮಾನ್ಯ ಜನರ ನಡುವೆ ಕುಳಿತು ಎಲ್ಲರಿಗೂ ಮುಕ್ತವಾದ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದು ನಿಜಕ್ಕೂ ಹೆಮ್ಮೆಯ ಹಾಗೂ ಅಭಿಮಾನದ ಸಂಗತಿ. 1941 ರಿಂದ 1947 ರವರೆಗಿನ ವರ್ಷಗಳು ತೊಂದರೆ ಮತ್ತು ಪ್ರಕ್ಷುಬ್ಧತೆಯ ಅವಧಿಯಾಗಿತ್ತು. ರಾಷ್ಟ್ರದ ಕರೆಗೆ ವಿಧೇಯರಾಗಿ ಕಾಲೇಜಿನ ವಿದ್ಯಾರ್ಥಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಸೇರಿಕೊಂಡು ಮತ್ತು ಭೂಮಿಯ ವಿಮೋಚನೆಗೆ ತಮ್ಮ ಶಕ್ತಿಯನ್ನು ಪ್ರದರ್ಶಿಸಿದರು. ಅನೇಕ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು ಯುವರಾಜ ಕಾಲೇಜಿಗೆ ಸೇರಿದ ವಿದ್ಯಾರ್ಥಿಗಳಾಗಿದ್ದರು.

ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿ ಸಮೂಹ

ಯುವರಾಜ ಕಾಲೇಜು ಕಳೆದ ತೊಂಬತ್ತೆಂಟು ವರ್ಷಗಳಿಂದ ರಾಜ್ಯಕ್ಕೆ ದೇಶಕ್ಕೆ ಹೆಮ್ಮೆ ಗೌರವ ತಂದ ಹಲವಾರು ಪ್ರಸಿದ್ಧ ವಿದ್ವಾಂಸರು, ರಾಜಕಾರಣಿಗಳು, ವಕೀಲರು, ಎಂಜಿನಿಯರ್‌ಗಳು, ವೈದ್ಯರು, ಆಡಳಿತಗಾರರು, ಕ್ರೀಡಾಪಟುಗಳು ಮತ್ತು ಶ್ರೇಷ್ಠ ಮುತ್ಸದ್ದಿಗಳನ್ನು ಸೃಷ್ಟಿಸಿದೆ. ಅವರಲ್ಲಿ **ಮೈಸೂರಿನ ದೊರೆ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ, ಟಾಟಾ ಇನ್ಸ್ಟಿಟ್ಯೂಟ್ ಆಫ್ ಫೌಂಡೇಶನ್ ರಿಸರ್ಚ್‌ನ ಮಾಜಿ ನಿರ್ದೇಶಕ ಪ್ರೊ. ಬಿ. ವಿ. ಶ್ರೀಕಂಠನ್, ಪದ್ಮಭೂಷಣ ವೀಣೆ ದೊರೆಸ್ವಾಮಿ ಅಯ್ಯಂಗಾರ್, ಸುಪ್ರಸಿದ್ಧ ಸಾಹಿತಿ ಎ. ಕೆ. ರಾಮಾನುಜಂ, ಖ್ಯಾತ ಛಾಯಾಗ್ರಾಹಕ ಟಿ. ಎಸ್. ಸತ್ಯನ್, ಅಂತರರಾಷ್ಟ್ರೀಯ ಖ್ಯಾತಿಯ ವ್ಯಂಗ್ಯ ಚಿತ್ರಕಾರ ಆರ್. ಕೆ. ಲಕ್ಷ್ಮಣ್, ಸ್ವಾತಂತ್ರ್ಯ ಹೋರಾಟಗಾರ ಕೆ.ಎಸ್.ಸೀತಾರಾಮ ಅಯ್ಯಂಗಾರ್, ಭಾರತ ವಾಯುಯಾನ ಅಧಿಕಾರಿಯಾಗಿದ್ದ ಆರ್.ಎಸ್.ಕೇಶವನ್, ಮದರಾಸು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹುಲುವಾಡಿ ರಮೇಶ್, ಪ್ರಖ್ಯಾತ ವೈದ್ಯ ಡಾ. ಸಿ.ಜಿ.ನರಸಿಂಹನ್, ಕುಲಪತಿಗಳಾಗಿದ್ದ ಡಾ. ಶೇಖ್ ಅಲಿ, ಡಾ. ಕೆ. ಸಿದ್ದಪ್ಪ ಡಾ.ಎಂ. ಮಾದಯ್ಯ, ಡಾ.ಜೆ. ಶಶಿಧರ್ ಪ್ರಸಾದ್, ಡಾ.ರಂಗನಾಥ್, ಐಐಟಿ ನಿರ್ದೇಶಕ ಡಾ.ಸೂರಪ್ಪ ಮಿರ್ಲೆ, ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ. ವಿ. ಪ್ರಕಾಶ್, ಹೆಸರಾಂತ ಸಾಹಿತಿಗಳಾದ ಪ್ರೊ ಎಂ. ಗೋಪಾಲ ಕೃಷ್ಣಅಡಿಗ, ಪ್ರೊ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಡಾ. ಎಸ್.ಎಲ್ ಭೈರಪ್ಪ, ಡಾ.ಅನುಪಮಾ ನಿರಂಜನ, ಎಂ. ವಿ. ಸೀತಾರಾಮಯ್ಯ, ಹಾಸ್ಯ ಸಾಹಿತಿ ಪ್ರೊ. ಎಂ.ಕೃಷ್ಣೇ ಗೌಡ, ಇಎನ್‌ಟಿ ವೈದ್ಯ ಡಾ. ಕೆ.ಎಂ.ಗೋವಿಂದೇಗೌಡ, ಮುಖ್ಯ ಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಆರ್.ಮಹದೇವ** ಸೇರಿದಂತೆ ಕಾಲೇಜಿನ ಅಸಂಖ್ಯಾತ ಹಳೆಯ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ರಾಜ್ಯದ ಸರ್ಕಾರಿ ಸೇವೆಗಳು, ವಾಣಿಜ್ಯ, ಶೈಕ್ಷಣಿಕ, ಪತ್ರಿಕೋದ್ಯಮ, ಕ್ರೀಡೆ, ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ಐಟಿ ಕ್ಷೇತ್ರಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಹುದ್ದೆಗಳನ್ನು ಅಲಂಕರಿಸಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ.

ತೊಂಬತ್ತೆಂಟು ವರ್ಷದ ಹಿಂದೆ ನಿರ್ಮಿಸಿದ ಕಾಲೇಜಿನ ಮುಖ್ಯ ಕಟ್ಟಡ ವಾಸ್ತುಶಿಲ್ಪ ದೃಷ್ಟಿಯಿಂದ ತುಂಬಾ ಭವ್ಯವೂ ಸುಂದರವೂ ಆಗಿದೆ. ತರಗತಿ ಕೊಠಡಿಗಳು ಮತ್ತು ಪ್ರಯೋಗಾಲಯಗಳು ವಿಶಾಲವಾಗಿವೆ. ಕಾಲೇಜಿನ ತ್ವರಿತ ವಿಸ್ತರಣೆ ಮತ್ತು ಸ್ಥಳಾವಕಾಶದ ಕೊರತೆಯನ್ನು ನೀಗಿಸಲು ಹಳೆಯ ಕಟ್ಟಡದ ಜೊತೆಗೆ ಹೊಸ ಕಟ್ಟಡಗಳನ್ನು ನಿರ್ಮಿಸಲಾಯಿತು. ಲಭ್ಯವಿದ್ದ ಸೌಲಭ್ಯಗಳು ಉತ್ತಮವಾಗಿದ್ದರೂ ಕಾಲೇಜಿನ ವೇಗವಾದ ಪ್ರಗತಿ ಮತ್ತು ಕಳೆದ ಕೆಲವು ವರ್ಷಗಳಲ್ಲಿ ಸಂಶೋಧನಾ ಚಟುವಟಿಕೆಗಳಲ್ಲಿನ ಏರಿಕೆಯಿಂದಾಗಿ ಅತ್ಯಾಧುನಿಕ ಮತ್ತು ತಾಂತ್ರಿಕವಾಗಿ ಸುಧಾರಿತ ಸಂಶೋಧನಾ ಪ್ರಯೋಗಾಲಯಗಳು ಮತ್ತು ಉಪಕರಣ ವ್ಯವಸ್ಥೆಯುಳ್ಳ ಕೋಣೆಯಂತಹ ಕೇಂದ್ರೀಕೃತ ಸೌಲಭ್ಯಗಳನ್ನು ಅವಶ್ಯಕತೆಗೆ ತಕ್ಕಂತೆ ನಿರ್ಮಿಸಲಾಗಿದೆ.

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ 2005ರಲ್ಲಿ ಯುವರಾಜ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನವನ್ನು ನೀಡಿತ್ತು. ಸಂಶೋಧನೆ, ಬೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಮೂಲಕ ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸುವ ಪ್ರಯತ್ನ ನಡೆಸಿತು. ಬಿ.ಎಸ್ಸಿ., ಬಿ.ಸಿ.ಎ., ಬಿ.ಬಿ.ಎ., ಎಂ.ಎಸ್ಸಿ., ಎಂ.ಬಿ.ಎ ಮತ್ತು ಪಿಎಚ್.ಡಿ. ಪದವಿ ಶೈಕ್ಷಣಿಕ ಕಾರ್ಯಕ್ರಮಗಳಿಗೂ ಅವಕಾಶ ಒದಗಿಸಿತು. ಸಂಸ್ಥೆಯ ಶೈಕ್ಷಣಿಕ ಸಾಧನೆಗೆ ಮಾನ್ಯತೆ ರೂಪವಾಗಿ 2010ರಲ್ಲಿ 'ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು' ಎಂಬ ಗೌರವಕ್ಕೂ ಭಾಜನವಾಯಿತು. ವಿಶ್ವವಿದ್ಯಾನಿಲಯ ಕಾಲೇಜಿಗೆ ಸಂಪೂರ್ಣ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ವಾಯತ್ತತೆಯನ್ನು ನೀಡಿತು. ವಿಶ್ವವಿದ್ಯಾನಿಲಯದಿಂದ ಸ್ವತಂತ್ರವಾಗಿ ಕೋರ್ಸ್‌ಗಳು ಮತ್ತು ಪಠ್ಯಕ್ರಮಗಳನ್ನು ವಿನ್ಯಾಸಗೊಳಿಸಿತು. ಶೈಕ್ಷಣಿಕ ಕ್ಯಾಲೆಂಡರ್, ಬೋಧನಾ ವೇಳಾಪಟ್ಟಿಗಳು ಮತ್ತು ಪರೀಕ್ಷಾ ವೇಳಾಪಟ್ಟಿಗಳು ಸಂಪೂರ್ಣವಾಗಿ ಸ್ವತಂತ್ರವಾದವು. ಶೈಕ್ಷಣಿಕ ವಿಷಯಗಳಿಗೆ ಸ್ವತಂತ್ರ ಶೈಕ್ಷಣಿಕ ಮಂಡಳಿ ನಿಯಂತ್ರಕ ಪ್ರಾಧಿಕಾರವನ್ನು ಹೊಂದಿದ್ದು, ವಿಶ್ವವಿದ್ಯಾನಿಲಯದ ಸಲಹೆ ಅನುಸಾರ ಆಡಳಿತ ಮಂಡಳಿಯು ಎಲ್ಲಾ ಆಡಳಿತಾತ್ಮಕ ವಿಷಯಗಳನ್ನು ನಿರ್ವಹಿಸಿತು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡುವ ಸಮಗ್ರ ಶಿಕ್ಷಣದ ಕಲ್ಪನೆಯಂತೆ ಕಲೆ, ಸಾಹಿತ್ಯ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹಿಸಲಾಯಿತು. ಸುಸಜ್ಜಿತವಾದ ಗ್ರಂಥಾಲಯ ವಿದ್ಯಾರ್ಥಿಗಳ ಜ್ಞಾನ ದಾಹವನ್ನು ನೀಗಿಸುತ್ತಾ ಬಂದಿದೆ. ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಘಟಕಗಳು ಸೇವೆ ಮತ್ತು ಶಿಸ್ತಿಗೆ ಮಾದರಿಯಾಗಿವೆ.



ಡಾ.ಸಿ.ಡಿ.ಪರಶುರಾಮ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗದ, ಯುವರಾಜ ಕಾಲೇಜು, ಮೈಸೂರು.




ಪ್ರಸ್ತುತ ಸ್ಥಿತಿಗತಿ

ಕಳೆದ 20 ವರ್ಷಗಳಿಂದ ಕಾಲೇಜಿಗೆ ಸ್ವಾಯತ್ತತೆ ಇದ್ದರೂ ಹೇಳಿಕೊಳ್ಳುವಂತ ಪ್ರಯೋಜನಗಳು ಆಗಿಲ್ಲ. ಇಂದಿನ ಸ್ಪರ್ಧಾತ್ಮಕ ಜಗತ್ತಿಗನುಗುಣವಾಗಿ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ನಿಟ್ಟಿನಲ್ಲಿ ಸ್ವಾಯತ್ತತೆಯ ಸೀಮಿತ ಪರಿಧಿಯಿಂದ ಹೊರಬಂದು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಿ ಮುನ್ನಡೆಯುವ ಆಶಯದೊಂದಿಗೆ 2025–26ನೇ ಶೈಕ್ಷಣಿಕ ವರ್ಷದಿಂದ ಮತ್ತೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಹಿಂದಿನ ಪಾರಂಪರಿಕ ಹಿರಿಮೆಗೆ ಹೊಸ ಚೈತನ್ಯ ತುಂಬಲು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಹಾಗೂ ಆಡಳಿತವರ್ಗ ಶತಮಾನದ ಯುವರಾಜ ಕಾಲೇಜಿಗೆ ವಿಶೇಷ ಕಾಯಕಲ್ಪ ನೀಡಿ ಮಾದರಿ ಕಾಲೇಜಾಗಿ ರೂಪಿಸುವ ನಿಟ್ಟಿನಲ್ಲಿ ಸಾಕಷ್ಟು ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಅವುಗಳೆಲ್ಲವೂ ಯಶಸ್ವಿಯಾದರೆ ಕಾಲೇಜಿನ ಒಂದು ಶತಮಾನದ ಮಾರ್ಗ ಮತ್ತಷ್ಟು ವ್ಯಾಪಕವಾಗಿ ಅಪಾರ ಸಂಖ್ಯೆಯ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹ ನೀಡುವ ಪುಣ್ಯಕಾರ್ಯದಲ್ಲಿ ಮುನ್ನಡೆಯಬಲ್ಲದು.

ಭವಿಷ್ಯದ ಹೆಜ್ಜೆಗಳು

ಶತಮಾನ ಸಂಭ್ರಮದ ಹೊಸ್ತಿಲಲ್ಲಿರುವ ಯುವರಾಜ ಕಾಲೇಜು ಆಧುನಿಕತೆ ಮತ್ತು ನವನಾಗರೀಕತೆಗೆ ತಕ್ಕಂತೆ ಮತ್ತಷ್ಟು ಸುಧಾರಣೆಯಾಗಬೇಕಿದೆ. ಮುಖ್ಯವಾಗಿ ಲ್ಯಾಬೋರೆಟರಿಗಳನ್ನು ಹೈಟೆಕ್‌ಗೊಳಿಸ ಬೇಕಾಗಿದೆ. ಬಹುತೇಕ ಬಡ, ಮಧ್ಯಮ ವರ್ಗದ ಹಾಗೂ ಗ್ರಾಮೀಣ ಪ್ರದೇಶದಿಂದ ಬಂದು ಓದುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಬೇಕಿದೆ. ಕಡಿಮೆ ಖರ್ಚಿನಲ್ಲಿ ಉನ್ನತ ಶಿಕ್ಷಣ ಪೂರೈಸುವ ಅವಕಾಶ ಒದಗಿಸಬೇಕಿದೆ. ಈಗಿರುವ ವಿದ್ಯಾರ್ಥಿ ನಿಲಯಗಳನ್ನು ಉನ್ನತೀಕರಿಸಿ ಗುಣಮಟ್ಟದ ಸೌಲಭ್ಯಗಳನ್ನು ದೊರಕಿಸಿಕೊಡಬೇಕಿದೆ. ಹೆಚ್ಚುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಸುಸಜ್ಜಿತವಾದ ವಿದ್ಯಾರ್ಥಿನಿಲಯಗಳ ಅವಶ್ಯಕತೆ ಇದೆ. ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಪೂರ್ಣ ಪ್ರಮಾಣದಲ್ಲಿ ನೇಮಕಾತಿ ಮಾಡಿ ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಬೇಕು. ವಿಶೇಷವೆಂದರೆ ಶತಮಾನದ ವರ್ಷಾಚರಣೆಗೆ ಸಾಕ್ಷಿಯಾಗಲು ಅಣಿಯಾಗುತ್ತಿರುವ ಈ ಹೊತ್ತಿನಲ್ಲಿಯೇ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಅವರು ಈ ಹಿಂದೆ ಕಾಲೇಜಿಗೆ ಸಾಕಷ್ಟು ಅನುದಾನ ಕೊಟ್ಟಿದ್ದಾರೆ. ಈಗ ಮತ್ತೆ ಅವರಿಂದ ಹೆಚ್ಚಿನ ಆರ್ಥಿಕ ನೆರವನ್ನು ನಿರೀಕ್ಷಿಸಲಾಗಿದೆ. ಸರ್ಕಾರ ಉದಾರವಾಗಿ ನೀಡುವ ಆರ್ಥಿಕ ಸಹಾಯ ಮತ್ತು ಸಹಕಾರ ಶತಮಾನದ ಇತಿಹಾಸವುಳ್ಳ ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಬರುವ ಬಡಮಕ್ಕಳ ಶೈಕ್ಷಣಿಕ ಸಬಲೀಕರಣಕ್ಕೆ ಶಕ್ತಿ ತುಂಬ ಬಲ್ಲವು.



ರಜತ ಮಹೋತ್ಸವ

1954 ರಲ್ಲಿ ಯುವರಾಜ ಕಾಲೇಜಿನ ರಜತ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಮೈಸೂರು ರಾಜ್ಯದ ಕೊನೆಯ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದ ಸ್ಮರಣಾರ್ಥವಾಗಿ, 1934–1936 ರ ಯುವರಾಜರು ಇದೇ ಸಂಸ್ಥೆಯಲ್ಲಿ ಮಧ್ಯಂತರ ಕೋರ್ಸ್‌ನ ವಿದ್ಯಾರ್ಥಿಯಾಗಿದ್ದ ಕಾರಣ ಕಾಲೇಜನ್ನು 'ಯುವರಾಜ ಕಾಲೇಜು' ಎಂದು ಮರುನಾಮಕರಣ ಮಾಡಲಾಯಿತು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 25 ವರ್ಷಗಳಲ್ಲಿ ಕಾಲೇಜು ವ್ಯಾಪಕವಾಗಿ ಅಭಿವೃದ್ಧಿ ಹೊಂದಿತು ಮತ್ತು ಬೌದ್ಧಿಕ ಪ್ರಪಂಚದ ಮೆಚ್ಚುಗೆ ಪಡೆಯಿತು.

ವಜ್ರ ಮಹೋತ್ಸವ

1989 ರಲ್ಲಿ ಯುವರಾಜ ಕಾಲೇಜಿನ ವಜ್ರ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಡಿಸೆಂಬರ್ 25, 1989 ರಂದು ಕಾಲೇಜಿನ ಹಿರಿಯ ವಿದ್ಯಾರ್ಥಿಯಾಗಿದ್ದ ಆಗಿನ ಭಾರತದ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರು ಉದ್ಘಾಟಿಸಿದರು. ಸಮಾಜಕ್ಕೆ ಕಾಲೇಜಿನ ಸೇವೆ ಮತ್ತು ವೈವಿಧ್ಯಮಯ ಕ್ಷೇತ್ರಗಳಲ್ಲಿ ಇಲ್ಲಿ ಓದಿದ ವಿದ್ಯಾರ್ಥಿಗಳು ಸಾಧಿಸಿದ ಸಾಧನೆಯನ್ನು ಅವರು ಮೆಲುಕು ಹಾಕಿದರು. ವಿದ್ಯಾರ್ಥಿಗಳು ಹಾಗೂ ಹಿರಿಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಸಂಭ್ರಮದಿಂದ ಪಾಲ್ಗೊಂಡ ವಜ್ರಮಹೋತ್ಸವದ ರಸಕ್ಷಣಕ್ಕೆ ಸಾಕ್ಷಿಯಾದರು.

ಅಮೃತ ಮಹೋತ್ಸವ

2004 ರಲ್ಲಿ ಯುವರಾಜ ಕಾಲೇಜು ಅಮೃತ ಮಹೋತ್ಸವವನ್ನು ಆಚರಿಸಿಕೊಂಡಿತು. ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಅಂದಿನ ಕುಲಪತಿ ಡಾ.ಜೆ. ಶಶಿಧರಪ್ರಸಾದ್ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎ. ಎಂ. ಪುಟ್ಟಸ್ವಾಮಿಗೌಡ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಮಿತಿಯನ್ನು ರಚಿಸಲಾಯಿತು ವರ್ಷವಿಡೀ ವಿಚಾರಸಂಕಿರಣಗಳು, ಕಾರ್ಯಾಗಾರಗಳು, ವಿಶೇಷ ಉಪನ್ಯಾಸಗಳು, ವಿಜ್ಞಾನ ಪ್ರದರ್ಶನ, ಹಳ್ಳಿಗಳಲ್ಲಿ ವಿಸ್ತರಣಾ ಚಟುವಟಿಕೆಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅವೆಲ್ಲವೂ ತುಂಬಾ ಅರ್ಥಪೂರ್ಣವಾಗಿ ಸಾಕಾರಗೊಂಡಿದ್ದವು.




ಶ್ರೇಷ್ಠ ಗುರುಪರಂಪರೆ



ಯುವರಾಜ ಕಾಲೇಜು ರಾಜ್ಯಾದ್ಯಂತ ಗುಣಮಟ್ಟದ ಶಿಕ್ಷಣಕ್ಕಾಗಿ ಪ್ರಸಿದ್ಧಿಯಾಗಿದೆ. ಭಾರತ ಮತ್ತು ವಿದೇಶಗಳಲ್ಲಿ ಖ್ಯಾತಿ ಪಡೆದ ಅನೇಕ ಪ್ರತಿಭಾವಂತ ಹಾಗೂ ಬದ್ಧ ಶಿಕ್ಷಕರು ಈ ಸಂಸ್ಥೆಯನ್ನು ಉನ್ನತ ಶೈಕ್ಷಣಿಕ ಸ್ಥಾನಕ್ಕೆ ಕೊಂಡೊಯ್ಯುವಲ್ಲಿ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಈ ವಿದ್ಯಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಪ್ರಮುಖ ಶಿಕ್ಷಕರಲ್ಲಿ **ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪ, ಪ್ರೊ. ಎಂ. ನಾಗರಾಜ್, ಪ್ರೊ. ಬಿ. ಎಂ. ಶ್ರೀಕಂಠಯ್ಯ, ಪ್ರೊ ಎ. ಆರ್. ವಾಡಿಯಾ, ಪ್ರೊ ಜೆ. ಸಿ. ರೊಲ್ಲೊ, ಪ್ರೊ ಎ. ಎನ್. ಮೂರ್ತಿ ರಾವ್, ಶ್ರೀ ಎಸ್. ವಿ. ರಂಗಣ್ಣ, ಪ್ರೊ ಟಿ. ಎನ್. ಶ್ರೀಕಂಠಯ್ಯ, ಪ್ರೊ ಕೆ. ಸುಬ್ಬಾ ಭಟ್ಟ, ಶ್ರೀ ನಾ. ಕಸ್ತೂರಿ, ಶ್ರೀ ನರಸಿಂಹಾಚಾರ್, ಪ್ರೊ. ಟಿ. ಎಸ್. ಶಾಮರಾವ್, ಪ್ರೊ ಹೆಚ್.ಎಂ.ಚಾಮಯ್ಯ, ಪ್ರೊ.ಎಲ್. ಎನ್.ಚಕ್ರವರ್ತಿ, ಪ್ರೊ. ಎಸ್.ಕೆ.ರಾಮಣ್ಣ, ಪ್ರೊ. ವೆಂಕಟ ರಾಯರು, ಪ್ರೊ.ಎಂ.ಎನ್.ನರಸಿಂಹ ಅಯ್ಯಂಗಾರ್, ಪ್ರೊ. ಅನಂತ ರಂಗಾಚಾರ್, ಪ್ರೊ.ವಿ.ಪುಟ್ಟಮಾದಪ್ಪ, ಪ್ರೊ. ಜಿ.ಎಸ್.ಶಿವರುದ್ರಪ್ಪ, ಪ್ರೊ ಉ.ಕಾ.ಸುಬ್ಬರಾಯಾಚಾರ್, ಪ್ರೊ. ಎಸ್.ವಿ.ಕೇಶವಮೂರ್ತಿ, ಪ್ರೊ. ಎಸ್.ಅನಂತನಾರಾಯಣ, ಪ್ರೊ. ಎಂ.ಐ.ಕೆ.ದುರಾನಿ, ಪ್ರೊ. ಎಲ್.ಸಿಬಯ್ಯ, ಪ್ರೊ. ಜಿ. ವೆಂಕಟರಾಯರು, ಪ್ರೊ. ಎಂ.ಎನ್.ನರಸಿಂಹ ಅಯ್ಯಂಗಾರ್, ಪ್ರೊ. ಇಂದಿರಾಬಾಯಿ, ಪ್ರೊ. ಸುಬ್ಬರಾವ್, ಪ್ರೊ. ಎಲ್. ಬಸವರಾಜು, ಪ್ರೊ. ಜಿ.ಹೆಚ್.ನಾಯಕ್, ಪ್ರೊ. ಕೆ.ಸಿ.ಶಿವಾಚಲಿಂಗೇಗೌಡ, ಪ್ರೊ. ಬಿ.ನ.ಚಂದ್ರಯ್ಯ, ಪ್ರೊ. ಪಾರ್ವತಮ್ಮ, ಪ್ರೊ. ಬಿ.ಆರ್.ಗೋಪಾಲ್, ಪ್ರೊ. ಲಕ್ಷ್ಮಣ್‌ರಾವ್, ಪ್ರೊ. ಕೆ.ಶ್ರೀನಿವಾಸನ್, ಪ್ರೊ. ಜಿ.ಎಸ್.ಮೈಲಾರಿರಾವ್, ಪ್ರೊ. ಷಡಕ್ಷರ ಸ್ವಾಮಿ, ಪ್ರೊ. ಎಚ್.ಎಸ್.ರಾಮಕೃಷ್ಣ, ಪ್ರೊ. ಎಸ್.ನಾರಾಯಣಶೆಟ್ಟಿ, ಪ್ರೊ. ಆರ್.ಗುರುರಾಜಾಚಾರ್, ಪ್ರೊ. ಕೆ.ಎಂ.ವೀರಪ್ಪ, ಪ್ರೊ. ಡಿ.ನರಸಿಂಹಮೂರ್ತಿ, ಪ್ರೊ. ವಿ.ಎಂ.ಷಣ್ಮುಗಂ, ಪ್ರೊ. ಎನ್.ಬೋರಲಿಂಗಯ್ಯ, ಪ್ರೊ. ರಾಜಲಕ್ಷ್ಮೀ, ಪ್ರೊ. ರಾಮಾನುಜಶೆಟ್ಟಿ, ಪ್ರೊ. ಡಿ.ಸುಬ್ರಮಣ್ಯ, ಪ್ರೊ. ಕೆ.ಎಸ್.ಭಗವಾನ್, ಪ್ರೊ. ಎ.ಎಂ. ಪುಟ್ಟಸ್ವಾಮಿಗೌಡ, ಪ್ರೊ. ಪದ್ಮಾ, ಪ್ರೊ. ಬಿ.ಕೆ. ಜಗದೀಶ್** ಮುಂತಾದ ಶ್ರೇಷ್ಠ ಗುರು ಪರಂಪರೆಯ ದೊಡ್ಡ ಪಟ್ಟಿಯೇ ಇದೆ.

ಶಿಕ್ಷಣ ಕ್ಷೇತ್ರಕ್ಕೆ ಬೇಕಿದೆ ತುರ್ತು ಚಿಕಿತ್ಸೆ!



'ಬುದ್ಧಿವಂತ ಪ್ರಾಣಿಯಾದ ಮನುಷ್ಯ ಶಿಕ್ಷಣದ ವಿಚಾರಕ್ಕೆ ಬಂದಾಗ ಸಂಕುಚಿತ ಮನೋಭಾವ, ತಪ್ಪು ತಿಳುವಳಿಕೆ, ಭಿನ್ನ ಗ್ರಹಿಕೆ ಹೊಂದಿರುವುದು ಕಂಡು ಬರುತ್ತದೆ. ಶಿಕ್ಷಣ ಎಂದರೆ ವಿಷಯ ಜ್ಞಾನ, ಲೋಕ ಜ್ಞಾನ ಎಂದು ಭಾವಿಸದೆ ಕೇವಲ ಅಕ್ಷರ ಜ್ಞಾನ ಎಂದು ತಪ್ಪಾಗಿ ತಿಳಿದವರೆ ಹೆಚ್ಚು. ಓದು ಬರಹ ಬರುವವರನ್ನು ಸಾಕ್ಷರ ಎಂದು ಕರೆಯುತ್ತಾರೆಯೇ ವಿನಃ ವಿದ್ಯಾವಂತ ಎಂದು ಕರೆಯುವುದಿಲ್ಲ. ವಿದ್ಯಾವಂತ ಎಂದರೆ ಅರ್ಥ ತುಸು ವಿಸ್ತಾರ. ಅಕ್ಷರ ಜ್ಞಾನ, ಭಾಷಾ ಜ್ಞಾನದ ಜೊತೆಗೆ ವಿಷಯ ಜ್ಞಾನ ಹೊಂದಿರುವುದು, ಕಲಿತ ಜ್ಞಾನವನ್ನು ಬದುಕಿಗೆ ಅನ್ವಯಿಸಿಕೊಳ್ಳುವುದು ಬಹುಮುಖ್ಯವಾಗುತ್ತದೆ. ಅಂದರೆ ಶಾಲಾ ಪಠ್ಯದಲ್ಲಿ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ.....' ಎಂಬುದನ್ನು ಬಾಯಿಪಾಠ ಮಾಡಿ ಒಪ್ಪಿಸುವುದಕ್ಕಿಂತ ಇದೊಂದು ಜೀವನ ಮೌಲ್ಯ, ನೈತಿಕ ಜೀವನ ಪಾಠ ಎಂದು ಅರಿತು ಅನ್ವಯಿಸಿಕೊಳ್ಳುವುದೇ ಶಿಕ್ಷಣದ ಉದ್ದೇಶವಾಗಿದೆ. ಜೊತೆಗೆ ವಿವಿಧ ಕೌಶಲ್ಯಗಳನ್ನು ಕಲಿಯುವುದು, ವಿವೇಕ, ವಿನಯ, ದೈಹಿಕ ಆರೋಗ್ಯ, ಮಾನಸಿಕ ಸ್ವಾಸ್ಥ್ಯ, ನೈತಿಕ ಪ್ರಜ್ಞೆ, ನಾಗರೀಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ರಾಷ್ಟ್ರ ಪ್ರೇಮ..... ಹೀಗೆ ಹತ್ತು ಹಲವು ಅಂಶಗಳನ್ನು ಹೊಂದಿದೆ.

ಇಂದಿನ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಪರೀಕ್ಷಾ ಕೇಂದ್ರಿತ ಬೋಧನೆ ಹಾಗು ಕಲಿಕೆ ನಡೆಯುತ್ತಿದೆ. ಪಠ್ಯಕ್ರಮಕ್ಕೂ ಜೀವನಕ್ಕೂ ಸಂಬಂಧವೇ ಇಲ್ಲ ಎಂಬುದಾಗಿದೆ. ಶಿಕ್ಷಣದ ಮೂಲ ಉದ್ದೇಶ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿ, ಒಂದೊಳ್ಳೆ ಸಂಬಳ ಬರುವ ಕೆಲಸ ಗಿಟ್ಟಿಸುವುದು ಎಂದು ಬಹುಪಾಲು ಜನರ ನಂಬಿಕೆಯಾಗಿದೆ. ಜೀವನ ಮೌಲ್ಯಗಳನ್ನು ಶಾಲಾ-ಕಾಲೇಜುಗಳಲ್ಲಿ ಕಲಿಯುವ ಸಂಗತಿಗಳಲ್ಲ ಎಂದು ನಂಬಿದ್ದಾರೆ. ಅದಕ್ಕಾಗಿ ಹೆತ್ತವರು ಪ್ರತಿಷ್ಠಿತ ಶಾಲಾ ಕಾಲೇಜುಗಳಿಗೆ ಲಕ್ಷ ಲಕ್ಷ ಶುಲ್ಕ ಕಟ್ಟಿ ಓದಿಸುತ್ತಾರೆ. ಓದಿದ ಮಕ್ಕಳಲ್ಲಿ ಬಹುಪಾಲು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸವನ್ನೂ ಗಿಟ್ಟಿಸುತ್ತಾರೆ. ಆದರೆ ಎಷ್ಟೋ ಮಕ್ಕಳು ತಮ್ಮ ವೃತ್ತಿ ಬದುಕಿನಲ್ಲಿ ಯಶಸ್ಸು ಗಳಿಸಿದರೂ, ವೈಯಕ್ತಿಕ ಬದುಕಿನಲ್ಲಿ ಸೋತು ಸುಣ್ಣವಾಗಿಬಿಡುತ್ತಾರೆ. ಕೆಲಸಕ್ಕೆ ಬೇಕಾದ ಜ್ಞಾನ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವ ಭರದಲ್ಲಿ ಜೀವನ ಪಾಠ ಕಲಿಯುವುದನ್ನು ಮರೆಯುತ್ತಾರೆ. ಹಣ ಗಳಿಸುವ ಕಲೆ ಕರಗತವಾಗಿದ್ದರೂ, ಬದುಕುವ ಕಲೆ ಕಲಿಯುವಲ್ಲಿ ವಿಫಲರಾಗಿರುತ್ತಾರೆ. ಅನೇಕ ವಿದ್ಯಾರ್ಥಿಗಳು ಶಾಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಸಾರ್ವಜನಿಕ ಬದುಕಿನಿಂದ ಒಂದು ಅಂತರ ಕಾಪಾಡಿಕೊಳ್ಳುತ್ತಾರೆ. ತಮ್ಮ ಸುತ್ತ ನಡೆಯುವ ಸಂಗತಿಗಳಿಗೆ ವಿಮುಖರಾಗಿರುತ್ತಾರೆ. ದೇಶದಲ್ಲಿ ಯುದ್ಧವಾದರೂ ಸ್ಪಂದಿಸದೆ, ತಮ್ಮ ಭವಿಷ್ಯಕ್ಕೆ ಮಾರಕವಾಗುವ ತೀರ್ಮಾನಗಳನ್ನು ಶಿಕ್ಷಣ ಇಲಾಖೆ ಪ್ರಕಟಿಸಿದರೂ ಪ್ರತಿಭಟಿಸದೇ ಸಂವೇದನ ರಹಿತವಾಗಿ ವರ್ತಿಸುವ ವಿದ್ಯಾರ್ಥಿಗಳು ಇದ್ದಾರೆ.

'ಒಂದು ದೇಶವನ್ನು ನಾಶ ಮಾಡಬೇಕು ಎಂದರೆ ಆಟಂಬಾಂಬ್ ದಾಳಿ ಮಾಡಬೇಕಿಲ್ಲ, ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸಿದರೆ ಸಾಕು' ಎಂಬ ಮಾತನ್ನು ಮಹನೀಯರೊಬ್ಬರು ಹೇಳಿದ್ದಾರೆ. ಇಂದಿನ ನಮ್ಮ ದೇಶದ ವಿದ್ಯಮಾನಗಳನ್ನು ಗಮನಿಸಿದರೆ ದೇಶಕ್ಕೆ ಆಸ್ತಿಯಾಗಬೇಕಾದ ಪ್ರಜೆಗಳನ್ನು ರೂಪಿಸುವ ಪಠ್ಯಕ್ರಮವನ್ನು ಶಾಲಾ ಕಾಲೇಜುಗಳಲ್ಲಿ ಪರಿಚಯಿಸುವುದಕ್ಕಿಂತ ಹೆಚ್ಚಾಗಿ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿ ಕಾಪಾಡುವಂತಹ ಪಠ್ಯಕ್ರಮವನ್ನು ರೂಪಿಸುತ್ತಿರುವುದು ದುರದೃಷ್ಟಕರ. ಸಂವಿಧಾನದಲ್ಲಿ ಶಿಕ್ಷಣ ವ್ಯವಸ್ಥೆಯ ಕುರಿತಾಗಿ ಇರುವ ನೀತಿನಿಯಮಗಳನ್ನು ಗಾಳಿಗೆ ತೂರಿ ಜಾತಿ, ಧರ್ಮಕ್ಕೆ ಅನುಗುಣವಾಗಿ ಪಠ್ಯಗಳನ್ನು ಓದಬೇಕಾದ ದುಸ್ಥಿತಿ ಇಂದಿನ ಮಕ್ಕಳಿಗೆ ಒದಗಿ ಬಂದಿರುವುದು ವಿಷಾಧನೀಯ. ಶಿಕ್ಷಣದ ಉದ್ದೇಶವನ್ನೇ ಗಾಳಿಗೆ ತೂರಿ, ಆಳುವ ಪಕ್ಷಗಳು ತಮ್ಮ ಪ್ರತಿಷ್ಠೆ ಮೆರೆಯುತ್ತಿರುವುದು ಹೇಯವಾದ ಕ್ರಮವಾಗಿದೆ. ಎನ್.ಪಿ.ಎಸ್ ಹಾಗೂ ಎಸ್.ಪಿ.ಎಸ್ ಪದ್ಧತಿಗಳು ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಡೋಲಾಯಮಾನ ಸ್ಥಿತಿಗೆ ದೂಡುತ್ತಿವೆ.

ದೇಶದ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಇಂದು ಸರ್ಕಾರಿ ಶಾಲಾ ಕಾಲೇಜುಗಳಿಗೆ ಸರ್ಕಾರಗಳು ಹೆಚ್ಚಿನ ಅನುದಾನ ನೀಡುತ್ತಿವೆ. ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಆಯ್ಕೆ ಮಾಡಿದ ಶಿಕ್ಷಕರನ್ನು ನೇಮಕಮಾಡಿ, ಮಧ್ಯಾಹ್ನದ ಬಿಸಿ ಊಟ, ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಉಚಿತ ಬೈಸಿಕಲ್, ಇವೆಲ್ಲವುಗಳ ಜೊತೆಗೆ ವಿದ್ಯಾರ್ಥಿವೇತನ ಹಾಗೆ ವಸತಿ ಶಾಲೆಗಳಲ್ಲಿ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಉಚಿತವಾಗಿ ಕೊಡುತ್ತಿದ್ದರೂ, ಶಾಲಾ ದಾಖಲಾತಿ ಕುಂಠಿತವಾಗುತ್ತಿದೆ, ಶಾಲಾ ಫಲಿತಾಂಶವೂ ಸಹ ಅಷ್ಟಕಷ್ಟೆ. ಶಿಕ್ಷಣ ಇಲಾಖೆಯು ಸರ್ಕಾರದ ಹಣವನ್ನು ಮಕ್ಕಳ ಅಭ್ಯುದಯಕ್ಕಾಗಿ ಖರ್ಚು ಮಾಡುತ್ತಿದೆ. ಪ್ರತಿಯೊಂದು ಮಗುವಿಗೆ ತಗುಲುವ ವೆಚ್ಚವನ್ನು ತಿಳಿದರೆ ಆಶ್ಚರ್ಯವಾಗುತ್ತದೆ.


ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಒಂದು ಸರ್ಕಾರಿ ಪ್ರೌಢಶಾಲೆಯಲ್ಲಿ 100 ವಿದ್ಯಾರ್ಥಿಗಳು ಓದುತ್ತಿದ್ದಾರೆ ಎಂದರೆ, ವರ್ಷವೊಂದಕ್ಕೆ ಪ್ರತಿಯೊಂದು ಮಗುವಿಗೂ ರೂ.1.50 ಲಕ್ಷ ಖರ್ಚಾಗುತ್ತದೆ ಎಂದರೆ ನಂಬಲು ಸಾಧ್ಯವೇ? ಕಟ್ಟಡ ನಿರ್ಮಾಣ, ಬಿಸಿಊಟ, ಪಠ್ಯಪುಸ್ತಕ, ಸಮವಸ್ತ್ರ, ಶಾಲಾ ಶಿಕ್ಷಕರ ವೇತನ ಇತ್ಯಾದಿ ಖರ್ಚುಗಳನ್ನು ಲೆಕ್ಕ ಮಾಡಿ ಪ್ರತಿಯೊಬ್ಬ ಮಗುವಿಗೂ ಭಾಗ ಮಾಡಿದರೆ ಲಕ್ಷ ರೂಪಾಯಿಗೂ ಹೆಚ್ಚು ಖರ್ಚು ಬರುತ್ತಿದೆ. ಸರ್ಕಾರ ಖರ್ಚು ಮಾಡುವ ಈ ಹಣ ಸಾರ್ಥಕವಾಗುತ್ತಿದೆಯೇ? ಸಾವಿರಾರು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಇಲ್ಲದೆ ಮುಚ್ಚಲು ಕ್ರಮವಹಿಸಲಾಗುತ್ತಿದೆ, ಕೆಲವೆಡೆ ದಾಖಲಾತಿ ಕಡಿಮೆಯಾಗಿ ಎರಡು ಮೂರು ಶಾಲೆಗೆ ವಿಲೀನಗೊಳಿಸಲಾಗುತ್ತಿದೆ. ಇವೆಲ್ಲವರುಗಳ ನಡುವೆ ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ತುಂಬಿ ತುಳುಕುತ್ತಿದ್ದಾರೆ. ಹೆತ್ತವರು ಸಾಲ ಮಾಡಿಯಾದರೂ ದುಬಾರಿ ಶುಲ್ಕ ತುಂಬುತ್ತಿದ್ದಾರೆ. ಏಕೆಂದರೆ ಅವರಿಗೆ ಸರ್ಕಾರಿ ಶಾಲೆ-ಕಾಲೇಜುಗಳ ಮೇಲೆ ನಂಬಿಕೆ ಕಡಿಮೆಯಾಗುತ್ತಿದೆ. ಅತ್ಯಂತ ಬುದ್ಧಿವಂತ, ಸಮರ್ಥ ಬೋಧಕ ವರ್ಗ ಇದ್ದರೂ, ಕಟ್ಟಡ ಪೀಠೋಪಕರಣಗಳು ಇದ್ದರೂ, ಸರ್ಕಾರಿ ಶಾಲಾ ಕಾಲೇಜುಗಳ ಬಗ್ಗೆ ತಾತ್ಸಾರ ಏಕೆ ಎಂಬ ಸತ್ಯ ತಿಳಿಯ ಹೊರಟರೆ, ಬಹುತೇಕ ಶಾಲಾ ಕಾಲೇಜುಗಳಲ್ಲಿ ಇಚ್ಛಾಶಕ್ತಿಯ ಕೊರತೆ ಕಂಡುಬರುತ್ತದೆ. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಖಾಸಗಿ ಶಾಲಾ ಕಾಲೇಜುಗಳಂತೆ ಆಡಳಿತ ಮಂಡಳಿಯ ಒತ್ತಡ ಇರುವುದಿಲ್ಲ. ಇಲಾಖೆಗೆ ಅಗತ್ಯವಾದ ದಾಖಲೆ ಒದಗಿಸಿದರೆ ಆಯ್ತು ಎಂಬ ಮನೋಭಾವ, ಟೀಂ ವರ್ಕ್‌ನಲ್ಲಿ ಕೆಲಸ ಮಾಡದೇ ಇರುವುದು, ಮಕ್ಕಳಿಗೆ ಎಷ್ಟೇ ಹೇಳಿದರೂ ಪ್ರಯೋಜನವಿಲ್ಲ ಎಂಬ ಪೂರ್ವಗ್ರಹ ಪೀಡನೆ ಹೀಗೆ ಅನೇಕ ಕಾರಣಗಳಿಗೆ ಗುಣಮಟ್ಟದ ಕೊರತೆಯನ್ನು ಸರ್ಕಾರಿ ಶಾಲಾ ಕಾಲೇಜುಗಳು ಎದುರಿಸುತ್ತಿವೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳು ಯೋಜನೆ ಅನುಷ್ಠಾನವನ್ನು ಕೇವಲ ದಾಖಲೆಯಲ್ಲಿ ಕೇಳುವುದು, ಶಿಕ್ಷಕರು ಪಾಠ ಬೋಧನೆಗಿಂತ ಬಿಸಿಊಟದ ವ್ಯವಸ್ಥೆಗೆ ಹೆಚ್ಚು ಸಮಯ ವ್ಯಯಿಸುವುದು, ಶಿಕ್ಷಣ ಸಚಿವರ ಅಕಾಲಿಕ ತೀರ್ಮಾನಗಳು, ಭಾಷಾ ಕಲಿಕೆಯ ದಿಢೀರ್ ತೀರ್ಮಾನಗಳು ವಿದ್ಯಾರ್ಥಿಗಳನ್ನು ಗೊಂದಲಕ್ಕೆ ಈಡು ಮಾಡುತ್ತಿದೆ. ಇಂದಿನ ಮಕ್ಕಳು ಫಲಿತಾಂಶದಲ್ಲಿ ಹಿಂದೆ ಬೀಳದೇ ಇದ್ದರೂ, ಅವರ ನೈಜ ಜ್ಞಾನವನ್ನು ಪರೀಕ್ಷಿಸಲು ಹೊರಟರೆ ಆಘಾತವಾಗುವುದು ಸತ್ಯ. ಪರೀಕ್ಷೆಗೆ ಎಷ್ಟು ಬೇಕು ಅಷ್ಟು ತಯಾರಿ ನಡೆಸಿ, ಉರುಹಚ್ಚಿ ಉತ್ತರಗಳನ್ನು ಬರೆದು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯ ಜ್ಞಾನದ ಮಟ್ಟ ಉತ್ತಮವಾಗಿ ಇರುತ್ತದೆ ಎಂಬ ನಂಬಿಕೆ ಇಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವರ ಜ್ಞಾನದ ಬಂಡವಾಳ ಬಯಲಾಗುತ್ತದೆ.

ರಾಜ್ಯದಲ್ಲಿ ಜಿಲ್ಲೆಗೊಂದು ವಿಶ್ವವಿದ್ಯಾನಿಲಯಗಳನ್ನು ಸರ್ಕಾರ ಸ್ಥಾಪಿಸಿದರೂ, ಅವುಗಳಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಗೊಂದಲದ ಗೂಡಾಗಿವೆ. ಅನುದಾನದ ಕೊರತೆಯಿಂದ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ವಿಫಲವಾಗುತ್ತಿವೆ. ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾನಿಲಯ, ಶತಮಾನಗಳ ಇತಿಹಾಸ ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಂಚಣಿ ಹಾಗೂ ವೇತನ ನೀಡಲು ಸಹ ಅನುದಾನದ ಕೊರತೆ ಎದುರಾಗಿದೆ ಎಂದರೆ ಇನ್ನುಳಿದ ವಿಶ್ವವಿದ್ಯಾನಿಲಯಗಳ ಪರಿಸ್ಥಿತಿ ಹೇಗಿರಬೇಡ, ಚಿಂತನೆ ನಡೆಸಿ. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಬೋಧಕ ಸಿಬ್ಬಂದಿ ಕೊರತೆಯಿಂದ ಶಿಕ್ಷಣದ ಗುಣಮಟ್ಟವೇ ಕುಸಿಯುತ್ತಿದೆ.

ದೇಶದ ಮುಂದಿನ ಪ್ರಜೆಗಳನ್ನು ಉತ್ತಮ ರೀತಿಯಲ್ಲಿ ರೂಪಿಸಬೇಕಾದ ಹೊಣೆ ಸರ್ಕಾರಗಳದ್ದು. ಶೈಕ್ಷಣಿಕ ಗುಣಮಟ್ಟ ಎಂದರೆ ಕೇವಲ ಬೋರ್ಡ್ ಪರೀಕ್ಷೆಗಳ ಫಲಿತಾಂಶಗಳ ಮೇಲೆ ತೀರ್ಮಾನಿಸಲಾಗದು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಶಿಕ್ಷಣದ ಗುರಿಯಾಗಿದೆ. ಎಷ್ಟೋ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಸೂಕ್ತವಾದ ಆಟದ ಮೈದಾನವಿಲ್ಲ, ದೈಹಿಕ ಶಿಕ್ಷಣ ಶಿಕ್ಷಕರಿಲ್ಲ. ವಿದ್ಯಾರ್ಥಿಗಳ ಮಾನಸಿಕ ವಿಕಸನದ ಜೊತೆಗೆ ದೈಹಿಕ ವಿಕಸನವೂ ಮುಖ್ಯ ಅಲ್ಲವೇ? ಇವುಗಳನ್ನು ಸುಧಾರಿಸುವವರು ಯಾರು? ಇಂದಿನ ಮಕ್ಕಳು ಮೊದಲೇ ಮೊಬೈಲ್‌ನಲ್ಲಿ ಸಾಮಾಜಿಕ ಜಾಲತಾಣಗಲ್ಲಿ ಅರ್ಥಹೀನ, ಕೀಳು ಅಭಿ ರುಚಿಯ ಕಾರ್ಯಕ್ರಮಗಳ ಹಾವಳಿಯಿಂದ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಪರೀಕ್ಷೆ ಎಂದರೆ ಪೋಷಕರಿಗೆ ಭಯವಾಗುವುರಲ್ಲಿ ಅರ್ಧದಷ್ಟು ಭಯ ಮಕ್ಕಳಿಗೆ ಇಲ್ಲ. ಏಕೆಂದರೆ ಒಂಭತ್ತ ನೇ ತರಗತಿಯ ವರೆವಿಗೆ ಯಾವುದೇ ವಿದ್ಯಾರ್ಥಿಯನ್ನು ಫೇಲ್ ಮಾಡುವಂತಿಲ್ಲ ಎಂಬ ನಿಯಮವಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಆಂತರಿಕ ಅಂಕಗಳನ್ನು ಹೊರತು ಪಡಿಸಿ 80 ಅಂಕಗಳಿಗೆ ಕೇವಲ 13 ಅಂಕ ಗಳಿಸಿದರೆ ಸಾಕು ಎಂಬ ಸತ್ಯ ಮಕ್ಕಳಿಗೆ ತಿಳಿದಿದೆ. ಅಷ್ಟು ಅಂಕವನ್ನು ಹೇಗೋ ಗಳಿಸಿದ ರಾಯಿತು ಎಂದು ಗಂಭೀರವಾಗಿ ಅಧ್ಯಯನ ಮಾಡದೆ ಉಡಾಫೆ ಮಾಡುತ್ತಾರೆ. ಮೊಬೈಲ್, ಟಿ.ವಿ. ಐ.ಪಿ.ಎಲ್ ಕ್ರಿಕೆಟ್ ಎಂಬ ಹುಚ್ಚಾಟ ಗಳಿಂದ ನಗರ ಪ್ರದೇಶ ಗ್ರಾಮೀಣ ಪ್ರದೇಶ ಎನ್ನದೆ ಬಹುಪಾಲು ಮಕ್ಕಳು ದಾರಿತಪ್ಪುತ್ತಿದ್ದಾರೆ.

ಇಂದಿನ ಮಕ್ಕಳಿಗೆ ಗುರುಹಿರಿಯರನ್ನು ಕಂಡರೆ ಭಯವಿಲ್ಲ. ಸಮಾಜದಲ್ಲಿ ತಪ್ಪು ಮಾಡಿದಾಗ ಪಶ್ಚತ್ತಾಪವಿಲ್ಲ, ನೈತಿಕ ಭಯವಿಲ್ಲ. ಅನೇಕ ಮಕ್ಕಳು ಕಿರಿಯ ವಯಸ್ಸಿಗೆ ಧೂಮಪಾನ, ಮದ್ಯಪಾನ ಹಾಗೂ ಡ್ರಗ್ಸ್ ವ್ಯಸನಕ್ಕೆ ತುತ್ತಾಗುತ್ತಿದ್ದಾರೆ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದಕ್ಕೂ ಕಡಿವಾಣವಿಲ್ಲ. ಆನ್‌ಲೈನ್‌ನಲ್ಲಿ ಏನು ಬೇಕಾದರೂ ಖರೀದಿಸಬಹುದು ಎಂಬುದು ಮಕ್ಕಳಿಗೆ ತಿಳಿದಿದೆ. ಪೋಷಕರ ಕಣ್ಣಿಗೆ ಮಣ್ಣೆರಚಿ ಅನೇಕ ಮಕ್ಕಳು ತಪ್ಪು ಹಾದಿಯಲ್ಲಿ ನಡೆಯುತ್ತಿದ್ದಾರೆ.

ಒಂದು ದೇಶದ ಮಕ್ಕಳನ್ನು ಜವಾಬ್ದಾರಿಯುತ ಪ್ರಜೆಯಾಗಿ ರೂಪಿಸುವುದು ಎಲ್ಲರ ಹೊಣೆ. ಅದಕ್ಕಾಗಿ ಶಿಕ್ಷಣ ಕ್ಷೇತ್ರಕ್ಕೆ ಒಂದು ಚಿಕಿತ್ಸೆ ಇಂದು ಅತ್ಯಗತ್ಯವಾಗಿದೆ. ಪೋಷಕರು, ಶಿಕ್ಷಕರು, ಸಮಾಜ ಹಾಗೂ ಸರ್ಕಾರ ಎಲ್ಲರ ಪ್ರಯತ್ನವಿದ್ದರೆ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಸಾಧ್ಯ, ಇಲ್ಲವಾದಲ್ಲಿ ನಮ್ಮ ದೇಶ ದಿಕ್ಕು ತಪ್ಪಿದ ಅತ್ಯಂತ ಹೆಚ್ಚು ಯುವಕರನ್ನು ಹೊಂದಿದ ದೇಶ ಎಂಬ ಕುಖ್ಯಾತಿ ಗಳಿಸಲು ಬಹುಕಾಲ ಬೇಕಿಲ್ಲ. ಸಂಬಂಧಪಟ್ಟವರು ಈ ಕುರಿತು ಹೆಚ್ಚಿನ ಗಮನ ಹರಿಸಬೇಕು. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಪ್ರಾಮಾಣಿಕ ಪ್ರಯತ್ನವಾಗಬೇಕು. ವೃತ್ತಿ ನಿಷ್ಠೆಯಿಂದ ಬೋಧಕವರ್ಗ ಕೆಲಸ ಮಾಡಬೇಕು. ಉತ್ತಮ ಶಿಕ್ಷಕರ ತಂಡದಿಂದ ಅನೇಕ ಸರ್ಕಾರಿ ಶಾಲಾ ಕಾಲೇಜುಗಳನ್ನು ಮಾದರಿ ಸಂಸ್ಥೆಯಾಗಿ ರೂಪಿಸಿದ ಉದಾಹರಣೆಗಳು ಇವೆ. ಅವುಗಳನ್ನು ಅನುಸರಿಸುವ ಕಾರ್ಯವಾಗಬೇಕು. ಒಟ್ಟಾರೆಯಾಗಿ ನಮ್ಮ ದೇಶದ ಮಕ್ಕಳಿಗೆ ಉಜ್ವಲ ಭವಿಷ್ಯ ರೂಪುಗೊಳ್ಳಬೇಕು.

> **ಒಂದು ದೇಶವನ್ನು ನಾಶ ಮಾಡ ಬೇಕು ಎಂದರೆ ಆಟಂಬಾಂಬ್ ದಾಳಿ ಮಾಡಬೇಕಿಲ್ಲ, ಅಲ್ಲಿನ ಶಿಕ್ಷಣ ವ್ಯವಸ್ಥೆ ಯನ್ನು ದುರ್ಬಲ ಗೊಳಿಸಿದರೆ ಸಾಕು' ಎಂಬ ಮಾತನ್ನು ಮಹನೀಯರೊಬ್ಬರು ಹೇಳಿದ್ದಾರೆ. ಇಂದಿನ ನಮ್ಮ ದೇಶದ ವಿದ್ಯಮಾನಗಳನ್ನು ಗಮನಿಸಿದರೆ ದೇಶಕ್ಕೆ ಆಸ್ತಿಯಾಗಬೇಕಾದ ಪ್ರಜೆಗಳನ್ನು ರೂಪಿಸುವ ಪಠ್ಯಕ್ರಮವನ್ನು ಶಾಲಾ ಕಾಲೇಜುಗಳಲ್ಲಿ ಪರಿಚಯಿಸುವುದಕ್ಕಿಂತ ಹೆಚ್ಚಾಗಿ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿ ಕಾಪಾಡುವಂತಹ ಪಠ್ಯಕ್ರಮವನ್ನು ರೂಪಿಸುತ್ತಿರುವುದು ದುರದೃಷ್ಟಕರ. ಸಂವಿಧಾನದಲ್ಲಿ ಶಿಕ್ಷಣ ವ್ಯವಸ್ಥೆಯ ಕುರಿತಾಗಿ ಇರುವ ನೀತಿನಿಯಮಗಳನ್ನು ಗಾಳಿಗೆ ತೂರಿ ಜಾತಿ, ಧರ್ಮಕ್ಕೆ ಅನುಗುಣವಾಗಿ ಪಠ್ಯಗಳನ್ನು ಓದಬೇಕಾದ ದುಸ್ಥಿತಿ ಇಂದಿನ ಮಕ್ಕಳಿಗೆ ಒದಗಿ ಬಂದಿರುವುದು ವಿಷಾಧನೀಯ. ಶಿಕ್ಷಣದ ಉದ್ದೇಶವನ್ನೇ ಗಾಳಿಗೆ ತೂರಿ, ಆಳುವ ಪಕ್ಷಗಳು ತಮ್ಮ ಪ್ರತಿಷ್ಠೆ ಮೆರೆಯುತ್ತಿರುವುದು ಹೇಯ ವಾದ ಕ್ರಮವಾಗಿದೆ. ಎನ್.ಪಿ.ಎಸ್ ಹಾಗೂ ಎಸ್.ಪಿ.ಎಸ್ ಪದ್ಧತಿಗಳು ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಡೋಲಾಯಮಾನ ಸ್ಥಿತಿಗೆ ದೂಡುತ್ತಿವೆ.**



ಸಾಮಾಜಿಕ ಸ್ಪಂದನೆ ವೇದಿಕೆಯಾಯ್ತು.....
ಸಮತಾ ಅಧ್ಯಯನ ಕೇಂದ್ರ





ರಸಮಟ್ಟವನ್ನು ಹಿಡಿದು ಮಾಡಿರದ ನೆಲ ಮೇಲ್ನೋಟಕ್ಕೆ ಸಮತಟ್ಟಾಗಿ ಕಾಣಿಸಿದರೂ, ನಡೆಯುವಾಗ ಅದರ ಉಬ್ಬು ತಗ್ಗುಗಳು, ಹಳ್ಳತಿಟ್ಟುಗಳು ಅನುಭವಕ್ಕೆ ಬಂದು ನಡಿಗೆಯನ್ನು ಅಸಂತುಲಿತಗೊಳಿಸುವಂತೆ, ಪ್ರಪಂಚದ ಎಲ್ಲಾ ದೇಶ, ಧರ್ಮ, ಸಂಸ್ಕೃತಿಗಳೂ ಮಹಿಳೆಯನ್ನು ಸಮಾನ ಪಾತಳಿಯಲ್ಲಿಟ್ಟು ನೋಡದೆ, ನಡೆಸಿಕೊಳ್ಳದೆ, ಎರಡನೇ ದರ್ಜೆಯ ಲಿಂಗವಾಗಿ, ವಸ್ತುವಾಗಿ ನೋಡಿದ್ದೇ ಹೆಚ್ಚು. ಹೀಗೆ ಬೆಳೆದು ಬಂದ ಲಿಂಗ ತಾರತಮ್ಯ, ಅಸೂಕ್ಷ್ಮತೆ ಮಹಿಳೆಯರ ಅಂತಃಶಕ್ತಿಗೆ ಗೋಚರವಾಗಿ ಅನುಭವಕ್ಕೆ ಬರುವ ಹೊತ್ತಲ್ಲೇ ವಿಶ್ವಾದ್ಯಂತ ಮಹಿಳಾಪರ ಚಿಂತನೆಗಳು ದಟ್ಟೈಸತೊಡಗಿತು. ಸ್ತ್ರೀವಾದದ ಆಶಯಗಳು ಭಾರತದಲ್ಲಿ ಸ್ವತಂತ್ರಪೂರ್ವದಲ್ಲೇ ಅಡಿಯಿಟ್ಟಿತು. ಅದೇ ಸುಮಾರಿಗೆ, ಕನ್ನಡದ ಮಣ್ಣಲ್ಲಿ ಸ್ತ್ರೀವಾದಿ ಚಿಂತನೆಗಳು ಬಲಗೊಂಡವು.

ಮಹಿಳೆಯ ಹುಟ್ಟು, ಅಸ್ತಿತ್ವದ ಹುಡುಕಾಟ, ಸಮಾಜದೊಡನೆ ಸಂಬಂಧ, ಕೊಡುಕೊಳ್ಳುವಿಕೆಗಳನ್ನು ಹೊಸ ಪರಿಕಲ್ಪನೆಯಲ್ಲಿ ಕಟ್ಟಿ ಬೆಳೆಸುವ ಹಂಬಲದಲ್ಲಿ ಮಹಿಳಾ ಸಮಾನತೆಯ ಕನಸುಗಳನ್ನು ಸಾಕಾರಗೊಳಿಸಲು ಮೊದಲ ಹೆಜ್ಜೆ ಇಟ್ಟವರು ಡಾ. ವಿಜಯಾ ದಬ್ಬೆ. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದಬ್ಬೆ ಗ್ರಾಮದಲ್ಲಿ 01.6.1952ರಲ್ಲಿ ಜನಿಸಿದ ವಿಜಯಾ ದಬ್ಬೆ, ವಿದ್ಯಾಭ್ಯಾಸ ಮುಗಿಸಿ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ, ಸ್ತ್ರೀ ಸಮಾನತೆಯ ಬೀಜಗಳನ್ನು ಬಿತ್ತುವುದಕ್ಕೆ ಮೊದಲಿಗೆ ಪರಿಸರವನ್ನು ಹದಗೊಳಿಸಿಕೊಂಡರು. ಅವರ ಸ್ತ್ರೀಪರ ಚಿಂತನೆಗಳಿಗೆ ಸಂಘಟನೆಯ ರೂಪ ನೀಡಲು ಸಮಾನ ಮನಸ್ಕರು ಜೊತೆಯಾದರು.

ಶೋಷಿತ ಮಹಿಳೆಯರ, ಸಂತ್ರಸ್ತೆಯರ ಅಳಲು ಆಕ್ರಂದನಕ್ಕೆ ಸ್ಪಂದಿಸುವ ಅನೇಕ ಸಂಸ್ಥೆಗಳು ಆಗಲೇ ಇದ್ದವು. ಆ ನಿಟ್ಟಿನಲ್ಲಿ ಅವುಗಳು ಕಾರ್ಯನಿರ್ವಹಿಸುತ್ತಿದ್ದವು. ಅಂತಹ ಸಂಘಟನೆಗಳಿಗೆ ಹೆಣ್ಣಿನ ಸೂಕ್ಷ್ಮಗಳನ್ನರಿಯುವ, ಅವರ ಅತಂತ್ರ ಸ್ಥಿತಿಗೆ ಮೂಲಕಾರಣವನ್ನು ಶೋಧಿಸುವಂತಹ ಬಹು ಆಯಾಮಗಳಿರಲಿಲ್ಲ. ಮೈಸೂರಿನ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸಾಹಿತ್ಯ ಮತ್ತು ಸಂಘಟನೆಯ ಆಶಯಗಳೊಡನೆ ಹುಟ್ಟಿಕೊಂಡ 'ಗೆಳತಿಯರ ಬಳಗ' ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿತು. ಸಾಹಿತ್ಯ, ಅಧ್ಯಯನ, ಸಂಶೋಧನೆ, ಪುಸ್ತಕ ಪ್ರಕಟಣೆ, ಆಂದೋಲನಗಳ ಮೂಲಕ ಸ್ತ್ರೀ ಜಾಗೃತಿಯನ್ನು ಮೂಡಿಸುವ, ತನ್ಮೂಲಕ ಸಾಮಾಜಿಕ ಸ್ಪಂದನೆಯನ್ನು ಹುಟ್ಟು ಹಾಕುವ ಕೆಲಸಕ್ಕೆ ಕೈಯಿಟ್ಟಿತು. ಎಂ.ಕೆ.ಇಂದಿರಾ, ಎಚ್.ವಿ.ಸಾವಿತ್ರಮ್ಮ, ಡಾ.ಅನುಪಮಾ ನಿರಂಜನ ಅವರಂತಹ ಹಿರಿಯ ಲೇಖಕಿಯರು ಇಲ್ಲಿ ಬಂದು ಉಪನ್ಯಾಸ ಮತ್ತು ಸಂವಾದದಲ್ಲಿ ತೊಡಗಿಕೊಂಡರು. ಸಮತಾ ಅಧ್ಯಯನ ಕೇಂದ್ರದ ಕನಸು ಮೊಳೆತದ್ದು, ಮಹಿಳಾಪರ ಚಿಂತನೆ ಮತ್ತು ಧ್ವನಿಗಾಗಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡ ಡಾ. ವಿಜಯಾ ದಬ್ಬೆಯವರಿಂದ. ಅವರು ಈ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು. 1998ರಲ್ಲಿ ಡಾ. ವಿಜಯಾ ದಬ್ಬೆ ಅವರಿಂದ ಸ್ಥಾಪನೆಗೊಂಡ 'ಸಮತಾ ಅಧ್ಯಯನ ಕೇಂದ್ರ'. ಲಿಂಗಾಧಾರಿತ ತಾರತಮ್ಯಗಳನ್ನು, ಕಾರಣ–ಪರಿಹಾರಗಳನ್ನು ಗೊತ್ತು ಹಚ್ಚುವ, ಮಹಿಳೆಯ ಇಕ್ಕಟ್ಟು–ಬಿಕ್ಕಟ್ಟುಗಳನ್ನು, ಧಾರ್ಮಿಕ, ರಾಜಕೀಯ, ಸಾಮಾಜಿಕ, ಕೌಟುಂಬಿಕ ನೆಲೆಯಲ್ಲಿ ಕಂಡರಿಸಿ, ಸಿದ್ಧ ಮಾದರಿಗಳಾಚೆ ಸ್ತ್ರೀ ಅಸ್ಮಿತೆಯನ್ನು ಕಡೆದು ನಿಲ್ಲಿಸುವ ಪರಿಕಲ್ಪನೆಯಿಂದ ಆರಂಭವಾಗಿದ್ದು 'ಸಮತಾ ಅಧ್ಯಯನ ಕೇಂದ್ರ'. 1998ರ ಆರಂಭದ ದಿನಗಳಲ್ಲಿ ಜೊತೆಗಿದ್ದವರು ಡಾ. ವಿಜಯಾ ದಬ್ಬೆ, ಅಹಲ್ಯಾ ಬಿ.ಎಸ್., ರಾಮಕೃಷ್ಣ ಜೋಶಿ, ಡಾ. ಆರ್. ಸುನಂದಮ್ಮ, ಡಾ.ಬಿ.ಸಿ.ಮಂಜುಳಾ, ಸುಮನ ಎಂ.ಎನ್., ಸತೀಶ್ ಎಚ್.ಎಲ್., ಡಾ. ಶ್ರೀವಳ್ಳಿ ಟಿ.ಎಸ್. ವೀಣಾ ಶರ್ಮ, ಡಾ.ಮಣಿಕರ್ಣಿಕಾ, ಡಾ. ಎಂ ಎಸ್. ವೇದಾ, ಡಾ. ಕಲಾಶ್ರೀ ಎಚ್.ಎಮ್., ಹೇಮಲತಾ ಸಿ.

ಆರಂಭಿಕ ಕಾರ್ಯಕ್ರಮಗಳು: ಸಮತಾ ಅಧ್ಯಯನ ಕೇಂದ್ರದ ಆರಂಭಿಕ ಕಾರ್ಯಕ್ರಮಗಳು ಬಹುತೇಕ ಶೈಕ್ಷಣಿಕ, ಸಾಹಿತ್ಯಿಕ, ಬೋಧನಾತ್ಮಕ ರೂಪದಲ್ಲಿಯೇ ನಡೆದು ಬಂದವು. ಮಹಿಳೆಗೆ ಸಂಬಂಧಿಸಿದ ವಿಚಾರಗಳ ಅರಿವು ಮೂಡಿಸುವ ನಿಟ್ಟಿನಲ್ಲಿ– ಕಾನೂನು, ವೈದ್ಯಕೀಯ, ಮನಃಶಾಸ್ತ್ರ, ಜೀವಶಾಸ್ತ್ರ, ಧರ್ಮ..... ಇತ್ಯಾದಿ ಕ್ಷೇತ್ರಗಳಲ್ಲಿ ಮಹಿಳೆಗೆ ಸಂಬಂಧಿಸಿದಂತೆ ಅನೇಕ ಉಪನ್ಯಾಸಗಳನ್ನು ಸಮತಾ ಅಧ್ಯಯನ ಕೇಂದ್ರದಲ್ಲೂ ಏರ್ಪಡಿಸಲಾಗಿತ್ತು. 'ಜೈವಿಕ ರಾಜಕೀಯ ಮತ್ತು ಮಹಿಳೆ (ಡಾ. ಎನ್.ಎಸ್. ರಾಮಸ್ವಾಮಿ), 'ಮಹಿಳೆಯರಲ್ಲಿ ಒಂಟಿತನ ಮತ್ತು ನಿರ್ಲಕ್ಷಿತ ಭಾವನೆ' (ಡಾ. ಶಿವಾ ಸುಬ್ರಹ್ಮಣ್ಯ), 'ಮಹಿಳೆಯರ ಜೈವಿಕ ಸಮಸ್ಯೆಗಳು' (ಡಾ.ಗ್ಲಾಡಿಸ್ ಕೀರ್ತಿಕುಮಾರ್) ಇವೇ ಮುಂತಾದವು.

ವಿಚಾರ ಸಂಕಿರಣಗಳು: ಸಮತಾ ಅಧ್ಯಯನ ಕೇಂದ್ರವು ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಅಖಿಲ ಕರ್ನಾಟಕ ಲೇಖಕಿಯರ ಸಂಘ, ಶಾಶ್ವತಿ– ಇಂತಹ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಹಲವಾರು ವಿಚಾರ ಸಂಕಿರಣಗಳನ್ನು ನಡೆಸಿದೆ. 'ಬೇಂದ್ರೆ ಕಾವ್ಯದಲ್ಲಿ ನಾರೀ ಮತ್ತು ನಾರೀ ಭಾವ, 'ಸಾರಾ 60' 'ನಾರಿ ನೆಲೆಯಿಂದ ಜನಪದ ಮಹಾಕಾವ್ಯಗಳು, 'ಪರಿಸರ ಮಹಿಳಾ ಸಾಹಿತ್ಯ, 'ಸ್ತ್ರೀವಾದಿ ನೆಲೆಯಿಂದ ಪಂಪ, 'ಕನ್ನಡ ಸ್ತ್ರೀವಾದಿ ಸಾಹಿತ್ಯ ಮತ್ತು ಚಳುವಳಿ:– ಸ್ಥಿತ್ಯಂತರಗಳು', 'ರಾಜಕೀಯ ಸಾಕ್ಷರತೆ' ಮಹಿಳಾ ಸಮಾವೇಶ ಇತ್ಯಾದಿ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳು ಮುಖ್ಯವಾದುವು.

ಸಮತಾ ಅಧ್ಯಯನ ಕೇಂದ್ರದ ಪ್ರಕಟಣೆಗಳು: ಕೇಂದ್ರವು ಮಹಿಳೆಯರ ಮತ್ತು ಮಹಿಳಾ ಕೇಂದ್ರದ ಕೃತಿಗಳ ಪ್ರಕಟಣೆಯ ಕಾರ್ಯವನ್ನು ಕಾಲಾನುಕಾಲಕ್ಕೆ ನಡೆಸಿಕೊಂಡು ಬಂದಿದೆ. 'ಸ್ತ್ರೀವಾದಿ ದಿಕ್ಸೂಚಿ' ಡಾ. ಆರ್. ಇಂದಿರಾ, 'ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, ಮೂಲ: ಮಧುಕಿಶ್ವರ್, ಅನುವಾದ ಎಚ್. ಎಮ್. ಹೇಮಲತ, 'ಜಯಲಕ್ಷ್ಮಿ ದೇವಿ: ವ್ಯಕ್ತಿ–ಅಭಿವ್ಯಕ್ತಿ(ಸಂಪಾದಕಿ ಡಾ. ಚಂದ್ರಮತಿ ಸೋಂದಾ), 'ಜನಪದ ಸಾಹಿತ್ಯದ ಮಹಿಳಾ ಜಗತ್ತು–ಡಾ.ಆರ್.ಸುನಂದಮ್ಮ, ಯುವಪದ, ನೆನಪಿನಂಗಳದಲ್ಲಿ ವಿಜಯಾ ದಬ್ಬೆ–ಸಂಪಾದಕಿ ಡಾ. ಸಬಿಹಾ ಭೂಮಿಗೌಡ ಈ ಮುಂತಾದುವನ್ನು ಮುಖ್ಯವಾಗಿ ಹೆಸರಿಸಬಹುದು. ಇದಕ್ಕೆ ಸಾಪೇಕ್ಷವಾಗಿ ಲೇಖಕಿಯರು ಬರೆದ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸುವ ಕಾರ್ಯಕ್ರಮಗಳನ್ನು ಕೇಂದ್ರ ನಿರಂತರವಾಗಿ ನಡೆಸುತ್ತಾ ಬಂದಿದೆ. ಡಾ. ಶ್ರೀವಳ್ಳಿ, ಡಾ.ಬಿ.ಎನ್.ಸುಮಿತ್ರಾಬಾಯಿ, ಡಾ.ಆರ್. ಸುನಂದಮ್ಮ, ಡಾ.ಚಂದ್ರಮತಿ ಸೋಂದಾ, ಡಾ. ಎಂ.ಎಸ್.ವೇದಾ ಮುಂತಾದ ಲೇಖಕಿಯರ ಕೃತಿಗಳನ್ನು ಅಧ್ಯಯನ ಕೇಂದ್ರವು ಬಿಡುಗಡೆಗೊಳಿಸಿದೆ. ಹಲವು ಕೃತಿಗಳನ್ನು ಕುರಿತಾದ ಸಂವಾದಗಳನ್ನು ಏರ್ಪಡಿಸಿದೆ.

ಸಾಂಸ್ಕೃತಿಕ ಆಯಾಮಗಳು: ಕೇಂದ್ರವು ಸಾಂಸ್ಕೃತಿಕ ನೆಲೆಗಳಿಂದಲೂ ಸಾಮಾಜಿಕ ಅರಿವು ಮೂಡಿಸಿತು. ಮಹಿಳಾಪರ ಹಾಡು, ನೃತ್ಯ, ಏಕವ್ಯಕ್ತಿ ಪ್ರದರ್ಶನ ಇತ್ಯಾದಿಗಳನ್ನು ನಡೆಸಿಕೊಂಡು ಬಂದಿದೆ. ಶ್ರೀ ವಿದ್ಯಾಭೂಷಣರ ಸಂಗೀತ, ವಿದುಷಿ ತುಳಸೀ ರಾಮಚಂದ್ರರ ನೃತ್ಯ ಕಾರ್ಯಕ್ರಮ, ಕಲಾವಿದೆ ಲಕ್ಷ್ಮೀ ಚಂದ್ರಶೇಖರ್ ಅವರ ಏಕವ್ಯಕ್ತಿ ಪ್ರದರ್ಶನ, ಜಯಶ್ರೀ ಬಿ. ಅವರ ಚಿತ್ರಪಟ ರಾಮಾಯಣ ನಾಟಕ ಪ್ರದರ್ಶನ, ಶಿರಸಿ ಮೇಳ ಮತ್ತು ದಕ್ಷಿಣ ಕನ್ನಡ ಮೇಳಗಳಿಂದ ಮಹಿಳಾ ಯಕ್ಷಗಾನ ಪ್ರದರ್ಶನಗಳು ನಡೆದಿವೆ.

ವಿಜಯಾ ದಬ್ಬೆಯವರ ನಂತರ ಪ್ರಖ್ಯಾತ ವಕೀಲರಾದ ಸುಮನಾ ಎಂ.ಎನ್. ಕೇಂದ್ರದ ಅಧ್ಯಕ್ಷರಾದರು. ಈಗ ಡಾ.ಸಬಿಹಾ ಭೂಮಿಗೌಡ ಅವರು ಅಧ್ಯಕ್ಷರಾಗಿದ್ದು, ವಿಜಯಾ ರಾವ್ ಉಪಾಧ್ಯಕ್ಷರಾಗಿದ್ದಾರೆ. ಡಾ.ಆರ್.ಸುನಂದಮ್ಮ ಕಾರ್ಯದರ್ಶಿಗಳಾಗಿದ್ದಾರೆ. ಶ್ರೀಯುತ ಪಿ. ಓಂಕಾರ್ ಸಹ ಕಾರ್ಯದರ್ಶಿಗಳಾಗಿಯೂ, ಶ್ರೀಮತಿ ಎಚ್.ಎಂ.ಕಲಾಶ್ರೀ ಖಜಾಂಚಿಗಳಾಗಿದ್ದಾರೆ. ಡಾ.ರಾಮಕೃಷ್ಣ ಜೋಶಿ, ಎಂ.ಎನ್.ಸುಮನ ಮತ್ತು ಎಂ.ಎಸ್.ವೇದಾ ಧರ್ಮದರ್ಶಿಗಳಾಗಿದ್ದಾರೆ. 2023ರಲ್ಲಿ ಡಾ. ಸಬಿಹಾ ಭೂಮಿಗೌಡ, ಡಾ.ಆರ್.ಸುನಂದಮ್ಮ, ಶ್ರೀ ಗಣೇಶ್ ಬಿ.ಆರ್., ಡಾ.ಭೂಮಿಗೌಡ, ಪ್ರಖ್ಯಾತ ವಕೀಲೆ ಶ್ರೀಮತಿ ಸುಮನ ಎಂ.ಎನ್. ಸೇರಿ, ಸಮತಾ ಅಧ್ಯಯನ ಕೇಂದ್ರದಲ್ಲಿ 30 ಲಕ್ಷ ರೂಪಾಯಿಗಳ ಇಡುಗಂಟನ್ನಿಟ್ಟಿದ್ದಾರೆ. ಡಾ.ವಿಜಯಾ ದಬ್ಬೆ ಹೆಸರಿನಲ್ಲಿ ಸಮತಾ ಅಧ್ಯಯನ ಕೇಂದ್ರವು ಲೇಖಕಿಯರಿಗೆ ಸಾಹಿತ್ಯ ಪ್ರಶಸ್ತಿ ನೀಡುತ್ತಿದೆ ಮತ್ತು ಯುವ ಬರಹಗಾರರಿಗೆ ರಾಜ್ಯ ಮಟ್ಟದ ಕಥೆ, ಕವನ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸುತ್ತಾ ಬಂದಿದೆ.

ಚಟುವಟಿಕೆಗಳಿಗೆ ಹೊಸ ಆಯಾಮ

ಲಿಂಗ ಸಮಾನತೆಯನ್ನು ಸಮಾಜದಲ್ಲಿ ಶಾಶ್ವತವಾಗಿ ಸ್ಥಾಪಿಸಲು ಕೇಂದ್ರ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಲೇ ಬಂದಿದೆ. ಶಾಲಾ ಕಾಲೇಜು, ಸಂಘ–ಸಂಸ್ಥೆಗಳಿಗೆ ಭೇಟಿಯಿತ್ತು ಕೇಂದ್ರದ ಸದಸ್ಯರು ಮಹಿಳಾ ಜಾಗೃತಿಯನ್ನು ಮೂಡಿಸುತ್ತಲೇ ಬಂದಿದ್ದಾರೆ. 2023 ರಿಂದ ಈ ಕಾರ್ಯಕ್ರಮವು 'ಅರಿವಿನ ಪಯಣ' ಎಂಬ ಸ್ಪಷ್ಟ ರೂಪು ತಾಳಿ ಯುವ ಮನಸ್ಸುಗಳನ್ನು ಲಿಂಗತ್ವ ಸಮಾನತೆಗೆ ಹದಗೊಳಿಸುವ ಧ್ಯೇಯವನ್ನಿಟ್ಟುಕೊಂಡು ಮುಂದುವರೆದಿದೆ. ಮೈಸೂರು ಮತ್ತು ಸುತ್ತಮುತ್ತಲಿನ ಶಾಲಾ ಕಾಲೇಜುಗಳಲ್ಲಿ ಮಹಿಳಾ ದೌರ್ಜನ್ಯ ತಡೆ ಸಮಿತಿಗಳ ಸಹಯೋಗದಲ್ಲಿ ವ್ಯಾಪಕವಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಮಹಿಳಾ ಸಮಾನತೆಗಾಗಿ ದುಡಿಯುತ್ತಿರುವ ಕೇಂದ್ರವು ತನ್ನ ಧ್ವನಿ, ಉದ್ದೇಶ, ಆಶಯಗಳಿಗೆ ಇನ್ನೂ ಹೆಚ್ಚಿನ ವ್ಯಾಪಕತೆ ಪಡೆಯುವ ನಿಟ್ಟಿನಲ್ಲಿ 'ಮಹಿಳಾ ಅಧ್ಯಯನ ಮತ್ತು ಅಭಿವೃದ್ಧಿ ಕೇಂದ್ರವಾಗಿ ನೋಂದಾಯಿಸಿಕೊಂಡಿದೆ. 2022ರ ಬಳಿಕ ಸಮತಾ ಅಧ್ಯಯನ ಕೇಂದ್ರದ ಧರ್ಮದರ್ಶಿಗಳಾಗಿ ಡಾ.ಸಬಿಹಾ ಭೂಮಿಗೌಡ ಮತ್ತು ಓಂಕಾರ್ ಪಿ. ಹೊಸದಾಗಿ ಸೇರಿಕೊಂಡರು. ಆನಂತರ ಅನಿಯಮಿತ ಕೇಂದ್ರದ ಚಟುವಟಿಕೆಗಳು ಬಿರುಸಿನಿಂದ ಮುನ್ನಡೆದವು. ಮಹಿಳಾ– ಸಾಂಸ್ಕೃತಿಕ, ಸಾಮಾಜಿಕ ಅಧ್ಯಯನ–ಸಂಶೋಧನೆಗಳಲ್ಲಿ ತೊಡಗಿ–ತತ್ಸಂಬಂಧ ಪೂರಕ ತರಬೇತಿ, ಬೋಧನೆ, ಶಿಬಿರ, ಗ್ರಂಥಾಲಯ, ಆಪತ್ಕಾಲೀನ ಆಶ್ರಯ, ಆಪ್ತ ಸಲಹೆ, ಮಹಿಳಾ ವಸತಿ, ಪ್ರಕಾಶನ ಮತ್ತು ಮಾರಾಟಕ್ಕೆ ವಿಸ್ತಾರಗೊಳ್ಳಲು ಉತ್ಸುಕವಾಗಿದೆ.

"ಸ್ತ್ರೀ ಸಮಾನತೆಯ ಆಶಯಗಳುಳ್ಳ ಸಮಾನ ಮನಸ್ಕರಿಂದ ಸ್ಥಾಪಿಸಲ್ಪಟ್ಟು ಮುನ್ನಡೆಯುತ್ತಿರುವ ಸಮತಾ ಅಧ್ಯಯನ ಕೇಂದ್ರಕ್ಕೆ ತನ್ನದೇ ಆದ ಪರಂಪರೆಯಿದೆ. ಸ್ತ್ರೀವಾದವನ್ನು ಅಪವ್ಯಾಖ್ಯಾನಿಸುವ, ಮಹಿಳೆಯ ಘನತೆಯನ್ನು ಹಗುರಾಗಿ ಭಾವಿಸುವ ಸಮಾಜದ ನಡುವೆ ಇಂತಹ ಗಟ್ಟಿ ಧ್ವನಿಯನ್ನು ನೆಟ್ಟು ಬೆಳೆಸುವುದು ಹುಡುಗಾಟದ ಮಾತಲ್ಲ. ಇಂತಹ ಸಾಂಸ್ಥಿಕ ಧ್ವನಿಗಳು ಮಾತ್ರ ಸ್ತ್ರೀ ಸಮುದಾಯದ ಘನತೆಯನ್ನು ಎತ್ತಿಹಿಡಿಯಲು ಸಾಧ್ಯ. ಸ್ತ್ರೀಯರನ್ನು ಅರಿವಿನ ಬೆಳಕಿಗೆ ತೆರೆದು, ಅವರ ಶಕ್ತಿ, ಋಜುತ್ವಗಳನ್ನು ಬುದ್ಧಿಭಾವಗಳಿಗೆ ದಕ್ಕಿಸಿಕೊಟ್ಟು ವಿದ್ಯೆ–ಉದ್ಯೋಗ, ಸ್ವಾವಲಂಬನೆಯ ಬದುಕಿಗೆ ಅವರನ್ನು ತೆರೆದಿಟ್ಟು, ಅನ್ಯಾಯ, ಅತ್ಯಾಚಾರ ಶೋಷಣೆಗಳಿಗೆ ಪ್ರತಿಭಟಿಸುವ ಆತ್ಮಪ್ರತ್ಯಯವನ್ನು ಬೆಳೆಸಿಕೊಳ್ಳಲು ದಾರಿದೀಪದಂತೆ ಪ್ರವರ್ತಿಸುವ ಸಮತಾ ಕೇಂದ್ರದ ಆದರ್ಶವು ಮಹಿಳೆಯರ ಬದುಕನ್ನು ಪೊರೆಯಲಿ. ಇಂತಹ ಕೇಂದ್ರಗಳು ವಿಶ್ವದೆಲ್ಲೆಡೆ ತೆರೆದು ನಾರೀ ಶಕ್ತಿ ಜಾಗೃತವಾಗಲಿ.



–ಉಷಾ ನರಸಿಂಹನ್, ಮೈಸೂರು.







ಮನವಿ ಮಾಡಿದ ತಕ್ಷಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುದಾನ ಕಲ್ಪಿಸಿದ್ದಾರೆ...!

-ಕೆ.ಹರೀಶ್‌ಗೌಡ, ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ

● ಮೋಹನ್ ಕಾಯಕ

ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮೂರು ವರ್ಷದಲ್ಲಿ 1600 ಕೋಟಿ ರೂ.ಅನುದಾನ ತರಲಾಗಿದೆ. ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ ಹಾಗೂ ಆರೋಗ್ಯ ಸೇವೆಗೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ ಒಳಚರಂಡಿ ಸಮಸ್ಯೆ ಮುಕ್ತ ಕ್ಷೇತ್ರವನ್ನಾಗಿಸುವ ಗುರಿ ಹೊಂದಿದ್ದೇನೆ...

ಪ್ರತಿನಿತ್ಯವೂ ಒಂದಲ್ಲಾ ಒಂದು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುತ್ತಲೇ ಕ್ಷೇತ್ರದಲ್ಲಿ ಅತ್ಯಂತ ಲವಲವಿಕೆಯಿಂದಿರುವ ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು, 'ಮೈಸೂರು ಮಿತ್ರ'ನೊಂದಿಗೆ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಯಶಸ್ವಿ ಜಾರಿಯೊಂದಿಗೆ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ತಿಳಿಸುತ್ತಾ ಮೂರು ವರ್ಷದಲ್ಲಾಗಿರುವ ಕಾರ್ಯಕ್ರಮಗಳ ಪಟ್ಟಿಯನ್ನೇ ನೀಡಿದ್ದಾರೆ.

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 31 ಸಾವಿರ ಮನೆ ಯಜಮಾನಿಯರು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಅನ್ನಭಾಗ್ಯ, ಗೃಹಜ್ಯೋತಿ, ಶಕ್ತಿ ಮತ್ತು ಯುವನಿಧಿ ಯೋಜನೆಗಳನ್ನು ಶೇ.100ಕ್ಕೆ 100ರಷ್ಟು ಪಡೆದುಕೊಳ್ಳುವ ಮೂಲಕ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ಹಾಗೆಯೇ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕಾಮಗಾರಿಗಳು ತೃಪ್ತಿ ನೀಡಿವೆ.

ಮಹಾರಾಣಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಅಭಿವೃದ್ಧಿ ಮತ್ತು ವಿಸ್ತರಣೆ, ಹೊಸದಾಗಿ ಹಾಸ್ಟೆಲ್ ನಿರ್ಮಾಣ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಸೂಪರ್ ಸ್ಪೆಷಾಲಿಟಿ, ಟ್ರಾಮಾ ಕೇರ್ ಸೆಂಟರ್ ಹಾಗೂ ಪಿಕೆಟಿಬಿ ಆಸ್ಪತ್ರೆಗೆ ಅಗತ್ಯ ವೈದ್ಯಕೀಯ ಸಲಕರಣೆಗಳನ್ನು ಪೂರೈಕೆ ಮಾಡಲಾಗಿದೆ. ಜಯದೇವ ಹೃದ್ರೋಗ ಆಸ್ಪತ್ರೆಗೆ ಹೊಸದಾಗಿ 180 ಕೋಟಿ ರೂ. ಅನುದಾನ ಘೋಷಣೆ ಜೊತೆಗೆ ಕಿದ್ವಾಯಿ ಆಸ್ಪತ್ರೆ ನಿರ್ಮಾಣ ಸೇರಿದಂತೆ ಕ್ಷೇತ್ರವನ್ನು ಹೆಲ್ತ್ ಹಬ್ ಆಗಿ ಪರಿವರ್ತಿಸಲಾಗಿದೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪಿಸಿ, 100 ಹಾಸಿಗೆಗಳ ಮೂಲಕ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಸ್ಪತ್ರೆಯಲ್ಲಿಯೂ ಗುಣಮಟ್ಟದ ಸೇವೆ ನೀಡಲಾಗುತ್ತಿದೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆ ಮಾತ್ರವಲ್ಲದೆ ಬೇರೆ ಜಿಲ್ಲೆಗಳು ಮತ್ತು ಹೊರ ರಾಜ್ಯದ ಬಡ ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲಾಗುತ್ತಿದೆ.

ಮಹಾತ್ಮಗಾಂಧಿ ವಿಕಾಸ ಯೋಜನೆಯಡಿ 100 ಕೋಟಿ ರೂ.ಗಳ ಅನುದಾನದಲ್ಲಿ ರಾಜ ಕಾಲುವೆಗಳ ದುರಸ್ಥಿ ಜೊತೆಗೆ ಕೊಳಚೆ ನೀರು ನೇರವಾಗಿ ಸಂಸ್ಕರಣಾ ಘಟಕಕ್ಕೆ ಹರಿಯುವಂತೆ ಮಾಡಲಾಗುತ್ತಿದೆ. ಇಡೀ ಕ್ಷೇತ್ರವನ್ನು ಒಳಚರಂಡಿ ಸಮಸ್ಯೆ ಮುಕ್ತ ಕ್ಷೇತ್ರವನ್ನಾಗಿಸುವ ನಿಟ್ಟಿನಲ್ಲಿ ದಿನವಿಡೀ ಕೆಲಸ ಮಾಡುತ್ತಿದ್ದು, ಮೂರು ವರ್ಷದಲ್ಲಿ ಸುಮಾರು 1600 ಕೋಟಿ ರೂ.ಅನುದಾನವನ್ನು ಕ್ಷೇತ್ರಕ್ಕೆ ತರಲಾಗಿದೆ.

ಕ್ಷೇತ್ರದಲ್ಲಿ ವ್ಯಾಪ್ತ ಬರುವ ಬೃಹತ್ ಆರೋಗ್ಯ ಕೇಂದ್ರಗಳಿಗೆ ವೈದ್ಯಕೀಯ ಸಲಕರಣೆಗಳ ಪೂರೈಕೆ ಮತ್ತು ಕಿದ್ವಾಯಿ ಕೇಂದ್ರ ನಿರ್ಮಾಣ ಪ್ರಮುಖವಾಗಿವೆ. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಿದ್ವಾಯಿ ಕೇಂದ್ರ ನಿರ್ಮಾಣ ಘೋಷಣೆಯಾಗಿದ್ದು, ಅನುದಾನ ಬಿಡುಗಡೆಯಾಗಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಜೆಟ್‌ನಲ್ಲಿ ಅನುದಾನ ಬಿಡುಗಡೆ ಮಾಡಿದ್ದರ ಫಲವಾಗಿ ಈಗಾಗಲೇ ಕಿದ್ವಾಯಿ ಕೇಂದ್ರ ನಿರ್ಮಾಣವಾಗಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ

ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡವನ್ನು ಕೆಡವಿ ಅದೇ ಮಾದರಿಯಲ್ಲಿ ಹೊಸ ಠಾಣೆ ಕಟ್ಟಬೇಕು ಎಂಬ ಪ್ರಸ್ತಾಪ ಕಳೆದ ಐದಾರು ವರ್ಷಗಳಿಂದ ಯಾವುದೇ ಪ್ರಗತಿ ಕಾಣದೆ ಬಾಕಿ ಉಳಿದಿದೆ. ಪಾರಂಪರಿಕ ತಜ್ಞರ ಕಮಿಟಿಯ ವಿರೋಧದಿಂದಾಗಿ ಅಗ್ನಿಶಾಮಕ ಸಿಬ್ಬಂದಿ ಭಯದಲ್ಲಿ ಕೆಲಸ ಮಾಡುವ ಸ್ಥಿತಿ ಇದೆ. ಮುಂದಿನ ದಿನಗಳಲ್ಲಿ ಅಗ್ನಿಶಾಮಕ ಠಾಣೆ ಮರುನಿರ್ಮಾಣ ಅಥವಾ ದುರಸ್ತಿ ಕಾರ್ಯ ಕೈಗೊಳ್ಳುವ ಸಾಧ್ಯತೆ ಇದ್ದು, ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ.

ಎಲ್ಲವೂ ಪೂರ್ಣ... ತೃಪ್ತಿ ದಾಯಕ...

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಜನಪರ ಕೆಲಸವಾಗಬೇಕು ಎಂದು ಮನವಿ ಮಾಡಿದರೆ ಸಾಕು ಮುಖ್ಯಮಂತ್ರಿಗಳು, ಅನುದಾನ ಬಿಡುಗಡೆಗೆ ಆದೇಶ ಮಾಡುತ್ತಾರೆ. ಕ್ಷೇತ್ರದ ಮೇಲಷ್ಟೇ ಅಲ್ಲದೆ ಮೈಸೂರಿನ ಮೇಲೆ ಅವರಿಗೆ ಅಪಾರ ಕಾಳಜಿ ಇದೆ. ಮೂರು ವರ್ಷದಲ್ಲಿ ನೂರಾರು ಕೆಲಸಗಳಾಗಿವೆ. ಕ್ಷೇತ್ರದಲ್ಲಿನ ಮೂಲ ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಒಟ್ಟಾರೆ ರಾಜ್ಯ ಸರ್ಕಾರ ತೃಪ್ತಿದಾಯಕ ಆಡಳಿತದ ಜೊತೆಗೆ ಅನುದಾನ ನೀಡಿದೆ.

- ಕೆ.ಹರೀಶ್‌ಗೌಡ



